ಹೊಸತು

ಸೆಪ್ಟೆಂಬರ್ ೨೦೧೧
ರೂ. ೨೦

ಹಜಾರೆ ಆಂದೋಲನದ ಸತ್ಯ-ಮಿಥ್ಯೆಗಳು

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೧೧
ಸೆಪ್ಟಂಬರ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080-23480278,
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ



- ಪತ್ರಗಳು ೦೩
- ಸಂಪಾದಕರೊಂದಿಗೆ ಸಂವಾದ:
  - ಡಾ. ಲೀಲಾ ಸಂಪಿಗೆ ೦೪
  - ಡಾ. ಎಚ್. ಟಿ ಪೋತೆ ೦೫
  - ಡಾ. ಎನ್. ಜಗದೀಶ್ ಕೊಪ್ಪ ೦೬
  - ರಘೋತ್ತಮ ಹೊ. ಬ ೦೭
- ಹೊಸ ಯಜಮಾನರನ್ನು ಸೃಷ್ಟಿಸಿದ ಸ್ವಾತಂತ್ರ್ಯ ಚಳವಳಿ: ನೀಗದ ತಳವರ್ಗಗಳ ಬವಣೆ
  - ಡಾ. ಚಮರಂ ನಾಗವಂಶಿ ೦೮
- ಹೊಸ ಪುಸ್ತಕ ೧೩
- ಬಾಲ್ಯ ವಿವಾಹ, ಅಂತರ್ಜಾತಿ ವಿವಾಹ, ಒಪ್ಪಿಗೆ ವಯಸ್ಸಿನ ಗೊಂದಲ
  - ಡಾ. ಎಚ್.ಎಸ್. ಅನುಪಮಾ ೧೪
- ಸಂಸ್ಕೃತಿ ಮತ್ತು ಸಮಾಜವಾದ
  - ಬಾಪು ಹೆದ್ದೂರಶೆಟ್ಟಿ ೨೬
- ಪ್ರಜಾಪ್ರಭುತ್ವದ ಸಾಧ್ಯತೆಗಳು ಮತ್ತು ಸವಾಲುಗಳು
  - ಡಾ. ಡೊಮಿನಿಕ್ ಡಿ ೨೦



- ಭಂಡ ವ್ಯವಸ್ಥೆಯಲ್ಲಿ ಉಂಡವನೇ ಜಾಣ!
  - ನಾ ದಿವಾಕರ ೨೨
- ಹಜಾರೆ ಆಂದೋಲನ ಪ್ರಜಾಸತ್ತೆ ಮೇಲಿನ ಸವಾರಿಯೇ?
  - ಡಿ. ಎಸ್. ನಾಗಭೂಷಣ ೨೬
- ಅಣ್ಣಾ ಹಜಾರೆಗೆ ಜಯವಾಗಲಿ! ಆದರೆ......
  - ಹರ್ಷಕುಮಾರ್ ಕುಗ್ವೆ ೨೮
- ತಾಜಾ ಸಂತನ ರಕ್ತರಹಿತ ಕ್ಷಿಪ್ರ ಕ್ರಾಂತಿ!
  - ಅರುಂಧತಿ ರಾಯ್ ೩೦
- ಅಂಬೇಡ್ಕರ್ ಮಾರ್ಗ ಮತ್ತು ಅಣ್ಣಾ ಹಜಾರೆಯವರ ವಿಧಾನ
  - ಸುಖ್‌ದೇವ್ ಥೋರಟ್ ೩೨
- ಪಾಪ ಕೂಪಗಳ ಸ್ವತಂತ್ರ ಭಾರತ
  - ನಾಡಿ ಬಂಗಾರ ಪೇಟೆ ೩೮
- ಪುಸ್ತಕ ಅವಲೋಕನ
  - ಮಹೇಶ ತಿಪ್ಪಶೆಟ್ಟಿ ೪೦
- ಹಾಗೆ ನೋಡಿದರೆ –೧೦
  - ಡಾ. ಬಂಜಗೆರೆ ಜಯಪ್ರಕಾಶ ೪೨
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/ ಎಸ್. ಮರಿಸ್ವಾಮಿ ೪೬
- ಬುದ್ಧಾಯಣ
  - ಸಿ. ಎಚ್ ರಾಜಶೇಖರ್ ೫೦

ಕವನಗಳು : ಕೊಳಗೇರಿಯಲೊಂದು ಕಮಲ ೧೩ ಕೂಗುಮಾರಿಯ ಮನಸ್ಸು ೩೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಅಕಡೆಮಿಕ್ ಚಿಂತಕರ ಡೋಂಗಿತನ!!

ಪ್ರಿಯ ಸಂಪಾದಕರೇ,

ಡಿ. ಎಸ್. ನಾಗಭೂಷಣರವರು 'ಒಂದು ಮುಗಿಯಲಾರದ ಚರ್ಚೆ'ಯ ಮೂಲಕ ಕೆಲವು ಸಕಾಲಿಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಅವರ ಲೇಖನ ಉದ್ವೇಗದಿಂದ ಕೂಡಿದ್ದರೂ (ಅವರ ವ್ಯಕ್ತಿತ್ವದಂತೆ) ಅತ್ಯಂತ ಕಹಿ ಸತ್ಯಗಳಾಗಿವೆ. ಏಕೆಂದರೆ ನಮ್ಮ ಬಹುಪಾಲು ಎಡಪಂಥೀಯ ಚಿಂತಕರು ಇಪ್ಟಾ, ಪ್ರಗತಿಶೀಲ, ರೊಮಿಲಾ ಥಾಪರ್, ಸಾರ್ತ್ರೆಗಳಿಂದ ಇನ್ನೂ ಹೊರ ಬಂದಿಲ್ಲ. ಸಾಹಿತ್ಯಕವಾಗಿ ವಿಮರ್ಶೆಗಳನ್ನು ಮಂಡಿಸುವಾಗ ಮಾರ್ಕ್ಸ್‌ವಾದದ ನೆಲೆಗಟ್ಟನ್ನು ಬಳಸುವ ಇವರಿಗೆ ಇನ್ನೂ "ಅಂಬೇಡ್ಕರ್‌ವಾದ"ದ ಗುಂಗು ಕೂಡ ಹತ್ತಿರಕ್ಕೆ ಸುಳಿದಿಲ್ಲ.

ಇವರಿಗೆ "ಲೋಹಿಯಾ" ಎಂದರೆ ಅರ್ಧ ಬೆಂದ ಮಡಿಕೆ ತರ. ಏಕೆಂದರೆ ಮೇಲ್ಜಾತಿ, ಮೇಲ್ವರ್ಗದ ಪ್ರಗತಿಪರ ಚಿಂತಕರು ಇಲ್ಲ ಗಾಂಧಿವಾದಿ, ಅಥವಾ ಮಾರ್ಕ್ಸ್‌ವಾದಿಗಳಾಗಿ ಅಕಡೆಮಿಕ್ ವಲಯಗಳಲ್ಲಿ ಪ್ರಖರ ಚಿಂತಕರಾಗಿ ಮಿಂಚುತ್ತಾ ಅಂಬೇಡ್ಕರ್‌ವಾದಕ್ಕೆ ಅಸ್ಪೃಶ್ಯತೆಯನ್ನಾಚರಿಸುತ್ತಾ ಕಾಲ ಕಳೆದಿರುವುದು ಇಂದಿನ ಮೂಲಭೂತ ಸಮಸ್ಸೆಗಳಿಗೆ ಕಾರಣ.

ಅನೇಕ ಕಮ್ಮಟಗಳಲ್ಲಿ ಅಂಬೇಡ್ಕರ್‌ರವರನ್ನು, ಲೋಹಿಯಾರವರನ್ನು ಮುಟ್ಟಲು ಕೂಡ ಅನೇಕ ಎಡಪಂಥೀಯ ಚಿಂತಕರಿಗೆ ಒಂದು ರೀತಿಯ ಮೈಲಿಗೆ. ಇಂದು ಇಂದಿನ ಯುವ ತಲೆಮಾರು ಅಂಬೇಡ್ಕರ್, ಲೋಹಿಯಾರ ಹೊಕ್ಕುಳ ಬಳಕೆಯಾಗುವಂತಹ ಒಂದು ಅವಕಾಶವನ್ನು ನಾವೆಲ್ಲ ನಮ್ಮ ಅಕಡೆಮಿಕ್ ಅಹಂಕಾರದಿಂದ, ನಿರ್ಲಕ್ಷ್ಯತನದಿಂದ ಹಾಳುಮಾಡಿದ್ದೇವೆ. ಇನ್ನೂ ಸಾಹಿತ್ಯದ ವಿಮರ್ಶೆಗೆ ಬಂದರಂತೂ ಕನ್ನಡದ ಅನೇಕ ಘೋಷಿತ ವಿಮರ್ಶಕರಿಗೆ ಈಗಲೂ ಪುತಿನ ಹಾಗೆ ಹೇಳಿದ್ದರು, ಕೆಎಸ್‌ನ ಹೀಗೆ ಹೇಳಿದ್ದರು, ಬಿಎಂಶ್ರೀ ಹಾಗೆ, ವಿಸೀ ಹೀಗೆ, ಅಡಿಗ ಆಹಾ!! ಹೀಗೆ ಅದೇ ಸವಕಲು ಹಳವಂಡಗಳು. ಇವರಿಗೆ ಇವತ್ತಿಗೂ ಅನಂತ ಮೂರ್ತಿ ವಿವೇಕದ ಅಂತಿಮ ಘಟ್ಟ.

ಪತ್ರಗಳು

ಇವರಿಗೆ ಕೇಳಿ ಗೋಕುಲ ನಿರ್ಗಮನ, ಅಹಲ್ಯೆ, ಮೈಸೂರು ಮಲ್ಲಿಗೆ, ಭೂತ, ಕೂಪ ಮಂಡೂಕ, ಸಂಸ್ಕಾರ, ಭಾರತೀಪುರ, ಕ್ಲಿಪ್ ಜಾಯಿಂಟ್ ಹೀಗೆ ಹರಿಯುತ್ತದೆ ಸಾವಿರದ ಸಲ ಕಳೆದ 50 ವರ್ಷಗಳಿಂದ ಈ ವಿಮರ್ಶೆ ಪ್ರೀತಿ. ಆದರೆ ಇವರಿಗೆ ಮಾರಿಕೊಂಡವರು, ಅಮಾಸ, ರೊಟ್ಟಿ, ಸಹಪಾಠಿ, ಅವನತಿ, ಡೇರ್ ಡೆವಿಲ್ ಮುಸ್ತಾಫ, ಕತ್ತಲ ತ್ರಿಶೂಲ ಹಿಡಿದದ್ದು, ಅಮರೇಶ ನುಗಡೋಣಿ ಹೀಗೆ ಈ ಘರಾಣದ ಪಟ್ಟಿಯ ಬಗ್ಗೆ ವಿಚಾರಿಸಿದರೆ ಮೂಗು ಮುರಿಯುತ್ತಾರೆ. ಅಷ್ಟೇಕೆ ಇತ್ತೀಚಿನ ಅತ್ಯಂತ ಉತ್ತಮ ಕಥಾ ಸಂಕಲನವಾದ ನಟರಾಜ್ ಹುಳಿಯಾರರ 'ಬಸವಲಿಂಗಪ್ಪ ಹಾಗೂ ಡೇವಿಡ್ ಸಾಹೇಬರು' ಬಗ್ಗೆ ಇದುವರೆಗೂ ಒಂದು ಚರ್ಚೆ, ವಿಮರ್ಶೆ ನಡೆದಿದ್ದರೆ ಕೇಳಿ!! ಇದು ಇವರಿಗೆ ಅಪಥ್ಯ.

ಇಂತಹ ಸಂದರ್ಭದಲ್ಲಿ ಬಂಡಾಯ ಚಳವಳಿ ಆಶಾವಾದದಿಂದ ಪ್ರಾರಂಭವಾಗಿ ಸರ್ರನೆ ಕೆಳಜಾರಿದ್ದು ಒಂದು ದುರಂತ. ಆದರೆ ಇವತ್ತಿಗೂ ದಲಿತ, ಮುಸ್ಲಿಂ ಲೇಖಕರು ನಿಜಕ್ಕೂ ಅತ್ಯಂತ ಸಂವೇದನಶೀಲರಾಗಿ, ಕಲಾತ್ಮಕವಾಗಿ ಬರೆಯುತ್ತಿದ್ದಾರೆ. ವೀರಣ್ಣ ಮಡಿವಾಳರು, ಸುಬ್ಬು ಹೊಲೆಯಾರ್, ಆರೀಫ್‌ರಾಜ್, ಕೆ.ಷರೀಪ, ಮಂಜುನಾಥ ಲತಾ, ಹುಲಿಕುಂಟೆ ಮೂರ್ತಿ, ಕಲಿಗಣನಾಥ, ವಿ.ಆರ್ ಕಾರ್ಪೆಂಟರ್, ಪೀರ್‌ಬಾಷ, ಡಾ॥ವಿನಯಾ, ಸುಮಂಗಲಾ ಹೀಗೆ ಇನ್ನೂ ಅನೇಕ ಉತ್ತಮ ಲೇಖಕ, ಲೇಖಕಿಯರಿದ್ದಾರೆ. ಇನ್ನೂ ಅದ್ಭುತವಾಗಿ ಬರೆಯುತ್ತಿದ್ದಾರೆ. ಆದರೆ ವಿಮರ್ಶಕರ ಮರೆಮೋಸ, ಜಾಣ ಕಿವುಡು, ಜಾಣ ಕುರುಡಿಗೆ ಇವರಾರು ಕಾಣುತ್ತಿಲ್ಲ.

ಒಂದು ವೇಳೆ ಈ ದೇಶಕಾಲ ಹಾಗೂ ನೀನಾಸಂನ ಅಪೋಶನದ ಪ್ರಕ್ರಿಯೆಯೇನಾದರೂ ಯಶಸ್ಸು ಸಾಧಿಸಿದ್ದರೆ ಸಾಹಿತ್ಯಕ್ಕೆ ಜನಿವಾರ ತೊಡಿಸುವ ದಿನಗಳೇನು ದೂರವಿರಲಿಲ್ಲ. ನಮ್ಮೆಲ್ಲರ ಪುಣ್ಯ ಸಧ್ಯಕ್ಕೆ ಅದಕ್ಕೆ ತೊಡರುಗಾಲು ಹಾಕಿದ ಗೆಳೆಯರೆಲ್ಲರಿಗೂ ಥ್ಯಾಂಕ್ಸ್. ಸಧ್ಯಕ್ಕೆ ಪ್ರಜಾವಾಣಿ ಮೊದಲ ಬಲಿ.

ಬಿ. ಶ್ರೀಪಾದ ಭಟ್
ಬೆಂಗಳೂರು

* * * * * * * * * * *

ಉತ್ತಮ ಲೇಖನಗಳ ಕಣಜ

ಪ್ರೀಯ ಸಂಪಾದಕರೇ,

ಕನ್ನಡ ನಾಡು-ನುಡಿಯನ್ನು ಕುರಿತು ನಾಡವರು ನಡೆಸಲೇಬೇಕಾದ ತುರ್ತು ಪ್ರಕರಣಗಳ ನಿಜವಾದ 'ಸಂವಾದ' (ಮೇ 2011) ಈ ಸಂಚಿಕೆಯಲ್ಲಿದೆ. ದಲಿತ ರಾಜಕಾರಣ ಭಿನ್ನ ಆಯಾಮ ಪಡೆಯದೇ ಕೇವಲ ಶಕ್ತಿ ರಾಜಕಾರಣದ ಅನುಸರಣೆಯಾಗುತ್ತಿದೆ (ಡಿ.ಎಸ್. ನಾಗಭೂಷಣರ ಪತ್ರ), ಬಸವತತ್ವ ಕಂಡುಕೊಂಡಿರುವ ಆತ್ಮವಂಚನೆ (ನಾಗರಾಜು ತುಮಕೂರು) ಇವುಗಳ ಜೊತೆಗೆ "ಒಂದು ಚಳವಳಿಯ ಶ್ರದ್ಧಾಂಜಲಿ" ಅದ್ಭುತವಾದ ವಿಶ್ಲೇಷಣೆಯಾಗಿದೆ. (ಎನ್.ಕೆ.. ಮೋಹನ್‌ರಾಂ) ಸಮಾಜವಾದದ ಮುಳುಗುತ್ತಿರುವ ರಂಬೆಯನ್ನು ಹಿಡಿದು ಈಜಲೂ ಆಗದೇ ಮುಳುಗಲೂ ಆಗದೇ ಒದ್ದಾಡುತ್ತಿರುವ ಮಾಜಿಗಳ ಮನೋಭೂಮಿಕೆಯ ಕಟುವಾದ ವಾಸ್ತವ ವಿಮರ್ಶೆಯ ಲೇಖನ ಇದಾಗಿದೆ. ಅನೇಕ ಸಮಿತಿಗಳ ಶಿಫಾರಸ್ಸುಗಳನ್ನು ಎರುಹೆಡೆಯುತ್ತ ಗಡಿನಾಡಿನ ಜನರಿಗೆ ಕೇವಲ ಕನ್ನಡಮ್ಮನ ಮೆರವಣಿಗೆಯ ಪ್ರದರ್ಶನ ಗೊಂಬೆಗಳನ್ನಾಗಿ ಮಾಡಿದ ಇಳನಾಡ ಯಜಮಾನರಿಗೆ ದಾರಿತೊರುವ ಲೇಖನ (ಡಾ. ಜಗದೀಶ ಕೊಪ್ಪ) ಗಡಿ ಪ್ರದೇಶದ ಅಭಿವೃದ್ಧಿ... ಜೊತೆಗೆ ಗೌಸುದ್ದೀನರ 'ಕನ್ನಡ ಸಾಹಿತ್ಯದ ಈಚಿನ ಧೋರಣೆಗಳು' ಕೂಡ ಉತ್ತಮವಾದ ಲೇಖನ. 'ಸಂವಾದ'ಕ್ಕೆ ಅನಂತ ಅಭಿನಂದನೆಗಳು.

ಡಿ. ಎಂ. ನದಾಫ್, ಗುಲಬರ್ಗಾ

ಲೇಖಕರಿಗೆ ಸೂಚನೆ

ಲೇಖಕರು ತಮ್ಮ ಲೇಖನದ ಮೂಲ ಪ್ರತಿಯನ್ನು ಮಾತ್ರ ಕಳುಹಿಸಬೇಕು. ಜೆರಾಕ್ಸ್ ಪ್ರತಿಗಳನ್ನು ಯಾವ ಕಾರಣಕ್ಕೂ ಪರಿಗಣಿಸುವುದಿಲ್ಲ. ಬೇರೆ ಪತ್ರಿಕೆಗಳಿಗೆ ಕಳುಹಿಸಿದ ಲೇಖನವನ್ನು 'ಸಂವಾದ'ಕ್ಕೂ ಕಳುಹಿಸಿದ್ದಲ್ಲಿ ಆ ಬಗ್ಗೆ ತಿಳಿಸಬೇಕು. ತಮ್ಮ ಲೇಖನಗಳನ್ನು ಡಿಟಿಪಿ ಮಾಡಿಸಿ ಇ-ಮೈಲ್ ಮಾಡಿದರೆ ತುಂಬಾ ಅನುಕೂಲ. –ಸಂ

ಪ್ರಕಟಣೆ: ಖ್ಯಾತ ಅಂಕಣಕಾರ ಮುಜಾಫ್ಫರ್ ಅಸ್ಸಾದಿ ಅವರು ಬೆರೊಂದು ಗುರುತರವಾದ ಕಾರ್ಯದಲ್ಲಿ ನಿರತರಾಗಿರುವುದರಿಂದ ಅವರ 'ಕಾಲಮಾನ' ಅಂಕಣ ಪ್ರಕಟವಾಗುತ್ತಿಲ್ಲ. ನವೆಂಬರ್ ಸಂಚಿಕೆಯಿಂದ ಎಂದಿನಂತೆ ಅವರ ಅಂಕಣ ಪ್ರಕಟವಾಗಲಿದೆ. –ಸಂ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಸಂಪಾದಕರೊಡನೆ ಸಂವಾದ

ಲೈಂಗಿಕ ಕಾರ್ಯಕರ್ತರ ಸಮೀಕ್ಷೆ: ಒಂದು ಮಹತ್ವದ ಹೆಜ್ಜೆ

ಡಾ. ಲೀಲಾ ಸಂಪಿಗೆ

> **"ಮಹಿಳೆ ತನ್ನನ್ನು ತಾನು ಅರ್ಥಮಾಡಿಕೊಂಡಿದ್ದಾಳೆ, ಚೈತನ್ಯ ತುಂಬಿದೆ. ಆದರೆ ಸಮಾಜ ಅದನ್ನು ಸ್ವೀಕರಿಸಲು ತಯಾರಿಲ್ಲ; ಸಮಾಜ ಮಹಿಳೆಯ ಸಬಲೀಕರಣಕ್ಕೆ ಎಲ್ಲ ಅವಕಾಶ ಕಲ್ಪಿಸಲು ಸಿದ್ಧವಾಗಿದೆ, ಆದರೆ ಮಹಿಳೆ ಸಿದ್ಧವಿಲ್ಲ; ಈ ಎರಡೂ ಸಂದರ್ಭದಲ್ಲಿಯೂ ಮಹಿಳೆಯ ಸಬಲೀಕರಣ ಸಾಧ್ಯವಿಲ್ಲ"**

ಪ್ರಿಯ ಸಂಪಾದಕರೇ,

ದೇಶದಲ್ಲಿರುವ ಲೈಂಗಿಕ ಕಾರ್ಯಕರ್ತರ ಸಮೀಕ್ಷೆ ನಡೆಸಲು ಸುಪ್ರೀಂ ಕೋರ್ಟ್ ಸಮಿತಿ ರಚಿಸಿರುವುದು ಅತ್ಯಂತ ಮಹತ್ವದ ಕ್ರಮ ಹಾಗೂ ಸ್ವಾಗತಾರ್ಹ.

"ವೇಶ್ಯಾವಾಟಿಕೆ ಅತ್ಯಂತ ಪ್ರಾಚೀನ ವೃತ್ತಿ" ಎಂದು ಹೇಳುವಾಗಲೇ ಈ ವ್ಯವಸ್ಥೆಯ ಪ್ರಮುಖ ಧೋರಣೆ ಬಯಲಾಗುತ್ತದೆ. ಆದರೆ ವಾಸ್ತವವಾಗಿ ಅದು ಪ್ರಾಚೀನದಿಂದಲೂ ಮೆರೆದಿರುವ ದೌರ್ಜನ್ಯದ ಪ್ರತೀಕವಾದರೂ "ಪ್ರಾಚೀನ ವೃತ್ತಿ" ಎಂಬ ಗರಿಮೆಯನ್ನೋ, ಹಿರಿಮೆಯನ್ನೋ ಕೊಟ್ಟು ತನ್ನ ತೃಷೆಯನ್ನು ಅನಾಯಾಸವಾಗಿ ಹಿಂಗಿಸಿಕೊಳ್ಳುತ್ತಿರುವ ಪ್ರಾಧಾನ್ಯತೆ ಕಣ್ಣಿಗೆ ರಾಚುತ್ತಿದೆ.

ಲೈಂಗಿಕ ಕಾರ್ಯಕರ್ತರಿಗೆ ಪರ್ಯಾಯ ಉದ್ಯೋಗ, ಜೀವನ ಮಟ್ಟ ಸುಧಾರಣೆ, ಪುನರ್ವಸತಿ, ಮಾನವ ಕಳ್ಳಸಾಗಾಣೆ ತಡೆ ಸೇರಿದಂತೆ ಹಲವು ಆಶಯಗಳನ್ನಿಟ್ಟುಕೊಂಡು ಸಮಿತಿಯೊಂದನ್ನು ರಚಿಸಿದೆ. ಸರಕಾರ ಮಾಡಬೇಕಾದ ಕಾರ್ಯವನ್ನು ಸ್ವಯಂ ಪ್ರೇರಣೆಯಿಂದ ಸುಪ್ರೀಂ ಕೋರ್ಟು ಕೈಗೆತ್ತಿಕೊಳ್ಳುವ ಮೂಲಕ ಶತಶತಮಾನಗಳ ಪ್ರಶ್ನೆಗಳ ಚರ್ಚೆಗೆ ಅಧಿಕೃತತೆ ದೊರೆಯುವ ಸಾಧ್ಯತೆ ಇದೆ.

ಆದರೆ ಮೇಲ್ಕಂಡ ವಿಚಾರಗಳನ್ನು ಅಷ್ಟೊಂದು ಸಲೀಸಾಗಿ ಅಥವಾ ಆತುರಾತುರವಾಗಿ ಮಂಡಿಸಲು ಹೊರಟರೆ ಯಶಸ್ಸು ಸಿಗಲಾರದು. ಈ ಸಮಸ್ಯೆಯನ್ನು ಒಂದು ಸಮಾಜದ ಬುನಾದಿಯ ಹಲವು ವಿಚಾರಗಳನ್ನು ಹಿನ್ನಲೆಯಾಗಿಟ್ಟುಕೊಂಡು ಅಭ್ಯಸಿಸಬೇಕಾಗುತ್ತದೆ. "ವೇಶ್ಯಾವಾಟಿಕೆ" ರಾತ್ರೋರಾತ್ರಿ ಘಟಿಸಿದ್ದಲ್ಲ. ಅವರ ಈ ಸ್ಥಿತಿಗೆ ಸಾವಿರಾರು ವರ್ಷಗಳ ಪ್ರಾಚೀನತೆ, ಧಾರ್ಮಿಕ ಸ್ವಾರ್ಥಗಳು, ಲಾಲಸೆಗಳು, ಐತಿಹಾಸಿಕ ಘಟ್ಟಗಳು ನಮ್ಮೊಂದಿಗಿವೆ. ಇದೊಂದು ಅತ್ಯಂತ ಸಂಕೀರ್ಣವಾದ ಸಮುದಾಯ. ವ್ಯಕ್ತಿಗತವಾದ, ಭೌಗೋಳಿಕವಾದ, ಸಾಂಸ್ಕೃತಿಕವಾದ, ಧಾರ್ಮಿಕವಾದ, ಆರ್ಥಿಕವಾದ, ಸಾಮಾಜಿಕವಾದ ಸೂಕ್ಷ್ಮತೆಗಳು ಇದರೊಂದಿಗೆ ಥಳಕು ಹಾಕಿಕೊಂಡಿವೆ.

ಲೈಂಗಿಕ ವೃತ್ತಿ ಸಮುದಾಯದೊಂದಿಗೆ ದಶಕಗಳ ಕಾಲ ನಡೆಸಿದ ಅಧ್ಯಯನ ಮತ್ತು ಅವರನ್ನು ಒಗ್ಗೂಡಿಸುವ ಪ್ರಯತ್ನದ ಅನುಭವದ ಹಾದಿಯುದ್ದಕ್ಕೂ ನನ್ನನ್ನು ಬಹಳ ಮುಖ್ಯವಾದ ಪ್ರಶ್ನೆಗಳು ಕಾಡಿವೆ. ಲೈಂಗಿಕ ವೃತ್ತಿಯು ಅನೂಚಾನವಾಗಿ ಈ ಸಮಾಜದೊಂದಿಗೆ ಜೀವಂತವಾಗಿ, ಸಕ್ರಿಯವಾಗಿ ನಡೆದು ಬರುತ್ತಿರುವುದಾದರೂ ಏಕೆ, ಇದೊಂದು ಸಾಮಾಜಿಕ ಅನಿಷ್ಟವಾಗಿದ್ದಲ್ಲಿ ಯಾವ ಕಾರಣಕ್ಕಾಗಿ ಇದನ್ನು ನಿರ್ಮೂಲನ ಮಾಡಲು ಸಾಧ್ಯವೇ ಆಗಿಲ್ಲ, ಮನುಷ್ಯನ ಯಾವ ಮಾನಸಿಕ ಒತ್ತಾಸೆ, ಉತ್ಕಟತೆಗಳು ಈ ವೃತ್ತಿಯನ್ನು ಎಲ್ಲ ಕಾಲಮಾನಗಳಲ್ಲೂ ಕಾಯ್ದುಕೊಂಡು ಬಂದಿದೆ, ಇದಕ್ಕೆ ವೈಜ್ಞಾನಿಕ ಕಾರಣವಾದರೂ ಏನು, ವೇಶ್ಯಾವಾಟಿಕೆ ಮಡುವಿನಲ್ಲಿ ಲಕ್ಷಾಂತರ ಕಂದಮ್ಮಗಳು, ಅಮಾಯಕ ಮಹಿಳೆಯರು ನಿರಂತರವಾಗಿ ತಮ್ಮ ಬದುಕಿನ ಕನಸುಗಳನ್ನು ಬಲಿಕೊಡುತ್ತಲೇ ಬಂದಿದ್ದರೂ ಇಂದಿಗೂ ಅಂತಹ ಒಂದು ದಂಧೆಯ ವಿರುದ್ಧ ಒಂದು ಯಶಸ್ವಿ ಪ್ರಯೋಗ ನಡೆದಿಲ್ಲವಾದರೂ ಏಕೆ, ಭಾರತದಾದ್ಯಂತ ಪ್ರಗತಿಪರ, ಎಡಪಂಥೀಯ ಚಳವಳಿಗಳೂ ಕೂಡ ಇಂತಹ ಒಂದು ಅಮಾನವೀಯವಾದ, ಜಟಿಲವಾದ ವಿಚಾರವನ್ನು ಗಂಭೀರವಾಗಿ ಪರಿಗಣಿಸದಿರುವುದಾದರೂ ಏಕೆ, ಬಹುತೇಕ ದಲಿತ ಹಾಗೂ ಬುಡಕಟ್ಟು ಹೆಣ್ಣುಗಳೇ ಸರಕಾಗಿರುವ ಬಗ್ಗೆ ದಲಿತ ಚಳವಳಿಗಳೂ ಕೂಡ ಒಂದು ಸ್ಪಷ್ಟ ಧ್ವನಿಯೆತ್ತಿಲ್ಲವಾದರೂ ಏಕೆ... ಹೀಗೆ ನೂರಾರು ಜಟಿಲವಾದ ಪ್ರಶ್ನೆಗಳು ಇವೆ.

ಬುದ್ಧ, ಬಸವ, ಅಂಬೇಡ್ಕರ್, ಲೋಹಿಯಾ ಆದಿಯಾಗಿ ಸಮಾಜ ಚಿಂತಕರು ಕಾಲ ಕಾಲಕ್ಕೆ "ಲೈಂಗಿಕ ವೃತ್ತಿ"ಯಲ್ಲಿ ತೊಡಗಿರುವವರ ಬಗ್ಗೆ ಸಮಾಜಕ್ಕೆ ಅದರ ವಿವಿಧ ಆಯಾಮಗಳ ಬಗ್ಗೆ ತಿಳಿಹೇಳುತ್ತಾ ಆ ಸಮುದಾಯದ ಅಭ್ಯುದಯಕ್ಕೆ ಪ್ರಯತ್ನಿಸಿರುವುದನ್ನು ನಾವು ಚರಿತ್ರೆಯಲ್ಲಿ ಕಾಣಬಹುದು, ಆದರೆ ಆ ಪ್ರಯತ್ನ ಆಯಾ ಕಾಲಘಟ್ಟದಲ್ಲೇ ನಿಂತು ಒಂದು ಸಾಂವಿಧಾನಿಕ ಸ್ವರೂಪ ಪಡೆಯಲಿಲ್ಲ. ಈ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಒಂದು ಮಹತ್ವದ ಹೆಜ್ಜೆಯಿತ್ತು ಸಾಗಲು ಮಾರ್ಗ ತೋರಿದೆ. ಆದರೆ ವಾಸ್ತವತೆಯ ನೆಲೆಗಟ್ಟಿನಲ್ಲಿ ನಿಂತು ವೈಜ್ಞಾನಿಕವಾದ ಪ್ರಯತ್ನವಾಗಬೇಕಿದೆ.

ಮೊದಲನೆಯದಾಗಿ ಈಗಾಗಲೇ ಕರ್ನಾಟಕದಲ್ಲಿ ಜಾರಿಗೊಳಿಸುತ್ತಿರುವ "ದೇವದಾಸಿಯರ ಪುನರ್ವಸತಿ"ಯನ್ನು ವಿಶ್ಲೇಷಿಸಬೇಕಾಗುತ್ತದೆ. ಅಲ್ಲಿಯ ಕುಂದುಕೊರತೆಗಳು, ಅಸಂಬದ್ಧಗಳು, ಯಶಸ್ಸುಗಳ ಅವಲೋಕನ ಮಾಡಿದಾಗ ಕೆಲವು ಅಂಶಗಳು ಸಹಾಯವಾಗುತ್ತವೆ.

"ಲೈಂಗಿಕ ಕಾರ್ಯಕರ್ತರ" ವೃತ್ತಿ ಕುರಿತಾದ ಸ್ಪಷ್ಟ-ನೇರ ವ್ಯಾಖ್ಯಾನ ಅಗತ್ಯ. ನಾನಾ ಸ್ವರೂಪದ ಲೈಂಗಿಕ ಕಾರ್ಯಕರ್ತರು ಈ ವೃತ್ತಿಯಲ್ಲಿ ಇರುವುದರಿಂದ ಸಮೀಕ್ಷೆಗೆ ಇವರೆಲ್ಲರೂ ಒಳಪಡಬೇಕಾಗುತ್ತದೆ. ತೀವ್ರಗತಿಯಲ್ಲಿ, ಅವ್ಯಾಹತವಾಗಿ, ನಿರ್ಭಿಡೆಯಿಂದ ನಡೆಯುತ್ತಿರುವ ಮಹಿಳೆಯರು ಹಾಗೂ ಮಕ್ಕಳ ಸಾಗಾಟ ಮತ್ತು ಮಾರಾಟ (Trafficking)ದ ಬಹುದೊಡ್ಡ ಜಾಲ ದಿನ ನಿತ್ಯ ಲಕ್ಷಾಂತರ ಹೆಣ್ಣುಗಳನ್ನು ವೇಶ್ಯಾವಾಟಿಕೆಗೆ ದೂಡುತ್ತಿರುವ ದಂಧೆಯನ್ನು ನಿರ್ದಾಕ್ಷಿಣ್ಯವಾಗಿ ನಿಷೇಧಿಸದಿದ್ದಲ್ಲಿ ಸುಪ್ರೀಂ ಕೋರ್ಟು ಆಶಿಸಿರುವ ಆಶಯಗಳು, ನಿರೀಕ್ಷೆಗಳು ಯಶಸ್ಸು ಕಾಣುವುದಿಲ್ಲ, ಹಾಗೂ ಪ್ರತಿನಿತ್ಯ ಲೈಂಗಿಕ ವೃತ್ತಿಗೆ ಧುಮುಕುತ್ತಿರುವವರನ್ನು ಗಂಭೀರವಾಗಿ ಪರಿಗಣಿಸ ಬೇಕಾಗುತ್ತದೆ. ಇನ್ನು "ವೇಶ್ಯಾವಾಟಿಕೆ" ಎನ್ನುವ ಸಾಂಘಿಕವಾದ ದುರ್ಗಮ ಜಾಲದಲ್ಲಿ ನಲುಗುತ್ತಿರುವ ಅಸಂಖ್ಯಾತ ಲೈಂಗಿಕ ವೃತ್ತಿಯಲ್ಲಿ ತೊಡಗಿರುವ ಮಕ್ಕಳು ಮತ್ತು ಮಹಿಳೆಯರ ಬದುಕುಗಳನ್ನು ಆ ಕಬಂಧ ಬಾಹುವಿನಿಂದ ರಕ್ಷಿಸಿ ಹೊರತರಬೇಕಾಗುತ್ತದೆ.

ಈ ಸಮೀಕ್ಷೆ ಕೇವಲ ಗುರುತಿಸುವ ಕಾರ್ಯವಾಗದೆ ಅವರಿಗೆ ವೃತ್ತಿಗೌರವ, ಸಾಮಾಜಿಕ, ಆರ್ಥಿಕ ಭದ್ರತೆ ಒದಗಿಸಿ ಅವರ ಮಕ್ಕಳಿಗೆ ಪರ್ಯಾಯ ಬದುಕಿನ "ಖಾತರಿ" ಒದಗಿಸುವಂತಾಗಬೇಕು, ಅವಳ "ಪುನರ್ವಸತಿ" ಅವಳ ಆಯ್ಕೆಯೂ ಆಗಬೇಕು.

"ಮಹಿಳೆ ತನ್ನನ್ನು ತಾನು ಅರ್ಥಮಾಡಿಕೊಂಡಿದ್ದಾಳೆ, ಚೈತನ್ಯ ತುಂಬಿದೆ. ಆದರೆ ಸಮಾಜ ಅದನ್ನು ಸ್ವೀಕರಿಸಲು ತಯಾರಿಲ್ಲ; ಸಮಾಜ ಮಹಿಳೆಯ ಸಬಲೀಕರಣಕ್ಕೆ ಎಲ್ಲ ಅವಕಾಶ ಕಲ್ಪಿಸಲು ಸಿದ್ಧವಾಗಿಬ, ಆದರೆ ಮಹಿಳೆ ಸಿದ್ಧವಿಲ್ಲ; ಈ ಎರಡೂ ಸಂದರ್ಭದಲ್ಲಿಯೂ ಮಹಿಳೆಯ ಸಬಲೀಕರಣ ಸಾಧ್ಯವಿಲ್ಲ" ಎಂದ ಬುದ್ಧನ ಮಾತುಗಳು ಪ್ರಸ್ತುತ.

ಮಾನಸಿಕವಾಗಿ ಲೈಂಗಿಕ ವೃತ್ತಿನಿರತರು ತಮ್ಮ ಸಾಮಾಜಿಕವಾದ, ಸಾಂಸ್ಕೃತಿಕವಾದ ಕಟ್ಟುಪಾಡುಗಳ ಸವಾಲುಗಳನ್ನು ಮೀರಲು ಬೇಕಾದಂತಹ ಸಾಮರ್ಥ್ಯ ಮತ್ತು ಶಕ್ತಿ ಪಡೆದುಕೊಳ್ಳಲು ಸಮಾಜ ಸರಕಾರ, ನ್ಯಾಯಾಲಯಗಳು ಕೈಜೋಡಿಸಬೇಕಾಗುತ್ತದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಪೋಲೀಸ್ ವ್ಯವಸ್ಥೆಯ ಸಹಕಾರ ಅತ್ಯಗತ್ಯವಾಗಿದೆ. ಹಾಗೂ ಅವರ ಮಧ್ಯೆ ಕೆಲಸ ನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕಿದೆ.

ಅತಿದೊಡ್ಡ ಸವಾಲಿನ, ಸಂಕೀರ್ಣದ ಬಿಡುಗಡೆಯ ಹಾದಿಯನ್ನು ತೋರಲು ಇದೊಂದು ಪ್ರಾಮಾಣಿಕ ಪ್ರಯತ್ನವಾದಲ್ಲಿ ಪಾಚಿಗಟ್ಟಿದ ಜಾರುದಾರಿಯಲ್ಲಿ ಸಾವರಿಸಿ ನಿಲ್ಲಲೂ ಆಗದೆ, ಹಾಗೆಂದು ಜಾರದಿರಲೂ ಆಗದೆ ತತ್ತರಿಸಿದವರ ನೋವಿನ, ಹತಾಶೆಯ ಬದುಕಿಗೊಂದು ಈ ನೆಲದಲ್ಲಿ ಅಸ್ತಿತ್ವ ಸಿಗುವಂತಾಗಲು ಸುಪ್ರೀಂ ಕೋರ್ಟ್‌ನ ಐತಿಹಾಸಿಕ ಆದೇಶ ನೆರವಾಗಲಿ. □

ಸಂಪಾದಕರೊಡನೆ ಸಂವಾದ

ಮಹಾತ್ಮರು ಮತ್ತು ಜಯಂತಿಗಳು...

ಡಾ. ಎಚ್. ಟಿ. ಪೋತೆ

ಪ್ರಿಯ ಸಂಪಾದಕರೇ,

ನಾವು ಬುದ್ಧನೆಂದು ಗುರುತಿಸುವ ವ್ಯಕ್ತಿ ಐತಿಹಾಸಿಕವಾಗಿ ನಮಗಿಂತ ಎಷ್ಟು ಹಿಂದಿನವರೆಂದರೆ, ಒಂದರ್ಥದಲ್ಲಿ ಆತನಿಗೂ ನಮಗೂ ಕಾಲದ ದೃಷ್ಟಿಯಿಂದ ಯಾವ ಸಂಬಂಧವೂ ಇಲ್ಲ. ಆತ ಜನಿಸಿದ್ದು ಎರಡು ಸಾವಿರದ ಐದುನೂರು ವರ್ಷಗಳಾಚೆ. ಜಾಗತಿಕ ಚರಿತ್ರೆಗೆ ಹೋಲಿಸಿದರೆ, ಗ್ರಿಕ್ ತತ್ವಜ್ಞಾನಿಯಾದ ಸಾಕ್ರೆಟೀಸ್‌ನಿಗಿಂತಲೂ ಸುಮಾರು ನೂರು ವರ್ಷ ಹಿಂದಿನವ. ಹಿಗಿದ್ದೂ ಬುದ್ಧ ಮತ್ತು ಸಾಕ್ರೆಟೀಸ್ ಇವರು ನಮಗೆ ಎಂದೂ ದೂರವೆಂದು ತೋರುವುದೇ ಇಲ್ಲ. ಯಾಕೆಂದರೆ ಇಬ್ಬರೂ ಮಹಾತ್ಮರು ಎದುರಿಸಿದ ಸಮಸ್ಯೆಗಳು ಇವತ್ತಿನ ನಮ್ಮ ನಿಮ್ಮೆಲ್ಲರ ದೈನಂದಿನ ಸಮಸ್ಯೆಗಳೇ ಆಗಿವೆ. ಆದ್ದರಿಂದ ಬುದ್ಧ, ಮಹಾವೀರ, ಬಸವಣ್ಣ, ಅಂಬೇಡ್ಕರ್ ಮುಂತಾದವರ ಜಯಂತಿಗಳನ್ನು ಆಚರಿಸುತ್ತಲೇ ಇದ್ದೇವೆ.

ಇತ್ತೀಚೆಗಷ್ಟೇ ಭಾರತರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 120ನೇ ಜಯಂತ್ಯೋತ್ಸವ ಆಚರಿಸಿದ್ದೇವೆ. ಹಾಗೆಯೇ ಜಗಜ್ಯೋತಿ ಬಸವೇಶ್ವರರ (ಬಸವಣ್ಣನವರ) ಜಯಂತಿಯನ್ನು ಕೂಡ ಆಚರಿಸಿದ್ದೇವೆ. ಅಂಬೇಡ್ಕರ್ ಮತ್ತು ಬಸವಣ್ಣನವರಿಗೂ ಕಾಲದ ದೃಷ್ಟಿಯಿಂದ ಯಾವ ಸಂಬಂಧವೂ ಇಲ್ಲ. ಆದರೆ ವಿಚಾರಗಳ ದೃಷ್ಟಿಯಿಂದ, ಅವರು ಎದುರಿಸಿದ ಸಮಸ್ಯೆಗಳು ಒಂದೇಯಾಗಿದ್ದವು. ಶ್ವಪಚರಾದಿಯಾಗಿ ಒಂದೇ ಎಂದು ಬಸವಣ್ಣನವರು ಮಾನವ ಪ್ರೇಮ ಮೆರೆದಿದ್ದಾರೆ. ಅದೇ ರೀತಿ We the people of India ಎಂದು ಹೇಳಿದ ಅಂಬೇಡ್ಕರ್ ಭಾರತದ ಏಕತೆ ಹಾಗೂ ಸಮಗ್ರತೆಯನ್ನು ಎತ್ತಿ ಹಿಡಿದಿದ್ದಾರೆ.

ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಮೂರೂ ಜನ ಮಹಾತ್ಮರು ಈ ನೆಲದ ಅಸ್ಪೃಶ್ಯತೆಯನ್ನು ವರ್ಣ, ವರ್ಗ ನೀತಿಯನ್ನು ಬಡವ ಬಲ್ಲಿದರೆಂಬ ಭೇದವನ್ನು ವಿರೋಧಿಸಿ ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಿದ ಅಗ್ರಗಣ್ಯ ಸಮಾಜ ಸುಧಾರಕರು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ವರ್ಷ ವರ್ಷ ಅವರ ಹುಟ್ಟುಹಬ್ಬಗಳನ್ನು ಅತಿ ವಿಜೃಂಭಣೆಯಿಂದ ಆಚರಿಸುತ್ತ ಅವರನ್ನು ಹೊಗಳಿ ಹೊನ್ನಶೂಲಕ್ಕೆ ಏರಿಸುತ್ತ ಅರ್ಥಪೂರ್ಣವಾದ ಆಚರಣೆಯ ನೆಲೆಯಿಂದ ನಾವು ದೂರ ಸರಿಯುತ್ತಿದ್ದೇವೆ

ಶಿಕ್ಷಣ ಸಂಘಟನೆ ಹೋರಾಟವೆಂಬ ಸಾಮಾಜಿಕ ಬದಲಾವಣೆಯ ಮೂರು ಮಹಾ ಚಿಂತನೆಗಳನ್ನು ಪಾಲಿಸಿದಲ್ಲಿ ಮುಂದೊಂದು ದಿನ ನನ್ನ ಜನ ಹೊಸದೊಂದು ಸಮಾಜಕ್ಕೆ ನಾಂದಿ ಹಾಡುತ್ತಾರೆ ಎಂದು ಅಂಬೇಡ್ಕರ್ ಕನಸು ಕಂಡಿದ್ದರು. ಆದರೆ ಅವರೆಲ್ಲ ಒಳಜಾತಿಗಳ ಹೆಸರಲ್ಲಿ ಒಡೆದು ಹೋಳಾಗಿ ಸಾಮಾಜಿಕವಾದ ಮಹಾಸೋಲನ್ನು ಆ ಸಮುದಾಯ ತನ್ನ ಮೈಮೇಲೆ ಎಳೆದುಕೊಳ್ಳುತ್ತಿರುವುದು ನಿಜಕ್ಕೂ ಒಂದು ದುರಂತ ಸಂಗತಿಯಾಗಿದೆ.

ಎಂದೆನಿಸುತ್ತದೆ. ಅವರ ವಿಚಾರಗಳಿಗೆ ಸಮಾಜ ಹೇಗೆ ವ್ಯತಿರಿಕ್ತವಾಗಿ ವರ್ತಿಸುತ್ತಿದೆ ಎನ್ನಲಿಕ್ಕೆ ಒಂದೆರಡು ಘಟನೆಗಳನ್ನು ಗಮನಿಸಬಹುದಾಗಿದೆ.

ಇತ್ತೀಚೆಗಷ್ಟೇ ಸೇವೆಗೆ ಹಾಜರಾದ ವಿಶ್ವವಿದ್ಯಾಲಯ ಅಧ್ಯಾಪಕರೊಬ್ಬರು ಬಾಡಿಗೆ ಮನೆ ಕೇಳಲಿಕ್ಕೆ ಹೋದಾಗ 'ತಾವು ಯಾವ ವರ್ಗದವರು' ಎಂಬ ಜಾತಿ ಭೂತದ ಪ್ರಶ್ನೆ ಧುತ್ತೆಂದು ಎದುರಾದಾಗ ತಡವರಿಸಿಕೊಂಡು ಅಧ್ಯಾಪಕ ಗೆಳೆಯ 'ಜಾತಿಯನ್ನು ಹೇಳುವುದು ಅನಿವಾರ್ಯವೇ' ಎಂದು ಮರುಪ್ರಶ್ನೆ ಮಾಡಿದರಂತೆ. ಅದಕ್ಕೆ ಅವರು 'ಹೌದರಿ ಜಾತಿ ಹೇಳಬೇಕು, ಎಂಥವರು ಬರುತ್ತಾರೊ ಹೆಂಗಿರತಾರೊ ಗೊತ್ತಾಗೊಲ್ಲ. ಮಾಂಸಾಹಾರಿಗಳಾಗಿದ್ದರೆ? ಯಾಕೆಂದರೆ ನಾವೂ ಕಪ್ಪು ಕಡಿ (ಮಾಂಸಾಹಾರ) ತಿಂತೀವಿ. ಆದರೆ ಮನೆಯಲ್ಲಿ ಮಾಡಲ್ಲ ಹೊರಗಡೆ ತಿಂತೀವಿ. ಆದ್ದರಿಂದ ನಾವು ನಮ್ಮವರಿಗೆ ಮಾತ್ರ ಮನೆ ಕೊಡುವುದು' ಅಂದರಂತೆ. ಇದು ಎಂಥ ವಿಪರ್ಯಾಸ ನೋಡಿ. ಹಿಂದೊಮ್ಮೆ ರಾಯಚೂರಿನಲ್ಲಿ ನಾನು ಮನೆ ಕೇಳಲಿಕ್ಕೆ ಹೋದಾಗ ಅವರೂ ಹೀಗೆಯೇ ಹೇಳಿದ್ದರು. ಅದರಲ್ಲಿ ಒಬ್ಬ ಶರಣ ಅನುಯಾಯಿ ಎಂದು ಹೇಳಿಕೊಳ್ಳುವ ವ್ಯಕ್ತಿ ದೂರವಾಣಿ ಮಾಡಿ ನಮ್ಮ ಮನೆ ಖಾಲಿಯಿದೆ ಬರ್ರಿ ಎಂದು ಕೇಳಿದಾಗ, ನನ್ನ ಜಾತಿಯನ್ನು ಮರೆಯದೆ ಅವರಿಗೆ ತಿಳಿಸಿದೆ. ಆಗ ಅವರು ನಮಗೆ ಮುಸಲ್ಮಾನರಲ್ಲದಿದ್ದರೆ ಸಾಕು ಎಂದಿದ್ದರು. ವಿಚಿತ್ರವೆಂದರೆ ಜಾತ್ಯತೀತ ನೆಲೆಯ ಈ ದೇಶದಲ್ಲಿ ವೈದಿಕನಿಗೆ ಉಳಿದವರಾರೂ ಬೇಡ. ಲಿಂಗಾಯತರಿಗೆ ದಲಿತರು, ಮುಸ್ಲೀಮರು ಬೇಡ ಇದು ಎಂಥ ವಿಪರ್ಯಾಸ. ಈ ಸಿನಿಕರಿಗೆ ಏನೆಂದು ಹೇಳಬೇಕು?

ಇಂದಿನ ಜಾಗತೀಕರಣದಂತಹ ಕಾಲ ಸಂದರ್ಭದಲ್ಲಿ ವೀರಶೈವ ಮತದವರು ತಮ್ಮ ಮನೆಯಲ್ಲಿ ಅಂಬೇಡ್ಕರ್ ಫೋಟೋ ಹಾಕಿಕೊಂಡಿದ್ದರೆ ಯಾಕರಿ? ನಿಮ್ಮ ಮನೆಯಲ್ಲಿ ಈ ಫೋಟೋ? ಎಂದು ಆಶ್ಚರ್ಯಚಕಿತರಾಗಿ ಸಂಶಯ ವ್ಯಕ್ತಪಡಿಸುತ್ತಾರೆ. ಅಷ್ಟೇ ಅಲ್ಲ ಅಂಬೇಡ್ಕರ್ ಹೆಸರಿನ ಹೊಸ ಬಡಾವಣೆಯಲ್ಲಿ ಲಿಂಗಾಯತರು ವಾಸ ಮಾಡಲು ಸಿದ್ದರಿರುವುದಿಲ್ಲ. ಬಸವಣ್ಣನ ಹೆಸರಿನ ಬಡಾವಣೆಯಲ್ಲಿ ಬ್ರಾಹ್ಮಣರು ಸುತಾರಾಮ್ ವಾಸ ಮಾಡುವುದಿಲ್ಲ. ಪಂಚಾಚಾರಿಗಳಂತೂ ಬಸವನನ್ನು ಗೌರವಿದೋದೇ ಇಲ್ಲ. ವಿಶೇಷವೆಂದರೆ ದಲಿತರು ಬಸವ ನಗರವೆಂದು ತಮ್ಮ ಕೇರಿಗೆ ನಾಮಕರಣ ಮಾಡಿಕೊಂಡು ಅಭಿಮಾನಪಡುತ್ತಾರೆ. ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಆಚರಣೆ ಮಾಡುತ್ತಾರೆ. ಆ ಮೂಲಕ ಬಸವಾದಿ ಶರಣರ ಚಿಂತನೆ ಮತ್ತು ಚಳವಳಿವನ್ನು ಗೌರವಿಸುತ್ತಾ ಬಂದಿದ್ದಾರೆ. ಆದರೆ ಅಕ್ಷರಸ್ತರು, ಮುಂದುವರೆದರು ಎಂದು ಹೇಳಿಕೊಳ್ಳುವ ವೈದಿಕರು ಬಸವ ಜಯಂತಿ ಮಾಡೋಲ್ಲ. ಲಿಂಗಾಯತರು ಅಂಬೇಡ್ಕರ್ ಸ್ಮರಣೆ ಮಾಡಲು ಸಿದ್ಧರಿಲ್ಲ. ಆದರೆ ಮರಾಠಿಗರಾದ ಶಿವಾಜಿ ಜಯಂತಿಯನ್ನು ಬಸವನೊಂದಿಗೆ ಹೊಂದಿಸಿಕೊಳ್ಳುತ್ತಾರೆ. ಆ ಮೂಲಕ ತಾವು ಸೆಕ್ಯುಲರ್ ಎಂದು ತೋರಿಸಿಕೊಳ್ಳುತ್ತಾರೆ. ಆದರೆ ಬಸವ ಜಯಂತಿಯೊಂದಿಗೆ ಅಂಬೇಡ್ಕರ್ ಸ್ಮರಣೆ ಮಾಡುವ ಬಸವ ಅನುಯಾಯಿಗಳನ್ನು ನಾವು ಕಾಣುವುದು ವಿರಳವೇ ಸರಿ. ಇನ್ನೂ ದಲತರ ಸ್ಥಿತಿಯಂತೂ ಇದಕ್ಕಿಂತ ಭಿನ್ನವಾದುದು. ಶಿಕ್ಷಣ ಸಂಘಟನೆ ಹೋರಾಟವೆಂಬ ಸಾಮಾಜಿಕ ಬದಲಾವಣೆಯ ಮೂರು ಮಹಾ ಚಿಂತನೆಗಳನ್ನು ಪಾಲಿಸಿದಲ್ಲಿ ಮುಂದೊಂದು ದಿನ ನನ್ನ ಜನ ಹೊಸದೊಂದು ಸಮಾಜಕ್ಕೆ ನಾಂದಿ ಹಾಡುತ್ತಾರೆ ಎಂದು ಅಂಬೇಡ್ಕರ್ ಕನಸು ಕಂಡಿದ್ದರು. ಆದರೆ ಅವರೆಲ್ಲ ಒಳಜಾತಿಗಳ ಹೆಸರಲ್ಲಿ ಒಡೆದು ಹೋಳಾಗಿ ಸಾಮಾಜಿಕವಾದ ಮಹಾಸೋಲನ್ನು ಆ ಸಮುದಾಯ ತನ್ನ ಮೈಮೇಲೆ ಎಳೆದುಕೊಳ್ಳುತ್ತಿರುವುದು ನಿಜಕ್ಕೂ ಒಂದು ದುರಂತ ಸಂಗತಿಯಾಗಿದೆ.

ಈ ದೇಶದಲ್ಲಿ ಬುದ್ಧ ಜಯಂತಿಯಂದು ಅಣು ಬಾಂಬ್ ಪ್ರಯೋಗ ಮಾಡಿ ಬುದ್ಧ ನಕ್ಕ ಎಂದು ಹೇಳಿ ಬುದ್ಧನಿಗೆ ಅವಮಾನಿಸಿದ್ದು ಇತಿಹಾಸ. ಬಸವಣ್ಣನವರು ಪಾರಾಯಣ ಸಂಸ್ಕೃತಿಯನ್ನು ಪ್ರಧಾನವಾಗಿ ವಿರೋಧಿಸಿದ್ದರು. ಅದಕ್ಕೆ ವ್ಯತಿರಿಕ್ತವೆನ್ನುವಂತೆ ಬಸವಾದಿ ಶರಣರ ಅನುಯಾಯಿಗಳು ಆ ಚಳವಳಿಯ ತತ್ವಚಿಂತನೆಗಳನ್ನು ಪಾಲಿಸದೆ ಕೇವಲ ವಚನಗಳನ್ನು ಪಾರಾಯಣ ಮಾಡುತ್ತ ಕಂಠ ಶೋಷಣೆ ಮಾಡಿಕೊಳ್ಳುವದನ್ನು ನೋಡಿದರೆ ಅಯ್ಯೋ ಎನಿಸುತ್ತದೆ. ಸ್ವಾಮೀಜಿಗಳಾದವರು ಬಸವ ಜಯಂತಿಯಂದು ವಚನ ಸಂಪುಟ, ವಿಭೂತಿಯ ಕಟ್ಟುಗಳನ್ನು ದಲಿತ ಕೇರಿಗಳಲ್ಲಿ ಹಂಚಿ ಕೈತೊಳೆದುಕೊಳ್ಳುವುದು ಬಸವ ಚಿಂತನೆಗೆ ಅಪಹಾಸ್ಯ ಮಾಡುವಂತಹ ಇನ್ನೊಂದು ಉದಾಹರಣೆ ಬೇಕೆ? ಜಾತಿ ಅಸಮಾನತೆಯನ್ನು ಪರಿಪಾಲಿಸುವವರಿಗೆ ಇವನಾರವ, ಇವನಾರವ ಎಂದೆನಿಸದೆ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಕೂಡಲ ಸಂಗಮದೇವ ಎಂದು ಬಸವಣ್ಣ ಹೇಳಿದ ಮಾತಿಗೆ ಇವತ್ತು ಕವಡೆ ಕಾಸಿನಷ್ಟೂ ಕಿಮ್ಮತ್ತಿಲ್ಲದಂತಾಗಿದೆ. ತಳವರ್ಗದಲ್ಲಿ ಆತ್ಮ ಸ್ಥೆರ್ಯ ತುಂಬುವಲ್ಲಿ 'ಅಪ್ಪನು ನಮ್ಮ ಮಾದರ ಚೆನ್ನಯ್ಯ ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ' ಎಂದು ಬಸವಣ್ಣ ಹೇಳಿದ ಮಾತುಗಳು ವೇದಿಕೆಗಳಿಗೆ ಮಾತ್ರ

(11ನೇ ಪುಟಕ್ಕೆ)

ಏಡ್ಸ್ ಮಹಾಮಾರಿಗೆ ಮೂವತ್ತು

ಸಂಪಾದಕರೊಡನೆ ಸಂವಾದ

ಡಾ. ಎನ್. ಜಗದೀಶ್ ಕೊಪ್ಪ

20ನೇ ಶತಮಾನದ ಮೂರು ಮರೆಯಲಾಗದ ಮಹತ್ವದ ಸಂಗತಿಗಳೆಂದರೆ, ಒಂದು 1930ರಲ್ಲಿ ಅಮೆರಿಕಾದಲ್ಲಿ ಕಾಣಿಸಿಕೊಂಡು ಜಗತ್ತಿನಾದ್ಯಂತ ಪರಿಣಾಮ ಬೀರಿದ ಆರ್ಥಿಕ ಹಿಂಜರಿತ. ಎರಡನೆಯದು 1944–45ರಲ್ಲಿ ನಡೆದ ಎರಡನೇ ಮಹಾಯುದ್ಧ, ಮೂರನೆಯದು 1981ರಲ್ಲಿ ಕಾಣಿಸಿಕೊಂಡ ಸಾವಲ್ಲದೆ ಬೇರೆ ಪರ್ಯಾಯ ಮಾರ್ಗವಿಲ್ಲದ ಏಡ್ಸ್ ಎಂಬ ಮಹಾಮಾರಿ.

ಪ್ರಿಯ ಸಂಪಾದಕರೇ,

ಮನುಕುಲದ ಮಹಾಮಾರಿ ಏಡ್ಸ್ ರೋಗ ನಮ್ಮ ಮನೆ–ಮನಕ್ಕೆ ಕಾಲಿಟ್ಟು ಜೂನ್ 5 ಕ್ಕೆ ಮೂವತ್ತು ತುಂಬಿತು. ದೈಹಿಕ ಲೋಲುಪತೆ, ಸ್ವಚ್ಛಂದ ಕಾಮಕೇಳಿ ಮೂಲಕ ಬೀದಿಯಲ್ಲಿದ್ದ ಮಾರಿಯನ್ನು ಮನೆಗೆ ಕರೆ ತಂದು, ಇನ್ನಿಲ್ಲದ ಸಾವು–ನೋವು ಅನುಭವಿಸುತ್ತಾ ಬಂದ ಆಧುನಿಕ ಜಗತ್ತು, ಈ ಮಹಾಮಾರಿಯನ್ನು ಕೊನೆಗಾಣಿಸಲು ದಾರಿ ಕಾಣದೆ ಅಸಹಾಯಕತೆಯಿಂದ ಕೈ ಚೆಲ್ಲಿದೆ. ನಮ್ಮ ವಿಜ್ಞಾನದ ಎಲ್ಲಾ ಆವಿಷ್ಕಾರಗಳು, ಪ್ರಯೋಗಗಳು ಈ ಮಹಾಮಾರಿಯ ರೌದ್ರ ನರ್ತನದ ದುರು ನೆಲಕಚ್ಚಿ ಕುಳಿತಿವೆ.

ತಮ್ಮ ಕೊಳ್ಳುಬಾಕ ಸಂಸ್ಕೃತಿ ಹಾಗೂ ಮುಕ್ತ ಲೈಂಗಿಕ ಚಟುವಟಿಕೆಯ ಮೂಲಕ ಈ ಮಹಾಮಾರಿಯನ್ನು ಜಗತ್ತಿಗೆ ಹಂಚಿದ ಅಮೆರಿಕನ್ನರು ಏನೂ ಆಗದಂತೆ ತಣ್ಣಗೆ ಬದುಕಿದ್ದಾರೆ. ಆದರೆ ಏಡ್ಸ್ ಮಾರಿಯ ಕೆನ್ನಾಲಿಗೆಗೆ ತೃತೀಯ ಜಗತ್ತಿನ ಆಫ್ರಿಕಾ, ಭಾರತ ಸೇರಿದಂತೆ ಹಲವಾರು ರಾಷ್ಟ್ರಗಳ ಅನಕ್ಷರಸ್ಥ ಬಡಜನತೆ ತರಗೆಲೆಗಳಂತೆ ಉರಿದು ಹೋಗುತ್ತಿದ್ದಾರೆ.

1980ರಲ್ಲಿ ಪ್ರಸಿದ್ಧ ಪ್ರವಾಸಿ ದ್ವೀಪ ಹೈಟಿಯಲ್ಲಿ ಪ್ರಥಮವಾಗಿ ಕಾಣಿಸಿಕೊಂಡ ಈ ರೋಗಲಕ್ಷಣಗಳನ್ನು ವಿಶ್ಲೇಷಿಸಿ, 1981ರ ಜೂನ್ 5ರಂದು ಅಮೆರಿಕಾದ "ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆಂಟೇಷನ್" ಸಂಸ್ಥೆ ಇದಕ್ಕೆ ಏಡ್ಸ್ ಎಂದು ನಾಮಕರಣ ಮಾಡಿತು. ಮಾನವ ಶರೀರದ ರೋಗ ನಿರೋಧಕ ಶಕ್ತಿಯನ್ನು ಕುಂದಿಸಬಲ್ಲ ಈ ಮಾರಕ ಖಾಯಿಲೆಗೆ ಜಗತ್ತಿನಾದ್ಯಂತ ಈವರೆಗೆ 3 ಕೋಟಿ 32ಲಕ್ಷ ಜನ ಬಲಿಯಾಗಿದ್ದಾರೆ. ಪ್ರತಿ ವರ್ಷ 26ಲಕ್ಷ ಮಂದಿ ಏಡ್ಸ್ ಖಾಯಿಲೆಗೆ ತುತ್ತಾಗುತ್ತಿದ್ದಾರೆ. ಸಾವನ್ನಪ್ಪಿದವರಲ್ಲಿ ಶೇ.76ರಷ್ಟು ಅಮಾಯಕ ಮಕ್ಕಳೇ ಆಗಿರುವುದು ದುರದೃಷ್ಟಕರ ಸಂಗತಿ.

ಮೂಲತಃ ಚಿಂಪಾಂಜಿ ಪ್ರಾಣಿಗಳಲ್ಲಿ ಕಾಣಿಸಿಕೊಂಡ ಈ ವೈರಸ್ ಮಾನವ ಶರೀರಕ್ಕೆ ಪ್ರವೇಶ ಪಡೆದದ್ದು ಇಂದಿಗೂ ಸೋಜಿಗವಾಗಿದೆ.

ರಕ್ತ, ವೀರ್ಯ, ಜೊಲ್ಲು, ಎದೆಹಾಲು ಇವುಗಳ ಮೂಲಕ ಶರೀರದಿಂದ ಶರೀರಕ್ಕೆ ದಾಟಬಲ್ಲ ಈ ವೈರಸ್‌ಗಳಿಗೆ ಮಾನವನ ದುಶ್ಚಟ ಹಾಗೂ ಸ್ವಚ್ಛಂದ ಕಾಮಕೇಳಿ ರಹದಾರಿಗಳಾದವು.

ಮಾದಕ ವಸ್ತುಗಳನ್ನು ಸಿರಿಂಜ್‌ಗಳ ಮೂಲಕ ಚುಚ್ಚಿಕೊಳ್ಳುವ ಮಾದಕವ್ಯಸನಿಗಳಿಂದ, ವೇಶ್ಯೆಯರಿಂದ ಅಂಟಿಸಿಕೊಂಡ ರೋಗವನ್ನು ತಮ್ಮ ಪತ್ನಿಯರಿಗೆ ದಾಟಿಸಿದ ಪುರುಷರು, ತಮಗರಿವಿಲ್ಲದಂತೆ ಗಂಡನಿಂದ ಪಡೆದ ಈ ಬಳುವಳಿಯನ್ನು ಎದೆಹಾಲಿನ ಮೂಲಕ ತಮ್ಮ ಮಕ್ಕಳಿಗೆ ನೀಡಿದ ತಾಯಂದಿರು, ಹೀಗೆ ಸಾವಿನ ಸರಪಳಿಯ ಮಹಾಕೊಂಡಿಯೊಂದು ಅರಿವಿಗೆ ಬಾರದಂತೆ ಜಗತ್ತನ್ನು ಆವರಿಸಿಕೊಂಡಿತು.

20ನೇ ಶತಮಾನದ ಮೂರು ಮರೆಯಲಾಗದ ಮಹತ್ವದ ಸಂಗತಿಗಳೆಂದರೆ, ಒಂದು 1930ರಲ್ಲಿ ಅಮೆರಿಕಾದಲ್ಲಿ ಕಾಣಿಸಿಕೊಂಡು ಜಗತ್ತಿನಾದ್ಯಂತ ಪರಿಣಾಮ ಬೀರಿದ ಆರ್ಥಿಕ ಹಿಂಜರಿತ. ಎರಡನೆಯದು 1944 – 45ರಲ್ಲಿ ನಡೆದ ಎರಡನೇ ಮಹಾಯುದ್ಧ, ಮೂರನೆಯದು 1981ರಲ್ಲಿ ಕಾಣಿಸಿಕೊಂಡ ಸಾವಲ್ಲದೆ ಬೇರೆ ಪರ್ಯಾಯ ಮಾರ್ಗವಿಲ್ಲದ ಏಡ್ಸ್ ಎಂಬ ಮಹಾಮಾರಿ.

ವಿಶ್ವ ಸಂಸ್ಥೆಯ 2009ರ ವರದಿಯ ಪ್ರಕಾರ ಆಫ್ರಿಕಾ ಖಂಡದ 42 ರಾಷ್ಟ್ರಗಳಲ್ಲಿ 6 ಕೋಟಿಗೂ ಅಧಿಕ ಮಂದಿ ಏಡ್ಸ್ ಖಾಯಿಲೆಯಿಂದ ಬಳಲುತ್ತಿದ್ದಾರೆ. ಅಲ್ಲಿನ ಸಂಸ್ಕೃತಿ, ಬಹು ಪತ್ನಿತ್ವ ಪದ್ಧತಿ, ಅರಣ್ಯಗಳ ನಡುವೆ ಇಂದಿಗೂ ಬದುಕುತ್ತಿರುವ ಬುಡಕಟ್ಟು ಜನರ ಮುಕ್ತ ಲೈಂಗಿಕ ಚಟುವಟಿಕೆ, ಏಡ್ಸ್ ಖಾಯಿಲೆ ಕಾಡ್ಗಿಚ್ಚಿನಂತೆ ಹರಡಲು ಕಾರಣವಾಗಿದೆ.

ಜಗತ್ತಿನಾದ್ಯಂತ ಹಲವಾರು ಜೀವ ವಿಜ್ಞಾನಿಗಳು, ವಿಶ್ವ ಪ್ರಸಿದ್ಧ ಪ್ರಯೋಗಾಲಯಗಳು ಏಡ್ಸ್ ನಿಯಂತ್ರಣಕ್ಕೆ ಮದ್ದು ಕಂಡು ಹಿಡಿಯಲು ನಿರಂತರ ಪ್ರಯತ್ನ ನಡೆಸಿದರೂ, ಸಿಕ್ಕಿದ್ದು ಮಾತ್ರ ಅಲ್ಪ ಯಶಸ್ಸು. ರೋಗ ಕಾಣಿಸಿಕೊಂಡ ಪ್ರಾರಂಭಿಕ ಹಂತದಲ್ಲಿ ಎಚ್.ಐ.ವಿ. ವೈರಸ್ಸು (HUMAN IMMUNODEFICIENLY VIRUS) ದೇಹದ ಇತರೆ ಭಾಗಗಳಿಗೆ ಕ್ಷಿಪ್ರಗತಿಯಲ್ಲಿ ಹರಡಂತೆ ತಡೆಗಟ್ಟುವಲ್ಲಿ ಕೆಲವು ಔಷಧಗಳು ಬಳಕೆಯಾಗುತ್ತಿದ್ದು, ರೋಗಿಯ ಸಾವನ್ನು ಸ್ವಲ್ಪ ದಿನ ಮುಂದೂಡಬಹುದಾಗಿದೆ. ಈ ಔಷಧಗಳು ಅತ್ಯಂತ ದುಬಾರಿಯಾಗಿದ್ದು, ಇವುಗಳ ತಯಾರಿಕೆಯ ಮೂಲಕ ಶ್ರೀಮಂತ ರಾಷ್ಟ್ರಗಳ ಬಹುರಾಷ್ಟ್ರೀಯ ಕಂಪನಿಗಳು ಲಾಭ ಗಳಿಕೆಯಲ್ಲಿ ಪೈಪೋಟಿಗೆ ಇಳಿದಿವೆ.

ಅದೃಷ್ಟವಶಾತ್ ವಿಶ್ವ ವ್ಯಾಪಾರ ಸಂಘಟನೆಯಲ್ಲಿ ವ್ಯಾಪಾರ ಪೇಟೆಂಟ್ ಒಪ್ಪಂದ ಕುರಿತಂತೆ ಒಂದು ಹೊಸ ನಿಯಮಾವಳಿಯನ್ನು ರೂಪಿಸಿದ್ದು, ಯಾವುದೇ ರಾಷ್ಟ್ರ ತುರ್ತು ಪರಿಸ್ಥಿತಿಯಲ್ಲಿ ತನಗೆ ಅಗತ್ಯವಿರುವ ಔಷಧವನ್ನು ತಯಾರಿಸಿಕೊಳ್ಳಬಹುದು. ಇದಕ್ಕೆ ಪೇಟೆಂಟ್ ನಿಯಮದ ಕಡಿವಾಣವಿರುವುದಿಲ್ಲ ಎಂದು ಘೋಷಿಸಿದೆ. ಜೊತೆಗೆ ಅಗತ್ಯ ಔಷಧಗಳ ತಯಾರಿಕೆಗೆ ಬೇಕಾದ ಮೂಲಭೂತ ಸೌಕರ್ಯಗಳ ಕೊರತೆಯಿದ್ದರೆ, ಇತರೆ ದೇಶಗಳಿಂದ ಈ ಔಷಧಿಗಳನ್ನು ಆಮದು ಮಾಡಿಕೊಳ್ಳಬಹುದು. 2004ರಲ್ಲಿ ಜಾರಿಗೆ ಬಂದ ಈ ನಿಯಮಾವಳಿಯ ಪರಿಣಾಮ ಭಾರತ ಮತ್ತು ಬ್ರೆಜಿಲ್ ಇದೀಗ ಏಡ್ಸ್ ಖಾಯಿಲೆಗೆ ಅಗ್ಗದ ಔಷಧವನ್ನು ಉತ್ಪಾದಿಸಿ ರಫ್ತು ಮಾಡುವುದರ ಮೂಲಕ ಆಫ್ರಿಕನ್ ರಾಷ್ಟ್ರಗಳ ಪಾಲಿಗೆ ಆಪದ್ಬಾಂಧವ ರಾಷ್ಟ್ರಗಳಾಗಿವೆ.

ಮನುಷ್ಯನೊಬ್ಬ ಅರಿತೂ ಅರಿಯದೆಯೋ ತನ್ನ ಸಂಯಮ ಮೀರಿ ಮಾಡಿಕೊಂಡ ಈ ಅವಘಡಕ್ಕೆ ಪ್ರತಿಯಾಗಿ ಪಡೆದ ರೋಗದಿಂದ ಬಳಲುವ ಸ್ಥಿತಿ, ಜಗತ್ತಿನಲ್ಲಿ ಯಾವ ಜೀವಿಗೂ ಬರಬಾರದು ಎನಿಸುತ್ತದೆ.

ಮಾನವ ಶರೀರವನ್ನು ಪ್ರವೇಶಿಸಿದ ಈ ವೈರಸ್‌ಗಳು ದೇಹದ ರೋಗ ನಿರೋಧಕ ಶಕ್ತಿಯ ಜಾಲವನ್ನೇ ಕಡಿದುಹಾಕಿ, ಎಲ್ಲಾ ರೋಗಗಳ ವಿರುದ್ಧ ಹೋರಾಡುವ ಬಿಳಿ ರಕ್ತಕಣಗಳ ಬಲವನ್ನು ಕುಂದಿಸಿ, ಇಡೀ ದೇಹವನ್ನು ಆವರಿಸಿದಾಗ, ಸದಾ ಕಾಡುವ ಜ್ವರ, ನಿಲ್ಲದ ಬೇಧಿ, ನಿರಂತರ ಕೆಮ್ಮು ಇವುಗಳಿಂದ ವ್ಯಕ್ತಿಯ ದೇಹದ ತೂಕ ಕಡಿಮೆಯಾಗಿ ಕೃಶವಾಗುತ್ತಾ ಹೋಗುತ್ತಾನೆ. ಹೀಗೆ ಏಡ್ಸ್ ಪೀಡಿತ ರೋಗಿ ಸರ್ವ ರೋಗಗಳ ತೊಟ್ಟಿಲಂತಾಗಿ ಸಾವೊಂದೇ ಇದಕ್ಕೆಲ್ಲಾ ಪರಿಹಾರ ಎನ್ನುವ ಹೀನಾಯ ಸ್ಥಿತಿ ತಲುಪುತ್ತಾನೆ.

ಇನ್ನು ಭಾರತದಲ್ಲಿ ಏಡ್ಸ್‌ನ ಸ್ಥಿತಿ–ಗತಿ ಅವಲೋಕಿಸಿದರೆ, ಅನಕ್ಷರಸ್ಥರ, ಬಡವರ ನಾಡಾದ ಈ ನೆಲ ಕೂಡ ಏಡ್ಸ್ ಮಾರಿಯ ಕಬಂಧ ಬಾಹುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಜಗತ್ತಿನ ದಟ್ಟ ಜನಸಂಖ್ಯೆಯ ರಾಷ್ಟ್ರಗಳಲ್ಲಿ ಒಂದಾದ ಭಾರತದ ಪರಿಸ್ಥಿತಿ ಆಫ್ರಿಕಾದಷ್ಟು ಆತಂಕಕಾರಿಯಾಗಿಲ್ಲ.

1981ರಲ್ಲಿ ಕಾಣಿಸಿಕೊಂಡ ಏಡ್ಸ್ ಮಹಾಮಾರಿ 1986ರ ಜನವರಿ ವೇಳೆಗೆ ಜಗತ್ತಿನಾದ್ಯಂತ 20 ಸಾವಿರ ಮಂದಿಯನ್ನು ಬಲಿ ತೆಗೆದುಕೊಂಡಿತ್ತು. ಆಗಲೆ ಭಾರತದಲ್ಲಿ ಒಂದು ಪ್ರಕರಣವೂ ಪತ್ತೆಯಾಗಿರಲಿಲ್ಲ. ಅದೇ 86ರ ಜುಲೈನಲ್ಲಿ ಚನ್ನೈ ನಗರದ ವೇಶ್ಯೆಯೊಬ್ಬಳಲ್ಲಿ ಪ್ರಪ್ರಥಮವಾಗಿ ಏಡ್ಸ್ ಪತ್ತೆಯಾಯಿತು. 1987ರ ಅಂತ್ಯದ ವೇಳೆಗೆ 56 ಸಾವಿರ ಸಂಶಯಾಸ್ಪದ ವ್ಯಕ್ತಿಗಳ ರಕ್ತವನ್ನು ತಪಾಸಣೆಗೆ ಒಳಪಡಿಸಿದಾಗ ಇವರಲ್ಲಿ 135 ಮಂದಿಗೆ

(11ನೇ ಪುಟಕ್ಕೆ)

ಭಾರತದಲ್ಲಿ ಅಂಬೇಡ್ಕರ್ ಮಾದರಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿದೆಯೇ?

ಸಂಪಾದಕರೊಡನೆ ಸಂವಾದ

ರಘೋತ್ತಮ ಹೊ. ಬ

ಪ್ರಿಯ ಸಂಪಾದಕರೇ,

ಪ್ರಜಾಪ್ರಭುತ್ವ ಹಾಗೆಂದರೆ "ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಸರ್ಕಾರ". ಇದು ಅಮೆರಿಕಾದ ಮಾಜಿ ಅಧ್ಯಕ್ಷ ಅಬ್ರಹಾಂ ಲಿಂಕನ್ನರ ಡೈಲಾಗು. ಒಂದರ್ಥದಲ್ಲಿ ಇದು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಇಡೀ ವಿಶ್ವದ ಡೈಲಾಗಾಗಿ ಹೋಗಿದೆ. ಪ್ರಜಾಪ್ರಭುತ್ವ ಎಂದರೆ ಏನು ಎಂದಾಕ್ಷಣ ಎಲ್ಲರು ಹೇಳುವುದು ಅದನ್ನೇ. ಆದರೆ ಅದು ಎಷ್ಟು ಸರಿ? ಪ್ರಜಾಪ್ರಭುತ್ವವೆಂದರೆ ಕೇವಲ ಸರ್ಕಾರದ ಒಂದು ಮಾದರಿಯೇ? ಆಡಳಿತದ ಒಂದು ಪದ್ಧತಿಯೇ? ಬೇರೇನು ಅಲ್ಲವೇ? ಇಂತಹದ್ದರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಲು ಹೋಗಿಲ್ಲ. ಹಾಗೆ ಹೋಗುವುದೂ ಇಲ್ಲ. ಒಳ್ಳೆ ಗಿಳಿಪಾಠ ಹೇಳಿದ ಹಾಗೆ ಲಿಂಕನ್ನರ ಡೈಲಾಗನ್ನು ಪಟಪಟ ಎಂದು ಉದುರಿಸುತ್ತಾರೆ. ತನ್ಮೂಲಕ ಪ್ರಜಾಪ್ರಭುತ್ವ ಎಂದರೆ ಇದಿಷ್ಟೆ ಎಂದು ಅದಕ್ಕೆ ಒಂದು ಸೀಮಿತ ಚೌಕಟ್ಟನ್ನು ಒದಗಿಸುತ್ತಾರೆ.

ಆ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಿರ್ವೀರ್ಯಗೊಳಿಸುತ್ತಿದ್ದಾರೆನ್ನಬಹುದು. ವಿಶೇಷವಾಗಿ ಭಾರತದ ಮಟ್ಟಿಗೆ.

ಹಾಗಿದ್ದರೆ ಪ್ರಜಾಪ್ರಭುತ್ವ ಹಾಗೆಂದರೇನು? ಅದರ ನೈಜ ಅರ್ಥ ಏನು? ವಿಶ್ವದಲ್ಲಿ ವಿಶೇಷವಾಗಿ ಭಾರತದಲ್ಲಿ ಅದರ ಸ್ಥಾನ ಏನು? ಅದರ ಸಾಮಾನ್ಯ ಅರ್ಥಕ್ಕೂ, ಅದಕ್ಕೆ ಇರುವ ನೈಜ ಅರ್ಥಕ್ಕೂ ಇರುವ ವ್ಯತ್ಯಾಸ ಎಂತಹದ್ದು? ತಪ್ಪುತಪ್ಪಾಗಿ, ಆತುರಾತುರವಾಗಿ ಹಿಂದೆ ಮುಂದೆ ಯೋಚಿಸದೆ ಅದನ್ನು ವ್ಯಾಖ್ಯಾನಿಸುವ ಅರ್ಥೈಸಿಕೊಳ್ಳುವ ಹುನ್ನಾರವಾದರೂ ಏನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸದೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುವುದು ಸಾಧ್ಯವಿಲ್ಲ.

ಹಾಗಿದ್ದರೆ ಪ್ರಜಾಪ್ರಭುತ್ವ ಹಾಗೆಂದರೇನು? ಖ್ಯಾತ ಚಿಂತಕರೂ ವಿಶ್ವ ಶ್ರೇಷ್ಠ ಜ್ಞಾನಿಗಳೂ ಆದ ಬಾಬಾ ಸಾಹೇಬ್ ಡಾ. ಅಂಬೇಡ್ಕರರ ಪ್ರಕಾರ "ಪ್ರಜಾಪ್ರಭುತ್ವ ಹಾಗೆಂದರೆ ಹಲವು ಜನರು ಒಂದೆಡೆ ಸಹಯೋಗದಿಂದ ಒಟ್ಟಾಗಿ ಜೀವಿಸುವ ಜೀವನ ವಿಧಾನ" ವೆಂದರ್ಥ. ಅವರ ಪ್ರಕಾರ ಅದು ಬರೀ ಸರ್ಕಾರದ ಒಂದು ವಿಧವಲ್ಲ.

ಮೇಲ್ಜಾತಿಗಳ ಮರ್ಜಿಗೆ ಒಳಗಾಗಿ ಅವರ ದೌರ್ಜನ್ಯಕ್ಕೆ ಹೆದರಿ ಬದುಕುವ ಆ ತಳ ಸಮುದಾಯ ಗುಲಾಮಿ ಸಮುದಾಯ. ಹಾಗೆಯೇ ಪ್ರಜಾಪ್ರಭುತ್ವದ ಹೆಸರಿನಲ್ಲಿ ಇಲ್ಲಿ ನಡೆಯುವುದು ಮೇಲ್ಜಾತಿ ಜನರ ಸರ್ವಾಧಿಕಾರ. ಹೀಗಿರುವಾಗ ಇಲ್ಲಿ "ಎಲ್ಲರೂ ಪ್ರಜೆಗಳು, ಎಲ್ಲರಿಗೂ ಅಧೀಕಾರ ಸಿಕ್ಕಿದೆ" ಎಂಬ ಪ್ರಜಾಪ್ರಭುತ್ವದ ನೈಜ ಆಶಯ ನೆರವೇರಿದೆಯೇ ಖಂಡಿತ ಇಲ್ಲ.

ಒಂದರ್ಥದಲ್ಲಿ ಅದಕ್ಕಿಂತ ಹೆಚ್ಚಿನದು. ಅವರ ಪ್ರಕಾರ ಅದರ ಮೂಲ ಬೇರು ಸಮಾಜದ ವಿವಿಧ ಜನರ ನಡುವೆ ಇರುವ ಸಾಮಾಜಿಕ ಸಂಬಂಧದಲ್ಲಿರುತ್ತದೆ. ಅಕಸ್ಮಾತ್ ಆ ಸಂಬಂಧ ಗಟ್ಟಿಯಾಗಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಯಾಗಿದೆ ಎಂದರ್ಥ. ಸಡಿಲವಾಗಿದ್ದರೆ ಸಡಿಲವಾಗಿದೆ ಎಂದರ್ಥ. ವಿಶಾಲಾರ್ಥದಲ್ಲಿ ಹೇಳುವುದಾದರೆ ಯಾರೋ ಒಬ್ಬ ಪ್ರಧಾನಿ, ಮುಖ್ಯಮಂತ್ರಿಯಾಗಬೇಕು ಅದಕ್ಕೋಸ್ಕರ ಉಳಿದವರೆಲ್ಲಾ ಓಟು ಹಾಕಬೇಕು ಎನ್ನುವುದಷ್ಟಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆ ಉಂಟಾಗುವುದಿಲ್ಲ. ಬದಲಿಗೆ ಆ ದೇಶದ, ಆ ದೇಶದೊಳಗಿನ ವಿವಿಧ ಸಮಾಜದ ಜನರ ನಡುವೆ ಪರಸ್ಪರ ಸಹಕಾರ, ಸಹಯೋಗದಿಂದ ಬದುಕುವ ಉದ್ದೇಶ ಮತ್ತು ಆಸೆ ಇರಬೇಕು. ಪರಸ್ಪರ ವಿಶ್ವಾಸ, ನಂಬಿಕೆ, ಸೌಹಾರ್ದತೆ ಇರಬೇಕು. ವಯಕ್ತಿಕ ಮಟ್ಟದಲ್ಲಲ್ಲದಿರಬಹುದು at least ಸಾಮುದಾಯಿಕ ಮಟ್ಟದಲ್ಲಿ.

ಅಂದಹಾಗೆ ಪ್ರಜಾಪ್ರಭುತ್ವಕ್ಕೆ ಸಂಬಂಧಪಟ್ಟಂತೆ ಅಂಬೇಡ್ಕರರರ ಈ ವ್ಯಾಖ್ಯೆ? ನಿಜಕ್ಕೂ ಆಶ್ಚರ್ಯಕರವಾದುದು. ಹಾಗೆ ಕುತೂಹಲಕರವಾದುದೂ ಕೂಡ ಹೌದು. ಏಕೆಂದರೆ ಜನಗಳು ಓಟು ಹಾಕಿ ಜನಪ್ರತಿನಿಧಿಗಳನ್ನು ಗೆಲ್ಲಿಸಿ ಆ ಜನರಲ್ಲೇ ಒಬ್ಬನನ್ನು PM ಆಗಿ President ಆಗಿ ನೇಮಿಸುವುದನ್ನು ಬಹುತೇಕರು ಪ್ರಜಾಪ್ರಭುತ್ವ ಎಂದುಕೊಂಡಿದ್ದಾರೆ! ಎಂದುಕೊಳ್ಳುತ್ತಿದ್ದಾರೆ ಕೂಡ. ಅಂತಹದ್ದರಲ್ಲಿ ಸೌಹಾರ್ದತೆಯಿಂದ ಬದುಕುವುದನ್ನೇ ನಿಜವಾದ ಪ್ರಜಾಪ್ರಭುತ್ವವೆನ್ನುವುದು? ವಿಚಿತ್ರ! ಆದರೆ ಸತ್ಯ. ಅಂದಹಾಗೆ ಪ್ರಜಾಪ್ರಭುತ್ವದ ಬಗೆಗಿನ ಅಂಬೇಡ್ಕರರ ಆ ನಿಲುವು ಬಹುಶಃ ವಿಶ್ವದ ಯಾವುದೇ ರಾಜಕೀಯ ವಿಜ್ಞಾನಿಗೆ ಗೋಚರಿಸದಂತಹದ್ದು. ಯಾರ ಊಹೆಗೂ ನಿಲುಕದಂತಹದ್ದು. ಯಾಕೆಂದರೆ ಉದಾಹರಣೆಗೆ ಭಾರತದ ಮಟ್ಟಿಗೆ ಹೇಳುವುದಾದರೆ ಒಂದು ಚುನಾವಣೆ ಬರುತ್ತದೆಂದಿಟ್ಟುಕೊಳ್ಳಿ. ಜನ ಓಟು ಮಾಡುತ್ತಾರೆ. ಯಾರೋ ಒಬ್ಬ ಗೆಲ್ಲುತ್ತಾನೆ. MLA, MP ಕೂಡ ಆಗುತ್ತಾನೆ. PM, President ಕೂಡ ಆಗುತ್ತಾನೆ.

ಹಾಗೆ ಆದ ಮಾರನೆ ದಿನವೇ ದೇಶದ ಯಾವುದೋ ಮೂಲೆಯಲ್ಲಿ ಯಾವುದೋ ಒಂದು ಊರಿನ ಒಂದು ಜಾತಿಯ ಜನರು ಇನ್ನೊಂದು ಜಾತಿಯ ಜನರಿಗೆ ಎಲ್ಲಾ ಹಕ್ಕುಗಳನ್ನು ನಿರಾಕರಿಸುತ್ತಾರೆ! ಬಹಿಷ್ಕಾರ ಹಾಕುತ್ತಾರೆ! ಆ ಒಂದು ಜಾತಿಯ ಜನರು ಇನ್ನೊಂದು ಜಾತಿಯ ಜನರಿಗೆ ಗುಲಾಮರಾಗಿರಬೇಕು. ಅವರು ಹೇಳಿದ ಹಾಗೆ ಕೇಳಬೇಕು. ಅವರು ನಿಂತುಕೊಳ್ಳಿ ಎಂದರೆ ನಿಂತುಕೊಳ್ಳಬೇಕು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು! ಊರ ಹೊರಗಿರಿ ಎಂದರೆ ಇರಬೇಕು! ಅಂದಹಾಗೆ ಹಾಗೆ ಊರ ಹೊರಗೆ ತಳ್ಳಲ್ಪಟ್ಟ ಜನ ಅಂದರೆ ಪ್ರಜೆಗಳು "ಪ್ರಭುಗಳು" ಹೇಗಾಗುತ್ತಾರೆ? ಹಾಗೆ ಅದು ಪ್ರಜಾಪ್ರಭುತ್ವ ವ್ಯವಸ್ಥೆ ಹೇಗಾಗುತ್ತದೆ? ಒಟ್ಟಾರೆ ಅಲ್ಲಿ ಮೆರೆದಾಡುವುದು ಮೇಲ್ಜಾತಿ ಜನರ ಸರ್ವಾಧಿಕಾರವೇ ಅಲ್ಲವೇ? ಮುಂದುವರಿದು ಹೇಳುವುದಾದರೆ ಊರ ಹೊರಗೆ ತಳ್ಳಲ್ಪಟ್ಟ "ಅಂತಹ ಪ್ರಜೆಗಳು" ಹಾಗೆ ನಡೆದ ಚುನಾವಣೆಯಲ್ಲಿ ಮೇಲ್ಜಾತಿ ಜನರು ಹೇಳಿದ ಪಕ್ಷಕ್ಕೆ ಮತ್ತವರು ನೀಡಿದ ಒಂದು ಪೊಟ್ಟಣ ಚಿತ್ರಾನ್ನ ಮತ್ತು ಒಂದು ಪಾಕೀಟು ಸಾರಾಯಿಗೆ ಕಟ್ಟುಬಿದ್ದು ಓಟು ಮಾಡಿರುತ್ತಾರೆ ಮತ್ತು ಅವರ ಓಟು ಪಡೆದವನೇ MLA, MP, CM, PM ಕೂಡ ಆಗಿರುತ್ತಾನೆ. ಹಾಗೆಂದ ಮಾತ್ರಕ್ಕೆ ಇವರು ಪ್ರಭುಗಳಾದರೆಂದರ್ಥವೇ? ಇವರ ಕೈಗೆ ಆಡಳಿತ ಬಂತೆಂದರ್ಥವೇ? ಖಂಡಿತ ಇಲ್ಲ.

ಹಾಗೇನಾದರೂ ಇವರು ಮತ್ತು ಇವರ ಸಮುದಾಯದ ವರು ಪ್ರತಿಶತ ಓಟು ಮಾಡಿದ್ದಾರೆ ಆದ್ದರಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಿದೆ ಎಂದುಕೊಂಡರೆ ಅದಕ್ಕಿಂತ ಕ್ರೂರ ಆತ್ಮಘಾತುಕ ಹೇಳಿಕೆ ಮತ್ತೊಂದಿಲ್ಲ. ಏಕೆಂದರೆ ಮೇಲ್ಜಾತಿಗಳ ಮರ್ಜಿಗೆ ಒಳಗಾಗಿ ಅವರ ದೌರ್ಜನ್ಯಕ್ಕೆ ಹೆದರಿ ಬದುಕುವ ಆ ತಳ ಸಮುದಾಯ ಗುಲಾಮಿ ಸಮುದಾಯ. ಹಾಗೆಯೇ ಪ್ರಜಾಪ್ರಭುತ್ವದ ಹೆಸರಿನಲ್ಲಿ ಇಲ್ಲಿ ನಡೆಯುವುದು ಮೇಲ್ಜಾತಿ ಜನರ ಸರ್ವಾಧಿಕಾರ. ಹೀಗಿರುವಾಗ ಇಲ್ಲಿ "ಎಲ್ಲರೂ ಪ್ರಜೆಗಳು, ಎಲ್ಲರಿಗೂ ಅಧಿಕಾರ ಸಿಕ್ಕಿದೆ" ಎಂಬ ಪ್ರಜಾಪ್ರಭುತ್ವದ ನೈಜ ಆಶಯ ನೆರವೇರಿದೆಯೇ? ಖಂಡಿತ ಇಲ್ಲ. ಹೀಗಿರುವಾಗ "ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ" ಎಂದು ಮಗ್ಗಿ ಒಪ್ಪಿಸುವುದು? ಒಂದರ್ಥದಲ್ಲಿ ಅದು ವ್ಯವಸ್ಥೆಯನ್ನು ದಿಕ್ಕು ತಪ್ಪಿ ಸುವಂತಹದ್ದು. ಅಥವಾ ದಿಕ್ಕು ತಪ್ಪಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವಂತಹದ್ದು. ಹಾಗಿದ್ದರೆ ಈ ವಿಶ್ವದಲ್ಲಿ ವಿಶೇಷವಾಗಿ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವದಲ್ಲಿದೆಯೇ? ಖಂಡಿತ ಈ ಪ್ರಶ್ನೆಗೆ ಉತ್ತರ no ಎಂದಷ್ಟೇ ಹೇಳಬೇಕು. ಯಾಕೆಂದರೆ 120 ಕೋಟಿ ಜನರೂ ಪರಸ್ಪರ ಸಹಯೋಗದಿಂದ ಬದುಕುವುದು ಬೇಡ ಕನಿಷ್ಠ ಇಲ್ಲಿರುವ 6000 ಕ್ಕೂ ಹೆಚ್ಚು ಜಾತಿಗಳವರು, 5ಕ್ಕೂ ಹೆಚ್ಚು ಧರ್ಮಗಳವರು ಪರಸ್ಪರ ಒಬ್ಬರ ಹಕ್ಕುಗಳನ್ನು ಮತ್ತೊಬ್ಬರು ಗೌರವಿಸಿ ಸಹಯೋಗದಿಂದ ಬದುಕುವುದು ಬೇಡವೇ? ಸೌಹಾರ್ದತೆಯಿಂದ ಬಾಳ್ವೆ ನಡೆಸುವುದು ಬೇಡವೆ? ಮತ್ತೊಬ್ಬರ ಮೇಲೆ ತಮ್ಮ ದೌಲುದರ್ಪಗಳನ್ನು ತೋರಿಸುವುದು ಅದೆಷ್ಟು ಸರಿ? ಇಂತಹ ನಡತೆ ಹಿಟ್ಲರನ ನಡತೆಗಿಂತ ಅದ್ಯಾವ ರೀತಿ ಕಮ್ಮಿ?

(11ನೇ ಪುಟಕ್ಕೆ)

ಹೊಸ ಯಜಮಾನರನ್ನು ಸೃಷ್ಟಿಸಿದ ಸ್ವಾತಂತ್ರ್ಯ ಚಳವಳಿ:

ನೀಗದ ತಳವರ್ಗಗಳ ಬವಣೆ

ಡಾ. ಚಮರಂ ನಾಗವಂಶಿ

ಆಗಸ್ಟ್ 15, 1947ರಂದು, ಭಾರತೀಯರ ಅವಿರತ ಹೋರಾಟದ ಫಲವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿತು ಎಂದೇ ಇಡೀ ದೇಶ ಭಾವಿಸಿದೆ. ಅದರಲ್ಲೂ ಗಾಂಧೀ ಮಹಾತ್ಮರ ತ್ಯಾಗ ಮತ್ತು ಬಲಿದಾನದಿಂದಲೇ ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಲಭಿಸಿತು ಎಂಬುದೇ ಎಲ್ಲರ ನಂಬಿಕೆಯಾಗಿದೆ. ಆದರೆ ನಲವತ್ತೇಳರ ಸ್ವಾತಂತ್ರ್ಯದ ಹಿಂದಿನ ಕಥೆ ಬೇರೆಯದೇ ಇದೆ.

ಚರಿತ್ರೆಯನ್ನು ಸರಿಯಾಗಿ ಅರ್ಥೈಸಿದರೆ, ಈ ದೇಶದ ಜನರ ಅಂದಿನ ಮತ್ತು ಇಂದಿನ ಸ್ಥಿತಿಗತಿಗಳನ್ನು ಅವಲೋಕಿಸಿದರೆ, ಪ್ರಜ್ಞಾವಂತಿಕೆಯಿಂದ ಆಲೋಚಿಸುವ ಯಾರಿಗಾದರೂ ಸ್ವಾತಂತ್ರ್ಯದ ಅರ್ಥ ಬೇರೆಯದೇ ರೀತಿಯಲ್ಲಿ ಅರಿವಾಗುತ್ತದೆ. 'ಸ್ವಾತಂತ್ರ್ಯ ಚಳವಳಿ' ಎಂಬುದು ಆರಂಭವಾದುದೇ 1848ರ ನಂತರ. ಅದಕ್ಕಿಂತ ಹಿಂದೆ ನಡೆದಿರುವ ಯಾವೊಂದು ಹೋರಾಟವೂ ಸ್ವಾತಂತ್ರ್ಯದ ಹೋರಾಟಗಳಲ್ಲ. ಅವುಗಳು ಆಯಾಯ ಪ್ರಾಂತ್ಯಕ್ಕೆ ಸಂಬಂಧಿಸಿದ ಹೋರಾಟಗಳಷ್ಟೇ ಆಗಿದ್ದವು. ಆದರೆ ಅವುಗಳನ್ನೂ ಸ್ವಾತಂತ್ರ್ಯ ಚಳವಳಿಗಳು ಎಂದೇ ಮನುವಾದಿ ಇತಿಹಾಸಕಾರರು ನಂಬಿಸಿ ಸ್ವಾತಂತ್ರ್ಯ ಚಳವಳಿಗೆ ತೀರ ಹಳೆಯ ಇತಿಹಾಸ ನೀಡಲು ಕುತಂತ್ರ ನಡೆಸಿದ್ದಾರೆ ಅಷ್ಟೆ. ರಾಜಮನೆತನಗಳಿಂದ ಆಳಲ್ಪಡುತ್ತಿದ್ದ ಪ್ರಾಂತ್ಯವಾರು ರಾಜರುಗಳಿಗೆ ಈ ಸ್ವಾತಂತ್ರ್ಯದ ಕಲ್ಪನೆಯೂ ಇರಲಿಲ್ಲ. ಅದರ ಅಗತ್ಯವೂ ಇರಲಿಲ್ಲ. ಸರ್ವರೂ ಸ್ವಾತಂತ್ರ್ಯ ಪಡೆದುಕೊಂಡರೆ... ಸರ್ವರೂ ಸಮಾನರಾದರೆ ರಾಜಮನೆತನಗಳಿಗೆ ಬೆಲೆಯೆಲ್ಲಿ ಇರುತ್ತಿತ್ತು? ಇಂತಹ ಸಮಾಜದಲ್ಲಿ ರಾಜರ ದರ್ಬಾರು ಎಲ್ಲಿರುತ್ತಿತ್ತು? ಹಾಗಾಗಿ ಸ್ವಾತಂತ್ರ್ಯ ಚಳವಳಿಯ ಅಗತ್ಯ ರಾಜರುಗಳಿಗೆ ಬೇಕಿರಲಿಲ್ಲವೆಂದು ಭಾವಿಸಬಹುದು.

ಹಾಗೆಯೇ 1848ರ ನಂತರ ಆರಂಭವಾದ ಚಳವಳಿಗಳೂ ನಿಜವಾದ ಸ್ವಾತಂತ್ರ್ಯ ಚಳವಳಿಗಳಲ್ಲ. ಅವುಗಳು ನಿಜಕ್ಕೂ ಸೀಮಿತ ಅಧಿಕಾರಕ್ಕಾಗಿ ನಡೆದ ಚಳವಳಿಗಳು ಎಂದರೆ ಅತ್ಯಂತ ಸಮಂಜಸವಾಗುತ್ತದೆ. ಭಾರತದ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳು ಬದಲಾಗಬೇಕು ಎಂಬ ಆಸೆ ಸ್ವಾತಂತ್ರ್ಯ ಚಳವಳಿಗಳನ್ನು ಆರಂಭಿಸಿದ ಹುರಿಯಾಳುಗಳಿಗಿತ್ತು ಎಂಬುದು ನಂಬಬಹುದಾದ ಮಾತಾ? ಅಂತಹ ಸರ್ವ ಸ್ವಾತಂತ್ರ್ಯದ ಬದುಕನ್ನು ಸಕಲ ಭಾರತೀಯರಿಗೂ ತಂದುಕೊಡಬೇಕೆಂಬ ಉತ್ಕಟ ಬಯಕೆಯು ಗಾಂಧಿ, ನೆಹರು, ಪಟೇಲ್, ತಿಲಕ್, ಗೋಖಲೆ ಮುಂತಾದವರಿಗಿತ್ತು ಎಂಬುದನ್ನು ಕನಸಲ್ಲಾದರೂ ನಂಬಲು ಸಾಧ್ಯವೇ? ಎಲ್ಲಿ ಹಾಗಿದ್ದರೆ ಸ್ವಾತಂತ್ರ್ಯ ಬಂದು ಇಲ್ಲಿಗೆ 59 ವರ್ಷವಾದರೂ ಅಂತಹ ಆಶಯಗಳು ಈಡೇರಲು ಸಾಧ್ಯವಾಗಿಲ್ಲವಲ್ಲ! ಅಂಗೈ ಹುಣ್ಣಿಗೆ ಕನ್ನಡಿ ಬೇರೆ ಬೇಕೆ? ಬದುಕೇ ಕಣ್ಣಿಗೆ ರಾಚುತ್ತಿದ್ದರೂ ಅದಕ್ಕೆ ಸಾಕ್ಷಿಗಳನ್ನು ಹುಡುಕಬೇಕೆ?





ಗಾಂಧಿ, ನೆಹರು, ಪಟೇಲ್ ಮುಂತಾದವರಿಗೆ ಬೇಕಿದ್ದದ್ದು ಅಧಿಕಾರವೇ ಹೊರತು ಭಾರತದ ಸ್ವಾತಂತ್ರ್ಯವಲ್ಲ. "ಈ ದೇಶದ ಬಹುಸಂಖ್ಯಾತ ಜನರು ಬ್ರಿಟೀಷರ ಕೈಕೆಳಗೆ ಗುಲಾಮರಾಗಿ ಏಕೆ ಬದುಕಬೇಕು? ಬ್ರಿಟೀಷರೇಕೆ ಹೊರಗಿನಿಂದ ಬಂದು ನಮ್ಮ ದೇಶದ ಜನರನ್ನು ಆಳಬೇಕು? ಇಲ್ಲಿ ಅವರಿಗಿಂತಲೂ ಸಮರ್ಥರಾದ ನಾವುಗಳು ಇರುವುದೇಕೆ? ನಮ್ಮ ಜನರು ನಮ್ಮ ಕೈಯಿಂದಲೇ ಆಳಿಸಿಕೊಳ್ಳಬೇಕು. ನಮ್ಮ ಜನರನ್ನು ನಾವೇ ನಿಯಂತ್ರಿಸಬೇಕು ಮತ್ತು ನಮಗಾಗಿ ಈ ಜನರು ಗುಲಾಮಗಿರಿ ಮಾಡಬೇಕು. ಅದರ ಸೇವೆ, ಸುಖ, ಸಂಭ್ರಮವನ್ನು ನಾವೇ ಅನುಭವಿಸಬೇಕು" ಎಂಬ ಬ್ರಿಟೀಷರ ಅಧಿಕಾರದ ವಿರುದ್ಧದ ಈರ್ಷ್ಯೆಯೇ ಇವರ ಅಂತರಾಳದಲ್ಲಿದ್ದುದು. ಆದರೆ ಅದನ್ನು ಹಾಗೇ ಹೇಳಿದರೆ ಅತ್ಯಂತ ನೀಚವಾಗಿಯೂ ಕ್ರೂರವಾಗಿಯೂ ಕಾಣುತ್ತದೆ. ಆಗ ತಾವು ಖಳರಾಗಬೇಕಾಗುತ್ತದೆ ಎಂದು ತಿಳಿದು ಅದಕ್ಕೆ 'ಸ್ವಾತಂತ್ರ್ಯ ಚಳವಳಿ' ಎಂಬ ಸೊಗಸಾದ ಹೆಸರನ್ನಿಟ್ಟು ಮುಗ್ಧ ಜನರಿಗೆ ಮಂಕು ಬೂದಿ ಎರಚಿ ಅವರನ್ನು ಸ್ವಾತಂತ್ರ್ಯದ ಹೆಸರಿನಲ್ಲಿ ಹುರಿದುಂಬಿಸಿ, ಸಂಘಟಿಸಿ ಬ್ರಿಟೀಷ್ ಅಧಿಕಾರದ ವಿರುದ್ಧ ಸಜ್ಜುಗೊಳಿಸಿದರು ಮತ್ತು ಆ ಮೂಲಕ ತಮ್ಮ 'ಶಕ್ತಿ'ಯನ್ನು ಪ್ರದರ್ಶಿಸಿ ಹೀರೋಗಳಾಗಿ ಮೆರೆದರು! ಇವರ ಬೊಗಳೇ ಕ್ರಾಂತಿಕಾರರ ವಿಚಾರಗಳಿಂದ ಪ್ರಭಾವಿತರಾದ ಮುಗ್ಧರು ಮಾತ್ರ ನಿಜಕ್ಕೂ ಈ ಕುತಂತ್ರಗಳನ್ನರಿಯದೆ ರಾಶಿರಾಶಿಯಾಗಿ ಪ್ರಾಣತೆತ್ತರು. ಆದರೆ ಮುಂಚೂಣಿಯಲ್ಲಿದ್ದ ಗಾಂಧಿಯವರಾಗಲಿ, ನೆಹರೂ ಪಟೇಲರಾಗಲಿ ಒಮ್ಮೆಯೂ ಗುಂಡೇಟಿಗೆ ಬಲಿಯಾಗಲೇ ಇಲ್ಲ! ಅದಕ್ಕೆ ಸಾಕ್ಷಿ ಎಂಬಂತೆ ಅಧಿಕಾರ ಹಸ್ತಾಂತರವಾಗುವ ಸಮಯದಲ್ಲಿ ಇದೇ ಸಾತಂತ್ರ್ಯ ಚಳವಳಿಗಾರರು ತಮ್ಮ ನೆಚ್ಚಿನ ನಾಯಕ ಗಾಂಧಿ ಮಹಾತ್ಮರನ್ನು ನಿಷ್ಕಾರುಣವಾಗಿ ಗುಂಡಿಟ್ಟು ಕೊಂದರು!! ಹಾಗಿದ್ದರೆ ಇದರ ಅರ್ಥ 'ಅಧಿಕಾರ ಹಸ್ತಾಂತರ ಚಳವಳಿ' ಎಂಬುದರಲ್ಲಿ ಏನಾದರೂ ತಪ್ಪಿದೆಯಾ?

ಇರಲಿ, ಸಧ್ಯಕ್ಕೆ ಅದನ್ನು ಸ್ವಾತಂತ್ರ ಚಳವಳಿ ಎಂದೇ ಭಾವಿಸಿದರೂ, 1848ಕ್ಕಿಂತ ಮುಂಚಿನಿಂದಲೂ ಬ್ರಿಟೀಷರು ಭಾರತವನ್ನು ಆಳುತ್ತಿದ್ದರೂ... ಅದಕ್ಕೂ ಮೊದಲು ಮೊಗಲರು ಈ ದೇಶವನ್ನು ಸುಮಾರು 800 ವರ್ಷಗಳ ಕಾಲ ಆಳಿದ್ದರೂ... ಆಗೆಲ್ಲವೂ ಕೆರಳದಿದ್ದ ಸ್ವಾತಂತ್ರ್ಯದ ಕಿಚ್ಚು, ಸ್ವಾಭಿಮಾನದ ಕೆಚ್ಚು, 1848ರ ನಂತರವೇ ಯಾಕೆ ಕೆರಳಿತು? 1848ರ ನಂತರವೇ ಯಾಕೆ ನಮ್ಮ ಹೋರಾಟಗಾರರಿಗೆ ಸ್ವಾತಂತ್ರ್ಯ ಬೇಕು ಎನಿಸಲಾರಂಭಿಸಿತು? ಮೊಘಲರ ಕಾಲಕ್ಕಿಂತಲೂ ಬ್ರಿಟೀಷರ ಕಾಲದಲ್ಲಿ ಹಿಂಸೆ, ಗುಲಾಮಗಿರಿ ತುಂಬಿತ್ತೆ? ಹೋಗಲಿ 1848ರ ನಂತರ ಮಾತ್ರ ಯಾಕೆ ಬ್ರಿಟೀಷರು ಪರಕೀಯರೆನಿಸಿಬಿಟ್ಟರು? ಈ ಪ್ರಶ್ನೆಗಳಿಗೆ ಉತ್ತರ ಹುಡುಕಿದರೆ ನಮ್ಮ ದೇಶದ ವಸ್ತುಸ್ಥಿತಿ ಮತ್ತು ಸ್ವಾತಂತ್ರ್ಯ ಹೋರಾಟದ ಮರ್ಮ ಅನಾವರಣಗೊಳ್ಳುತ್ತದೆ. ಒಂದು ಕ್ಷಣ ಪ್ರಾಚೀನ ಇತಿಹಾಸವನ್ನು ಸಿಂಹಾವಲೋಕನ ಮಾಡಿದರೆ ನಮಗೆ ತಿಳಿದು ಬರುವ ಸಂಗತಿ ಏನೆಂದರೆ ಭಾರತ ದ್ರಾವಿಡರ ದೇಶ. ಇಲ್ಲಿನ ಮೂಲನಿವಾಸಿಗಳು ಈ ವತ್ತಿನ SC/ST/OBC ಮತ್ತು ಧಾರ್ಮಿಕ ಅಲ್ಪಸಂಖ್ಯಾತರು. ಅವರು ಸಮೃದ್ಧಿಯಿಂದ ಸಹಬಾಳ್ವೆಯಿಂದ ಸಂಪ

ಗಾಂಧಿ, ನೆಹರು, ಪಟೇಲ್ ಮುಂತಾದವರಿಗೆ ಬೇಕಿದ್ದದ್ದು ಅಧಿಕಾರವೇ ಹೊರತು ಭಾರತದ ಸ್ವಾತಂತ್ರ್ಯವಲ್ಲ. "ಈ ದೇಶದ ಬಹುಸಂಖ್ಯಾತ ಜನರು ಬ್ರಿಟೀಷರ ಕೈಕೆಳಗೆ ಗುಲಾಮರಾಗಿ ಏಕೆ ಬದುಕಬೇಕು? ಬ್ರಿಟೀಷರೇಕೆ ಹೊರಗಿನಿಂದ ಬಂದು ನಮ್ಮ ದೇಶದ ಜನರನ್ನು ಆಳಬೇಕು? ಇಲ್ಲಿ ಅವರಿಗಿಂತಲೂ ಸಮರ್ಥರಾದ ನಾವುಗಳು ಇರುವುದೇಕೆ? ನಮ್ಮ ಜನರು ನಮ್ಮ ಕೈಯಿಂದಲೇ ಆಳಿಸಿಕೊಳ್ಳಬೇಕು. ನಮ್ಮ ಜನರನ್ನು ನಾವೇ ನಿಯಂತ್ರಿಸಬೇಕು ಮತ್ತು ನಮಗಾಗಿ ಈ ಜನರು ಗುಲಾಮಗಿರಿ ಮಾಡಬೇಕು. ಅದರ ಸೇವೆ, ಸುಖ, ಸಂಭ್ರಮವನ್ನು ನಾವೇ ಅನುಭವಿಸಬೇಕು" ಎಂಬ ಬ್ರಿಟೀಷರ ಅಧಿಕಾರದ ವಿರುದ್ಧದ ಈರ್ಷ್ಯೆಯೇ ಇವರ ಅಂತರಾಳದಲ್ಲಿದ್ದುದು.

ದ್ಧರಿತವಾಗಿ ಬಾಳುತ್ತಿದ್ದವರು. ಆದರೆ ಕ್ರಿ. ಪೂ. 1800ರಲ್ಲಿ ಆರ್ಯರ ಆಗಮನದ ನಂತ್ತರ ಮೂಲನಿವಾಸಿಗಳ ಸಾಮಾಜಿಕ ಸ್ಥಿತಿಗತಿಗಳು ಏರು ಪೇರಾದವು. ಕುಡಿತ ಜೂಜು, ವೈಭಿಚಾರ, ಸುಲಿಗೆ, ಮುಂತಾದ ಅನಿಷ್ಠ ಪದ್ಧತಿಗಳನ್ನು ಆರ್ಯರು ಭಾರತೀಯರಿಗೆ ಕಲಿಸುವ ಮೂಲಕ ಸಮಾಜವನ್ನು ಒಡೆದರು. ಜಾತಿ-ಜಾತಿಗಳಾಗಿ ವಿಂಗಡಿಸಿದರು. ಹೀಗೆ ದಿಕ್ಕುತಪ್ಪಿದ ಸಮಾಜವನ್ನು ಮತ್ತೆ ಸರಿದಾರಿಗೆ ತರಲು ಬುದ್ಧರು ಕ್ರಾಂತಿ ಮಾಡಿದರು. ಆ ನಂತರ ಸಹಜ ಸ್ಥಿತಿಗೆ ಮರಳಿದ ಸಮಾಜದಲ್ಲಿ ಭಾರತೀಯ ಆದಿ ಜನರು ರಾಜರಾಗಿ ಆಳಿದರು. ನವಸಮಾಜ ನಿರ್ಮಿಸಿದರು. ಆರ್ಯರು ಅಲೆಮಾರಿಗಳಾದರು. ಭಿಕ್ಷುಕರಾದರು. ಕೂಲಿ ಕಾರ್ಮಿಕರಾದರು...

ಅಷ್ಟಾದರೂ ನಮ್ಮ ಸಂಪದ್ಭರಿತ ಭಾರತವನ್ನು ಬಿಟ್ಟುತೊಲಗುವ ಮನಸ್ಸಾಗಲಿಲ್ಲ ಅವರಿಗೆ. ಹಾಗಾಗಿ ಅಂತಹ ಹೀನಾಯ ಸ್ಥಿತಿಯಲ್ಲಿಯೂ ಅವರು ಒಳಗೊಳಗೇ ಸಂಘಟಿತರಾದರು ಮತ್ತು ಸಂಚು ಹೊಸೆದರು. ಅದರ ಪ್ರತಿಫಲವು ಕ್ರಿ.ಪೂ. 185ರಲ್ಲಿ ಮೌರ್ಯ ಸಾಮ್ರಾಜ್ಯದ ಕೊನೆಯ ದೊರೆ ಅಶೋಕನ ಮೊಮ್ಮಗ ಬ್ರುಹಧ್ರತ ಮೌರ್ಯನನ್ನು ಆರ್ಯರ ಪ್ರತಿನಿಧಿ ಪುಷ್ಯಮಿತ್ರನು ಕುತಂತ್ರದಿಂದ ಕೊಂದನು ಮತ್ತು 'ರಾಜ್ಯಾಧಿಕಾರ'ವನ್ನು ಕಸಿದುಕೊಂಡನು. 'ರಾಜ್ಯಾಧಿಕಾರದ' ಮಹತ್ವವು ಆರ್ಯರಿಗೆ ಚೆನ್ನಾಗಿ ಗೊತ್ತಿತ್ತು. ರಾಜ್ಯಾಧಿಕಾರವು ಕೈವಶವಾದ ಬಳಿಕ ತಮ್ಮೊಳಗಿನ ಎಲ್ಲಾ ವಿಕೃತಗಳನ್ನು ಭಾರತೀಯರ ಮೇಲೆ ಕಾನೂನುಗಳಾಗಿ ಹೇರಿದರು. ಜಾತಿವ್ಯವಸ್ಥೆ ಕಾನೂನಾಗಿ ಜಾರಿಯಾಯಿತು. ಸಮಾಜ ಶ್ರೇಣಿಕೃತವಾಗಿ ವಿಭಜನೆಯಾಯಿತು. ವಿದ್ಯೆ, ಅಧಿಕಾರ, ಸಂಪತ್ತು ಸರ್ವಸ್ವವೂ ಆರ್ಯರ ಪಾಲಾಯಿತು. ಮೂಲನಿವಾಸಿ ಭಾರತೀಯರಿಗೆ ಅವೆಲ್ಲ ವನ್ನು ಕಾನೂನಿನನ್ವಯ ನಿಷೇಧಿಸಲಾಯಿತು.

ಅಲ್ಲಿಂದ ಆರಂಭವಾದದ್ದೆ ಕ್ರೂರ ಮನುವಾದ. ರಾಜರಾಗಿದ್ದ ಮೂಲನಿವಾಸಿಗಳು ಅಧಿಕಾರ ಹೀನರಾಗಿ ಗುಲಾಮರಾದರು. ಸಾವಿರಾರು ವರ್ಷಗಳ ಕಾಲ ಈ ಗುಲಾಮಗಿರಿಯು ಅಲುಗಾಡಲೇ ಇಲ್ಲ. ಈ ನಂತರ ದೇಶ ವಿದೇಶಗಳಿಂದ ವಿವಿಧ ರಾಜರುಗಳು ದಂಡೆತ್ತಿ ಬಂದರು ದೇಶವನ್ನು ಲೂಟಿ ಮಾಡಿದರು. ಇಲ್ಲೇ ನೆಲೆನಿಂತರು... ಆಳಿದರು. ಹೊರಗಿನಿಂದ ಬಂದ ಯಾವ ರಾಜರನ್ನೂ ಇಲ್ಲಿನ ಆರ್ಯರು ತಡೆಯಲಿಲ್ಲ ಬದಲಿಗೆ ಅವರನ್ನು ಬರಮಾಡಿಕೊಂಡರು.. ಸತ್ಕರಿಸಿದರು. ಅವರೊಡನೆಯೇ ಅಧಿಕಾರವನ್ನು ಹಂಚಿಕೊಂಡರು. ಅನಕ್ಷರಸ್ತರಾಗಿ, ಅಧಿಕಾರ ಹೀನರಾಗಿ ಜಾತಿವ್ಯವಸ್ಥೆಯಿಂದ ಛಿದ್ರ ಛಿದ್ರವಾಗಿದ್ದ ಭಾರತೀಯರಿಗೆ ಹೊರಗಿನವರನ್ನು ತಡೆಯುವ ಅಧಿಕಾರವಿರಲಿಲ್ಲ. ಅವರ ಇಂತಹ ಹೀನ ಸ್ಥಿತಿಗಳನ್ನು ಹೊರಗಿನಿಂದ ಬಂದು ನೂರಾರು ವರ್ಷ ಆಳಿದ ಮೊಗಲರಾದಿಯಾಗಿ ಯಾರೊಬ್ಬರೂ ಗಮನಿಸಲೂ ಇಲ್ಲ. ಅದನ್ನು ಸರಿಪಡಿಸುವ ಗೋಜಿಗೂ ಹೋಗಲಿಲ್ಲ.

ಆ ನಂತರ ಬಂದ ಯೂರೋಪಿಯನ್ನರು, ಬ್ರಿಟಿಷರೂ ಸಹ ತಲೆಕೆಡಿಸಿಕೊಳ್ಳಲಿಲ್ಲ. ಶತಶತಮಾನಗಳ ಕಾಲ ಎಷ್ಟೇ ರಾಜರುಗಳು ಆಳಿದರೂ "ಮನುವಾದಿ ಸಾಮಾಜಿಕ ವ್ಯವಸ್ಥೆಯು" ಬದಲಾಗಲೇ ಇಲ್ಲ. ಹಾಗಾಗಿ ಮನುವಾದಿಗಳಿಗೆ ಸ್ವಾತಂತ್ರ್ಯದ ಕಲ್ಪನೆಯೇ ಬರಲಿಲ್ಲ. "ಯಾರು ದೇಶವನ್ನು ಆಳಿದರೆ ನಮಗೇನು... ಯಾರಾದರೂ ಲೂಟಿ ಮಾಡಲಿ ನಮಗೆ ನಷ್ಟವೇನು... ಎಲ್ಲರ ಕಾಲದಲ್ಲೂ ನಮ್ಮ ಗೌರವಕ್ಕೆ, ಅಧಿಕಾರಕ್ಕೆ ಮತ್ತು ಸಂಪತ್ತಿಗೆ ಧಕ್ಕೆಯಾಗಬಾರದು. ಹಾಗೆಯೇ ನಾವು ಹೇರಿರುವ ಮನುವಾದಿ ವ್ಯವಸ್ಥೆಗೂ ಧಕ್ಕೆ ಬರಬಾರದು." ಎಂಬುದೇ ಆರ್ಯರ ನಿಲುವಾಗಿತ್ತು. ಆದ್ದರಿಂದ ಸ್ವಾತಂತ್ರ್ಯದ ಅಗತ್ಯವೇ ಅವರಿಗೆಂದೂ ಕಾಣಲಿಲ್ಲ.

ಗಾಂಧಿ ಮಹಾತ್ಮರು ವಿವಿಧ ವೇಷಗಳನ್ನು ಧರಿಸಲಾರಂಭಿಸಿದರು. ವಿವಿಧ ರೀತಿಯ ರಂಗುರಂಗಿನ ಚಳವಳಿಗಳನ್ನು ಸಂಘಟಿಸುತ್ತಾ ಎಲ್ಲಾ ಜನರನ್ನೂ ಮರುಳು ಮಾಡಲಾರಂಭಿಸಿದರು. ಅಸಹಕಾರ ಚಳವಳಿ, ವಂಗ ಭಂಗ ಚಳವಳಿ, ಉಪ್ಪಿನ ಸತ್ಯಾಗ್ರಹ, ಉಪವಾಸ, ಸತ್ಯಾಗ್ರಹ, ಹರಿಜನ ಸೇವೆ. ಸ್ವದೇಶಿ ಚಳವಳಿ ಎನ್ನುವ ಚಿತ್ರ ವಿಚಿತ್ರ ಹೆಸರುಗಳಿಂದ ಜನರನ್ನೂ ಆಕರ್ಷಿಸಲಾರಂಭಿಸಿದರು. ಇತ್ತ ಬ್ರಿಟೀಷರೊಡನೆ ಆತಿಥ್ಯ ಸ್ವೀಕರಿಸುತ್ತಾ ಓಲೈಸುವುದು ಅತ್ತ ಜನರನ್ನು ಕ್ರಾಂತಿಕಾರಕ ಮಾತುಗಳಿಂದ ಉದ್ರೇಕಿಸುವುದು ಗಾಂಧೀಜಿಯವರ ವರಸೆಯಾಗಿತ್ತು.

ಆದರೆ ಯಾವಾಗ 1835ರಲ್ಲಿ ಬ್ರಿಟಿಷರು ತಮ್ಮ ಆಡಳಿತ ಸುಧಾರಣೆಗಾಗಿ ಶಿಕ್ಷಣವನ್ನು ಆರಂಭಿಸಿದರೊ.. ಮತ್ತು ತಮ್ಮ ಸೈನ್ಯಗಳಲ್ಲಿ ಇಲ್ಲಿನ ಮೂಲನಿವಾಸಿಗಳಿಗೆ ಉದ್ಯೋಗಗಳನ್ನು ಕೊಡಲು ಪ್ರಾರಂಭ ಮಾಡಿದರೊ... ಅಲ್ಲಿಂದ ಆರ್ಯ ಮನುವಾದಿಗಳ ಕಣ್ಣು ಕೆಂಪಾಗತೊಡಗಿತು. 1848ರ ಹೊತ್ತಿಗೆ ಅದಾಗಲೇ ಶೂದ್ರರು ಜಾಗೃತರಾಗ ತೊಡಗಿದ್ದರು. ಮಹಾತ್ಮ ಜೋತಿ ಭಾಪುಲೆ ದಂಪತಿಗಳು ಹೇಳಿಕೇಳಿ ಅಸ್ಪೃಶ್ಯರಿಗೆ ಶಿಕ್ಷಣ ನೀಡಲು ಪ್ರಾರಂಭಿಸಿದರು. ಅದಕ್ಕಾಗಿ 1873ರಲ್ಲಿ 'ಸತ್ಯಶೋಧಕ ಸಮಾಜ' ಸಂಘಟನೆಯನ್ನು ಕಟ್ಟಿದರು. ಆ ಮೂಲಕ ಶೂದ್ರಾತಿಶೂದ್ರರು ಒಂದು ವೇದಿಕೆಗೆ ಬರತೊಡಗಿದರು. ಆಗಲೇ ಮನುವಾದಿಗಳ ಮರ್ಮವು ಜಾಗೃತವಾದದ್ದು. ಹೀಗೆ ಶೂದ್ರಾತಿಶೂದ್ರರನ್ನು ಬೆಳೆಯಲು ಬಿಟ್ಟರೆ, ಅವರಿಗೆ ಸ್ವತಂತ್ರ ರಾಜ್ಯಾಧಿಕಾರದ ಹಂಬಲ ಬರುತ್ತದೆ. ಶಿಕ್ಷಿತರಾದರೆ ನಮ್ಮ ಕರ್ಮಕಾಂಡವು ತಿಳಿದು ಹೋಗುತ್ತದೆ. ಆದ್ದರಿಂದ ಇವರ ಕೈಗೆ ವಿದ್ಯೆ, ಅಧಿಕಾರ, ಸಂಪತ್ತು ಆಯುಧಗಳನ್ನು ದೊರಕದಂತೆ ಮಾಡಬೇಕು. ಬ್ರಿಟೀಷರು ಶೂದ್ರಾತಿಶೂದ್ರರ ಬೇಡಿಕೆಗಳಿಗೆ ಮಣಿಯತೊಡಗಿದ್ದಾರೆ... ಸಮಾಜ ಸುಧಾರಣೆಯ ಮಾತುಗಳನ್ನಾಡತೊಡಗಿದ್ದಾರೆ. ಇವರನ್ನು ಹೀಗೆ ಬಿಟ್ಟರೆ, ಮನುವಾದಿ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಾರೆ. ಹಾಗಾಗಿ ಅದಷ್ಟು ಬೇಗ ಬ್ರಿಟೀಷರಿಂದ ಅಧಿಕಾರವನ್ನು ನಮ್ಮ ಕೈವಶ ಮಾಡಿಕೊಳ್ಳಬೇಕು... ಆ ಮೂಲಕ ಮನುವಾದಿ ವ್ಯವಸ್ಥೆಯನ್ನು ಗಟ್ಟಿಯಾಗಿ ಉಳಿಸಿಕೊಳ್ಳಬಹುದು. ಭಾರತದ ಬಹುಜನರನ್ನು ನಮ್ಮ ಹಿಡಿತದಲ್ಲೇ ಇಟ್ಟುಕೊಳ್ಳಬಹುದು. ಎಂದೆಲ್ಲಾ ಸಮಗ್ರವಾಗಿ ಆಲೋಚಿಸಿದ ಮನುವಾದಿ ನಾಯಕರುಗಳು ಬ್ರಿಟೀಷರ ಅಧಿಕಾರದ ವಿರುದ್ಧ ಸಂಚು ಹೂಡಿದರು. ಇದನ್ನು ಅಧಿಕಾರಕ್ಕಾಗಿ ಎಂದರೆ ಜನರು ತಮ್ಮನ್ನು ನಂಬಲಾರರು. ಕ್ರೂರತನವನ್ನು ಚಳವಳಿ ಎಂದು ಕರೆದರು.

ಪುಲೆಯವರ 'ಸತ್ಯಶೋಧಕ ಸಮಾಜ' ಸಂಘವನ್ನು ದಿಕ್ಕುತಪ್ಪಿಸಲು, ಆರ್ಯ ಸಮಾಜ, ಬ್ರಹ್ಮ ಸಮಾಜಗಳನ್ನು ಸ್ಥಾಪಿಸಿಕೊಂಡರು. ಅದೆಲ್ಲದಕ್ಕೂ ಮಿಗಿಲಾಗಿ 1885ರಲ್ಲಿ "ಭಾರತೀಯ ರಾಷ್ಟ್ರೀಯ ಕಾಂಗ್ರೆಸ್" ಅನ್ನು ಸ್ಥಾಪಿಸಿಕೊಂಡರು. ಮಹಾತ್ಮ ಜ್ಯೋತಿ ಭಾಪುಲೆಯವರ ಸತ್ಯಶೋಧಕ ಚಳವಳಿಯು ದೇಶದಾದ್ಯಂತ 'ಬ್ರಾಹ್ಮಣೇತರ ಚಳವಳಿ' ಎಂದೇ ಪ್ರಸಿದ್ಧವಾಗ ತೊಡಗಿತು. 1902ರಲ್ಲಿ ಮಹಾರಾಷ್ಟ್ರದ ಕೊಲ್ಲಾಪುರ ಸಂಸ್ಥಾನದ ಮಹಾರಾಜ ಶ್ರೀ ಶಾಹುಜಿಯವರು ಹಿಂದುಳಿದ ಜನಾಂಗಗಳಿಗೆ ಅಧಿಕಾರದಲ್ಲಿ ಶೇ. 50 ಮೀಸಲಾತಿ ನೀಡುವ ಮೂಲಕ ಸಾಮಾಜಿಕ ಕ್ರಾಂತಿಗೆ ಚಾಲನೆ ನೀಡಿದರು.

ಇದನ್ನನು ಸರಿಸಿ ಮೈಸೂರು ಪ್ರಾಂತ್ಯದಲ್ಲಿ 1921ರಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಇತರ ಹಿಂದುಳಿದವರಿಗೆ ಶೇ. 75 ಮೀಸಲಾತಿ ನೀಡಿದರು. ಹಿಂದುಳಿದವರ ಏಳಿಗೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಶಿಕ್ಷಣ ಸಂಸ್ಥೆಗಳನ್ನು ತೆರೆದರು. ಕೇರಳ, ತಮಿಳುನಾಡುಗಳಲ್ಲೂ ನಾರಾಯಣ ಗುರು ಮತ್ತು ಪೆರಿಯಾರರು ಬ್ರಾಹ್ಮಣೇತರ ಚಳವಳಿಗಳನ್ನು ಭರ್ಜರಿಯಾಗಿ ಸಂಘಟಿಸಿದರು. ಅಷ್ಟೊತ್ತಿಗೆ ಭಾರತದ ರಾಜಕೀಯಕ್ಕೆ ಬಾಬಾಸಾಹೇಬ್ ಡಾ. ಅಂಬೇಡ್ಕರ್‌ರ ಪ್ರವೇಶವಾಗಿತ್ತು. ಬಾಬಾಸಾಹೇಬರು ಶೋಷಿತರ ಮಹಾನಾಯಕರಾಗಿ, ದೊಡ್ಡಮಟ್ಟದ ಪದವಿಗಳನ್ನು ಪಡೆದು ಶೋಷಿತ ಸಮುದಾಯಗಳ ರಾಜ್ಯಾಧಿಕಾರಕ್ಕಾಗಿ ಅಗ್ರಹಿಸತೊಡಗಿದರು. ಸ್ವಾತಂತ್ರ್ಯ ಚಳವಳಿಯ ಕುತಂತ್ರ ಅರಿತಿದ್ದ ಬಾಬಾಸಾಹೇಬರು ಅದಕ್ಕೆ ಪರ್ಯಾಯವಾಗಿ 'ಶೋಷಿತರಿಗೆ ರಾಜ್ಯಾಧಿಕಾರ' ಎಂದು ಬ್ರಿಟೀಷರೆದುರು ಘರ್ಜಿಸತೊಡಗಿದರು.

ಇದೆಲ್ಲದರಿಂದಲೂ ಅತ್ಯಂತ ಹತಾಶರಾದ ಮನುವಾದಿಗಳೂ ಸಹ ತಮ್ಮ 'ಸ್ವಾತಂತ್ರ ಹೋರಾಟವನ್ನು' ತೀವ್ರ ಗೊಳಿಸಿದರು. ಎಷ್ಟು ವೇಗವಾಗಿ ಶೂದ್ರತಿಶೂದ್ರರು ಜಾಗೃತರಾಗುತ್ತಿದ್ದರೊ ಅಷ್ಟೇ ವೇಗದಲ್ಲಿ ಮನುವಾದಿ ಸ್ವಾತಂತ್ರ್ಯ ಹೋರಾಟವೂ ತೀವ್ರವಾಗತೊಡಗಿತು. ಅಮಾಯಕರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸೇರಿಸಿಕೊಳ್ಳುವ ಸಲುವಾಗಿಯೇ ಶ್ರೀಮಾನ್ ಗಾಂಧಿಯವರಿ: ಹೋರಾಟದ ಮುಖಂಡತ್ವವನ್ನು ವಹಿಸಲಾಯಿತು.

ಗಾಂಧಿ ಮಹಾತ್ಮರು ವಿವಿಧ ವೇಷಗಳನ್ನು ಧರಿಸಲಾರಂಭಿಸಿದರು. ವಿವಿಧ ರೀತಿಯ ರಂಗುರಂಗಿನ ಚಳವಳಿಗಳನ್ನು ಸಂಘಟಿಸುತ್ತಾ ಎಲ್ಲಾ ಜನರನ್ನೂ ಮರುಳು ಮಾಡಲಾರಂಭಿಸಿದರು. ಅಸಹಕಾರ ಚಳವಳಿ, ವಂಗ ಭಂಗ ಚಳವಳಿ, ಉಪ್ಪಿನ ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ, ಹರಿಜನ ಸೇವೆ. ಸ್ವದೇಶಿ ಚಳವಳಿ ಎನ್ನುವ ಚಿತ್ರ ವಿಚಿತ್ರ ಹೆಸರುಗಳಿಂದ ಜನರನ್ನೂ ಆಕರ್ಷಿಸಲಾರಂಭಿಸಿದರು. ಇತ್ತ ಬ್ರಿಟೀಷರೊಡನೆ ಆತಿಥ್ಯ ಸ್ವೀಕರಿಸುತ್ತಾ ಓಲೈಸುವುದು ಅತ್ತ ಜನರನ್ನು ಕ್ರಾಂತಿಕಾರಕ ಮಾತುಗಳಿಂದ ಉದ್ರೇಕಿಸುವುದು ಗಾಂಧೀಜಿಯವರ ವರಸೆಯಾಗಿತ್ತು. ಇದು ಭಾರತ ಸ್ವಾತಂತ್ರ ಚಳವಳಿಯ ಅಂತಗಾಳ. ಇದಕ್ಕಾಗಿ ಪ್ರಾಣತೆತ್ತ ಕೋಟ್ಯಾಂತರ ಯೋಧರು ಮಾತ್ರ ಮೂಲನಿವಾಸಿ ಭಾರತೀಯರೆ! (ತಮ್ಮ ಪ್ರಾಣವನ್ನಾದರೂ ತೆತ್ತು ಮನುವಾದಿಗಳಿಗೆ ಅಧಿಕಾರ ತಂದುಕೊಡುವುದರಲ್ಲಿ ಭಾರತೀಯ ಮೂಲನಿವಾಸಿ SC/ST/OBCಗಳು ಇಂದಿಗೂ ಕಂಕಣಬದ್ಧರಾಗಿದ್ದಾರೆ!)

ಈ 'ಅಧಿಕಾರ'ಕ್ಕಾಗಿ ಮಾಡಿದ ಹೋರಾಟಕ್ಕೊಂದು ದೀರ್ಘ ಇತಿಹಾಸ ಕಲ್ಪಿಸಿ ಇದನ್ನೊಂದು

ರಾಷ್ಟ್ರೀಯ ಹೋರಾಟ, ಮಾತೃಭೂಮಿಯ ರಕ್ಷಣೆಗಾಗಿ ನಡೆಸಿದ ಹೋರಾಟ ಎಂದು ದಾಖಲಿಸುವ ಸಲುವಾಗಿ ಈ ಮನುವಾದಿಗಳು, ರಾಜರುಗಳು ಕಾಲದಲ್ಲಿ ನಡೆದ ಸಣ್ಣಪುಟ್ಟ ಹೋರಾಟಗಳನ್ನು ಸ್ವಾತಂತ್ರ್ಯಕ್ಕಾಗಿ ಮೊಳಗಿದ ರಣಕಹಳೆಗಳು ಎಂದಿದ್ದಾರೆ. ಇಷ್ಟೆಲ್ಲಾ ಆದರೂ ಈ ಯಾವ ಹೋರಾಟಗಳಿಗೂ ಹೆದರಿ ಬ್ರಿಟೀಷರು ಮನುವಾದಿಗಳ ಕೈಗೆ ಅಧಿಕಾರ ಹಸ್ತಾಂತರಿಸಲಿಲ್ಲ. ಅದರದು ಮತ್ತೊಂದು ಇತಿಹಾಸವಿದೆ.

ಅಧಿಕಾರಕ್ಕಾಗಿ ಅತ್ತ ಮನುವಾದಿಗಳೆಲ್ಲರೂ ಚಳವಳಿಗಳನ್ನು ನಡೆಸುತ್ತಿದ್ದರೆ. ಇತ್ತ ಶೋಷಿತರನ್ನೂ ಸ್ವತಂತ್ರ ಅಧಿಕಾರಕ್ಕಾಗಿ ಬಾಬಾಸಾಹೇಬರು ಭಾರತದಾದ್ಯಂತ ಸಂಘಟಿಸತೊಡಗಿದ್ದರು. ಅಂಬೇಡ್ಕರರ ವಿದ್ವತ್ತಿಗೆ ಮಾರು ಹೋಗುತ್ತಿದ್ದ ಬ್ರಿಟೀಷರು ಅಂಬೇಡ್ಕರ್‌ರವರ ವಾದಗಳಿಂದ ಈ ದೇಶದ ಮನುವಾದಿ ಸಾಮಾಜಿಕ ವ್ಯವಸ್ಥೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅಂಬೇಡ್ಕರರ ಹಕ್ಕೊತ್ತಾಯಗಳನ್ನು ಈಡೇರಿಸತೊಡಗಿದರು. ವಯಸ್ಕ ಮತದಾನ ಪದ್ಧತಿ ಬಂತು, ಶಾಸನ ಸಭೆಗಳಲ್ಲಿ ಅಸ್ಪೃಶರೂ ಭಾಗವಹಿಸುವಂತಾಯಿತು. ಅಸ್ಪೃಶ್ಯರಿಗೂ ಚುನಾವಣೆಯಲ್ಲಿ, ಶಿಕ್ಷಣದಲ್ಲಿ ನೌಕರಿಯಲ್ಲಿ ಮೀಸಲಾತಿಗಳು ಜಾರಿಯಾದವು. ಇದೆಲ್ಲದರಿಂದಲೂ ಬೆಚ್ಚಿಬಿದ್ದ ಮನುವಾದಿಗಳು ತಮ್ಮ ಮನುಸಂವಿಧಾನ ಶೂದ್ರಾತಿ ಶೂದ್ರರಿಗೆ ಸಾವಿರಾರು ವರ್ಷಗಳಿಂದಲೂ ನಿಷೇಧಿಸಿದ್ದ ವಿದ್ಯೆ, ಆಸ್ತಿ, ಅಧಿಕಾರಗಳು ಮತ್ತೆ ಲಭಿಸುವುದರ ವಿರುದ್ಧ ಅತ್ಯಂತ ತೀವ್ರವಾದ ಹೋರಾಟ ಕೈಗೊಂಡರು. ಶೋಷಿತರ ವಿರುದ್ಧ ಮನುವಾದಿಗಳೂ ಪ್ರಾಣ ಕೊಡಲು ಮುಂದಾದರು. (ಮನುವಾದಿಗಳು ಪ್ರಾಣವನ್ನಾದರೂ ತೆತ್ತು ಶೋಷಿತರಿಗೆ ಅಧಿಕಾರ ತಪ್ಪಿಸುತ್ತಾರೆ!) ಅಷ್ಟೊತ್ತಿಗಾಗಲೇ ಎರಡನೇ ಮಹಾಯುದ್ಧದಲ್ಲಿ ಬ್ರಿಟೀಷರೂ ಸಂಕಷ್ಟಕ್ಕೆ ಒಳಗಾಗಿದ್ದರು. ಇಂಡಿಯಾದಲ್ಲಿ ಪ್ರಾಣ ತೆರುವವರ ಸಂಖ್ಯೆ ಹೆಚ್ಚಾಗುತ್ತಲಿತ್ತು. ಇದೆಲ್ಲದರಿಂದಲೂ ಬೇಸತ್ತ ಬ್ರಿಟೀಷರೇ ಸ್ವತಃ ಭಾರತವನ್ನು ಬಿಟ್ಟು ಹೊರಡಲು ತೀರ್ಮಾನಿಸಿದರು. ಅದರಂತೆ ನಿಮ್ಮ ಸಂವಿಧಾನವನ್ನು ನೀವೇ ಸಿದ್ಧಪಡಿಸಿಕೊಳ್ಳಿ ನಾವು ನಿಮಗೆ ಆಗಸ್ಟ್ 15ರಂದು ಅಧಿಕಾರ ಹಸ್ತಾಂತರಿಸುತೇವೆ ಎಂದು ಜುಲೈ 10ರಂದು ಕಾಂಗ್ರೆಸ್ಸಿಗರಿಗೆ ಬ್ರಿಟಿಷರು ಭರವಸೆ ನೀಡಿದರು.

ಹೊಸ ಸಂವಿಧಾನ ರಚನಾ ಸಭೆಗೆ ಚುನಾವಣೆಗಳು ನಡೆದವು ಡಾ. ಅಂಬೇಡ್ಕರರು ಹೇಗೆದರೂ ಮಾಡಿ ತಾನು 'ಸಂವಿಧಾನ ರಚನಾ' ಸಭೆಗೆ ಆಯ್ಕೆಯಾಗಲೇಬೇಕೆಂದು ತಮ್ಮದೇ ಪಕ್ಷ AISCFನಿಂದ ಆನೆ ಗುರುತು ನೀಲಿ ಬಾವುಟದ ಚಿಹ್ನೆಯಡಿಯಲ್ಲಿ ಬಾಂಬೆ ಪ್ರಾಂತ್ಯದಿಂದ ಸ್ಪರ್ಧಿಸಿದ್ದರು. ಆದರೆ ಶತಾಯಗತಾಯ ಅಂಬೇಡ್ಕರರು ಗೆಲ್ಲಲೇಬಾರದು ಎಂದು ಕಾಂಗ್ರೆಸ್ಸಿಗರೂ ತೀರ್ಮಾನಿಸಿದ್ದರು. ಹಾಗಾಗಿ ಅಂಬೇಡ್ಕರ್‌ರವರ ವಿರುದ್ಧ ಮತ್ತೊಬ್ಬ ಸಾಮಾನ್ಯ ಅಭ್ಯರ್ಥಿಯನ್ನು ನಿಲ್ಲಿಸಿ, ಅಂಬೇಡ್ಕರರನ್ನು ಸೋಲಿಸಿದರು! ಇದರಿಂದ ಬೇಸತ್ತ ಮುಸ್ಲಿಂಲೀಗ್‌ನ ನಾಯಕರು ಪಶ್ಚಿಮ ಬಂಗಾಲದ ಜೈಸೂರ್ ಮತ್ತು ಕುಲ್ನಾದಿಂದ ಅಂಬೇಡ್ಕರ್‌ರವರನ್ನು ನಿಲ್ಲಿಸಿ ಗೆಲ್ಲಿಸಿದರು. ಇದರಿಂದ ತೀರ ವಿಚಲಿತರಾದ ಕಾಂಗ್ರೆಸ್ಸಿಗರು ಅಂಬೇಡ್ಕರರನ್ನು ಸಂವಿಧಾನ ರಚನಾ ಸಮಿತಿಯ ಹೊರಗಿಡುವ ಹಠದಿಂದ ಮತ್ತೊಂದು ತಂತ್ರ ರೂಪಿಸಿ ಜೈಸೂರು ಮತ್ತು ಖುಲ್ನಾ ಕ್ಷೇತ್ರವನ್ನು ಪೂರ್ವ ಪಾಕಿಸ್ತಾನಕ್ಕೆ ಸೇರಿಸುತ್ತಾರೆ.

ಇದರಿಂದ ಕೆರಳಿದ ಬಾಬಾ ಸಾಹೇಬರು ಲಂಡನ್ನಿಗೆ ತೆರಳಿ ತಮ್ಮ ವಿರುದ್ಧ ಗಾಂಧೀಜಿ ಮತ್ತು ಕಾಂಗ್ರೆಸ್ಸಿಗರು ನಡೆಸಿದ ಪಿತೂರಿಗಳನ್ನು ವಿವರಿಸಿ, ಭಾರತದ ಸಂವಿಧಾನ ರಚನಾ ಸಮಿತಿಯಲ್ಲಿ ತಾವಿಲ್ಲದಿದ್ದರೆ ಇಡೀ ಶೋಷಿತ ಸಮುದಾಯಗಳಿಗೆ ಆಗುವ ಅನ್ಯಾಯಗಳನ್ನು ಮನವರಿಕೆ ಮಾಡಿಕೊಡುತ್ತಾರೆ. ಅಂಬೇಡ್ಕರ್‌ರಂತಹ ದೈತ ಪ್ರತಿಭೆಗಾದ ಅನ್ಯಾಯವನ್ನು ಅರ್ಥಮಾಡಿಕೊಂಡ ಬ್ರಿಟೀಷರು ಲಂಡನ್ನಿನಿಂದಲೇ "ಡಾ. ಅಂಬೇಡ್ಕರ್‌ರವರನ್ನು ಸಂವಿಧಾನ ರಚನಾ ಸಮಿತಿಗೆ ಸೇರಿಸಿಕೊಂಡು ಅವರನ್ನು ಕರಡು ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡುವುದು. ಅವರಿಗಿಂತಲೂ ಸೂಕ್ತವಾದ ವ್ಯಕ್ತಿ ನಿಮ್ಮಲ್ಲಿ ಯಾರೂ ಇರಲಾರರು. ಒಂದು ವೇಳೆ ನೀವು ಹಾಗೆ ಮಾಡಲು ವಿಫಲರಾದರೆ ನಿಮಗೆ ಅಧಿಕಾರ ಹಸ್ತಾಂತರ ಮಾಡುವುದನ್ನು ಮುಂದೂಡಲಾಗುವುದು" ಎಂಬ ಸಂದೇಶವನ್ನು ಕಾಂಗ್ರೆಸ್ಸಿಗರಿಗೆ ರವಾನಿಸಿದರು. ಬೇರೆದಾರಿಯಿಲ್ಲದೆ ಪೂನಾ ಕ್ಷೇತ್ರದಿಂದ ಗೆದ್ದಿದ್ದ ಜಯಕರ್‌ರನ್ನು ರಾಜೀನಾಮೆ ಕೊಡಿಸಿ, ಡಾ. ಅಂಬೇಡ್ಕರ್‌ರವರನ್ನು ಅಭ್ಯರ್ಥಿಯನ್ನಾಗಿ ಮಾಡಿ ಅವರ ವಿರುದ್ಧ ಬೇರಾರನ್ನೂ ಸ್ಪರ್ಧಿಸದಂತೆ ಮಾಡಿ ಅವಿರೋಧವಾಗಿ ಆಯ್ಕೆ ಮಾಡುತ್ತಾರೆ. ಹಾಗೆ ಮಾಡಿದ ನಂತರವಷ್ಟೇ ಬ್ರಿಟೀಷರು ಭಾರತದ ಮನುವಾದಿಗಳ ಕೈಗೆ ಆಗಸ್ಟ್ 15ರಂದು ಅಧಿಕಾರ ಹಸ್ತಾಂತರ ಮಾಡುತ್ತಾರೆ! ಆಗಸ್ಟ್ 15ರ ಬೆಳ್ಳಿಗ್ಗೆ ರಾಹುಕಾಲ ಆರಂಭವಾಗುವುದರಿಂದ ಆ ಸಂದರ್ಭದಲ್ಲಿ ಅಧಿಕಾರ ವಹಿಸಿಕೊಳ್ಳುವುದು ಅನಿಷ್ಟವೆಂದು ಲೆಕ್ಕಹಾಕಿದ ಮೂರ್ಖ ಮನುವಾದಿಗಳು ಆಗಸ್ಟ್ 15 ಉಗಮವಾಗುವ ರಾತ್ರಿ 12ಕ್ಕೆ ಅಧಿಕಾರವನ್ನು ವಹಿಸಿಕೊಂಡರು.

ಆಗಸ್ಟ್ ಹದಿನೈದರ ಅಧಿಕಾರ ಹಸ್ತಾಂತರದಿಂದ ಭಾರತಕ್ಕೆ ಹೊಸ ಯಜಮಾನರು ಬಂದರು. ಹಳೆಯ ಯಜಮಾನರು ಜಾಗ ಖಾಲಿ ಮಾಡಿದರು ಅಷ್ಟೆ. ಇದನ್ನು ಸ್ವಾತಂತ್ರ್ಯವೆಂದು ನಾಚಿಕೆಯಿಲ್ಲದೆ ಹೇಗೆ ಹೇಳಿಕೊಳ್ಳುವುದು? ಮನುವಾದಿಗಳ ಈ ಹೋರಾಟವನ್ನು ಸ್ವಾತಂತ್ರ್ಯ ಹೋರಾಟವೆಂದು ಪರಿಗಣಿಸುವುದೇ ಆದರೆ, ಈ ಪ್ರಶ್ನೆಗಳು ಸಹಜವಾಗಿ ಏಳುತ್ತವೆ...

* ಗಾಂಧೀಜಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ಸಿನ ಇತರ ಸದಸ್ಯರು ಏಕೆ ಅಸ್ಪೃಶ್ಯರಿಗೆ ವಿಶೇಷ/ಪ್ರತ್ಯೇಕ ಚುನಾಯಕಗಳನ್ನು ಬೇಡವೆಂದು ಹಠಹಿಡಿದು ನಿರಾಕರಿಸಿದರು?
* ಅಂಬೇಡ್ಕರರನ್ನು ಸಂವಿಧಾನ ರಚನಾ ಸಮಿತಿಗೆ ಆಯ್ಕೆಯಾಗದಂತೆ ಅವರು ಕುತಂತ್ರಗಳನ್ನು ರೂಪಿಸಿ ತಡೆದದ್ದು ಯಾಕೆ?
* ಫುಲೆಯವರ 'ಸತ್ಯಶೋಧಕ ಸಮಾಜ' ಸಂಘಟನೆಯ ವಿರುದ್ಧ ರಾಷ್ಟ್ರೀಯ ಕಾಂಗ್ರೆಸ್, ಬ್ರಹ್ಮ ಸಮಾಜ, ಆರ್ಯ ಸಮಾಜಗಳನ್ನು ಕಟ್ಟಿದರು ಯಾಕೆ?
* ಅಸ್ಪೃಶ್ಯತೆಯ ನಿವಾರಣೆ, ಹಿಂದುಳಿದವರಿಗೆ ಮೀಸಲಾತಿ, ಮುಂತಾದ ಕ್ರಾಂತಿಕಾರಕ ನಿಲುವುಗಳನ್ನು ಶಾಹು ಮಹಾರಾಜರು ಮತ್ತು ನಾಲ್ವಡಿಯವರು ತೆಗೆದುಕೊಂಡಾಗ ಅವುಗಳನ್ನು ಮನುವಾದಿಗಳು ವಿರೋಧಿಸಿದ್ದು ಯಾಕೆ?
* ಇಡಿ ಸ್ವಾತಂತ್ರ್ಯ ಹೋರಾಟದಲ್ಲಿ ಒಮ್ಮೆಯೂ ಬ್ರಿಟೀಷರಿಂದಲೇ ಗುಂಡೇಟು, ಲಾಠಿ ಏಟು ತಿನ್ನದಿದ್ದ ಚಳವಳಿಯ ಪಿತಾಮಹ ಗಾಂಧೀಜಿಯವರನ್ನು ಅಧಿಕಾರ ಹಸ್ತಾಂತರದ ವೇಳೆಯಲ್ಲಿ ಸ್ವತಃ ಮನುವಾದಿಗಳೇ ಗುಂಡಿಟ್ಟು ಕೊಂದದ್ದೇಕೆ?
* ಸ್ವತಂತ್ರ ಅಧಿಕಾರದ ನಂತರದಲ್ಲಿ ಅಂಬೇಡ್ಕರರು ಮಂಡಿಸಿದ ಹಿಂದೂ ಕೋಡ್ ಬಿಲ್, ಕಾಶ್ಮೀರ ಸಮಸ್ಯೆಗೆ ಶಾಶ್ವತ ಪರಿಹಾರ, ಹಿಂದುಳಿದ ಜಾತಿಗಳಿಗೆ ಮೀಸಲಾತಿ ಇವುಗಳನ್ನು ಏಕೆ ಒಪ್ಪಿಕೊಳ್ಳಲಿಲ್ಲ?
* ಸ್ವತಂತ್ರ ಅಧಿಕಾರ ಲಭಿಸಿ 59 ವರ್ಷಗಳು ಕಳೆದಿದ್ದರೂ ಇನ್ನೂ 52% ಬಡತನ, ನಿರುದ್ಯೋಗ, ರೋಗ, ರುಜಿನಗಳು, ಅಕ್ರಮ, ಭ್ರಷ್ಟಾಚಾರಗಳು ತಾಂಡವವಾಡುತ್ತಿರುವುದು ಯಾಕೆ?

ಇಂತಹ ನೂರಾರು ಪ್ರಶ್ನೆಗಳು ಸಿಕ್ಕುತ್ತವೆ. ಈ ಎಲ್ಲಾ ಪ್ರಶ್ನೆಗಳು ನಮಗೆ ಕಟ್ಟಿಕೊಡುವ ಸತ್ಯವೇನೆಂದರೆ, ಭಾರತದಲ್ಲಿ ನಡೆದದ್ದು ಸರ್ವರಿಗೂ ಸ್ವಾತಂತ್ರ್ಯ ಕೊಡಿಸಿಕೊಡುವ ರಾಷ್ಟ್ರೀಯ ಚಳವಳಿಯಲ್ಲ ಅದು ಕೇವಲ ಮನುವಾದಿಗಳ ರಾಜ್ಯಾಧಿಕಾರದ ಚಳವಳಿ ಮತ್ತು ಭಾರತದ ಮೂಲನಿವಾಸಿ SC/ST/OBCಗಳ ಹಕ್ಕು ಅಧಿಕಾರ ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಬದುಕಿನ ವಿರುದ್ಧ ನಡೆದ ಅಮಾನವೀಯ ಚಳವಳಿ ಎಂಬುದು.

ಮನುವಾದಿ ವ್ಯವಸ್ಥೆ ಎಂದಿಗೂ ಸಮಾನತೆ, ಸಹಬಾಳ್ವೆಯನ್ನು ಸಹಿಸುವುದಿಲ್ಲವೆಂಬುವುದನ್ನೇ ಶತಶತಮಾನಗಳಿಂದಲೂ ಸಾರುತ್ತಾ ತೋರುತ್ತಾ ಬಂದಿದೆ. ಇಂತಹ ವ್ಯವಸ್ಥೆಯನ್ನು ಬಲಪಡಿಸುತ್ತಿರುವವರು ಅವರಿಂದಲೇ ಶೋಷಣೆಗೊಳಗಾಗಿರುವ ಭಾರತೀಯ ಬಹುಜನರು. ಅಪ್ರಜ್ಞಾಪೂರ್ವಕವಾಗಿ ಅವರು ಮನುವಾದಿಗಳ ಕೈಗೊಂಬೆಗಳಾಗಿದ್ದಾರೆ. ಇನ್ನಾದರೂ ಪ್ರಜ್ಞಾಪೂರ್ವಕವಾಗಿ ಬಾಬಾಸಾಹೇಬರು ಹೇಳುವಂತೆ ಸ್ವತಂತ್ರ ರಾಜ್ಯಾಧಿಕಾರದಿಂದ ಮಾತ್ರ ಮನುವಾದಿ ವ್ಯವಸ್ಥೆಗೆ ಪರ್ಯಾಯವಾದ ಮಾನವತಾವಾದಿ ವ್ಯವಸ್ಥೆಯನ್ನು ನಿರ್ಮಿಸಬಹುದಾಗಿದೆ. ಅದು ಮಾತ್ರ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ತಂದುಕೊಡುವ ನಿಜವಾದ ಸ್ವಾತಂತ್ರ್ಯವಾಗಬಲ್ಲದು. ಈ ನಿಟ್ಟಿನಲ್ಲಿ ಆಗಸ್ಟ್ 15ರ ಅಧಿಕಾರ ಹಸ್ತಾಂತರದ ಪ್ರಕ್ರಿಯೆಯನ್ನು ಅತ್ಯಂತ ಭಕ್ತಿಯಿಂದ ಸ್ವಾತಂತ್ರ್ಯ ದಿನಾಚರಣೆ ಎಂದು ಆಚರಿಸುವುದು ಅರ್ಥಹೀನವಾಗುತ್ತದೆ. ಭಾರತದ ಬಹುಜನರ ನಿಜವಾದ ಸ್ವಾತಂತ್ರ್ಯ ಹೋರಾಟವನ್ನು ಇದೀಗ ಆರಂಭಿಸಬೇಕಿದೆ. ಮನುವಾದದ ಸರ್ವಾಧಿಕಾರವು ಬ್ರಿಟೀಷರಿಗಿಂತಲೂ ಕ್ರೂರವಾಗಿರುವುದರಿಂದ ಭಾರತವನ್ನು ಮನುವಾದದಿಂದ ಮುಕ್ತಗೊಳಿಸುವ ಸ್ವಾತಂತ್ರ್ಯ ಹೋರಾಟಕ್ಕೆ ಬಹುಜನರು ಸಿದ್ಧರಾಗಬೇಕು. ಅದಕ್ಕಾಗಿ ಇಂದು ಮದ್ದು ಗುಂಡು ಯಾವುದೂ ಬೇಕಿಲ್ಲ. ಚುನಾವಣೆಗಳ ಮೂಲಕವೇ ಅದನ್ನು ಇಂದು ನಾವು ಗಳಿಸಿಕೊಳ್ಳಬಲ್ಲಷ್ಟು ತಾಕತ್ತನ್ನು ಬಾಬಾಸಾಹೇಬರ ಸಂವಿಧಾನವು ನಮಗೆ ನೀಡಿದೆ. ಅದನ್ನು ಬಳಸುವ ವಿಧಾನವನ್ನಷ್ಟೇ ನಾವು ಕಲಿಯಬೇಕಿದೆ. ಜೈ ಭೀಮ್... ಜೈ ಭಾರತ್... □

ಮಹಾತ್ಮರು ಮತ್ತು ಜಯಂತಿಗಳು....

(5ನೇ ಪುಟದಿಂದ)

ಸೀಮಿತವಾಗಿವೆ.

ಇತ್ತೀಚೆಗೆ ಮಂಡ್ಯ ಜಿಲ್ಲೆಯ ಹಳ್ಳಿಯೊಂದರಲ್ಲಿ ದಲಿತರು ಮೂಲ ಕರ್ಮಗಳನ್ನು ಮಾಡಲು ವಿರೋಧಿಸಿದ್ದಕ್ಕೆ ಅವರ ಬಹಿಷ್ಕಾರ ನಡೆಯಿತು. ಜಾತ್ರೆಯಲ್ಲಿ ಹಲಗೆವಾದಕ ಆಕಸ್ಮಿಕವಾಗಿ ಕಾಲು ತುಳಿದ ಅನ್ನುವ ಕಾರಣಕ್ಕಾಗಿ ಹಟ್ಟಿಯಲ್ಲಿರುವವರೆಲ್ಲರನ್ನೂ ಹೊಡೆದು ಬಹಿಷ್ಕಾರ ಹಾಕಿದ್ದನ್ನೂ ಕಂಡಿದ್ದೇವೆ. ಶರಣ ಅನುಯಾಯಿಗಳಾದ ಮಠಾಧೀಶರು ಇಂತಹವುಗಳನ್ನು ಕಂಡೂ ಕಾಣದಂತೆ, ಕಿವಿಗೆ ಕೇಳಿಸದಂತೆ ವರ್ತಿಸುತ್ತಿರುವುದು ಸೋಜಿಗವನ್ನುಂಟು ಮಾಡಿದೆ. ಆಯುಷ್ಯ ಮುಗೀತಾ ಬಂದಿದೆ ಈಗಲಾದರೂ ಒಳ್ಳೆಯದು ಮಾಡಬೇಕೆಂದುಕೊಂಡ ಪೇಜಾವರ ಶ್ರೀಗಳು ಥಂಬಾಚಾರಕ್ಕಾದರೂ ಬಹಿಷ್ಕಾರಗೊಂಡ ದಲಿತರ ಕೇರಿಗಳಿಗೆ ಭೇಟಿ ಕೊಡುತ್ತಿದ್ದಾರೆ. ಭ್ರಷ್ಟರನ್ನು ಬೆಂಬಲಿಸಿ ಫರಮಾನು ಹೊರಡಿಸಿದ ಮಠಾಧೀಶರಿಗೆ, ಅಸ್ಪೃಶ್ಯತೆ ಆಚರಣೆ ಆದೊಂದು ಪಿಡುಗು, ಅದನ್ನು ವಿರೋಧಿಸಬೇಕೆಂಬ ಕನಿಷ್ಠ ಕಾಳಜಿಯನ್ನೂ ವ್ಯಕ್ತಪಡಿಸುತ್ತಿಲ್ಲ. ಅಂತಹ ಪದ್ಧತಿಯನ್ನು ಅಳಿಸಿಹಾಕುವುದು ಅದು ಕೇವಲ ಬಸವಣ್ಣನ ಕೆಲಸ ಆಗಿತ್ತು ಅನ್ನುವ ನೆಲೆಗೆ ಸ್ವಾಮಿಜಿಗಳು ಬಂದು ನಿಂತಿದ್ದಾರೆ ಎಂಬ ಸಂಶಯ ಮೂಡುತ್ತಿದೆ. ನಮ್ಮ ಹೋರಾಟವೇನಾದರೂ ಇದ್ದರೆ ಅದು ಸ್ವಜಾತಿ ನಾಯಕರಿಗೆ ಕುತ್ತು ಬಂದಾಗ, ಅವರು ಭ್ರಷ್ಟರಿರಲಿ ಅಥವಾ ಜಾತಿವಾದಿಗಳಾಗಿರಲಿ ಅವರನ್ನು ಬೆಂಬಲಿಸುವುದೇ ಪ್ರಮುಖ ಧ್ಯೇಯ ಎಂಬಂತೆ ವರ್ತಿಸುತ್ತಿರುವುದು ತುಂಬಾ ನೋವಿನ ಸಂಗತಿ. ವರ್ಣ, ಜಾತಿ ಹಾಗೂ ಅಸ್ಪೃಶ್ಯತೆಗಳಂತಹ ಕಳಂಕಪೂರಿತ ವಿಷಯಗಳನ್ನು ಹೋಗಲಾಡಿಸಿ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಗುಣ ಅವರಲ್ಲಿಲ್ಲದಿರುವುದು ಈ ನಾಡಿನ ದೌರ್ಭಾಗ್ಯವೇ ಸರಿ.

ಬಸವಣ್ಣನವರು ಸಮಗಾರ ಹರಳಯ್ಯ ದಂಪತಿಗಳು ಮಾಡಿದ ಪಾದುಕೆಗಳನ್ನು ಮೆಟ್ಟದೆ ತಲೆಯ ಮೇಲಿಟ್ಟುಕೊಂಡು ಗೌರವಿಸಿ ತನ್ನ ಸಾಮಾಜಿಕ ಕಾಳಜಿಯನ್ನು ಮೆರೆದಿದ್ದ. ಅಷ್ಟೇ ಅಲ್ಲ ಹೊಲಗೇರಿಯನ್ನು ಶಿವಾಲಯವೆಂದು ಹೊಲೆಯರನ್ನು ಹಿರಿಯ ಮಾಹೇಶ್ವರರೆಂದು ಕರೆದು ಗೌರವಿಸಿದ್ದು ಈಗ ಇತಿಹಾಸ. ವೃತ್ತಿಯನ್ನು ಹಾಗೂ ಕಾಯಕ ಜೀವಿಗಳನ್ನು ಕೀಳಾಗಿ ಕಾಣುತ್ತಿದ್ದ ಕಾಲದಲ್ಲಿ ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ ಎಂದು ಹೇಳಿ ವೃತ್ತಿ ಗೌರವ ಹೆಚ್ಚಿಸಿದ ಮಹಾನ್ ಶರಣ ಬಸವಣ್ಣ. ಈಗಿನ ಅನುಯಾಯಿಗಳಿಗೆ ಶೋಷಿತರ ಅಭಿವೃದ್ಧಿಯೂ ಬೇಕಾಗಿಲ್ಲ. ಅಸ್ಪೃಶ್ಯತೆ ನಿವಾರಣೆಯ ಅಗತ್ಯವೂ ಇಲ್ಲ. ಯಾಕೆಂದರೆ ಜಾತಿಗೊಬ್ಬ ಮಠಾಧೀಶನನ್ನು ನೇಮಕ ಮಾಡಿ ಸಮಾಜವನ್ನು ಹಾಳುಗೆಡವಿದ್ದೇ ಅವರ ದೊಡ್ಡ ಸಾಧನೆ ಎಂಬಂತೆ ಬೀಗುತ್ತಿದ್ದಾರಲ್ಲ! ಇದು ಬಸವ ಚಿಂತನೆಯೇ? ಬಿಜ್ಜಳನ ಭಂಡಾರವೆಮಗೇಕಯ್ಯ ಎಂದು ಅಂದು ಶರಣರು ನುಡಿದು ನಡೆದಿದ್ದರು. ಅದೇ ಶರಣರ ಅನುಯಾಯಿಗಳೆಂದು ಹೇಳಿಕೊಳ್ಳುವ ಮಠಾಧೀಶರು ಭ್ರಷ್ಟತೆಯನ್ನು, ಸ್ವಜಾತಿಯವರನ್ನು ರಕ್ಷಿಸಲು ಸರಕಾರದ ಭಂಡಾರವೇ ಬೇಕಯ್ಯ ಎನ್ನುವವರಿಂದ ಸಮಾಜ ಸುಧಾರಣೆ ಸಾಧ್ಯವೇ? □

ಏಡ್ಸ್ ಮಹಾಮಾರಿಗೆ ಮೂವತ್ತು

(6ನೇ ಪುಟದಿಂದ)

ಎಚ್.ಐ.ವಿ. ಲಕ್ಷಣ ಹಾಗೂ 14 ಮಂದಿಗೆ ಏಡ್ಸ್ ಸಂಪೂರ್ಣ ಆವರಿಸಿಕೊಂಡಿತ್ತು.

ಸೋಜಿಗದ ಸಂಗತಿ ಎಂದರೆ ಇಂದಿಗೂ ಕೂಡ ಏಡ್ಸ್ ರೋಗ ಅತ್ಯಂತ ವೇಗವಾಗಿ ಹರಡುತ್ತಿರುವುದು ದಕ್ಷಿಣ ಭಾರತದಲ್ಲಿ. ಅತ್ಯಂತ ಅಪಾಯಕಾರಿ ರಾಜ್ಯಗಳೆಂದು ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ, ಕೇರಳ ರಾಜ್ಯಗಳನ್ನು ಗುರುತಿಸಲಾಗಿದೆ. ಉತ್ತರ ಭಾರತದ ಯಾವ ರಾಜ್ಯಗಳೂ ಆತಂಕದ ಸ್ಥಿತಿಯಲ್ಲಿಲ್ಲ. ಈಶಾನ್ಯ ರಾಜ್ಯಗಳಲ್ಲಿ ಮಣಿಪುರ ಕ್ಷಿಪ್ರವಾಗಿ ಏಡ್ಸ್ ಹರಡುತ್ತಿರುವ ರಾಜ್ಯಗಳಲ್ಲಿ ಮುಂಚೂಣಿಯಲ್ಲಿದೆ. ಉತ್ತರದ ಗುಜರಾತ್, ರಾಜಸ್ಥಾನ, ಹರಿಯಾಣ, ಪಂಜಾಬ್, ಉತ್ತರಪ್ರದೇಶ ಮುಂತಾದ ರಾಜ್ಯಗಳಲ್ಲಿ ಜಾರಿಯಲ್ಲಿರುವ ಅತ್ಯಂತ ಕಠಿಣವಾದ ಸಾಮಾಜಿಕ ಕಟ್ಟುಪಾಡುಗಳು ಏಡ್ಸ್ ನಿಯಂತ್ರಣಕ್ಕೆ ಪರೋಕ್ಷವಾಗಿ ನೆರವಾಗಿವೆ.

ಭಾರತದ ಲಾರಿ ಚಾಲಕರು ಹೆಚ್ಚು ಪ್ರಮಾಣದಲ್ಲಿ ಈ ಖಾಯಿಲೆಗೆ ತುತ್ತಾಗಿದ್ದು ಇವರನ್ನು ಏಡ್ಸ್ ಖಾಯಿಲೆಯ ವಾಹಕರೆಂದೇ ಗುರುತಿಸಲಾಗಿದೆ. ಭಾರತದಂತಹ ಬಹುಮುಖಿ ಸಮಾಜದಲ್ಲಿ ಏಡ್ಸ್ ತಗುಲದಂತೆ ಮುನ್ನೆಚ್ಚರಿಕೆ ವಹಿಸಲು ಕಾಂಡೋಮ್ ಬಳಕೆಗೆ ಪುರುಷರು ಹಾಗೂ ವೃತ್ತಿನಿರತ ವೇಶ್ಯೆಯರನ್ನು ಮನವೊಲಿಸಲು ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ದಶಕದುದ್ದಕ್ಕೂ ಶ್ರಮಪಟ್ಟಿವೆ. ಈಗ ನಿಧಾನವಾಗಿ ಏಡ್ಸ್ ಭೀಕರತೆ ಅರಿವಾಗತೊಡಗಿದಂತೆ ಜನಸಾಮಾನ್ಯರಲ್ಲೂ ಎಚ್ಚರದ ಪ್ರಜ್ಞೆ ಮೂಡಿರುವುದು ಸಮಾಧಾನಕರ ಸಂಗತಿ.

2001ರಲ್ಲಿ ಭಾರತದಲ್ಲಿ ಏಡ್ಸ್ ರೋಗಿಗಳ ಸಂಖ್ಯೆ 56 ಲಕ್ಷ ಇದ್ದದ್ದು 2007ರ ಅಂತ್ಯಕ್ಕೆ 31 ಲಕ್ಷಕ್ಕೆ ಇಳಿದು 2008ರವೇಳೆಗೆ 23 ಲಕ್ಷದ 1 ಸಾವಿರಕ್ಕೆ ತಲುಪಿತ್ತು. 2009ರ ಸಮೀಕ್ಷೆಯಲ್ಲಿ ಈ ಸಂಖ್ಯೆ 24 ಲಕ್ಷಕ್ಕೆ ತಲುಪಿದೆ.

ಇದೇ ಜೂನ್ 8ರಂದು ವಿಶ್ವ ಸಂಸ್ಥೆಯ ಪ್ರಧಾನ ಕಛೇರಿಯಲ್ಲಿ ಪ್ರಧಾನ ಕಾರ್ಯದರ್ಶಿ ಬಾನ್ ಕಿ ಮೂನ್ ರವರ ನೇತೃತ್ವದಲ್ಲಿ ನಡೆದ ಏಡ್ಸ್ ಪೀಡಿತ 30 ರಾಷ್ಟ್ರಗಳ ಪ್ರತಿನಿಧಿಗಳ ಸಭೆಯಲ್ಲಿ ಏಡ್ಸ್ ನಿಯಂತ್ರಣ ಕುರಿತಂತೆ ಪರಾಮರ್ಶೆ ನಡೆಯಿತು. ಇತ್ತೀಚಿನ ವರ್ಷಗಳಲ್ಲಿ ಏಡ್ಸ್ ರೋಗದ ನಿರ್ಮೂಲನೆಗಾಗಿ ಜಾಗತಿಕವಾಗಿ ಹರಿದು ಬರುತ್ತಿದ್ದ ದೇಣಿಗೆ ಕುಂಠಿತವಾಗಿರುವುದನ್ನು ಸಭೆ ಗಂಭೀರವಾಗಿ ಪರಿಗಣಿಸಿತು. (ದೇಣಿಗೆ ನೀಡುತ್ತಿರುವ ಪ್ರಮುಖರಲ್ಲಿ ಮೈಕ್ರೊಸಾಫ್ಟ್ ಸಂಸ್ಥೆಯ ಬಿಲ್‌ಗೇಟ್ಸ್ ಹಾಗೂ ಪ್ರಸಿದ್ಧ ಹೂಡಿಕೆದಾರ ವಾರನ್ ಬಫೆಟ್ ಮುಂಚೂಣಿಯಲ್ಲಿದ್ದಾರೆ.) ಏಡ್ಸ್ ನಿಯಂತ್ರಣ ಕುರಿತಂತೆ ತಮ್ಮ ಕಾರ್ಯತಂತ್ರವನ್ನು ಬದಲಿಸಿಕೊಳ್ಳಲು ನಿರ್ಧರಿಸಿ ರುವ ರಾಷ್ಟ್ರಗಳು ಇನ್ನು ಮುಂದೆ ಏಡ್ಸ್ ನಿರ್ಮೂಲನೆ ಗಿಂತ ರೋಗ ಬಾರದಂತೆ ತೆಗೆದುಕೊಳ್ಳಬಹುದಾದ ಮುನ್ನೆಚರಿಕೆಯ ಕ್ರಮಗಳಿಗೆ ಒತ್ತು ನೀಡಲು ನಿರ್ಧರಿಸಿವೆ. ಈ ಕಾರ್ಯಕ್ರಮಕ್ಕಾಗಿ ವಿಶ್ವಸಂಸ್ಥೆಯು ತನ್ನ ನಿಧಿಯಿಂದ 22 ಶತಕೋಟಿ ಡಾಲರ್ ಹಣವನ್ನು 2015ರವರೆಗೆ ವಿನಿಯೋಗಿಸಲು ನಿರ್ಧರಿಸಿದೆ. □

ಭಾರತದಲ್ಲಿ ಅಂಬೇಡ್ಕರ್ ಮಾದರಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿದೆಯೇ?

(7ನೇ ಪುಟದಿಂದ)

ಮುಂದುವರಿದು "ಒಂದು ಸಮುದಾಯವನ್ನು ಊರ ಹೊರಗಿರಿ, ನೀವು ಶಿಕ್ಷಣ ಪಡೆಯಬೇಡಿ, ನೀವು ಮುಟ್ಟಿಸಿಕೊಳ್ಳಬೇಡಿ, ನೀವು ದೇವಸ್ಥಾನ ಪ್ರವೇಶಿಸಬೇಡಿ, ನೀವು ನಮ್ಮ ಮಕ್ಕಳ ಜೊತೆ ಕೂರಬೇಡಿ, ನೀವು ಅಡಿಗೆ ಮಾಡಿದರೆ ನಾವು ತಿನ್ನುವುದಿಲ್ಲ. ನಿಮಗೆ ಬೇರೆ ಪಂಕ್ತಿ ನಮಗೆ ಬೇರೆ ಪಂಕ್ತಿ, ನಿಮ್ಮನ್ನು ಮುಟ್ಟ ಹಾಕುವುದೇ ನಮ್ಮ ಗುರಿ, ನಿಮ್ಮನ್ನು ತುಳಿಯುವುದು ನಮ್ಮ ರಕ್ತ ಗುಣ, ನಿಮಗೆ ತೊಂದರೆ ಕೊಡುವುದೇ, ಆ ತೊಂದರೆಯಲ್ಲಿ ನೀವು ನರಳುವಂತೆ ಮಾಡುವುದರಲ್ಲೇ ನಮ್ಮ ಶ್ರೇಯಸ್ಸಡಗಿದೆ" ಎನ್ನುವುದರಲ್ಲಿ ಪ್ರಜಾಪ್ರಭುತ್ವವೆಲ್ಲಿದೆ? ಮೇಲ್ಜಾತಿಗಳ ಸರ್ವಾಧಿಕಾರಿ ನಿಲುವಿಗೆ ಕೆಳಜಾತಿಗಳು ನಲುಗುವುದು ಎಂದರೆ ಇದೇ ಅಲ್ಲವೇ? ಮತ್ತು ಹೀಗೆ ಬದುಕುವುದನ್ನು ಪ್ರಜಾಪ್ರಭುತ್ವವೆಂದು ಕರೆಯಲು ಸಾಧ್ಯವೇ? ಹಾಗೆಯೇ ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ ಎಂದುಕೊಳ್ಳಬೇಕೆ? ಖಂಡಿತ ಹಾಗೇ ಹೇಳಿದ್ದೇ ಆದರೆ ಅದು ನಮ್ಮ ಕಣ್ಣಿಗೆ ನಾವೇ ಮಂಕುಬೂದಿ ಎರಚಿಕೊಂಡ ಹಾಗೆ. ದೂರದ ಲಿಂಕನ್ನನನ್ನು ಹಿಂದು ಮುಂದು ನೋಡದೆ ಇಲ್ಲಿ ಮಾತನಾಡಿದರೆ ಅಥವಾ ಅವನ ಸಿದ್ಧಾಂತ ನಮ್ಮಲ್ಲಿ ಯಶಸ್ವಿಯಾಗಿದೆ ಎಂದರೆ ನಮಗೆ ನಾವೇ ನೇಣು ಹಾಕಿಕೊಂಡ ಹಾಗೆ.

ಈ ನಿಟ್ಟಿನಲಿ ಪ್ರಜಾಪ್ರಭುತ್ವದ ಪರಿಕಲ್ಪನೆ ಬದಲಾಗಬೇಕಿದೆ. ಬೇರೆ ಕಡೆ ಹೇಗೋ ಏನೋ ಗೊತ್ತಿಲ್ಲ. ವಿಶೇಷವಾಗಿ ಭಾರತದ ದೃಷ್ಟಿಯಲ್ಲಂತೂ ಖಂಡಿತ ಬದಲಾಗ ಲೇಬೇಕಿದೆ. "ಒಂದು ದೇಶದ ವಿವಿಧ ಸಮುದಾಯಗಳು ಪರಸ್ಪರ ಸಹಯೋಗದಿಂದ ಬದುಕುವುದೇ ನಿಜವಾದ ಪ್ರಜಾಪ್ರಭುತ್ವ" ಎಂಬ ಅಂಬೇಡ್ಕರರ ವ್ಯಾಖ್ಯೆ ಸಾಕಾರಗೊಳ್ಳಬೇಕಿದೆ. ಚಾಲ್ತಿಗೆ ಬರಬೇಕಿದೆ. ಆಗ ಮಾತ್ರ ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುವುದು ಸಾಧ್ಯ. ಇಲ್ಲದಿದ್ದರೆ ಯುದ್ಧದಲ್ಲಿ ಸೈನಿಕರು ಸತ್ತರೆ ಸತ್ತವನು ಯಾವ ಜಾತಿ? ಸಾಯಲಿ ಬಿಡಿ, ಅವನ ಜಾತಿಯವರು ನಮಗೆ ತೊಂದರೆ ಕೊಟ್ಟಿದ್ದಾರೆ, ಅವರ ಧರ್ಮದವರು ನಮ್ಮನ್ನು ಹೀನಾಯವಾಗಿ ನಡೆಸಿಕೊಂಡಿದ್ದಾರೆ ಎಂದು ಸುಮ್ಮನಾಗುತ್ತೇವೆ. ಸಹಯೋಗದಿಂದ ಬದುಕದ ನಮ್ಮ ಸಾಮಾಜಿಕ ದೌರ್ಬಲ್ಯದಿಂದಾಗಿ ನಮಗೆ ನಾವೇ ಬಲಿಯಾಗುತ್ತೇವೆ. ತನ್ಮೂಲಕ ಈ ದೇಶದ ಇಂಚಿಂಚನ್ನೂ ಶತ್ರುಗಳಿಗೆ ಕಳೆದುಕೊಳ್ಳುತ್ತಾ ಬರುತ್ತೇವಷ್ಟೆ!

ಖಂಡಿತ, ಹಾಗಾಗಬಾರದು. ಅಂಬೇಡ್ಕರರ ಪ್ರಜಾಪ್ರಭುತ್ವದ ವ್ಯಾಖ್ಯೆಯ ಪ್ರಕಾರ ಈ ದೇಶದ ವಿವಿಧ ಸಮುದಾಯಗಳವರು, ಜಾತಿಗಳವರು, ಧರ್ಮಗಳವರು ಪರಸ್ಪರ ಸಹಯೋಗದಿಂದ ಸೌಹಾರ್ದದಿಂದ ಬದುಕುವಂತಾಗಬೇಕು. ಮನುಪ್ರಣೀತ ಸಂವಿಧಾನದಿಂದ ಹೊರಬಂದು ಸ್ವತಃ ಅಂಬೇಡ್ಕರ್‌ರವರೇ ರಚಿಸಿರುವ ಸಂವಿಧಾನದ ತತ್ವಗಳನ್ನು ಅನುಸರಿಸಿ ಪರಸ್ಪರ ಹಕ್ಕುಗಳನ್ನು ಗೌರವಿಸುವುದನ್ನು ಕಲಿಯಬೇಕು. ಮೇಲುಕೀಳು ವ್ಯವಸ್ಥೆಯನ್ನು ಧಿಕ್ಕರಿಸಿ ಸಮಾನತೆಯ ಹಾದಿಯಲಿ ಮುನ್ನುಗ್ಗಬೇಕು. ತನ್ಮೂಲಕ ಭಾರತದಲ್ಲಿ ಅಂಬೇಡ್ಕರ್ ಮಾದರಿ ಪ್ರಜಾಪ್ರಭುತ್ವ ಸ್ಥಾಪಿತವಾಗಬೇಕು. ಹಾಗೆ ಆಗುತ್ತದೆಯೇ ಕಾದು ನೋಡಬೇಕಷ್ಟೆ □

ಚಮ್ಮಾವುಗೆ ಬೆಲೆ: ರೂ. ೭೫/-
ಲೇ: ಡಾ. ಎಚ್.ಟಿ ಪೋತೆ

ದಲಿತರ ಬದುಕಿನ ಬದಲಾವಣೆಗಾಗಿ ಹಂಬಲಿಸುವ ಇಲ್ಲಿನ ಕತೆಗಳು ವೈಚಾರಿಕತೆಯಿಂದ ಕೂಡಿದ್ದು ಜೀವನ್ಮುಖಿ ಸೆಲೆಯಾಗಿವೆ. ಕತಾವಸ್ತು, ಪಾತ್ರ ಚಿತ್ರಣ, ನಿರೂಪಣಾ ಶೈಲಿ, ಉದ್ದೇಶ ಇವೆಲ್ಲವೂ ವಿಶಿಷ್ಟವಾಗಿ ಮೂಡಿಬಂದಿವೆ. ಕಾಲಘಟ್ಟವೊಂದರ ನಿರ್ದಿಷ್ಟ ಪ್ರದೇಶದ ಅಸ್ಪೃಶ್ಯರ ನಿಷ್ಠೂರ ಬದುಕಿನ ಚಿತ್ರಣ ಸಮರ್ಥವಾಗಿ ದಾಖಲಾಗಿದೆ. ಜಾತಿ ತಾರತಮ್ಯ, ದಬ್ಬಾಳಿಕೆ, ದೌರ್ಜನ್ಯ, ಆವೇಶ ತರುವ ಕೌರ್ಯವನ್ನು ಬಿಂಬಿಸಿ ದಲಿತರ ಸಂಘರ್ಷನಾತ್ಮಕ ಬದುಕಿನ ಅನುಭವ ಮತ್ತು ಸಮೃದ್ಧಿಯನ್ನು ಕಟ್ಟಿ ಕೊಡುತ್ತಲೇ ಪ್ರತಿಭಟಿಸುವ ಸಾಧ್ಯತೆಗಳನ್ನು ಹುಟ್ಟಿಸುತ್ತವೆ!

ಪ್ರ: ಶ್ರೀ ಸಿದ್ಧಲಿಂಗೇಶ್ವರ ಬುಕ್‌ಡಿಪೋ ಮತ್ತು ಪ್ರಕಾಶನ, ಗುಲಬರ್ಗಾ



ಸಂವಿಧಾನ-60 ಬೆಲೆ:ರೂ. ೧೫೦/-
ಸಂ: ಡಾ. ಎಸ್ ಜಾಫೆಟ್
ಕೆ.ಎಲ್. ಚಂದ್ರಶೇಖರ್ ಐಜೂರು

ಸಂವಿಧಾನ ಜಾರಿಗೆ ಬಂದು ಕಳೆದ ೬೦ ವರ್ಷಗಳ ಅವಧಿಯಲ್ಲಿ ಅದರ ಅನುಷ್ಠಾನ ಮತ್ತು ವಾಸ್ತವವನ್ನು ಕರ್ನಾಟಕದ ಬಹುಮುಖಿ ಬೆಳವಣಿಗೆಗಳ ಅವಲೋಕನದ ಭಾಗವಾಗಿ ಚರ್ಚೆಯಾಗುವಂತೆ ಮಂಡಿಸಲ್ಪಟ್ಟಿರುವ ಇಲ್ಲಿನ ಬಹುಪಾಲು ಲೇಖನಗಳು ಸಂವಿಧಾನದ ಆಶಯ ಮತ್ತು ಸಾಕಾರದ ಕುರಿತು ವರ್ತಮಾನದ ವಿಭಿನ್ನ ನೆಲೆಗಳ ಒಳಗಣ್ಣಿನಿಂದಲೇ ಗ್ರಹಿಸಿ ತಳಸಮುದಾಯಗಳ ಸಾಮಾಜಿಕ ಬದುಕಿನ ಉಳಿವಿನ ಪ್ರಶ್ನೆಗಳನ್ನು ಮಾನವೀಯ ನೆಲೆಗಟ್ಟಿನ ತುರ್ತಿನ ಭಾಗವಾಗಿ ವಿಶ್ಲೇಷಣೆಗೆ ತೊಡಗುತ್ತವೆ.

ಪ್ರ: ರಾಷ್ಟ್ರೀಯ ಕಾನೂನು ಶಾಲೆ ನಾಗರಬಾವಿ, ಬೆಂಗಳೂರು

ಹೊಸ ಪುಸ್ತಕ

ಜಾತಿ ವ್ಯವಸ್ಥೆ ಬೆಲೆ: ರೂ. ೧೦೦/-
ಲೇ: ಡಾ. ಬಿ. ಆರ್ ಅಂಬೇಡ್ಕರ್
ಅನು: ರಾಹು

ತಮಗೆ ಎದುರಾದ ಅನೇಕ ತಕರಾರುಗಳು ಹಾಗೂ ಅಂದಿನ ಸಾಮಾಜಿಕ ಪಿಡುಗುಗಳ ಬಗ್ಗೆ ಬಾಬಾಸಾಹೇಬರು ತಮ್ಮ ಆಳವಾದ ಪಾಂಡಿತ್ಯದಿಂದ ದಾಖಲಿಸಿದ ಕ್ರಾಂತಿಕಾರಕ ಚಿಂತನೆಗಳ ಈ ಕೃತಿ ಮಹತ್ವದ್ದೆನಿಸಿದೆ. ತಮ್ಮ ತಲಸ್ಪರ್ಶಿ ಅಧ್ಯಯನದ ಅರಿವಿನಿಂದ ಅವರ ಜಾತಿ ವಿನಾಶದ ಸಿದ್ಧಾಂತ ದಲಿತರು ಹಾಗೂ ಮಹಿಳೆಯರಿಂದ ಹಿಡಿದು ಎಲ್ಲಾ ಸಮುದಾಯಗಳ ಜನರಿಗೂ ಬಿಡುಗಡೆಯ ಮಾರ್ಗ ತೋರುವ ಚಿಂತನೆಯಿದೆ. ಸತಃ ತಾವೇ ಅಸ್ಪೃಶ್ಯತೆಯ ನೋವುಂಡು ಬೆಳೆದಿದ್ದರೂ ಸಹ ಸಮಚಿತ್ತವನ್ನು, ಸಂಯಮವನ್ನು ಕಳೆದುಕೊಳ್ಳದೆ ಜಾತಿಗಳ ಉಗಮ ಮತ್ತು ಅವುಗಳು ತಂದೊಡ್ಡುವ ಅಪಾಯಗಳ ಬಗ್ಗೆ ತಾರ್ಕಿಕವಾಗಿ ದಾಖಲಿಸಿದ್ದಾರೆ.



ಅಂಬೇಡ್ಕರ್
ಲೇ: ಗೇಲ್ ಆಮ್‌ವೆಡ್ಟ್
ಅನು: ರಾಹು
ಬೆಲೆ: ರೂ. ೧೫೦/-

ಜಗತಿಕ ಮಟ್ಟದಲ್ಲಿ ಪ್ರಸಂಶೆಗೊಳಗಾದ ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿತಗೊಂಡ ಈ ಮಹತ್ವದ ಕೃತಿ ಅಂಬೇಡ್ಕರ್ ನಡೆಸಿದ ಸಾಮಾಜಿಕ ರಾಜಕೀಯ ಸಂಘರ್ಷಗಳ ಚಿತ್ರಣವನ್ನು ಸಮರ್ಥವಾಗಿ ಕಟ್ಟಿಕೊಟ್ಟಿದೆ. ಆಳವಾದ ಅಧ್ಯಯನದ ಹಲವು ಅಪೂರ್ವ ಒಳನೋಟಗಳು ದಾಖಲಾಗಿದ್ದು ವರ್ಣ ಮತ್ತು ವರ್ಗ ಹೋರಾಟದ ಸುಸಂಬದ್ಧವಾದ ಸಂಯೋಜನೆಯ ಮೂಲಕವೇ ಈ ದೇಶದ ಸಮಗ್ರ ಶೋಷಿತ, ದಲಿತ ಜನತೆಯ ವಿಮೋಚನೆಯ ಮಾರ್ಗ ಕಂಡುಕೊಳ್ಳಬೇಕಾದ ಜವಾಬ್ದಾರಿಯ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿದ್ದು ಕನ್ನಡ ಸಾಹಿತ್ಯಕ್ಕೆ ಪ್ರಬುದ್ಧ ಕೃತಿಯೊಂದರ ಸೇರ್ಪಡೆಯಾದಂತಾಗಿದೆ.

ಈ ಎರಡೂ ಕೃತಿಗಳ ಪ್ರಕಾಶಕರು: ಸುಮೇಧ ಪ್ರಕಾಶನ, ಗುಲಬರ್ಗಾ



ಅಡ್ಡಪಲ್ಲಕ್ಕಿ ಉತ್ಸವ ಮತ್ತು ದಸರಾ ದರ್ಬಾರು
ಲೇ: ಪ್ರೊ॥ ಸಿ. ಹೆಚ್ ಮರಿದೇವರು
ಬೆಲೆ: ರೂ. ೨೦೦/-

ಎಲ್ಲಾ ಸಾಮಾಜಿಕ ಸುಧಾರಣೆಗಳಿಗೆ ಜಾತಿಗಳು ಹೇಗೆ ಅಡ್ಡ ಬರುತ್ತವೆ ಎಂದು ವಿವರಿಸುವ ಈ ಕೃತಿಯಲ್ಲಿ ಪ್ರಜಾಪ್ರಭುತ್ವ ವಿರೋಧಿಯಾದ ಅಡ್ಡಪಲ್ಲಕ್ಕಿ ಉತ್ಸವದ ಸವಾರಿ ಮಾಡಿಕೊಂಡು ಬರುತ್ತಿರುವ ಪಂಚಪೀಠಾದೀಶ್ವರರ ದಬ್ಬಾಳಿಕೆ ಪ್ರವೃತ್ತಿಯನ್ನು ತೀವ್ರವಾಗಿ ಖಂಡಿಸುವ ಜೊತೆಗೆ ಅದನ್ನು ಸೈರಿಸಿಕೊಂಡು ಬರುತ್ತಿರುವ ಬಸವ ಪ್ರಣೀತ ಮಠಾಧೀಶರು ಈ ಬಗ್ಗೆ ದನಿ ಎತ್ತಬೇಕೆಂದು ಎಚ್ಚರಿಸುತ್ತದೆ. ವಿಚಾರ ಪ್ರಚೋದಕ, ವಿದ್ವಾಂಸರ ಅಭಿಪ್ರಾಯಗಳು, ವಿವಾದಿತ ಕೃತಿಗಳ ಚರ್ಚೆ ಹಾಗೂ ಕವಿತೆಗಳ ವಿಚಾರ ಪ್ರಚೋದಕ ಕೃತಿ ಇದಾಗಿದೆ.

ಪ್ರ: ಉದಯ ಭಾನು ಪ್ರಕಾಶನ ತುಮಕೂರು



ಸರ್ವೋದಯ ಬೆಲೆ: ರೂ. ೨೮/-
ಲೇ: ಹೆಚ್. ಎಸ್. ದೊರೆಸ್ವಾಮಿ

ಮಾನವೀಯ ಮೌಲ್ಯಗಳಿಂದ ಕೂಡಿದ ಹೊಸ ಸಮಾಜವನ್ನು ನಿರ್ಮಿಸಬೇಕೆಂಬ ಆಶಯವನ್ನು ಈ ಕೃತಿ ಹೊಂದಿದೆ. ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಮೌಲ್ಯಗಳೆಲ್ಲ ತಮ್ಮ ಘನತೆಯನ್ನು ಕಳೆದುಕೊಂಡಿದ್ದು ಜೀವನಾದರ್ಶಗಳ ಅಧಃಪತನವೇ ಈ ಅಧೋಗತಿಗೆ ಕಾರಣ, ಅಮೂಲಾಗ್ರ ಬದಲಾವಣೆಗೆ ಎಲ್ಲರೂ ಪಣ ತೊಡಬೇಕು ಹಾಗೂ ಕೋಮು ಸೌಹಾರ್ದವನ್ನು ಕಾಪಾಡಿಕೊಂಡು ದೇಶದ ಸ್ವಪರಿಪೂರ್ಣತೆಯತ್ತ ಕೊಂಡೊಯಲು ಸರ್ವೋದಯ ಮಂತ್ರದಿಂದ ಮಾತ್ರ ಸಾಧ್ಯ ಎಂಬ ನಿಲುವನ್ನು ಹೊಂದಿದೆ.

ಪ್ರ: ಸ್ವಪ್ನ ಬುಕ್ ಹೌಸ್ ಬೆಂಗಳೂರು

ಕೊಳಗೇರಿಯಲೊಂದು ಕಮಲ

ಕೊಳಗೇರಿಯಲೊಂದು
ಶ್ವೇತ ಕಮಲ
ಅರಳಿದ್ದೇ...
ತಪ್ಪಾ?

ಉತ್ತಮಕೇರಿಯ
ಚಿತ್ತದಲೀಗಾ
ಬೆಳೆಯುತ್ತಿದೆ
ಸಂಶಯದ ಹುತ್ತಾ!



ಯಾವ
ಹಡಬೆಗೆ ಹುಟ್ಟಿದ್ದೂ...
ಇಷ್ಟು ಚಂದದ ಹೆಣ್ಣು?
ಜಿಂಕೆಯ ಕಣ್ಣು
ಅವಳ ಹೆಜ್ಜೆ ಸೋಕಿದಲ್ಲೆಲ್ಲ
ಪಾವನ ಮಣ್ಣು.



ವಿಶ್ವಸುಂದರಿ ಹೆಲನ್‌ನನೇ ಹೋಲುವಳು
ಕಾದಂಬರಿಯ ಮಹಾಶ್ವೇತಾ ಸೋಲುವಳು
ಇಬ್ಬರೊಬ್ಬಳಾಗಿಹೆ;
ಸರಿಸಾಟಿ ಯರು?

ನಿನ್ನ ಕಣ್ಣ ಹಬೆ
ಕುಚ ಕಟಿಯ ಜವ್ವನ
ಚಿರ ನಿದ್ದೆಗೆಡಿಸದೆ ಕವಿ ಬಾಣನ
ಕುರುಡ್ತು ಹೋಮರನ
ಅವಳ ಕಂಡು
ಬೇಲಿ ಜಿಗಿಯುತ್ತಿವೆ
ದೊಡ್ಡಟ್ಟಿಯ ಪುಂಡ ಹೋರಿಗಳು
ಅವುಗಳ ತರುಡು ಹೊಡೆಯುವವರು ಯಾರು?
ಹೋರುಗೋಲುಗಳಿಗೆ
ಗೆದ್ದಲಿಡಿದಿದೆ.

○ ಹಳ್ಳಿ ವೆಂಕಟೇಶ್

ಬಾಲ್ಯ ವಿವಾಹ, ಅಂತರ್ಜಾತಿ ವಿವಾಹ,
ಒಪ್ಪಿಗೆ ವಯಸ್ಸಿನ ಗೊಂದಲ

ಡಾ. ಎಚ್. ಎಸ್. ಅನುಪಮಾ

ಬಾಲ್ಯವಿವಾಹ, ಒಳವಿವಾಹ ಹಾಗೂ ವಿಧವಾ ಪದ್ಧತಿ – ಇವು ಮೂರೂ ಭಾರತೀಯ ವಿವಾಹ ವ್ಯವಸ್ಥೆಯ ಮುಖ್ಯ ಆಚರಣೆಗಳು. ಅವು ಮಹಿಳೆಗೆ ಆಯ್ಕೆಯ ಮುಕ್ತ ಅವಕಾಶ ನೀಡದೇ, ಹೆಣ್ಣೆಂದರೆ 'ಒಪ್ಪಿಗೆ'ಯೆಂದು ತಲೆ ಅಲ್ಲಾಡಿಸಬೇಕಾದವಳು ಎಂದೇ ಭಾವಿಸಿವೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ರಾಜಾರಾಂ ಮೋಹನ್‌ರಾಯ್‌ರಂತಹ ಇಂಗ್ಲಿಷ್ ವಿದ್ಯಾಭ್ಯಾಸ ಪಡೆದ ಸಮಾಜಸುಧಾರಕರನೇಕರು ಬದಲಾವಣೆಗೆ ಶ್ರಮಿಸಿ ಸತಿಪದ್ಧತಿ ನಿಂತು ಹೋಗಿ, ವಿಧವಾ ಪದ್ಧತಿಯಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ. ಆದರೆ ಜಾಗತೀಕರಣದ ಕಾಲದಲ್ಲಿಯೂ ಬಾಲ್ಯವಿವಾಹ ಮತ್ತು ಒಳವಿವಾಹ ಪದ್ಧತಿಗಳು ಮುಂದುವರೆದಿವೆ. ಗ್ರಾಮೀಣ ಪ್ರದೇಶಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಬಾಲ್ಯ ವಿವಾಹ ತಡೆಗೆ ಸರ್ಕಾರ ಕಾನೂನು ಮಾಡಿದೆ, ಸರ್ಕಾರೇತರ ಸಂಘಸಂಸ್ಥೆಗಳು ಕೈಜೋಡಿಸಿವೆ. ಶಿಕ್ಷಣವು ಹಕ್ಕಾಗಿರುವ; ಮಹಿಳಾ ಸಬಲೀಕರಣ, ಮಹಿಳಾ ದಿನಾಚರಣೆ ಶತಮಾನೋತ್ಸವ ವರ್ಷ, ಮಹಿಳಾ ಚಳವಳಿ ಎಂದೆಲ್ಲ ಮಾತನಾಡುತ್ತಿರುವ; ಹೆಣ್ಣುಮಕ್ಕಳಿಗೆ ಭಾಗ್ಯಜ್ಯೋತಿ, ಮಡಿಲು, ಬಾಲಿಕಾ ಸಮೃದ್ಧಿ ಯೋಜನೆ, ತಾಯಿಭಾಗ್ಯದಂತಹ ಯೋಜನೆಗಳು ಜಾರಿಯಾಗಿರುವ ಈ ಹೊತ್ತಲ್ಲಿ ಐವರಲ್ಲಿ ಇಬ್ಬರು ಹುಡುಗಿಯರು 18 ವರ್ಷದೊಳಗೇ ಮದುವೆಯಾಗಿರುತ್ತಾರೆಂಬ ಅಂಶ ದಿಗಿಲುಗೊಳಿಸುತ್ತದೆ.

ಹಾಗಾದರೆ ಈ ಎಲ್ಲ ಕಾರ್ಯಕ್ರಮಗಳೂ ಯಾರನ್ನು ತಲುಪುತ್ತಿವೆ? ಬಾಲ್ಯವಿವಾಹ ನಿಷೇಧ ಕಾಯ್ದೆ – 2006 ಹುಡುಗಿಯು 18 ವರ್ಷಕ್ಕಿಂತ ಕಡಿಮೆಯಿದ್ದಲ್ಲಿ ಹಾಗೂ ಹುಡುಗ 21 ವರ್ಷಕ್ಕಿಂತ ಕಡಿಮೆ ಇದ್ದಲ್ಲಿ ಅವರನ್ನು ಅಪ್ರಾಪ್ತ ವಯಸ್ಕರೆಂದು ಪರಿಗಣಿಸುತ್ತದೆ. ಆದರೆ 'ಸಿಲಿಕಾನ್ ವ್ಯಾಲಿ' ಬೆಂಗಳೂರು ಎಂಬ ಗಾಜಿನ ನಗರವನ್ನು ತನ್ನ ಹೃದಯದಲ್ಲಿ ಹೊತ್ತ ಮುಂದುವರಿದ ರಾಜ್ಯ ಕರ್ನಾಟಕದಲ್ಲಿ ಹೆಚ್ಚುಕಡಿಮೆ 40% ಮದುವೆಗಳಲ್ಲಿ ಹುಡುಗಿ ಅಪ್ರಾಪ್ತ ವಯಸ್ಕಳಾಗಿರುತ್ತಾಳೆ. ಮದುವೆಗಳು ಕಡ್ಡಾಯ ನೋಂದಾವಣೆಯಾಗದೇ ಇರುವುದರಿಂದ ಹಾಗೂ ವಯಸ್ಸಿನ ಕುರಿತ ಪ್ರಮಾಣ ಪತ್ರ ಇಲ್ಲದಿರುವುದರಿಂದ ನಿಜವಾದ ಅಂಕಿಅಂಶ ದೊರೆಯುತ್ತಿಲ್ಲ.

ಅಂತರರಾಷ್ಟ್ರೀಯ ಮಹಿಳಾ ಸಂಶೋಧನಾ ಸಂಸ್ಥೆಯ ಪ್ರಕಾರ 18 ವರ್ಷದೊಳಗೆ ಹೆಣ್ಣುಮಕ್ಕಳು ಮದುವೆಯಾಗುವ ವಿಶ್ವದ ಮೊದಲ 20 ರಾಷ್ಟ್ರಗಳ ಪೈಕಿ ಭಾರತ 11ನೇ ಸ್ಥಾನದಲ್ಲಿದೆ. ರಾಜಸ್ಥಾನದಲ್ಲಿ ಮೊದಲ ಸಲ ತಾಯಿಯಾಗುವ ಮಹಿಳೆಯ ಸರಾಸರಿ ವಯಸ್ಸು 16.3 ವರ್ಷ! ದಕ್ಷಿಣ ಭಾರತದಲ್ಲಿ ಉತ್ತರ ಭಾರತಕ್ಕಿಂತ ಬಾಲ್ಯ ವಿವಾಹ ಕಡಿಮೆಯಿದ್ದರೂ, 2009ರ ಕರ್ನಾಟಕ ಮಕ್ಕಳ ಹಕ್ಕು ಸಮೀಕ್ಷಾ ವರದಿಯ ಪ್ರಕಾರ ಉತ್ತರ ಕರ್ನಾಟಕದಲ್ಲಿ ಬಾಲ್ಯ ವಿವಾಹ ಹೆಚ್ಚಾಗಿ ಕಂಡುಬರುತ್ತದೆ. ಅತಿ ಹೆಚ್ಚು 60% ರಾಯಚೂರಿನಲ್ಲಾದರೆ, ಕೊಪ್ಪಳ 51.4%, ಬಿಜಾಪುರ 50.1%, ಗುಲ್ಬರ್ಗ 48.9%, ಬಾಗಲಕೋಟೆ 48.3%, ಬೆಳಗಾವಿ 43%, ಬೀದರ್ ಮತ್ತು ಗದಗ 44%, ಬಳ್ಳಾರಿ 35% ಇವು ಬಾಲ್ಯವಿವಾಹ ಹೆಚ್ಚು ಸಂಭವಿಸುವ ಜಿಲ್ಲೆಗಳಾಗಿವೆ. ಅದೇ ದಕ್ಷಿಣ ಕರ್ನಾಟಕದಲ್ಲಿ ಬೆಂಗಳೂರು ಗ್ರಾಮಾಂತರ 29%, ಕೋಲಾರ 24.3%, ಬೆಂಗಳೂರು ನಗರ 12.4%, ಶಿವಮೊಗ್ಗ 9%, ಉತ್ತರಕನ್ನಡ 7.8%, ಚಿಕ್ಕಮಗಳೂರು 6.8%, ದಕ್ಷಿಣಕನ್ನಡ 5.5%, ಕೊಡಗು 2.2% ಇದ್ದು, ಎಲ್ಲಕ್ಕಿಂತ ಅತಿ ಕಡಿಮೆ ಉಡುಪಿ ಜಿಲ್ಲೆಯಲ್ಲಿ 1.1% ವಿವಾಹ ಬಾಲ್ಯವಿವಾಹವಾಗಿವೆ.

ಬಾಲ್ಯವಿವಾಹವು ವರಮಾನ ಮತ್ತು ಶಿಕ್ಷಣ ಮಟ್ಟ ಕಡಿಮೆಯಿದ್ದಷ್ಟು ಹೆಚ್ಚುತ್ತ ಹೋಗಿರುವುದು ಕಂಡುಬರುತ್ತದೆ. ಕನ್ಯಾಪಿತೃಗಳು ಒಳ್ಳೆಯ ವರ ಸಿಕ್ಕರೆ ಇಬ್ಬರಿಗೂ ಎಷ್ಟೇ ವಯಸ್ಸಾದರೂ ಮದುವೆಗೆ ಸಿದ್ಧರಾಗುತ್ತಾರೆ. ಹುಡುಗಿ ಎಳೆಯವಳಾದಷ್ಟು ಜೊತೆಗೆ ಕೊಡಬೇಕಾದ ದಕ್ಷಿಣೆ 'ಕಮ್ಮಿ'ಯಿರುತ್ತದೆ. ವಯಸ್ಸಿಗೆ ಬಂದ ಮಗಳನ್ನು ಮನೆಯಲ್ಲಿಟ್ಟುಕೊಳ್ಳುವುದೆಂದರೆ 'ಸೆರಗಲ್ಲಿ ಕೆಂಡ ಕಟ್ಟಿಕೊಂಡಂತೆ' ಎಂಬ ಭಾವನೆ ಬಲವಾಗಿದೆ. ಮನೆತನದ ಮರ್ಯಾದೆ ಹುಡುಗಿಯರ ಕೈಲಿದೆ ಎಂದು ಭಾವಿಸುವ ಕುಟುಂಬಗಳು ಪೋರಿಯು ಹೊರಜಗತ್ತಿಗೆ ಕಣ್ಣುಬಿಟ್ಟು ಸ್ವಪ್ರಜ್ಞೆ ಬೆಳೆಸಿಕೊಳ್ಳುವುದರಲ್ಲಿ ಮದುವೆ ಮಾಡುತ್ತಾರೆ. ಅದರಲ್ಲೆಷ್ಟೋ ಹುಸಿ ಮದುವೆಗಳಾಗಿ, ಎಳೆ ಹುಡುಗಿಯರನ್ನು ವೇಶ್ಯಾವಾಟಿಕೆಗೆ ಸಾಗಿಸುವುದು, ಎಳೆತನದಲ್ಲೇ ಹೆರುವ ಹೆಣ್ಣು ಮತ್ತು ಅವಳ ಮಗು ಮೆಡಿಕಲ್ ಕಾಂಪ್ಲಿಕೇಷನ್ನುಗಳಿಗೆ ತುತ್ತಾಗುವುದು ಕಂಡುಬರುತ್ತದೆ. ಜಾತ್ರೆ, ಉತ್ಸವಗಳಲ್ಲಿ ನಡೆಯುವ ಸಾಮೂಹಿಕ ವಿವಾಹಗಳಲ್ಲಿ 10%ಕ್ಕಿಂತ ಹೆಚ್ಚು ಬಾಲ್ಯವಿವಾಹವೇ ಆಗಿದ್ದು, ಊರ ಹಿರಿಯರ ಸಮ್ಮತಿ, ಆಶೀರ್ವಾದ ಪಡೆದೇ ನಡೆಯುವುದರಿಂದ ಮತ್ತು ಬಾಲ್ಯ ವಿವಾಹ ತಪ್ಪೆಂಬ ಭಾವವೇ ಇಲ್ಲದಿರುವುದರಿಂದ ಸಮಸ್ಯೆ ಇನ್ನಷ್ಟು ಉಲ್ಬಣಗೊಂಡಿದೆ.

ಹೆತ್ತವರೇ ದೊಡ್ಡವಳ ಜೊತೆ ಸಣ್ಣವಳದ್ದೂ ಎಂದು ಜೋಡಿ ಮದುವೆಯಲ್ಲಿ ಖರ್ಚು ಕಡಿಮೆ ಮಾಡಿಕೊಳ್ಳಲು ಯತ್ನಿಸುವಾಗ ಯಾರನ್ನು ದೂರಬಹುದು? ಮಹಿಳಾ ಸ್ವಸಹಾಯ ಗುಂಪುಗಳ ಮೀಟಿಂಗುಗಳಲ್ಲಿ ಈ ವಿಷಯ ಎತ್ತಿದರೆ, 'ಅದೊಂದು ವಿಷಯ ಬಿಟ್ಟು ಬೇರೆ ಏನಾದ್ರೂ ಹೇಳಿ' ಎಂಬ ಬೇಡಿಕೆ ಬರುವುದಂತೆ! ಮದುವೆ ಎನ್ನುವುದು ಸಂಪೂರ್ಣ ಕುಟುಂಬದ ವಿಷಯ. ಅದರಲ್ಲಿ ಬೇರೆಯ

ಬಾಲ್ಯವಿವಾಹವು ವರಮಾನ ಮತ್ತು ಶಿಕ್ಷಣ ಮಟ್ಟ ಕಡಿಮೆಯಿದ್ದಷ್ಟು ಹೆಚ್ಚುತ್ತ ಹೋಗಿರುವುದು ಕಂಡುಬರುತ್ತದೆ. ಕನ್ಯಾಪಿತೃಗಳು ಒಳ್ಳೆಯ ವರ ಸಿಕ್ಕರೆ ಇಬ್ಬರಿಗೂ ಎಷ್ಟೇ ವಯಸ್ಸಾದರೂ ಮದುವೆಗೆ ಸಿದ್ಧರಾಗುತ್ತಾರೆ. ಹುಡುಗಿ ಎಳೆಯವಳಾದಷ್ಟು ಜೊತೆಗೆ ಕೊಡಬೇಕಾದ ದಕ್ಷಿಣೆ 'ಕಮ್ಮಿ'ಯಿರುತ್ತದೆ. ವಯಸ್ಸಿಗೆ ಬಂದ ಮಗಳನ್ನು ಮನೆಯಲ್ಲಿಟ್ಟುಕೊಳ್ಳುವುದೆಂದರೆ 'ಸೆರಗಲ್ಲಿ ಕೆಂಡ ಕಟ್ಟಿಕೊಂಡಂತೆ' ಎಂಬ ಭಾವನೆ ಬಲವಾಗಿದೆ. ಮನೆತನದ ಮರ್ಯಾದೆ ಹುಡುಗಿಯರ ಕೈಲಿದೆ ಎಂದು ಭಾವಿಸುವ ಕುಟುಂಬಗಳು ಪೋರಿಯು ಹೊರಜಗತ್ತಿಗೆ ಕಣ್ಣುಬಿಟ್ಟು ಸ್ವಪ್ರಜ್ಞೆ ಬೆಳೆಸಿಕೊಳ್ಳುವುದರಲ್ಲಿ ಮದುವೆ ಮಾಡುತ್ತಾರೆ.

ವರಾರೂ ತಲೆ ಹಾಕುವಂತಿಲ್ಲ, ಅದು ಸಾರ್ವಜನಿಕ ಚರ್ಚೆಯೂ ಅಲ್ಲ ಎಂಬ ಧೋರಣೆ ಇದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜದಲ್ಲಿ ಮದುವೆಯ ಕುರಿತು ಸುಧಾರಣೆಯಾಗಲು ಇನ್ನೂ ಬಹಳಷ್ಟಿದೆ. ಬಾಲ್ಯ ವಿವಾಹ ಸಿಂಧು, ಅಂತರ್ಜಾತಿ ವಿವಾಹ ಅಪರಾಧ. ಆದರೆ ವರದಕ್ಷಿಣೆ ಮಾತ್ರ ಸರ್ವ ಮಾನ್ಯ!

ಇದರ ಇತಿಹಾಸವೂ ಕುತೂಹಲಕಾರಿಯಾಗಿದೆ.

ಮಹಿಳೆಯರ ಸಮಸ್ಯೆಗಳ ಮೂಲ ಪುರುಷ ಪ್ರಧಾನ ಸಮಾಜದ ಹೃದಯದಲ್ಲಿದೆ. ಮೇಲ್ಜಾತಿ ಆಚರಣೆಗಳು ಕಟ್ಟುನಿಟ್ಟಾದ ನಿರ್ಬಂಧ ಹೊಂದಿದ್ದು ಬಾಲ್ಯವಿವಾಹ ಎನ್ನುವುದು ತಳಿ ಶುದ್ಧತೆ ಕುರಿತ ಅತಿರೇಕದ ಕಲ್ಪನೆಯ ಪ್ರತಿಫಲವಾಗಿದೆ. ಜಾತಿ ಶುದ್ಧತೆ ಕಾಯ್ದುಕೊಳ್ಳುವುದು ಹೇಗೆಂದರೆ ಹುಡುಗಿ ಸಂತಾನೋತ್ಪತ್ತಿ ಸಾಮರ್ಥ್ಯ ಗಳಿಸಿದ ಕೂಡಲೇ ಅವಳನ್ನು ಅವಳದೇ ಜಾತಿಯ ವರನಿಗೆ ಮಾತ್ರ ಲಭ್ಯವಾಗುವಂತೆ ಮೊದಲೇ ಮದುವೆ ಮಾಡಿಬಿಡುವುದು. ಮಹಾರಾಷ್ಟ್ರದ ಪೇಶ್ವೆಗಳು ಬ್ರಾಹ್ಮಣ್ಯದ ಪರಿಶುದ್ಧತೆಯನ್ನು ಎತ್ತಿಹಿಡಿಯಲು ಬಾಲ್ಯ ವಿವಾಹವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದರು. ಆದರೆ ವಸಾಹತುಶಾಹಿ ಆಗಮನದೊಂದಿಗೆ ಭಾರತೀಯ ಚಿಂತನಾಕ್ರಮವೂ ಸ್ವಲ್ಪ ಬದಲಾವಣೆ ಕಂಡಿತು. ಜಾತಿಶುದ್ಧತೆಯನ್ನು ನಿರಾಕರಿಸುವ ಅಂತರ್ಜಾತಿ ಮದುವೆಗಳೂ, ಜಾತಿಯ ಚೌಕಟ್ಟಿನಲ್ಲಿ ಒಪ್ಪಿಗೆ ಪಡೆಯದ ವಿಧವಾ ವಿವಾಹವೂ ಹೆಚ್ಚುಕಡಿಮೆ ಈ ಸಮಯದಲ್ಲೇ ಮುನ್ನೆಲೆಗೆ ಬಂದವು. 1829ರಲ್ಲಿ ಸತಿ ನಿರ್ಮೂಲನಾ ಕಾಯಿದೆ, 1856ರಲ್ಲಿ ವಿಧವಾ ಪುನರ್ವಿವಾಹ ಕಾಯಿದೆ ಜಾರಿಯಾಗಿ, ಈಶ್ವರಚಂದ್ರ ವಿದ್ಯಾಸಾಗರ, ಬೆಹ್ರಾಮ್ ಮಲಬಾರಿಯಂತಹ ಹಲವರ ಪ್ರಯತ್ನದಿಂದ ಬಾಲ್ಯವಿವಾಹ ನಿಷೇಧ ಕಾನೂನು ನಂತರ ಬಂದಿತು. ಅದು 1930ರಲ್ಲಿ ಜಾರಿಯಾಯಿತು.

1872ರಲ್ಲಿ ಬ್ರಿಟಿಷ್ ಆಡಳಿತ 'ಸಿವಿಲ್ ಮದುವೆ ಕಾಯಿದೆ' ಜಾರಿಗೊಳಿಸಿ, ಅದರಲ್ಲಿರುವ ಆಕ್ಟ್ 3 ಭಾರತದಲ್ಲಿ ಮೊದಲ ಬಾರಿ 'ನಾಗರಿಕ ವಿವಾಹ' ಎಂಬ ಪದವನ್ನು ವರ್ಣಿಸಿತು. ಅಂತರ್ಜಾತಿ ವಿವಾಹಗಳು ಕಾನೂನು ರೀತ್ಯಾ ಮಾನ್ಯವಾದ ಮೊದಲ ಕಾಯ್ದೆ ಇದು. ಈ ಕಾನೂನಿನನ್ವಯ ಗಂಡು ಹೆಣ್ಣು ಭಾರತೀಯರಾಗಿದ್ದು, ಇಬ್ಬರೂ ವಯಸ್ಕರಾಗಿದ್ದು, ಪರಸ್ಪರ ಒಪ್ಪಿಗೆ ಇದ್ದಲ್ಲಿ ಅವರ ಜಾತಿ ಬೇರೆಬೇರೆಯಾಗಿದ್ದರೂ, ಅವರ ಪಾಲಕ, ಪೋಷಕ ಮತ್ತು ಜಾತಿ ಸಮುದಾಯ ಒಪ್ಪದೇ ಇದ್ದರೂ ಅವರು ಕಾನೂನು ರೀತ್ಯಾ ಸತಿಪತಿಗಳಾಗಿರಲು ಸಾಧ್ಯವಿತ್ತು. ಈ ಕಾನೂನು ಪ್ರೇಮವಿವಾಹವನ್ನು ಮಾನ್ಯ ಮಾಡಿದ್ದರಿಂದ ತೀವ್ರ ವಿರೋಧ ಬಂತು. ಮದುವೆ ಸಮಯದಲ್ಲಿ ಮಧ್ಯವರ್ತಿ ಆಗಬೇಕಾದ್ದು ಸಮುದಾಯವೇ(ಜಾತಿ) ಹೊರತು ಪ್ರಭುತ್ವವಲ್ಲ, ಮದುವೆಯಲ್ಲಿ ವ್ಯಕ್ತಿಗಿಂತ ಸಮಾಜಕ್ಕೇ ಪ್ರಾಧಾನ್ಯ, ಹಾಗಾಗಿ ಇಂಥ ಮದುವೆಗಳು ಅನೈಸರ್ಗಿಕ ಎಂದೂ ದೂರಲಾಯಿತು.

ಅಂದಿನ ಸಮಾಜಕ್ಕೆ ಜಾತಿ ಬಿಟ್ಟು ಆದ ಮದುವೆಯನ್ನು ಕಾನೂನುಬದ್ಧ ಎಂದು ಊಹಿಸಿಕೊಳ್ಳುವುದು ತುಂಬ ಕಷ್ಟವಿತ್ತು. ಈ ಕಾಯ್ದೆ ವಿರುದ್ಧ ತೀವ್ರ ದಾಳಿಯಾಗಿ, ಇದರ ಅನುಷ್ಠಾನದಿಂದ ಸಮಾಜದ ರಚನೆ, ಏಣಿಶ್ರೇಣಿ ಅಷ್ಟೇ ಅಲ್ಲ ಇಡೀ ವ್ಯವಸ್ಥೆಯೇ ಹಾಳಾಗುವುದೆಂದು ದೂರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಅಂತರ್ಜಾತಿ ಮದುವೆಯಾದವರು ದ್ವೇಷಕ್ಕೊಳಗಾದರು ಹಾಗೂ ಅವರ ಮಕ್ಕಳನ್ನು 'ಬೆರಕಿ ಮಕ್ಕಳು' (ಬಾಸ್ಟರ್ಡ್ಸ್) ಎನ್ನಲಾಯಿತು. ಒಬ್ಬರಂತೂ ಅದರ ವಿರುದ್ಧ ಬರೆಯುತ್ತಾ, 'ಜಗತ್ತಿನ ಯಾವ ಭಾಗದಲ್ಲೂ ಇಲ್ಲದ, ಭಾರತದಲ್ಲಿ ಮಾತ್ರ ಇರುವ ಮಹತ್ವದ ವಿಷಯ ರಕ್ತ ಶುದ್ಧಿಯದು. ಇಲ್ಲಿ ಪ್ರತಿ ಜಾತಿಯೂ ತನ್ನ ರಕ್ತ ಶುದ್ಧಿಯನ್ನು ಕಾಪಾಡಿಕೊಂಡು ಬರುತ್ತಿದೆ' ಎಂದು ಒಳವಿವಾಹ ವ್ಯವಸ್ಥೆಯ ಬಗ್ಗೆ ಹೆಮ್ಮೆ ಪಟ್ಟರು. ಭಾರತೀಯ ನಾರಿಯ ಪಾತಿವ್ರತ್ಯ ದಂತಕಥೆಯಾಗಿದೆ ಎಂದು ಇನ್ನೊಬ್ಬರೆಂದರು. ಭಾರತೀಯ ಮಹಿಳೆಯೆಂದರೆ ನೈತಿಕ ಸಂತತಿಯನ್ನು ಹೆರುವವಳು ಎಂದು ಮಗದೊಬ್ಬರೆಂದರು. ಖುದ್ದು ನ್ಯಾಯಾಧೀಶರೊಬ್ಬರು (ಲಕ್ಷ್ಮೀನಾರಾಯಣ) 'ಪಾಲಕರು ತಮ್ಮ ಮಗಳನ್ನು ಕೊಂದಾರೇ ವಿನಹ ಬೇರೆ ಜಾತಿಯವನಿಗೆ ಕೊಟ್ಟು ಮದುವೆ ಮಾಡಲಾರರು' ಎಂದು ಸರ್ಕಾರಕ್ಕೆ ಪತ್ರ ಬರೆದರು.

ಈ ಎಲ್ಲ ಪ್ರತಿರೋಧದಿಂದ ಒಂದು ಬದಲಾವಣೆಯಾಯಿತು. ಮೊದಲು ಮದುವೆಗೆ ಮುಂಚೆ 5 ದಿನ ಹಾಗೂ ನಂತರ 5 ದಿನ ಯಾವುದೇ ತಕರಾರು ಬರದೇ ಇದ್ದಲ್ಲಿ ಮದುವೆ ಊರ್ಜಿತ ಎಂದು ಹೇಳಲಾಗಿದ್ದರೆ ನಂತರ ಆ ಅವಧಿಯನ್ನು 15 ದಿವಸಗಳಿಗೇರಿಸಲಾಯಿತು. ಈಗ ಆ ಅವಧಿಯನ್ನು ಒಂದು ತಿಂಗಳು ಮೊದಲು, ಒಂದು ತಿಂಗಳು ನಂತರ ಎಂದು ನಿಗದಿಗೊಳಿಸಲಾಗಿದೆ. ಕೊನೆಗೂ ಕಾಯ್ದೆ ಜಾರಿಯಾಗಿ ಹೆಣ್ಣಿನ ವಯಸ್ಸನ್ನು 18 ರಿಂದ 21ಕ್ಕೇರಿಸಿದಾಗ, ರೆಸಿಡೆನ್ಸ್ ರಿಕ್ವೈರ್‌ಮೆಂಟನ್ನು 15 ದಿನಗಳಿಗೇರಿಸಿದಾಗ ಪ್ರೇಮವಿವಾಹಗಳು ಅಪರಾಧದಂತೆ, ಸಮಾಜಬಾಹಿರವೆಂಬಂತೆ ಬಿಂಬಿಸಲ್ಪಟ್ಟವು. ಇದು ಹೆಚ್ಚು ಕಡಿಮೆ ಇಂದೂ ಹಾಗೇ ಮುಂದುವರೆದುಕೊಂಡು ಬಂದಿವೆ.

ನಾಗರಿಕ ಮದುವೆ ಮತ್ತು ಅತ್ಯಾಚಾರ ಕಾಯ್ದೆ ಮಾಡುವಾಗ ಮತ್ತೊಂದು ವಿಷಯ ಅನಾಯಾಸವಾಗಿ ಗಮನ ಸೆಳೆಯಿತು. ಅದು ಮದುವೆಗಾಗಿನ ಒಪ್ಪಿಗೆ. 1861ರಲ್ಲಿ 'ಒಪ್ಪಿಗೆ ವಯಸ್ಸು ಕಾಯ್ದೆ' (ಏಜ್ ಆಫ್ ಕನ್ಸೆಂಟ್ ಬಿಲ್) ಜಾರಿಯಾಯಿತು. ಅದರ ಪ್ರಕಾರ ಮದುವೆಯಾಗಿದ್ದರೂ ಲೈಂಗಿಕ ಸಂಪರ್ಕಕ್ಕೆ ಒಪ್ಪಿಗೆ ಕೊಡಲು ಹೆಣ್ಣಿಗೆ 10 ವರ್ಷ ಆಗಿರಬೇಕು ಎಂದು ನಿಗದಿಯಾಗಿತ್ತು. ಅದುವರೆಗೂ ಭಾರತ ಸಮಾಜದಲ್ಲಿ ಮದುವೆಗೆ ಹೆಣ್ಣಿನ ಒಪ್ಪಿಗೆ ಪಡೆಯುವ ಪರಿಪಾಠವೇ ಇರಲಿಲ್ಲ. ಒಪ್ಪಿಗೆ ಮತ್ತು ಸ್ವತಂತ್ರ ಅಭಿವ್ಯಕ್ತಿ ಈ ಎರಡಕ್ಕೂ ಒಂದು ಕನಿಷ್ಠ ವಯಸ್ಸಾಗಿರಬೇಕೆಂದು ಯಾರೂ ಭಾವಿಸಿರಲಿಲ್ಲ. ಅಲ್ಲದೇ ಬಾಲ್ಯ ವಿವಾಹವೇ ಸಾಮಾನ್ಯವಾಗಿದ್ದ ಕಾಲದಲ್ಲಿ ಒಪ್ಪಿಗೆ ಎಂದರೆ ಹುಡುಗ-ಹುಡುಗಿಯ ಪಾಲಕ-ಪೋಷಕರ ಒಪ್ಪಿಗೆಯೇ ಆಗಿತ್ತು.

ಒಂದು ವಿವಾದಗ್ರಸ್ತ ಕೇಸು 1880ರಲ್ಲಿ ವಿಚಾರಣೆಗೆ ಬಂತು. ಅದು ಒಪ್ಪಿಗೆ ವಯಸ್ಸಿನ ವಿವಾದವನ್ನು ಮುನ್ನೆಲೆಗೆ ತಂದಿತು. ಮುಂಬಯಿಯ ರುಕ್ಮಾಬಾಯಿ ಎಂಬ 22 ವರ್ಷದ ಮಹಿಳೆ 11 ವರ್ಷದ ಹುಡುಗಿಯಾಗಿದ್ದಾಗ ದಾದಾಜಿಯನ್ನು ಮದುವೆಯಾಗಿದ್ದಳು. ಅವರ ಬಡಗಿ ಸಮುದಾಯವು ಆಗ ಮುಂಬಯಿಯಲ್ಲಿ ಸಾಕಷ್ಟು ಸ್ಥಿತಿವಂತರಾಗಿದ್ದ ಕಾಲ. ರುಕ್ಮಾಬಾಯಿಗೆ ತಂದೆಯಿರಲಿಲ್ಲ. ಅವಳ ತಾಯಿ ಸಮಾಜಸೇವಕರಾಗಿದ್ದ ವೈದ್ಯರೊಬ್ಬರನ್ನು ಎರಡನೇ ಮದುವೆಯಾಗಿದ್ದರಿಂದ ಆಸ್ತಿಗೆ ರುಕ್ಮಾಬಾಯಿ ಏಕೈಕ ಹಕ್ಕುದಾರಳಾಗಿದ್ದಳು. ತನ್ನ ಮಲತಂದೆಯ ಪ್ರೋತ್ಸಾಹದಿಂದ ರುಕ್ಮಾಬಾಯಿ ವಿದ್ಯಾಭ್ಯಾಸ ಮುಂದುವರೆಸಿದಳು. ದಾದಾಜಿ ಮನೆ ಅಳಿಯನಾಗಿ ಬಂದ. ಹೀಗೇ 8-9 ವರ್ಷ ಕಳೆಯಿತು. ರುಕ್ಮಾಬಾಯಿ ವಯಸ್ಕಳಾದರೂ ಅವರಿಬ್ಬರ ನಡುವೆ ದೈಹಿಕ ಸಂಪರ್ಕ ಏರ್ಪಡಲಿಲ್ಲ. ದಾದಾಜಿಯನ್ನು ರುಕ್ಮಾಬಾಯಿ ಒಪ್ಪಿಕೊಳ್ಳದ್ದರಿಂದ ಅವನು ತನ್ನ ಮನೆಗೆ ಹೋಗಿ ಅವಳನ್ನು ಅಲ್ಲಿಗೇ ಬರುವಂತೆ ಕೇಳಿದ. ಆದರೆ ರುಕ್ಮಾಬಾಯಿ ಬೇರೊಬ್ಬರ ಆಶ್ರಯದಲ್ಲಿರತೊಡಗಿದಳು. ಮದುವೆಯಾಗಿದ್ದರೂ ಅವರಿಬ್ಬರೂ ದೂರವಿದ್ದು ಅದಾಗಲೇ 11 ವರ್ಷ ಆಗಿತ್ತು. ರುಕ್ಮಾಬಾಯಿಯ ಅನಾಮಿಕ ಹೆಸರುಗಳಲ್ಲಿ ಸುದ್ದಿ ಪತ್ರಿಕೆಗಳಿಗೆ ಬಾಲ್ಯವಿವಾಹ ಹಾಗೂ ವಿಧವಾ ಪದ್ಧತಿಗಳನ್ನು ಅನಿಷ್ಟವೆಂದು ಟೀಕಿಸಿ ಬರೆಯುತ್ತಿದ್ದಳು. ಅಲ್ಲದೇ ಜಾತಿಯ ಚೌಕಟ್ಟು ಇರುವುದರಿಂದ ಹೆಣ್ಣಿನ ಆಯ್ಕೆಗೆ ಮುಕ್ತ ಅವಕಾಶಗಳಿಲ್ಲ ಎಂದೂ ದೂರಿದ್ದಳು. ಆಗ ದಾದಾಜಿ ಕೋರ್ಟಿಗೆ ಹೋದ. ಕೋರ್ಟಿನಲ್ಲಿ ರುಕ್ಮಾಬಾಯಿ ತನಗೆ ಅಪ್ರಾಪ್ತ ವಯಸ್ಸಿದ್ದಾಗಲೇ ಮದುವೆ ಮಾಡಿದ್ದು, ತಾಯ್ತಂದೆಯರು ಒಪ್ಪಿ ಮಾಡಿದ ಮದುವೆಗೆ ತಾನೇಕೆ ಜವಾಬ್ದಾರಳಾಗಬೇಕೆಂದು ಮರು ಪ್ರಶ್ನಿಸಿದಳು. ಆಗ ಹಿಂದೂ ಸಮಾಜದಲ್ಲಿ ಬಾಲ್ಯ ವಿವಾಹ ಸಾಮಾನ್ಯವಾಗಿತ್ತು ಹಾಗೂ ಬಾಲಕಿಯ ಒಪ್ಪಿಗೆಯನ್ನು ಯಾರೂ ಪಡೆಯುತ್ತಿರಲಿಲ್ಲ. ಕೊನೆಗೆ ರುಕ್ಮಾಬಾಯಿಗೆ ಇಷ್ಟವಿಲ್ಲದ ಕಾರಣ ಗಂಡನ ಮನೆಗೆ ಹೋಗಬೇಕಾಗಿಲ್ಲವೆಂದು ತೀರ್ಪು ನೀಡಲಾಯಿತು. ದಾದಾಜಿ ಅಲ್ಲಿಗೇ ನಿಲ್ಲದೇ ಮೇಲ್ಮನವಿ ಸಲ್ಲಿಸಿದ. ಕೇಸು ಮುಂದುವರೆಯುತ್ತ ಕಾಯ್ದೆಯ ದ್ವಂದ್ವಗಳನ್ನೂ, ದುರ್ಬಲ ಅಂಶಗಳನ್ನೂ ಬಯಲುಗೊಳಿಸಿತು.

ಈ ಕಾಯ್ದೆಯು ಒಪ್ಪಿಗೆ ಪಡೆದು ಮದುವೆಯಾಗುವ ಪಾಶ್ಚಾತ್ಯ ಸಮಾಜಕ್ಕೆ ಅನ್ವಯವಾಗುವಂತೆ ಭಾರತಕ್ಕೆ ಹೊಂದಿಕೊಳ್ಳುತ್ತಿರಲಿಲ್ಲ. ಭಾರತದ ಬಹುಪಾಲು ಮದುವೆಗಳು ಬಾಲ್ಯವಿವಾಹಗಳೇ ಆಗಿದ್ದವು. ಲಾರ್ಡ್ ಮೆಕಾಲೆ ಭಾರತೀಯ ದಂಡ ಸಂಹಿತೆಯನ್ನು ರೂಪಿಸುತ್ತಾ ಒಪ್ಪಿಗೆಯ ವಯೋಮಿತಿ ಕನಿಷ್ಠ 15-16 ವರ್ಷ ಎಂದು ಹೇಳಿದಾಗ ಭಾರತದ ಎಲ್ಲ ಮದುವೆಗಳೂ ಕಾನೂನಿನ ಪ್ರಕಾರ ಅಸಿಂಧುವಾಗುವ ಅಪಾಯ ಒದಗಿತು. ಎಂದರೆ ಭಾರತ ಸಮಾಜದಲ್ಲಿ ಒಪ್ಪಿಗೆ-ಬಾಲ್ಯ ವಿವಾಹ ಎರಡೂ ಒಟ್ಟಿಗೆ ಹೋಗಲು ಸಾಧ್ಯವೇ ಇರಲಿಲ್ಲ.

ರುಕ್ಮಾಬಾಯಿಯ ಕೇಸಿನಲ್ಲಿ ಮೇಲಿನ ಕೋರ್ಟು ಗಂಡನ ಮನೆಗೆ ಹೋಗಲೊಪ್ಪದ ಅವಳಿಗೆ ಜೈಲು ಶಿಕ್ಷೆ ವಿಧಿಸಿತು. ಆದರೆ ಅವಳು ದಾದಾಜಿಗೆ 2000 ರೂಪಾಯಿ ಕೊಟ್ಟು ಸ್ವಾತಂತ್ರ್ಯವನ್ನು 'ಗಳಿಸಿ'ದಳು. ಇದು ಸಂಪ್ರದಾಯವಾದಿಗಳಿಗೆ ಗೆಲುವಿನಂತೆಯೂ, ಬಾಲ್ಯವಿವಾಹವನ್ನು ವಿರೋಧಿಸುತ್ತಿದ್ದವರಿಗೆ ಹಿನ್ನಡೆಯಾಗಿಯೂ ತೋರಿತು. ಭಾರತದ ಸಾಮಾಜಿಕ ಅನಿಷ್ಟಗಳ ಕುರಿತು, ವಿಶೇಷವಾಗಿ ಬಾಲ್ಯವಿವಾಹದ ವಿರುದ್ಧವಾಗಿ ಹೋರಾಡುತ್ತಿದ್ದ ಬೆಹ್ರಾಮ್ಜಿ ಮಲಬಾರಿ ಇದನ್ನೊಂದು ಸೋಲೆಂಬಂತೆ ಪರಿಗಣಿಸಿದರು. ಬಾಲ್ಯವಿವಾಹ ರದ್ದತಿಗಷ್ಟೇ ಅಲ್ಲದೇ, ಒಪ್ಪಿಗೆ ವಯಸ್ಸನ್ನು ಕಾಯ್ದೆ ಮೂಲಕ ಹೆಚ್ಚಿಸಬೇಕೆಂದು ಮಲಬಾರಿ, ಪಂಡಿತ ರಮಾಬಾಯಿ, ಆನಂದಿಬಾಯಿ ಸಮೇತ ಹಲವರು ಒತ್ತಾಯ ತಂದರು. 1891ರಲ್ಲಿ 'ಒಪ್ಪಿಗೆ ವಯಸ್ಸು ಕಾಯ್ದೆ' ಜಾರಿಯಾಯಿತು. ಅದನ್ನು ಭಾರತೀಯ ಸಂಸ್ಕೃತಿಯ ಮೇಲಿನ ವಸಾಹತುಶಾಹಿ ದಬ್ಬಾಳಿಕೆ ಎಂದು

(37ನೇ ಪುಟಕ್ಕೆ)

ಸಂಸ್ಕೃತಿ ಮತ್ತು ಸಮಾಜವಾದ

ಬಾಪು ಹೆದ್ದೂರಶೆಟ್ಟಿ

ಸಂಸ್ಕೃತಿಯ ಹರಹು ಬಹಳ ವಿಶಾಲವಾದುದು. ಅದನ್ನು ಭಿನ್ನ ಭಿನ್ನ ದೃಷ್ಟಿಕೋನಗಳಿಂದ ನೋಡಬಹುದು, ಅರ್ಥೈಸಬಹುದು. ಅದನ್ನು ದೇಶ, ಧರ್ಮ, ಜಾತಿ ಮೊದಲಾದ ದೃಷ್ಟಿಕೋನಗಳಿಂದ ನೋಡಬಹುದು ಹಾಗೂ ಸಂಸ್ಕೃತಿಗಳನ್ನು ಭಾರತದ ಸಂಸ್ಕೃತಿ, ಹಿಂದೂಗಳ ಸಂಸ್ಕೃತಿ, ದಲಿತರ ಸಂಸ್ಕೃತಿ ಮೊದಲಾಗಿ ಗುರುತಿಸಬಹುದು. ಇಲ್ಲಿ ದೇಶ, ಧರ್ಮ ಹಾಗೂ ಜಾತಿ ಮೊದಲಾದವುಗಳು ಸಂಸ್ಕೃತಿಯ ನಿರ್ಧಾರಕಗಳಾಗುತ್ತವೆ. ಉದಾಹರಣೆಗೆ ನದೀ ತೀರದ ಭೂ ಪ್ರದೇಶ ಒಂದು ರೀತಿಯ ಸಂಸ್ಕೃತಿಯನ್ನು ಹುಟ್ಟುಹಾಕಿದರೆ, ಮರುಭೂಮಿ ಬೇರೊಂದು ರೀತಿಯ ಸಂಸ್ಕೃತಿಯನ್ನು ಹುಟ್ಟುಹಾಕುತ್ತದೆ. ಹಾಗೆಯೇ ಹಿಂದೂಗಳ, ದಲಿತರ ಸಂಸ್ಕೃತಿಗಳು ಮುಸ್ಲಿಮರ ಹಾಗೂ ಮೇಲ್ಜಾತಿಗಳ ಸಂಸ್ಕೃತಿಗಳಿಗಿಂತ ಭಿನ್ನವಾಗಿರುತ್ತವೆ.

ಸಮಾಜವಾದ ಮಾನವನ ಬದುಕನ್ನು, ಸಮಾಜವನ್ನು ನೋಡುವ ಒಂದು ವಿಶಿಷ್ಟ ದೃಷ್ಟಿಕೋನವನ್ನು ಒದಗಿಸುವ ಹಾಗೆ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿಯೂ ಅದು ಒಂದು ಭಿನ್ನ ದೃಷ್ಟಿಕೋನವನ್ನು ಒದಗಿಸುತ್ತದೆ. ಸಂಸ್ಕೃತಿಯನ್ನು ಆರ್ಥಿಕ ಹಾಗೂ ಸಾಮಾಜಿಕ ನೆಲೆಗಟ್ಟಿನ ಮೇಲೆ ಅರ್ಥೈಸಲು ಸಮಾಜವಾದ ಪ್ರಯತ್ನಿಸುತ್ತದೆ. ಆದರೆ ಈ ಆರ್ಥಿಕ ಹಾಗೂ ಸಾಮಾಜಿಕ ನೆಲೆಗಟ್ಟಿನ ಪ್ರಾಮುಖ್ಯತೆಯ ಬಗ್ಗೆ ಮಾರ್ಕ್ಸ್‌ವಾದಿಗಳು ಹಾಗೂ ಜನತಾಂತ್ರಿಕ ಸಮಾಜವಾದಿಗಳು ಭಿನ್ನಾಭಿಪ್ರಾಯ ಹೊಂದಿರುತ್ತಾರೆ. ಒಂದು ಸಮಾಜದ ಆರ್ಥಿಕ ಸಂರಚನೆ ಆ ಸಮಾಜದ ಇತರ ಎಲ್ಲಾ ಸಂರಚನೆಗಳ ನಿರ್ಧಾರಕವಾಗಿರುತ್ತದೆ ಎನ್ನುತ್ತಾನೆ ಕಾರ್ಲ್‌ಮಾರ್ಕ್ಸ್. ಆದುದರಿಂದ ಒಂದು ಸಮಾಜದ ಆರ್ಥಿಕ ಸಂರಚನೆ, ಅಂದರೆ ಆ ಸಮಾಜದಲ್ಲಿರುವ ಆರ್ಥಿಕ ವರ್ಗಗಳು ಹಾಗೂ ಆಸ್ತಿಯ ಸಂಬಂಧಗಳು, ಆ ಸಮಾಜದ ರಾಜಕೀಯ ಹಾಗೂ ಇನ್ನಿತರ ಸಂರಚನೆಗಳ ನಿರ್ಧಾರಕವಾಗುತ್ತದೆ. ಹಾಗೆಯೇ ಅದು ಆ ಸಮಾಜದ ಸಾಂಸ್ಕೃತಿಕ ಸಂರಚನೆಯ ನಿರ್ಧಾರಕವೂ ಆಗುತ್ತದೆ. ಪ್ರಖರ ಮಾರ್ಕ್ಸ್‌ವಾದಿಯಾಗಿದ್ದ ಆಚಾರ್ಯ ನರೇಂದ್ರದೇವ ಅವರು, ಪ್ರಭಾವೀ ಸಾಮಾಜಿಕ ವರ್ಗಗಳು ಸಮಾಜದ ಮೇಲೆ ತಮ್ಮ ಅಗತ್ಯಗಳು ಹಾಗೂ ಒತ್ತಡಗಳಿಗೆ ಅನುಗುಣವಾದ ಸಾಂಸ್ಕೃತಿಕ ವ್ಯವಸ್ಥೆಯನ್ನು ಹೇರುತ್ತವೆ ಹಾಗೂ ಸಮಾಜದ ಮೇಲೆ ತಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿಡಿತವನ್ನು ಮುಂದುವರೆಸುವ ಉದ್ದೇಶದಿಂದ ಅದನ್ನು ಎತ್ತಿ ಹಿಡಿಯುತ್ತವೆ ಎನ್ನುತ್ತಾರೆ. ಸಮಾಜದ ಆರ್ಥಿಕ ಜೀವನ ಪುರೋಹಿತರ ಅಧೀನದಲ್ಲಿದ್ದರೆ ಅಂತಹ ಸಮಾಜದ ಸಂಸ್ಕೃತಿಯೂ ಮೂಲತಃ ಧರ್ಮದಿಂದ ಓತಪ್ರೋತವಾಗಿರುತ್ತದೆ ಹಾಗೂ ಅಂತಹ ಸಮಾಜದ ರಾಜ್ಯ ವ್ಯವಸ್ಥೆಯೂ ಧರ್ಮಾಧಾರಿತವಾಗಿರುತ್ತದೆ ಎನ್ನುತ್ತಾರೆ ಇನ್ನೊಬ್ಬ ಸಮಾಜವಾದಿ ಅಶೋಕ ಮೆಹತಾ.

ಸಂಸ್ಕೃತಿಯ ತನ್ನ ಈ ಸಿದ್ಧಾಂತವನ್ನು ಮಾರ್ಕ್ಸ್, ಐತಿಹಾಸಿಕ ಭೌತವಾದ ಅಥವಾ ಇತಿಹಾಸದ ಆರ್ಥಿಕ ವಿವರಣೆ ಎಂದು ಕರೆಯುತ್ತಾನೆ. ಆದುದರಿಂದ ಸಮಾಜದ ಆರ್ಥಿಕ ಸಂರಚನೆ ಬದಲಾದಂತೆಲ್ಲ ಸಾಂಸ್ಕೃತಿಕ ಸಂರಚನೆಯೂ ಬದಲಾಗುತ್ತ ಹೋಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಸಂಸ್ಕೃತಿಯನ್ನು ಸಾಮಂತವಾದಿ ಯುಗದ ಸಂಸ್ಕೃತಿ, ಬಂಡವಾಳವಾದಿ ಯುಗದ ಸಂಸ್ಕೃತಿ ಎಂದು ಅರ್ಥೈಸಬಹುದು. ಕಾಲದ ದೃಷ್ಟಿಯಿಂದ, ಸಾಮಂತವಾದಿ ಯುಗದ ಸಂಸ್ಕೃತಿ ಗತಕಾಲದ ಸಂಸ್ಕೃತಿಯೂ, ಬಂಡವಾಳವಾದಿ ಯುಗದ ಸಂಸ್ಕೃತಿ, ವರ್ತಮಾನಕಾಲದ ಸಂಸ್ಕೃತಿಯೂ ಆಗುತ್ತದೆ. ಸಮಾಜವಾದಿ ಸಮಾಜದ ನಿರ್ಮಾಣ ಇನ್ನೂ ಪೂರ್ಣವಾಗಿಲ್ಲದೇ ಇರುವುದರಿಂದ ಸಮಾಜವಾದಿ ಸಂಸ್ಕೃತಿ ಭವಿಷ್ಯಕಾಲದ ಸಂಸ್ಕೃತಿಯಾಗುತ್ತದೆ.

ಆದರೆ ಒಂದು ಸಮಾಜದ ಆರ್ಥಿಕ ಸಂರಚನೆ ಆ ಸಮಾಜದ ಇತರ ಎಲ್ಲಾ ಸಂರಚನೆಗಳ ಏಕಮಾತ್ರ ನಿರ್ಧಾರಕ ಎನ್ನುವುದನ್ನು ಜನತಾಂತ್ರಿಕ ಸಮಾಜವಾದಿಗಳು ಒಪ್ಪುವುದಿಲ್ಲ. ಸಮಾಜದ ವಿಭಿನ್ನ ಸಂರಚನೆಗಳು ಪರಸ್ಪರ ಪ್ರಭಾವ ಬೀರುತ್ತಿರುತ್ತವೆ ಎನ್ನುವುದು ಜನತಾಂತ್ರಿಕ ಸಮಾಜವಾದಿಗಳ ನಿಲುವಾಗಿರುತ್ತದೆ. ಸಮಾಜದ ಆರ್ಥಿಕ ಸಂರಚನೆಗೆ ಪ್ರಾಥಮಿಕ ಮಹತ್ವ ನೀಡಿದ 30 ವರ್ಷಗಳಲ್ಲಿ, ಕಾರ್ಲ್‌ಮಾರ್ಕ್ಸ್ ತನ್ನ ಈ ಸೂತ್ರದ ಅಪರ್ಯಾಪ್ತತೆಯನ್ನು ಕಂಡುಕೊಂಡು, ಒಂದು ಸಮಾಜದ ಆರ್ಥಿಕ ಸಂರಚನೆ ಆ ಸಮಾಜದ ಇತರ ಎಲ್ಲಾ ಸಂರಚನೆಗಳ ನಿರ್ಧಾರಕಗಳಲ್ಲೊಂದಾಗಿರುತ್ತದೆ ಎನ್ನುತ್ತಾನೆ. ಸಮಾಜದ ಆರ್ಥಿಕ, ಸಾಮಾಜಿಕ, ವೈಧಾನಿಕ ಹಾಗೂ ಸಾಂಸ್ಕೃತಿಕ ಮೊದಲಾದ ಸಂರಚನೆಗಳು ಪರಸ್ಪರ ಪ್ರಭಾವಕ್ಕೆ ಒಡ್ಡಿಕೊಂಡಿರುತ್ತವೆ ಎನ್ನುವ ನಿರ್ಧಾರಕ್ಕೆ ಬರುತ್ತಾನೆ. ಹಾಗೆಯೇ, ಸಮಾಜವಾದ ಕೇವಲ ಆರ್ಥಿಕ ಚಳುವಳಿಯಲ್ಲ, ಅದೊಂದು ಸಾಂಸ್ಕೃತಿಕ ಚಳವಳಿ ಎನ್ನುವ ಮೂಲಕ ಆಚಾರ್ಯ ನರೇಂದ್ರದೇವ ಅವರು ಸಾಂಸ್ಕೃತಿಕ ಚಳವಳಿಯ ಸ್ವತಂತ್ರ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತಾರೆ ಹಾಗೂ ಸಮಾಜದ ಆರ್ಥಿಕ ಸಂರಚನೆ ಮಾತ್ರವೇ ಸಾಂಸ್ಕೃತಿಕ ಸಂರಚನೆಯ ನಿರ್ಧಾರಕ ಎನ್ನುವುದನ್ನು ಅಲ್ಲಗಳೆಯುತ್ತಾರೆ.

ಒಂದು ಸಮಾಜ ಹೆಣ್ಣಿಗೆ ನೀಡುವ ಸ್ಥಾನ ಅದರ ಸಂಸ್ಕೃತಿಯ ಮಾನದಂಡಗಳಲ್ಲೊಂದಾಗಿರುತ್ತದೆ. ಬೇರೆ ಬೇರೆ ಸಂಸ್ಕೃತಿಗಳು ಹೆಣ್ಣಿಗೆ ಭಿನ್ನ ಭಿನ್ನ ಸ್ಥಾನವನ್ನು ನೀಡುತ್ತವೆ. ಉದಾಹರಣೆಗೆ, ಹಲವು ವಿಭಿನ್ನ ಸಂಸ್ಕೃತಿಗಳ ಬೀಡಾದ ಭಾರತದಲ್ಲಿ, ಒಂದೆಡೆ ಮನು, ಪಿತಾ ರಕ್ಷತಿ ಕೌಮಾರ್ಯೆ, ಭಾರ್ತಾ ರಕ್ಷತಿ ಯೌವನೇ, ವಾರ್ಧಕ್ಯೆ ರಕ್ಷತಿ ಪುತ್ರಾ, ನ ಸ್ತ್ರೀ ಸ್ವಾತಂತ್ರ್ಯಮರ್ಹತೀತಿ ಎಂದು ಹೇಳಿ ಹೆಣ್ಣಿಗೆ ಸ್ವಾತಂತ್ರ್ಯವೇ ಇರಕೂಡದು ಎಂದು ಹೇಳಿದ್ದರೆ, ಕೇರಳದ ಹಲವು ಜನಾಂಗಗಳಲ್ಲಿ ಗಂಡಿಗಿಂತ ಹೆಣ್ಣಿಗೇ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಮುಸ್ಲಿಮರಲ್ಲಿ ಮಹಿಳೆಯರಿಗೆ ನಮಾಜು ಮಾಡಲು ಪ್ರತ್ಯೇಕ ವ್ಯವಸ್ಥೆ ಮಾಡಿದರೆ, ಭಾರತದ ಹಲವು ಜಾತಿಗಳಲ್ಲಿ ಹೆಣ್ಣಿಗೆ ಗಂಡಿನಷ್ಟೇ ಸ್ವಾತಂತ್ರ್ಯವನ್ನು ನೀಡಲಾಗಿದೆ.

ಆಸ್ತಿಗಾಗಿ ಮಹಾಭಾರತದ ಯುದ್ಧ ನಡೆದರೆ ಹೆಣ್ಣಿಗಾಗಿ ರಾಮಾಯಣದ ಯುದ್ಧ ನಡೆಯುತ್ತದೆ. ಸಾಮಂತವಾದಿ ಸಮಾಜದಲ್ಲಿ ಸಾಮಂತವಾದಿ ಯುಗದ ಮುಖಂಡರ ಹತ್ತಿರ ಅಪಾರ ಹಣವಿರುತ್ತದೆ, ಬಿಡುವಿರುತ್ತದೆ ಹಾಗೂ ಸಾಮಾಜಿಕ ಜವಾಬ್ದಾರಿಗಳಿರುವುದಿಲ್ಲ, ಆದುದರಿಂದಲೇ ಇನ್ನೊಬ್ಬನ ಹೆಂಡತಿಯ ಅಪಹರಣ ಒಂದು ಮಹಾಕಾವ್ಯಕ್ಕೆ ವಸ್ತುವನ್ನೊದಗಿಸುತ್ತದೆ. ಬಂಡವಾಳವಾದಿ ಸಮಾಜದಲ್ಲಿ ಎಲ್ಲವನ್ನೂ ಹಣದಿಂದ ಅಳೆಯಲಾಗುತ್ತದೆ. ಅಂತಹ ಸಮಾಜದಲ್ಲಿ ಸಂಸ್ಕೃತಿಯೂ ಹಣದ ಸುತ್ತಲೂ ಹೆಣೆದು ಕೊಂಡಿರುತ್ತದೆ.

ಸಾಮಂತವಾದಿ ಹಾಗೂ ಬಂಡವಾಳವಾದಿ ಸಂಸ್ಕೃತಿಗಳು ಹೆಣ್ಣಿನ ಬಗ್ಗೆ ತಳೆಯುವ ನಿಲುವುಗಳನ್ನು ಅಶೋಕ ಮೆಹತಾ ಸ್ವಾರಸ್ಯಕರವಾಗಿ ವಿವರಿಸುತ್ತಾರೆ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಹೆಂಡತಿಯನ್ನು ಕದ್ದರೆ, ಸಾಮಂತವಾದಿ ಸಮಾಜದಲ್ಲಿ, ಹೆಂಡತಿಯನ್ನು ಕಳೆದುಕೊಂಡವ ಹೆಂಡತಿಯನ್ನು ಕದ್ದವನೊಂದಿಗೆ ಕದನಕ್ಕಿಳಿಯುತ್ತಾನೆ. ಗೆದ್ದವ ಹೆಣ್ಣನ್ನು ಪಡೆಯುತ್ತಾನೆ, ಅವಳ ಒಡೆಯನಾಗುತ್ತಾನೆ. ಯಾಕೆಂದರೆ ಸಾಮಂತವಾದಿ ಸಂಸ್ಕೃತಿಯಲ್ಲಿ ಹೆಣ್ಣು ಒಂದು ಆಸ್ತಿಯಾಗಿರುತ್ತಾಳೆ. ಆಸ್ತಿಗಾಗಿ ಮಹಾಭಾರತದ ಯುದ್ಧ ನಡೆದರೆ ಹೆಣ್ಣಿಗಾಗಿ ರಾಮಾಯಣದ ಯುದ್ಧ ನಡೆಯುತ್ತದೆ. ಸಾಮಂತವಾದಿ ಸಮಾಜದಲ್ಲಿ ಸಾಮಂತವಾದಿ ಯುಗದ ಮುಖಂಡರ ಹತ್ತಿರ ಅಪಾರ ಹಣವಿರುತ್ತದೆ, ಬಿಡುವಿರುತ್ತದೆ ಹಾಗೂ ಸಾಮಾಜಿಕ ಜವಾಬ್ದಾರಿಗಳಿರುವುದಿಲ್ಲ, ಆದುದರಿಂದಲೇ ಇನ್ನೊಬ್ಬನ ಹೆಂಡತಿಯ ಅಪಹರಣ ಒಂದು ಮಹಾಕಾವ್ಯಕ್ಕೆ ವಸ್ತುವನ್ನೊದಗಿಸುತ್ತದೆ ಎನ್ನುತ್ತಾರೆ ಅಶೋಕ ಮೆಹತಾ. ವಾಲ್ಮೀಕಿಯ ರಾಮಾಯಣ ಹಾಗೂ ಹೋಮರನ ಒಡೆಸ್ಸಿಗಳನ್ನು ಉದಾಹರಣೆಯಾಗಿ ಕೊಡುತ್ತಾರೆ.

ಬಂಡವಾಳವಾದಿ ಸಮಾಜದಲ್ಲಿ ಎಲ್ಲವನ್ನೂ ಹಣದಿಂದ ಅಳೆಯಲಾಗುತ್ತದೆ. ಅಂತಹ ಸಮಾಜದಲ್ಲಿ ಸಂಸ್ಕೃತಿಯೂ ಹಣದ ಸುತ್ತಲೂ ಹೆಣೆದುಕೊಂಡಿರುತ್ತದೆ. ಇಂತಹ ಸಮಾಜದಲ್ಲಿ ವಿದ್ಯೆಯನ್ನು ಪಡೆದುಕೊಳ್ಳುವುದೂ ಕೂಡ ಜ್ಞಾನ ಸಂಪಾದನೆಗೋಸ್ಕರವಲ್ಲ, ಹಣದ ಸಂಪಾದನೆಗೋಸ್ಕರ. ಆದುದರಿಂದ, ಬಂಡವಾಳವಾದಿ ಸಮಾಜದಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಹೆಂಡತಿಯನ್ನು ಕದ್ದರೆ, ಹೆಂಡತಿಯನ್ನು ಕಳೆದುಕೊಂಡವ ಹೆಂಡತಿಯನ್ನು ಕದ್ದವನ ಮೇಲೆ ಪರಿಹಾರ ಧನ ಕೇಳಿ ಮೊಕದ್ದಮೆ ಹೂಡುತ್ತಾನೆ. ಮೊಕದ್ದಮೆ ಗೆದ್ದು ಆತ ಹೆಣ್ಣನ್ನಲ್ಲ, ಹಣವನ್ನು ಪಡೆಯುತ್ತಾನೆ. ಬಂಡವಾಳವಾದಿ ಸಮಾಜದಲ್ಲಿ ಒಬ್ಬ ಹೆಂಗಸಿನ ಶೀಲಕ್ಕೆ, ಒಬ್ಬ ವ್ಯಕ್ತಿಯ ಆತ್ಮ ಗೌರವಕ್ಕೆ, ಎಲ್ಲಕ್ಕೂ ಒಂದು ಬೆಲೆ ಇರುತ್ತದೆ ಎನ್ನುತ್ತಾರೆ ಅಶೋಕ ಮೆಹತಾ.

ಸಮಾಜವಾದಿ ಸಮಾಜದಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಹೆಂಡತಿಯನ್ನು ಕದ್ದರೆ ಏನಾಗುತ್ತದೆ ಎನ್ನುವುದನ್ನು ಸಮಾಜವಾದಿ ಸಂಸ್ಕೃತಿಯ ಸಂದರ್ಭದಲ್ಲಿ ಅಶೋಕ ಮೆಹತಾ ವಿವರಿಸದಿದ್ದರೂ, ಉತ್ತರ ಸ್ಪಷ್ಟವಾಗಿರುತ್ತದೆ. ಸಮಾಜವಾದಿ ಸಮಾಜದಲ್ಲಿ ಹೆಣ್ಣು ಸಾಮಂತವಾದಿ ಸಮಾಜದಲ್ಲಿರುವಂತೆ ಒಂದು ವಸ್ತುವೂ ಅಲ್ಲ, ಅವಳ ಶೀಲ ಬಂಡವಾಳವಾದಿ ಸಮಾಜದಲ್ಲಿರುವಂತೆ ಹಣದಿಂದ ಅಳೆಯುವ ವಸ್ತುವೂ ಅಲ್ಲ. ಸಮಾಜವಾದಿ ಸಮಾಜದಲ್ಲಿ ಅವಳಿಗೆ ಗಂಡಸಿಗೆ ಇರುವಷ್ಟೇ ಸ್ವಾತಂತ್ರವಿರುತ್ತದೆ, ಗಂಡಸಿನೊಡನೆ ಸಮಾನತೆ ಇರುತ್ತದೆ ಎನ್ನುವುದಾರೆ, ತನಗಿಷ್ಟ ಬಂದವರೊಂದಿಗೆ ಬದುಕುವ ಅವಳ ಸ್ವಾತಂತ್ರ್ಯವನ್ನು ಗೌರವಿಸುವ, ಹೆಂಡತಿಯನ್ನು ಕಳೆದುಕೊಂಡ ಗಂಡ, ಕದ್ದವನೊಂದಿಗೆ ಕದನಕ್ಕೂ ಇಳಿಯಬೇಕಿಲ್ಲ, ಪರಿಹಾರ ಧನ ಕೇಳಿ ಮೊಕದ್ದಮೆಯನ್ನೂ ಹೂಡಬೇಕಿಲ್ಲ. ಇಲ್ಲಿ ಕದ್ದ ಎನ್ನುವ ಶಬ್ದ ತನ್ನ ಅರ್ಥವನ್ನೇ ಕಳೆದುಕೊಳ್ಳುತ್ತದೆ.

ಇಂದು ಒಬ್ಬ ವಿವಾಹಿತ ಮಹಿಳೆ ಒಬ್ಬ ಗಂಡಸಿಗೆ ಕಟ್ಟಲಾಗಿರುವ ಹೆಣ್ಣು-ಗುಲಾಮಳಾಗಿದ್ದಾಳೆ ಹಾಗೂ ಒಬ್ಬ ಮಗಳು ತನ್ನ ಮನೆಯಲ್ಲಿ, ತನ್ನ ತಂದೆತಾಯಿಗಳ ಕೈದಿಯಾಗಿರುತ್ತಾಳೆ. ಬಾಗಿಲಿಗೆ ಬೀಗ ಹಾಕಿಲ್ಲದೇ ಇರುವಾಗ ಹಾಗೂ ಈ ಬಲಿಪಶುಗಳು ಯಾವಾಗ ಬೇಕಾದರೂ ಮುಕ್ತವಾಗಿ ಹೊರಗೆ ಹೋಗುವುದು ಸಾಧ್ಯವಿರುವಾಗ ಇಂತಹ ಅಸಂತೋಷವನ್ನು ಅವರು ಯಾಕೆ ಸಹಿಸುತ್ತಾರೆ? ಯಾಕೆಂದರೆ ಬಾಗಿಲಿನ ಆಚೆ ಹಸಿವು ಅವರನ್ನು ಕಾದಿರುತ್ತದೆ. ಬಾಗಿಲಿನಿಂದ ಆಚೆ ಹೋಗುವುದರ ಪರಿಣಾಮವಾಗಿ ತಾವು ಒಂದು ಹೊತ್ತಿನ ಊಟದಿಂದಲೂ ವಂಚಿತರಾಗದೇ, ಒಂದು ರಾತ್ರಿಯೂ ರಕ್ಷಣೆ ಹಾಗೂ ಆಶ್ರಯದಿಂದ ವಂಚಿತರಾಗದೇ, ಹಾಗೂ ಸಾಮಾಜಿಕ ಸ್ಥಾನಮಾನದಿಂದ ವಂಚಿತರಾಗದೇ ಇರುವುದಾದರೆ ಬಹಳಷ್ಟು ಹೆಂಡತಿಯರು ಹಾಗೂ ಹುಡುಗಿಯರು ಮನೆಯಿಂದ ಹೊರಗೆ ಹೋಗಲು ಸಿದ್ಧರಿರಬಹುದು. ಸಮಾಜವಾದ ಅವರನ್ನು ಇಂತಹ ಪರಿಸ್ಥಿತಿಗೆ ಒಳಪಡಿಸುವುದರಿಂದ ಅದು ಖಂಡಿತವಾಗಿಯೂ ಹಲವಾರು ಅಸಂತುಷ್ಟ ವಿವಾಹಗಳನ್ನೂ ಪರಿವಾರಗಳನ್ನೂ ಮುರಿಯುತ್ತದೆ. ಆದರೆ ಇಂತಹ ವಿವಾಹಗಳು ಹಾಗೂ ಪರಿವಾರಗಳು ಅನಿಷ್ಟಗಳಾದುದರಿಂದ ಅವುಗಳು ನಷ್ಟವಾಗಿ ಹೋಗುವ ಬಗ್ಗೆ ನಾವೇನೂ ಬೇಸರಪಡಬೇಕಿಲ್ಲ ಎನ್ನುತ್ತಾರೆ ಜಾರ್ಜ್ ಬರ್ನಾರ್ಡ್ ಶಾ.

ಸಾಮಂತವಾದಿ ಯುಗದಲ್ಲಿ ಸಂಸ್ಕೃತಿ ಸಾಮಂತವಾದಿ ವರ್ಗದ ವೈಶಿಷ್ಟ್ಯವಾಗಿದ್ದು, ಬಂಡವಾಳವಾದಿ ಯುಗದಲ್ಲಿ ಅದು ಬಂಡವಾಳವಾದಿಗಳ ವೈಶಿಷ್ಟ್ಯವಾಗಿರುತ್ತದೆ ಎನ್ನುವುದಾದರೆ, ಆ ಯುಗಗಳಲ್ಲಿ ಬದುಕಿದ್ದ ಬಡಜನರು ಸಂಸ್ಕೃತಿಯಿಂದ ವಂಚಿತರಾಗಿದ್ದರೆ, ಅವರಿಗೆ ಅವರದ್ದೇ ಆದ ಸಂಸ್ಕೃತಿ ಇರಲಿಲ್ಲವೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಹಸಿವಿಗೂ ಸಂಸ್ಕೃತಿಗೂ ಇರುವ ಸಂಬಂಧವನ್ನು ವಿವರಿಸುತ್ತ ಅಶೋಕ ಮೆಹತಾ ಒಂದು ಘಟನೆಯನ್ನು ನೆನಪಿಸುತ್ತಾರೆ. ತಮ್ಮ ಜನಸಾಮಾನ್ಯರ ರಾಜಕೀಯದಲ್ಲಿ ಮಹಾತ್ಮಾ ಗಾಂಧೀ ಸಾಂಸ್ಕೃತಿಕ ಮೌಲ್ಯಗಳನ್ನು ಬಲಿ ಕೊಡುತ್ತಿದ್ದಾರೆ ಎಂದು ಗುರುದೇವ ರವೀಂದ್ರನಾಥ ಠಾಕೂರ ಅವರು ಹೇಳಿದಾಗ, ಹಸಿದ ಪಕ್ಷಿಗಳು ಹಾಡುವುದನ್ನು ನಾನು ಎಂದೂ ನೋಡಿಲ್ಲ ಎಂದು ಮಹಾತ್ಮಾ ಗಾಂಧೀ ಉತ್ತರಿಸಿದ್ದರು. ಆದುದರಿಂದ ಬಡತನ, ಹಸಿವು ಇರುವ ಸಾಮಂತವಾದಿ ಅಥವಾ ಬಂಡವಾಳವಾದಿ ಸಮಾಜಗಳಲ್ಲಿ ಸಂಸ್ಕೃತಿ ಬರಿ ಹಲವು ಮಾತ್ರ ಉಳ್ಳವರ ವಿಶೇಷಾಧಿಕಾರವಾಗಿ ಉಳಿಯುತ್ತದೆ ಎನ್ನಲಾಗುತ್ತದೆ. ಬಡತನ ಹಾಗೂ ಹಸಿವುಗಳನ್ನು ಪರಿಹರಿಸುವ ಮೂಲಕ ಸಮಾಜವಾದ ಸಂಸ್ಕೃತಿಯ ಬುನಾದಿಯನ್ನು ವಿಶಾಲಗೊಳಿಸುತ್ತದೆ ಎಂದು ಹೇಳಬಹುದು. ಸಮಾಜವಾದದಲ್ಲಿ ಸಂಸ್ಕೃತಿ, ಸುಖ ಮತ್ತು ಸಂತೋಷಗಳು ಕೇವಲ ಕೆಲವು ವ್ಯಕ್ತಿಗಳ ಏಕಸ್ವಾಮ್ಯವಲ್ಲ. ಸಮಾಜವಾದದಲ್ಲಿ ಎಲ್ಲರೂ ಒಳ್ಳೆಯ ಸಾಂಸ್ಕೃತಿಕ ಜೀವನದ ಸಾಧನಗಳನ್ನು ಪಡೆಯುತ್ತಾರೆ ಮತ್ತು ಇತರರೊಂದಿಗೆ ಸುಖ ಸಂತೋಷಗಳನ್ನು ಹಂಚಿಕೊಳ್ಳುತ್ತಾರೆ ಎನ್ನುತ್ತಾರೆ ಆಚಾರ್ಯ ನರೇಂದ್ರದೇವ.

ಒಬ್ಬ ವಿವಾಹಿತ ಮಹಿಳೆ ಒಬ್ಬ ಗಂಡಸಿಗೆ ಕಟ್ಟಲಾಗಿರುವ ಹೆಣ್ಣು-ಗುಲಾಮಳಾಗಿದ್ದಾಳೆ ಹಾಗೂ ಒಬ್ಬ ಮಗಳು ತನ್ನ ಮನೆಯಲ್ಲಿ, ತನ್ನ ತಂದೆತಾಯಿಗಳ ಕೈದಿಯಾಗಿರುತ್ತಾಳೆ. ಬಾಗಿಲಿಗೆ ಬೀಗ ಹಾಕಿಲ್ಲದೇ ಇರುವಾಗ ಹಾಗೂ ಈ ಬಲಿಪಶುಗಳು ಯಾವಾಗ ಬೇಕಾದರೂ ಮುಕ್ತವಾಗಿ ಹೊರಗೆ ಹೋಗುವುದು ಸಾಧ್ಯವಿರುವಾಗ ಇಂತಹ ಅಸಂತೋಷವನ್ನು ಅವರು ಯಾಕೆ ಸಹಿಸುತ್ತಾರೆ? ಯಾಕೆಂದರೆ ಬಾಗಿಲಿನ ಆಚೆ ಹಸಿವು ಅವರನ್ನು ಕಾದಿರುತ್ತದೆ.

ಆದರೆ ಸಂಸ್ಕೃತಿ ಪ್ರಭಾವೀ ವರ್ಗಗಳ ಏಕಸ್ವಾಮ್ಯವಾಗಿರುತ್ತದೆ, ಬಡವರು ಸಂಸ್ಕೃತಿಯಿಂದ ವಂಚಿತರು ಎನ್ನುವುದನ್ನು ಸಮಾಜವಾದಿಗಳು ಒಪ್ಪುವುದಿಲ್ಲ. ಬಡತನದ ಬೀಸುವಕಲ್ಲಿಗೆ ತುತ್ತಾದ ಹಾಗೂ ಶೋಷಣೆಗೆ ಬಲಿಪಶುವಾದ ಜನಸಮೂಹ ಸಾಂಸ್ಕೃತಿಕ ಅರಳುವಿಕೆಗೆ ಸಿದ್ಧರಿರುವುದಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ. ಕನಿಷ್ಟ ಭಾರತದಲ್ಲಿ, ಸಾಮಂತವಾದಿ ಸಮಾಜದಲ್ಲಿಯೂ ಕೂಡ, ಸಂಸ್ಕೃತಿಯ ಪ್ರಮುಖ ಅಂಶಗಳು ದುಡಿಯುವ ಜನರಿಗೆ ಹರಿದು ಬಂದಿದ್ದವು ಎನ್ನುವುದನ್ನು ಕಾಣುತ್ತೇವೆ. ಇದಲ್ಲದೇ, ವಿಮೋಚನೆಗೊಳಿಸುವ ತತ್ವಚಿಂತನೆಗಳು ಹಾಗೂ ಸಂಸ್ಕೃತಿಗಳು ತುಳಿತಕ್ಕೆ ಒಳಗಾಗಿರುವ ಜನಸಮೂಹಗಳಿಂದಲೇ ಅರಳುತ್ತವೆ ಎನ್ನುವುದು ಇತಿಹಾಸದ ಭಟ್ಟಿ ಇಳಿಸಿದ ಪಾಠವಾಗಿದೆ. ತಮ್ಮ ಎ ಸ್ಟಡಿ ಆಫ್ ಹಿಸ್ಟರಿ ಎಂಬ ಗ್ರಂಥದಲ್ಲಿ ಪ್ರೊ. ಅರ್ನಾಲ್ಡ ಟೊಯ್ನಬಿ, ಸಂಸ್ಕೃತಿಯ ಸ್ವರೂಪ ಶಾಸ್ತ್ರದ ಆಳವಾದ ಅಧ್ಯಯನದಿಂದ ಈ ನಿಲುವನ್ನು ತಲುಪುತ್ತಾರೆ. ಆದುದರಿಂದ ಬಡವರ ಸಂಸ್ಕೃತಿ, ಸಂಸ್ಕೃತಿಯ ಬಡತನದಿಂದ ಬಳಲಬೇಕಿಲ್ಲ ಎನ್ನುತ್ತಾರೆ ಅಶೋಕ ಮೆಹತಾ.

ಸಮಾಜದಲ್ಲಿ ಮೇಲ್ವರ್ಗಗಳಿಗೊಂದು ಹಾಗೂ ಕೆಳವರ್ಗಗಳಿಗೊಂದು ಪ್ರತ್ಯೇಕ ಸಂಸ್ಕೃತಿಗಳು ಇರುತ್ತವೆ ಎನ್ನುವುದಾದರೆ ಆ ಅಂತರವನ್ನು ತೊಡೆದು ಹಾಕುವುದು ಸಮಾಜವಾದದ ಉದ್ದೇಶವಾಗುತ್ತದೆ. ಆದುದರಿಂದಲೇ ಮುಂದುವರಿದ ಹಾಗೂ ಹಿಂದುಳಿದ ಜನಸಮೂಹಗಳ ಮಧ್ಯದಲ್ಲಿನ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅಂತರವನ್ನು ತೊಡೆದು ಹಾಕುವುದು ಸಮಾಜವಾದಿ ಚಳವಳಿಯ ಒಂದು ವಿಶೇಷ ಆಸಕ್ತಿ ಎನ್ನುತ್ತಾರೆ ಆಚಾರ್ಯ ನರೇಂದ್ರದೇವ.

ಆದರೆ ಈ ಸಾಮಂತವಾದಿ ಸಂಸ್ಕೃತಿ, ಬಂಡವಾಳವಾದಿ ಸಂಸ್ಕೃತಿ ಹಾಗೂ ಸಮಾಜವಾದಿ ಸಂಸ್ಕೃತಿ ಮೊದಲಾದವುಗಳ ನಡುವೆ ಕಟ್ಟುನಿಟ್ಟಾದ ಪಾರ್ಥಕ್ಯ ರೇಖೆ ಇರುವುದಿಲ್ಲ. ಅವು ಒಂದರಿನ್ನೊಂದರ ಮೇಲೆ ವ್ಯಾಪಿಸಿಕೊಂಡಿರುತ್ತವೆ. ಬಂಡವಾಳವಾದಿ ಸಂಸ್ಕೃತಿಯಲ್ಲಿ ಸಾಮಂತವಾದಿ ಸಂಸ್ಕೃತಿಯ ಚಿನ್ಹೆಗಳು ಉಳಿದುಬರಬಹುದು. ಉದಾಹರಣೆಗೆ, ಬಂಡವಾಳವಾದದಲ್ಲಿ ಮಾನವ ಸಂಬಂಧಗಳು ಕರಾರಿನ ಆಧಾರದ ಮೇಲೆ ರೂಪಿತವಾಗಿದ್ದರೂ, ಬಂಡವಾಳವಾದ ಬೇರೂರಿ ಶತಮಾನಗಳೇ ಕಳೆದರೂ ಭಾರತದಲ್ಲಿ ವಿವಾಹ ಸಂಸ್ಥೆ ಇನ್ನೂ ಕರಾರಿನ ಮೇಲೆ ಆಧಾರಿತವಾಗಿರದೇ ಒಂದು ಧಾರ್ಮಿಕ ಕಟ್ಟುಪಾಡಾಗಿ, ಸಾಮಂತವಾದಿ ಸಂಸ್ಕೃತಿಯ ಕುರುಹಾಗಿಯೇ ಉಳಿದಿದೆ. ಹಾಗೆಯೇ ಸಾಮಂತವಾದಿ ಅಥವಾ ಬಂಡವಾಳವಾದಿ ಸಂಸ್ಕೃತಿಗಳಲ್ಲಿ ಸಮಾಜವಾದಿ ಸಂಸ್ಕೃತಿಯ ಕುರುಹುಗಳು ಅಪವಾದಾತ್ಮಕವಾಗಿ ಹಾಗೂ ಕಾಲಾತೀತ

ಮಿತವಾಗಿ ಕಂಡುಬರಬಹುದು. ಆದುದರಿಂದ ಸಮಾಜವಾದಿ ಸಂಸ್ಕೃತಿ ಎನ್ನುವುದು, ಅದರ ಹಲವು ಲಕ್ಷಣಗಳು ಇಂದೂ ಕೂಡ ಗೋಚರವಾದರೂ, ಭವಿಷ್ಯದಲ್ಲಿ ಆವಿರ್ಭವಿಸಬಹುದಾದ ಸಂಸ್ಕೃತಿಯಾಗುತ್ತದೆ, ಸಮಾಜವಾದಿ ಆಂದೋಲನ ಮುಂಗಾಣುವ ಸ್ವರ್ಣಯುಗವಾಗುತ್ತದೆ.

ಎಲ್ಲಾ ಆಂದೋಲನಗಳು ಸ್ವರ್ಣಯುಗವನ್ನು ನಂಬಿರುತ್ತವೆ. ಆಂದೋಲನಗಳನ್ನು ನಾವು ಎರಡು ಭಾಗಗಳಲ್ಲಿ ವಿಭಜಿಸಬಹುದು-ಪ್ರಗತಿಗಾಮಿ ಹಾಗೂ ಪ್ರತಿಗಾಮಿ-ಪ್ರಗತಿಗಾಮಿಗಳ ಸ್ವರ್ಣಯುಗ ಭವಿಷ್ಯದಲ್ಲಿದ್ದರೆ, ಪ್ರತಿಗಾಮಿಗಳ ಸ್ವರ್ಣಯುಗ ಭೂತಕಾಲದಲ್ಲಿರುತ್ತದೆ. ಹಿಂದೂ ಮಹಾಸಭೆ ಭಾರತದ ಸ್ವರ್ಣಯುಗವನ್ನು ವೇದ ಕಾಲದಲ್ಲಿ ಕಂಡುಕೊಳ್ಳುತ್ತದೆ, ಮುಸ್ಲಿಮರು ಖಲೀಫರ ಆಡಳಿತಕಾಲದಲ್ಲಿ, ಬಹುಶ: ಮರಾಠರು ಶಿವಾಜಿಯ ಕಾಲದಲ್ಲಿ ಕಂಡುಕೊಳ್ಳುತ್ತಾರೆ, ಎನ್ನುತ್ತಾರೆ ಅಶೋಕ ಮೆಹತಾ.

ಭವಿಷ್ಯದಲ್ಲಿ ಸ್ವರ್ಣಯುಗ ಕಟ್ಟುವ ಕನಸು ಕಾಣುವ, ರಾಬರ್ಟ ಓವೆನ್, ಶಾರ್ಲ ಫೂರಿಯೆ, ಸ್ಯಾಂ ಸೀಮೋಂ, ಮೊದಲಾದ ಯುಟೋಪಿಯನ್ ಸಮಾಜವಾದಿಗಳು ಹಾಗೂ ಮಾರ್ಕ್ಸ್ ಮೊದಲಾದ ವೈಜ್ಞಾನಿಕ ಸಮಾಜವಾದಿಗಳು, ಈ ಕಾರಣದಿಂದಲೇ ಪ್ರಗತಿಗಾಮಿಗಳೆನಿಸಿಕೊಳ್ಳುತ್ತಾರೆ. ಇಂದಿನ ಸಮಾಜವನ್ನು ಕಳಪೆ ಸಮಾಜ ಎನ್ನುವ ರಾಬರ್ಟ ಓವೆನ್, ಹೊಸ ಲನಾರ್ಕನ್ನು ಸ್ಥಾಪಿಸಲು ಪ್ರಯತ್ನಿಸುತ್ತಾನೆ. ಹೊಸ ಸಮಾಜವನ್ನು ಕಟ್ಟಲು ಯಾರಾದರೂ ಮುಂದೆ ಬರುವರೆ ಎಂದು ಶಾರ್ಲ ಫೂರಿಯೇ ವರ್ಷಗಟ್ಟಲೇ ಕಾಯುತ್ತಾನೆ. ವರ್ಗಗಳಿಂದ ಕೂಡಿದ ಬಂಡವಾಳವಾದೀ ಸಮಾಜವನ್ನು ಹೀಗಳೆದ ಮಾರ್ಕ್ಸ್ ಭವಿಷ್ಯದಲ್ಲಿ ವರ್ಗರಹಿತ ಸಮಾಜವನ್ನು ಕಟ್ಟುವ ಕನಸನ್ನು ಕಾಣುತ್ತಾನೆ. ಆದರೆ ಭಾರತದ ಸಮಾಜವಾದಿ ಆಂದೋಲನದ ಮುಂಚೂಣಿಯಲ್ಲಿದ್ದ ರಾಮಮನೋಹರ ಲೋಹಿಯಾ ಇತಿಹಾಸದಲ್ಲಿ ತಮ್ಮ ಸ್ವರ್ಣಯುಗವನ್ನು ಕಾಣುತ್ತಾರೆ. ಸಂಸ್ಕೃತಿಯನ್ನು ಆರ್ಥಿಕ-ಸಾಮಾಜಿಕ ಚೌಕಟ್ಟಿನಲ್ಲಿ ಅರ್ಥೈಸಲು ಪ್ರಯತ್ನಿಸದೇ, ದೇಶ ಹಾಗೂ ಧರ್ಮಗಳ ಚೌಕಟ್ಟಿನಲ್ಲಿ ಅರ್ಥೈಸಲು ಪ್ರಯತ್ನಿಸುತ್ತಾರೆ.

ಇಂದಿನ ಸಮಾಜವನ್ನು ಕಳಪೆ ಎನ್ನುವ ಲೋಹಿಯಾ, ಪ್ರಾಚೀನ ಭಾರತವನ್ನು ಹಾಡಿ ಹೊಗಳುತ್ತಾರೆ. ಪ್ರಾಚೀನ ಭಾರತದ ಸಂಸ್ಕೃತಿ ಅವರಿಗೆ ಆದರ್ಶಪ್ರಾಯವಾಗುತ್ತದೆ. ದ್ರೌಪದಿಯೋ ಸಾವಿತ್ರಿಯೋ ಎಂಬ ತಮ್ಮ ಲೇಖನದಲ್ಲಿ ಇವತ್ತಿನ ಭಾರತವಂತೂ ನಿತ್ಯ ಕೊಳೆಯುವ ಗೊಬ್ಬರದ ಗುಂಡಿಯಾಗಿದೆ, ಮೂರು ನಾಲ್ಕು ಸಾವಿರ ವರ್ಷಗಳ ಹಿಂದಿನ ಭಾರತವನ್ನು ನೋಡಿ: ಜನರಿಗೆ ಮನಸ್ಸನ್ನು ತಿಳಿಗೊಳಿಸಿಟ್ಟುಕೊಂಡಿರುವಂತೆ, ಅದರ ಸೌಂದರ್ಯವನ್ನು ಉಳಿಸಿಟ್ಟುಕೊಳ್ಳುವಂತೆ, ಎಂಥ ಸ್ಥಿತಿಯಲ್ಲೂ ಸಮಾನ ಚಿತ್ತರಾಗಿರುವಂತೆ, ಮೋಹ ಇತ್ಯಾದಿಗಳನ್ನು ತೊರೆಯುವಂತೆ ಆ ಕಾಲದಲ್ಲಿ ಹೇಳಲಾಗಿದೆ. ನಿಜಕ್ಕೂ ಇದೊಂದು ದೊಡ್ಡ ಅದ್ಭುತ ಎನ್ನುತ್ತಾರೆ ಲೋಹಿಯಾ. ಪ್ರಾಚಿನ ಭಾರತದ ಬಗೆಗಿನ ತಮ್ಮ ಈ ಮೆಚ್ಚುಗೆಯಿಂದಾಗಿಯೇ ಲೋಹಿಯಾ ಭಾರತದ ಅತ್ಯಂತ ಮೇಧಾವಿ ಹಾಗೂ ಸೃಜನಶೀಲ ಕಲೆಗಾರರಾಗಿದ್ದ ಎಮ್.ಎಫ್. ಹುಸೇನರಿಗೆ ರಾಮಾಯಣದ ದೃಶ್ಯಗಳನ್ನು ಚಿತ್ರಿಸಲು ಹೇಳಿದರು. ಇಂಗ್ಲೀಷ್ ತೊಲಗಿಸಿ ಚಳವಳಿಗಳ ಜೊತೆಗೆ ರಾಮಾಯಣ ಮೇಳಗಳನ್ನು ಆಯೋಜಿಸಿದರು.

ಪ್ರಾಚೀನ ಭಾರತದ ಸಂಸ್ಕೃತಿಯ ಬಗೆಗಿನ ಲೋಹಿಯಾ ಅವರ ಮೋಹ ಜಾತಿಯ ಬಗೆಗಿನ ಅವರ ಚಿಂತನೆಯಲ್ಲಿಯೂ ಕಂಡು ಬರುತ್ತದೆ. ಭಾರತದಲ್ಲಿ ಪ್ರಾಚೀನ ಕಾಲದಲ್ಲಿದ್ದ ಜಾತಿವ್ಯವಸ್ಥೆಯನ್ನೇ ಲೋಹಿಯಾ ಹೊಗಳುತ್ತಾರೆ. ಪ್ರತಿಯೊಬ್ಬನಿಂದ ಅವನ ಸಾಮರ್ಥ್ಯಕ್ಕನುಗುಣವಾಗಿ ದುಡಿಸಿಕೊಂಡು ಪ್ರತಿಯೊಬ್ಬನಿಗೆ ಅವನ ಅವಶ್ಯಕತೆಗನುಗುಣವಾಗಿ ಕೊಡುವ ಸಮಾಜ ವ್ಯವಸ್ಥೆಯನ್ನೇ ಮಾರ್ಕ್ಸ್ ಬಂಡವಾಳವಾದಿ ಸಮಾಜದ ಗೋರಿಯ ಮೇಲೆ ಭವಿಷ್ಯದಲ್ಲಿ ಆವಿರ್ಭವಿಸುವ ಸಮಾಜದ ಅತ್ಯುನ್ನತ ಸ್ಥಿತಿಯಾದ ಕಮ್ಯುನಿಸ್ಟ ಸಮಾಜವ್ಯವಸ್ಥೆ ಎನ್ನುತ್ತಾನೆ. ಮಾರ್ಕ್ಸ್‌ನ ಈ ಸ್ವರ್ಣಯುಗ ಭವಿಷ್ಯದಲ್ಲಿ ನಿರ್ಮಿತವಾಗಬೇಕಾದದ್ದು. ಆದರೆ ಪ್ರತಿಯೊಬ್ಬನಿಂದ ಅವನ ಸಾಮರ್ಥ್ಯಕ್ಕನುಗುಣವಾಗಿ ದುಡಿಸಿಕೊಂಡು ಪ್ರತಿಯೊಬ್ಬನಿಗೆ ಅವನ ಅವಶ್ಯಕತೆಗನುಗುಣವಾಗಿ ಕೊಡುವ ವ್ಯವಸ್ಥೆ ಪ್ರಾಚೀನ ಭಾರತದ ಜಾತಿ ವ್ಯವಸ್ಥೆಯಲ್ಲಿ ಇತ್ತು ಎನ್ನುವ ಮೂಲಕ ಲೋಹಿಯಾ, ಮಾರ್ಕ್ಸ ಹೇಳುವ ಸಮಾಜದ ಅತ್ಯುನ್ನತ ಸ್ಥಿತಿ, ಕಮ್ಯುನಿಸ್ಟ್ ವ್ಯವಸ್ಥೆಯನ್ನು ಪ್ರಾಚೀನ ಭಾರತದ ಜಾತಿ ವ್ಯವಸ್ಥೆಯಲ್ಲಿ ಕಂಡುಕೊಳ್ಳುತ್ತಾರೆ. ತಮ್ಮ ಸ್ವರ್ಣಯುಗವನ್ನು ಪ್ರಾಚೀನ ಭಾರತದಲ್ಲಿ ಕಂಡುಕೊಳ್ಳುತ್ತಾರೆ.

ಇಂತಹ ಪುನರುತ್ಥಾನವಾದಕ್ಕೆ ಕಾರಣಗಳನ್ನು ಗುರುತಿಸುತ್ತ, ಅಶೋಕ ಮೆಹತಾ, ಎಲ್ಲಾ ಹೊಸ ರಾಷ್ಟ್ರಗಳು ಅಹಂಕಾರ ಹಾಗೂ ಆಜ್ಞಾಧಾರಕತನಗಳ ನಡುವಿನ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಪಶ್ಚಿಮವನ್ನು ಅನುಸರಿಸಲೂ ಬೇಕು ಆದರೆ ಅದನ್ನು ವಿರೋಧಿಸಲೂ ಬೇಕು ಎನ್ನುವ ಬಿಕ್ಕಟ್ಟು, ಗತಕಾಲಕ್ಕೆ ಮರಳುವಂತೆ, ಹೆಮ್ಮೆ ತರುವ ಗತಕಾಲದ ನೆನಪುಗಳನ್ನು ಅಗೆದು ತೆಗೆಯುವಂತೆ ಮಾಡಿತು. ಪ್ರಸ್ತುತದ ಅನ್ಯಾಯವನ್ನು ಸರಿಪಡಿಸಲು ಗತಕಾಲವನ್ನು ಆಹ್ವಾನಿಸಲಾಯಿತು; ಬಲಶಾಲಿ ಪಶ್ಚಿಮದ ಬಗ್ಗೆ ಉಂಟಾದ ಕೀಳರಿಮೆಯನ್ನು ಮೆಟ್ಟಲು, ಗತಕಾಲವನ್ನು ಆಕರ್ಷಣೀಯವನ್ನಾಗಿ ಮಾಡಬೇಕಾಗಿ ಬಂದರೂ, ಅದರ ಮೇಲೆ ಮೇಲರಿಮೆಯನ್ನು ಆರೋಪಿಸುವುದು ಆವಶ್ಯಕವಾಯಿತು. ರೋಮಾಂಚಕಾರಿಯಾಗಿ ಮಾಡಲಾದ ಇತಿಹಾಸ ಉದಯೋನ್ಮುಖ ರಾಷ್ಟ್ರೀಯತೆಯ ಗೂಡಾಯಿತು. ಆದುದರಿಂದಲೇ ಅಡಗೂಲಜ್ಜಿಯ ಕಥೆಗಳ ಪುನರ್ಶೋಧನೆ, ಜನಪದ ಹಾಡುಗಳ ಪುನರುತ್ಥಾನ ಹಾಗೂ ನಿರ್ಲಕ್ಷಿಸಲಾದ ಉಚ್ಚ ಸಂಸ್ಕೃತಿಯ ಉತ್ಸವ, ಎನ್ನುತ್ತಾರೆ.

ನಾವು ಮಾತನಾಡುವಲ್ಲಿ ಬಳಸುವ ಶಬ್ದಗಳು, ಪ್ರತಿಮೆಗಳು, ಪ್ರತೀಕಗಳು ನಮ್ಮ ಸಾಂಸ್ಕೃತಿಕ ಹಿನ್ನೆಲೆಯನ್ನು ಪ್ರತಿಬಿಂಬಿಸುತ್ತವೆ. ರಾಮ, ಕೃಷ್ಣ ಹಾಗೂ ಶಿವ, ದ್ರೌಪದಿಯೋ ಸಾವಿತ್ರಿಯೋ ಹಾಗೂ ಸೌಂದರ್ಯ ಮತ್ತು ಮೈಬಣ್ಣ ಮೊದಲಾದ ತಮ್ಮ ಲೇಖನಗಳಲ್ಲಿ ಲೋಹಿಯಾ ಸಂಸ್ಕೃತಿಯನ್ನು ಹಿಂದೂ ಧರ್ಮದ ಚೌಕಟ್ಟಿನಲ್ಲಿ ವ್ಯಾಖ್ಯಾನಿಸುತ್ತಾರೆ. ಭಾರತದ ಸಂಸ್ಕೃತಿ ಹಾಗೂ ಹಿಂದೂ ಸಂಸ್ಕೃತಿಗಳನ್ನು ಪರ್ಯಾಯ ಶಬ್ದಗಳಾಗಿ ಬಳಸುತ್ತ ಹೋಗುತ್ತಾರೆ. ಅವರು ವಿವರಿಸುವ ಪಾತ್ರಗಳು, ಬಳಸುವ ಸಂಕೇತಗಳು ಕೂಡ, ಹಿಂದೂ ಸಂಸ್ಕೃತಿಯ ಪರಿಚಯವಿಲ್ಲದವರಿಗೆ ಅರ್ಥವಾಗದ ಪಾತ್ರಗಳು ಹಾಗೂ ಸಂಕೇತಗಳು. ಸಾಮಂತವಾದಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದ ಮಹಾಭಾರತದ ಹಾಗೂ ಪುರಾಣಗಳ ಹಲವು ಪಾತ್ರಗಳನ್ನು ಸಮಾಜವಾದಿ ಆದರ್ಶಗಳಾದ ಸ್ವಾತಂತ್ರ್ಯ ಹಾಗೂ ಸಮಾನತೆಗಳ ದೃಷ್ಟಿಯಿಂದ ನೋಡುತ್ತ ಲೋಹಿಯಾ ರೋಮಾಂಚನಗೊಳ್ಳುತ್ತಲೂ. ಭಾರತದ ನಿಜವಾದ ಪ್ರತೀಕ ದ್ರೌಪದಿಯೇ ಹೊರತು ಸಾವಿತ್ರಿಯಲ್ಲ ಎನ್ನುವಾಗ ಅವರು ಸಂಸ್ಕೃತಿಯನ್ನು ರಾಷ್ಟ್ರವಾದಿ ದೃಷ್ಟಿಯಿಂದ ನೋಡುತ್ತಾರಲ್ಲದೇ, ಮಹಾಭಾರತ ವಿವರಿಸುವ ಸಮಾಜದ ಸಂಸ್ಕೃತಿ ಸಾಮಂತವಾದಿ ಸಮಾಜದ ಸಂಸ್ಕೃತಿಯಾಗಿತ್ತು ಎನ್ನುವುದನ್ನು ಕಾಣದೇ ಹೋಗುತ್ತಾರೆ. ಸ್ವಾತಂತ್ರ್ಯದ ಒತ್ತಾಸೆಯನ್ನು ಮೈಗೂಡಿಸಿಕೊಂಡಿದ್ದ ದ್ರೌಪದಿ ಒಂದು ಅಪವಾದಾತ್ಮಕ ಹಾಗೂ ಕಾಲಾತಿಕ್ರಮಿತ ಪ್ರತೀಕವಾಗಿದ್ದಳಲ್ಲದೇ ಕರ್ಣನನ್ನು ಸಾರಥಿ ಪುತ್ರ ಎಂದು ಕರೆಯುವಾಗ ಮತ್ತೇ ಅದೇ ಸಾಮಂತವಾದಿ ಸಂಸ್ಕೃತಿಯ ಆದರ್ಶಗಳನ್ನೇ ಮೆರೆಯುತ್ತಾಳೆ ಎನ್ನುವುದನ್ನೂ ಲೋಹಿಯಾ ಕಾಣದೇ ಹೋಗುತ್ತಾರೆ, ಹಾಗೂ ಅದು ಅವಳು ಸಣ್ಣ ವಯಸ್ಸಿನಲ್ಲಿ ಮಾಡಿದ ತಪ್ಪೆಂದು ಸಮರ್ಥಿಸುತ್ತಾರೆ.

ದ್ರೌಪದಿಯ ಬುದ್ಧಿಮತ್ತೆ ಹಾಗೂ ವಾದವಿವಾದದ ಚಾಣಾಕ್ಷತೆಯ ಕಾರಣದಿಂದ ಅವಳನ್ನು ಭಾರತದ ಪ್ರತೀಕ ಎನ್ನುವ ಲೋಹಿಯಾ, ಸಾವಿತ್ರಿ ಬರಿ ಪತಿವೃತಾ ಧರ್ಮದ ಕಾರಣದಿಂದ ಸ್ಮರಣೀಯವಾದಳು ಎನ್ನುತ್ತ, ದ್ರೌಪದಿ ಬರಿ ಮಾನವರೊಂದಿಗೆ ವಾದವಿವಾದ ಮಾಡುವ ದಾರ್ಷ್ಟ್ಯವಿಟ್ಟುಕೊಂಡಿದ್ದರೆ, ಸಾವಿತ್ರಿ ಯಮ ಧರ್ಮನೊಡನೆ ವಾದವಿವಾದಕ್ಕಿಳಿದು, ತರ್ಕದಲ್ಲಿ ಅವನನ್ನು ಮೀರಿ, ಸಿಕ್ಕಿಹಾಕಿಸಿ, ಸೋಲಿಸಿ, ತನ್ನ ಪತಿಯ ಪ್ರಾಣವನ್ನು ಗೆಲ್ಲುತ್ತಾಳೆ ಎನ್ನುವುದನ್ನು ಗಮನಿಸುವುದಿಲ್ಲ. ಪತಿವೃತಾ ಧರ್ಮವೇ ಸಾಂಸ್ಕೃತಿಕ ಮೌಲ್ಯವಾಗಿದ್ದ

ದ್ರೌಪದಿಯ ಬುದ್ಧಿಮತ್ತೆ ಹಾಗೂ ವಾದ ವಿವಾದದ ಚಾಣಾಕ್ಷತೆಯ ಕಾರಣದಿಂದ ಅವಳನ್ನು ಭಾರತದ ಪ್ರತೀಕ ಎನ್ನುವ ಲೋಹಿಯಾ, ಸಾವಿತ್ರಿ ಬರಿ ಪತಿವೃತಾ ಧರ್ಮದ ಕಾರಣದಿಂದ ಸ್ಮರಣೀಯ ವಾದಳು ಎನ್ನುತ್ತ, ದ್ರೌಪದಿ ಬರಿ ಮಾನ ವರೊಂದಿಗೆ ವಾದವಿವಾದ ಮಾಡುವ ದಾರ್ಷ್ಟ್ಯವಿಟ್ಟುಕೊಂಡಿದ್ದರೆ, ಸಾವಿತ್ರಿ ಯಮ ಧರ್ಮನೊಡನೆ ವಾದವಿವಾದಕ್ಕಿಳಿದು, ತರ್ಕದಲ್ಲಿ ಅವನನ್ನು ಮೀರಿ, ಸಿಕ್ಕಿಹಾಕಿಸಿ, ಸೋಲಿಸಿ, ತನ್ನ ಪತಿಯ ಪ್ರಾಣವನ್ನು ಗೆಲ್ಲುತ್ತಾಳೆ ಎನ್ನುವುದನ್ನು ಗಮನಿಸುವುದಿಲ್ಲ. ಪತಿವೃತಾ ಧರ್ಮವೇ ಸಾಂಸ್ಕೃತಿಕ ಮೌಲ್ಯವಾಗಿದ್ದ ಸಾಮಂತ ವಾದಿ ಸಂಸ್ಕೃತಿಯಲ್ಲಿ ಪತ್ನೀವೃತರನ್ನು ಹುಡುಕಲು ಸವಾಲೆಸೆಯುತ್ತಾರೆ.

ಸಾಮಂತವಾದಿ ಸಂಸ್ಕೃತಿಯಲ್ಲಿ ಪತ್ನೀವ್ರತರನ್ನು ಹುಡುಕಲು ಸವಾಲೆಸೆಯುತ್ತಾರೆ. ಕೊನೆಕೊನೆಗಂತೂ ಪ್ರಾಚೀನ ಭಾರತದ ಸಂಸ್ಕೃತಿಯನ್ನು, ಅದು ಸಾಮಂತವಾದಿ-ಪುರುಷ ಪ್ರಧಾನ ಸಂಸ್ಕೃತಿಯಾಗಿತ್ತೆಂದು ಗೊತ್ತಿದ್ದೋ ಗೊತ್ತಿಲ್ಲದೆಯೋ, ಹಾಡಿ ಹೊಗಳುತ್ತಾರೆ. ಅವರ ಇಂಥದೇ ಚಿಂತನೆಗಳಿಂದಾಗಿಯೇ ಬಹುಶ: ಅವರು ಹಿಂದುತ್ವವನ್ನು ಪ್ರತಿಪಾದಿಸುವ ಕೋಮುವಾದೀ ಶಕ್ತಿಗಳಿಗೆ ರಾಜಕೀಯವಾಗಿಯೂ ಹತ್ತಿರವಾಗಿದ್ದರು ಹಾಗೂ ಅಂಥ ಶಕ್ತಿಗಳು ಅವರಿಗೂ ಹತ್ತಿರವಾಗಿದ್ದವು ಎಂದು ತೋರುತ್ತದೆ. ಆದರೆ ಪ್ರಾಚೀನ ಭಾರತದ ಈ ಸಾಮಂತವಾದಿ ಸಂಸ್ಕೃತಿಯ ಜೊತೆಗೆಯೇ ಜನಸಾಮಾನ್ಯರ ಒಂದು ಸಂಸ್ಕೃತಿಯೂ ಪ್ರಚಲಿತವಾಗಿತ್ತು ಎನ್ನುವುದನ್ನು ಲೋಹಿಯಾ ಗಮನಿಸದೇ ಹೋಗುತ್ತಾರೆ.

ಲೋಹಿಯಾ, ಮೂರು ನಾಲ್ಕು ಸಾವಿರ ವರ್ಷಗಳ ಹಿಂದಿನ ಭಾರತವನ್ನು... .. ನಿಜಕ್ಕೂ ಇದೊಂದು ದೊಡ್ಡ ಅದ್ಭುತ ಎನ್ನುವ ಕಾಲಘಟ್ಟದಲ್ಲಿಯೇ ಮನು, ನ ಸ್ತ್ರೀ ಸ್ವಾತಂತ್ರ್ಯಮರ್ಹತೀತಿ ಎಂದು ಹೇಳಿದ್ದಕ್ಕಿಂತ ಹೆಚ್ಚಿನ ಪುರುಷ ಪ್ರಧಾನ ಸೂಕ್ತವನ್ನು ಲೋಹಿಯಾ ಹೇಳುತ್ತಾರೆ. ದೇವರು ಹಾಗೂ ಹೆಣ್ಣು ಇವೆರಡೇ ಪ್ರಾಯಶಃ ಜೀವನದ ಉದ್ದೇಶಗಳೆಂದು ನಾನೊಮ್ಮೆ ಹೇಳಿದ್ದೆ ಎನ್ನುವ ಲೋಹಿಯಾ ಪುರುಷಪ್ರಧಾನ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಯಾಕೆಂದರೆ ಹೆಣ್ಣು ಜೀವನದ ಉದ್ದೇಶವಾಗುವುದು ಗಂಡಿಗೆ ಮಾತ್ರ ಸಾಧ್ಯ. ಹಾಗಾದರೆ ಹೆಣ್ಣಿಗೆ ಜೀವನದ ಉದ್ದೇಶವೇ ಇಲ್ಲವೇ? ಇದಕ್ಕೆ ಲೋಹಿಯಾ ಅವರ ಚಿಂತನೆಯಲ್ಲಿ ಉತ್ತರ ದೊರಕುವುದಿಲ್ಲ.

ಸಾವಿರ ವರ್ಷಗಳ ಹಿಂದೆ ಬದುಕಿದ್ದ ಪ್ರವಾದಿ ಮೊಹಮ್ಮದ ಕೂಡ ಹೀಗೆಯೇ ಹೇಳಿದ್ದರು, ಒಳ್ಳೆಯ ಮನುಷ್ಯ ಸತ್ತ ಮೇಲೆ ಸ್ವರ್ಗ ಸೇರುತ್ತಾನೆ, ಅಲ್ಲಿ ಆವನಿಗೆ, ಅವನು ಮಾಡಿದ ಪುಣ್ಯದ ಫಲವಾಗಿ, ಸುಖಪಡಲು ಅಪ್ಸರೆಯರು ಸಿಕ್ಕುತ್ತಾರೆ ಎಂದು. ಹಾಗಾದರೆ ಪುಣ್ಯ ಮಾಡಿದ ಹೆಣ್ಣು ಸತ್ತು ಸ್ವರ್ಗ ಸೇರುವುದಿಲ್ಲವೇ? ಸೇರಿದರೆ ಅವಳಿಗೆ ಅವಳು ಮಾಡಿದ ಪುಣ್ಯದ ಫಲವಾಗಿ ಸುಖಪಡಲು ಯಾರು ಸಿಕ್ಕುತ್ತಾರೆ? ಈ ಪ್ರಶ್ನೆಗೆ ಮೊಹಮ್ಮದರ ಚಿಂತನೆಯಲ್ಲಿ ಉತ್ತರ ಸಿಕ್ಕುವುದಿಲ್ಲ. ಇಲ್ಲಿ ಲೋಹಿಯಾ ಹಾಗೂ ಮೊಹಮ್ಮದ ಇಬ್ಬರೂ ಹೆಣ್ಣಿನ ಪ್ರತ್ಯೇಕ ಹಾಗೂ ಸಮಾನ ಅಸ್ತಿತ್ವವನ್ನೇ ನಿರಾಕರಿಸುತ್ತಾರೆ.

ಇಲ್ಲಿ ಅವಳು ಗಂಡಿಗೆ ಸುಖ ಕೊಡುವ ಒಂದು ವಸ್ತು ಮಾತ್ರವಾಗಿ ಬಿಡುತ್ತಾಳೆ ಅಥವಾ ದೇವರಿಗೆ ಸಮನಾದ ಒಂದು ಆರಾಧ್ಯಳಾಗುತ್ತಾಳೆಯೇ ಹೊರತು ಗಂಡಸಿಗೆ ಸಮನಾದ ಒಬ್ಬ ವ್ಯಕ್ತಿಯಾಗುವುದಿಲ್ಲ. ದ್ರೌಪದಿಯೋ ಸಾವಿತ್ರಿಯೋ ಎಂಬ ಲೇಖನದಲ್ಲಿ ನೂರಾರು ಅಥವಾ ಸಾವಿರಾರು ವರ್ಷಗಳಿಂದ ಹಿಂದೂ ಗಂಡಸರ ಮನಸ್ಸು ತಮ್ಮ ಹಿತವನ್ನು ಮಾತ್ರ ಗಮನದಲ್ಲಿರಿಸಿಕೊಂಡು, ಅಸಮಾನತೆಯ ಆಧಾರದ ಮೇಲೆ ರೂಪುಗೊಂಡಿದೆ ಎಂದು ಹೇಳುವ ಲೋಹಿಯಾ ಬಹುಶ: ಈ ಅಸಮಾನತೆಯನ್ನು ದಾಟುವಲ್ಲಿ ಸೋಲುತ್ತಾರೆ, ಬರಿ ಗಂಡಸಲ್ಲ ಹಿಂದೂ ಗಂಡಸಾಗುತ್ತಾರೆ.

ಶ್ರೀಮತಿ ಇಂದಿರಾ ಗಾಂಧಿಯವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಸಲಹೆ ಬಂದಾಗ, ಇಂದಿರಾ ಅವರೇ ಕಾಂಗ್ರೆಸ್ ಅಧ್ಯಕ್ಷರಾಗುವುದು ನನಗೆ ಇಷ್ಟ, ಯಾಕೆಂದರೆ ಆಗ ದಿನಾಲೂ ಅವರ ಸುಂದರ



ಲೋಹಿಯಾ

ವಾದ ಮುಖವನ್ನು ಪತ್ರಿಕೆಗಳಲ್ಲಿ ನೋಡಬಹುದಲ್ಲ ಎಂದು ಲೋಹಿಯಾ ಹೇಳಿದುದನ್ನು ಈ ಹಿನ್ನೆಲೆಯಲ್ಲಿಯೇ ಅರ್ಥೈಸಬಹುದಾಗಿದೆ. ಇಂತಹ ಮಾತಿನಲ್ಲಿ ಕೂಡ ಹೆಣ್ಣು ಒಂದು ಸೌಂದರ್ಯದ ಪ್ರತಿಮೆ ಮಾತ್ರವಾಗುತ್ತಾಳೆ, ಇಲ್ಲಿ ಅವಳ ರಾಜಕೀಯ ಸಾಮರ್ಥ್ಯವನ್ನು ತುಚ್ಛೀಕರಿಸಲಾಗುತ್ತದೆ. ಒಂದು ಬಾರಿ ಲೋಕಸಭೆಯಲ್ಲಿ ಲೋಹಿಯಾ ಅವರು ಫಾತಿಮಾ ಜಿನ್ನಾ ಅವರನ್ನು ಮಿಸ್ಟರ್ ಫಾತಿಮಾ ಜಿನ್ನಾ ಎಂದು ಸಂಬೋಧಿಸಿದರು. ಆಗ ಲೋಕಸಭೆಯ ಮಹಿಳಾ ಸದಸ್ಯರು ತಕರಾರು ಮಾಡಿದಾಗ ಲೋಹಿಯಾ ಅವರು, ಲಿಂಗ ಯಾವುದೇ ಆದರೂ ಮಹಿಳೆಯರನ್ನು ಮಿಸ್ಟರ್ ಎಂದೇ ಸಂಬೋಧಿಸಬೇಕು ಎಂದಿದ್ದರು. ಇದೂ ಕೂಡ ಪುರುಷಪ್ರಧಾನ ನಿಲುವೇ. ಯಾಕೆಂದರೆ ಪುರುಷರನ್ನು ಮಿಸೆಸ್ ಎಂದು ಸಂಬೋಧಿಸಬೇಕೆಂದು ಲೋಹಿಯಾ ಹೇಳುವುದಿಲ್ಲ. ಸಮಾಜವಾದಿಯಾದವನು ಹೀಗೆ ಹೆಣ್ಣನ್ನು ಒಂದು ಬರಿ ಸುಖಲೋಲುಪದ ವಸ್ತು, ಸೌಂದರ್ಯದ ಪ್ರತಿಮೆ ಎಂದು ಪರಿಗಣಿಸಲಾಗದು. ಸಾಮಂತವಾದಿ ಸಂಸ್ಕೃತಿಯಲ್ಲಿ ಹೆಣ್ಣು, ಗಂಡಸಿನ ಒಡೆತನದ ಹಕ್ಕಿಗೆ ಒಳಪಡುವ ಒಂದು ಆಸ್ತಿಯಾಗುತ್ತಾಳೆ. ಒಂದು ಹೆಣ್ಣು ತನ್ನ ಗಂಡನನ್ನು ಯಜಮಾನ ಎಂದು ಕರೆಯುವುದು ಇದೇ ಸಂಸ್ಕೃತಿಯ ಪ್ರತೀಕ. ಸಂಸತ್ತು ಒಡೆಯ, ಪ್ರಧಾನಿ ಅದರ ನೌಕರ ಎಂದು ಹೇಳುವಲ್ಲಿಯೂ ಲೋಹಿಯಾ ಸಾಮಂತವಾದಿ ಸಂಸ್ಕೃತಿಯ ಭಾಷೆಯನ್ನೇ ಬಳಸುತ್ತಾರೆ.

ಸಮಾಜವಾದಿ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುವುದು ಸುಲಭವೇನಲ್ಲ. ಸಮಾಜವಾದದ ಬಗ್ಗೆ ಮಾತನಾಡುತ್ತ ನಾವು ಲಾಭ, ನೌಕರಿ ಮೊದಲಾದ ಬಂಡವಾಳವಾದಿ-ಸಾಮಂತವಾದಿ ಶಬ್ದಗಳನ್ನು ಬಳಸುತ್ತಿರುತ್ತೇವೆ. ಇಂದಿಗೂ ನಮ್ಮ ಸಾಹಿತ್ಯ ಪುರುಷ ಪ್ರಧಾನವೂ, ಸಾಮಂತವಾದಿ ಯುಗದ ಪ್ರತೀಕವಾಗಿ ನಾಯಕ-ಕೇಂದ್ರಿತವೂ ಆಗಿರುವುದು ಇದಕ್ಕೆ ಸಾಕ್ಷಿ ನೀಡುತ್ತದೆ. ಸಾಮಂತವಾದಿ ಅಥವಾ ಬಂಡವಾಳವಾದಿ ರಾಜ್ಯವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಹಾಗೂ ಸಾಮಾಜಿಕ ವ್ಯವಸ್ಥೆಗಳು ಸಮಾಜವಾದಿ ರಾಜ್ಯವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಹಾಗೂ ಸಾಮಾಜಿಕ ವ್ಯವಸ್ಥೆಗಳತ್ತ ಮುಂದುವರಿಯುತ್ತಿದ್ದಂತೆಯೇ, ಸಮಾಜವಾದಿ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಬೇಕಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಪ್ರಜಾಪ್ರಭುತ್ವದ ಸಾಧ್ಯತೆಗಳು ಮತ್ತು ಸವಾಲುಗಳು

ಡಾ. ಡೊಮಿನಿಕ್. ಡಿ

ಪ್ರಜಾಪ್ರಭುತ್ವ ಎಂದಾಕ್ಷಣ ಮೊನ್ನೆ ಸ್ನೇಹಿತರೊಬ್ಬರು ಮಾಡಿದ ಕಟುಕಿಯ ಚುಟುಕು ನೆನಪಾಗುತ್ತದೆ. ಅವರು 'ಪ್ರಜಾಸತ್ತಾತ್ಮಕ' ಮತ್ತು 'ಪ್ರತಿನಿಧಿ' ಪದಗಳನ್ನು ಈ ರೀತಿಯಾಗಿ ಬಿಡಿಸಿಕೊಂಡು ಅರ್ಥೈಸಿದ್ದರು-ಪ್ರಜೆಯ ಸತ್ತ ಆತ್ಮ-ಪ್ರಜಾಸತ್ತಾತ್ಮಕ, ಪ್ರತಿ ಯೊಂದು ಅವಕಾಶ ವನ್ನು 'ನಿಧಿ'ಯನ್ನಾಗಿ ಪರಿವರ್ತಿಸಿಕೊಳ್ಳುವುದೇ 'ಪ್ರತಿನಿಧಿ' ಎಂದಿದ್ದರು. ಇದು ಅಣಕು ಎಂದರೂ ಸಹ ವರ್ತಮಾನದ ರಾಜಕೀಯಕ್ಕೆ ಕನ್ನಡಿ ಹಿಡಿದಂತಿದೆ. ಆದರೆ ಇದು ಕೇವಲ 'ನಿರಾಶಾದಾಯಕ' ಎಂದು ಸಿನಿಕರಾಗುವ ಬದಲು ಎಚ್ಚರಿಕೆಯ ಮತ್ತು ಜವಾಬ್ದಾರಿಯುತ ಮುನ್ನಡೆ ಇಡುವುದು ಮುಖ್ಯವಾದುದು. ಈ ಕಾರಣದಿಂದ ಡಾ. ಬಿ. ಆರ್. ಅಂಬೇಡ್ಕರ್‌ರವರು ಪ್ರಜಾಪ್ರಭುತ್ವವನ್ನು ಕುರಿತು ಹೇಳಿರುವ ಒಂದು ವ್ಯಾಖ್ಯಾನವನ್ನು ಇಲ್ಲಿ ಗಮನಿಸುವುದು ಸೂಕ್ತವಾದುದು. ಅವರ ಪ್ರಕಾರ 'ಪ್ರಜಾಪ್ರಭುತ್ವ' ಎಂದರೆ 'ಜನರ ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ರ್‍ಯಾಡಿಕಲ್ ಆದ ಬದಲಾವಣೆಯನ್ನು ಅಹಿಂಸಾತ್ಮಕವಾಗಿ ತರುವುದೇ ಆಗಿದೆ'. ಇದು ಭಾರತೀಯ ಪರಂಪರೆಯಲ್ಲಿ ಶ್ರಮಣ ಪರಂಪರೆಗಳ[1] ಮುಕುಟ ಪ್ರಾಯವಾದ ಬೌದ್ಧ ತಾತ್ವಿಕತೆಯನ್ನು ಆಧರಿಸಿದ್ದು ಎನ್ನುವುದನ್ನು ನಾವು ನೆನಪಿಡುವುದು ಅವಶ್ಯವಾದುದು.

ವಸಾಹತುಶಾಹಿ ಆಧುನಿಕತೆಯ ರಾಜಕೀಯದಲ್ಲಿ ಹೊರಬಂದ ರಾಷ್ಟ್ರೀಯ ಚಳವಳಿ ಮತ್ತು ತದನಂತರದ ಪ್ರಜಾಪ್ರಭುತ್ವದ ಚರ್ಚೆಗಳು ವಿಭಿನ್ನವಾಗಿ ನಡೆಯುತ್ತಿದ್ದಾಗ ಶ್ರಮಣ ಪರಂಪರೆಗಳ ಅಂತರಾಳವನ್ನು ಅರಿತಿದ್ದ ಅಂಬೇಡ್ಕರ್‌ರವರು ಬೌದ್ಧಪರಂಪರೆಯಲ್ಲಿ ತಮ್ಮನ್ನೇ ಕಂಡುಕೊಂಡಿದ್ದು, ಆ ಕಾಣ್ಕೆಯ ಪ್ರವಾದಿಯೆಂಬಂತೆ ಬೌದ್ಧಧಮ್ಮದ 'ನವಯಾನ'ವನ್ನು ನಮಗೆ ತೆರೆದಿದ್ದಾರೆ. ಆದರೆ ಈ ಸಂಗತಿಯನ್ನು ಮರೆಮಾಚಲು ಅನೇಕ ಭಾರತೀಯ ಬ್ರಾಹ್ಮಣ ಸಮಾಜಶಾಸ್ತ್ರಜ್ಞರು ತಮ್ಮ ಸ್ವಯಂತಂತ್ರವಾದಿ ವರಸೆಯನ್ನು ಮರೆಯುತ್ತಾ ತಮ್ಮನ್ನು 'ವರ್ಣಾಶ್ರಮ' ಧರ್ಮದಲ್ಲಿ ಪ್ರತಿಷ್ಠಾಪಿಸಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಈ ವಿಚಿತ್ರ ಸನ್ನಿವೇಶದಲ್ಲಿ ನಾವು ವರ್ತಮಾನವನ್ನು ಎದುರಿಸಬೇಕಾದರೆ ಭವಿಷ್ಯದ 'ಆಗುವಿಕೆ'ಯಲ್ಲಿ ನಂಬಿಕೆಯಿಟ್ಟು ವರ್ತಮಾನವನ್ನು ಅರ್ಥೈಸುವುದು ಸೂಕ್ತವಾದುದು. ಇಲ್ಲವಾದಲ್ಲಿ ನಮ್ಮ ಯೋಚನೆಗಳೆಲ್ಲವೂ ಸಹ 'ಬ್ರಾಹ್ಮಣ್ಯ'ದ ಕರ್ಮಸಿದ್ಧಾಂತವನ್ನು ಮುಂದುವರೆಸುವ ವರಸೆಗಳಾಗಿ ಬಿಡುವ ಅಪಾಯಗಳಿವೆ.

ಈ ಅಪಾಯವನ್ನು ಮೀರುವ ಸಲುವಾಗಿ ಪ್ರಸ್ತುತ ಲೇಖನ ಎರಡು ಅಂಶಗಳನ್ನು ಆಧಾರವಾಗಿಟ್ಟು ಅಂಬೇಡ್ಕರ್‌ರವರು ಸೂಚಿಸಿರುವ ಪ್ರಜಾಪ್ರಭುತ್ವದ ಸಾಧ್ಯತೆಗಳನ್ನು ವಿವರಿಸಿಕೊಳ್ಳಲು ಪ್ರಯತ್ನಿಸುತ್ತದೆ: ಒಂದು-ಪ್ರಸ್ತುತ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದುದು ಹೇಗೆ[2] ಎಂಬುದನ್ನು ವಿವರಿಸಿಕೊಳ್ಳುವುದು. ಎರಡು-ಐಡೆಂಟಿಟಿ ಪಾಲಿಟಿಕ್ಸ್‌ನ ಸಂದರ್ಭದಲ್ಲಿ ಭಿನ್ನತೆಗಳನ್ನು ವಿವರಿಸಿಕೊಳ್ಳುವ ಮೂಲಕ ಪ್ರಜಾಪ್ರಭುತ್ವದ ಹೊಸ ಸಾಧ್ಯತೆಗಳನ್ನು ವಿವರಿಸಿಕೊಳ್ಳುವುದು. ಈ ಎರಡು ಸಂಗತಿಗಳನ್ನು ಮೇಲಿನ ವಿಚಾರಗಳ ತಳಹದಿಯಲ್ಲೇ ಚರ್ಚಿಸಲಾಗುತ್ತದೆ ಎನ್ನುವುದನ್ನು ನಾವು ಮರೆಯುವಂತಿಲ್ಲ.

ಮೊದಲನೇ ಸಂಗತಿಯನ್ನು ವಿವರಿಸಿಕೊಳ್ಳುವಾಗ ಈ ನಾಡಿನಲ್ಲಿ 1992ರ ನಂತರ ಕಾಣಿಸಿಕೊಂಡ 'ಪ್ರಪಂಚೀಕರಣ'ದ ಪ್ರಕ್ರಿಯೆಯ ವಿದ್ಯಮಾನಗಳು ಮತ್ತದರ ಪರಿಣಾಮಗಳನ್ನು ಗುರುತಿಸುವಾಗ, ಅಲ್ಲಿ ಪ್ರಗತಿ ಮತ್ತು ಅಭಿವೃದ್ಧಿ ಎನ್ನುವುದು ಅತ್ಯಾಧುನಿಕವಾದ ತಂತ್ರಜ್ಞಾನದ ಮೂಲಕ ಜನಸಾಮಾನ್ಯರನ್ನು ವಂಚಿಸಿದ್ದನ್ನು ನಾವು ಗಮನಿಸಬೇಕಾಗಿದೆ. ಇದಕ್ಕಾಗಿ ಕರ್ನಾಟಕದ ರಾಜಕಾರಣವನ್ನು ಮತ್ತು ಆ ರಾಜಕಾರಣದ ಮೂಲಕ ವ್ಯಕ್ತವಾದ ಅಭಿವೃದ್ಧಿ ಪಥವನ್ನು ಇನ್ನು ಮುಂದೆ ನಾನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಕರ್ನಾಟಕದಲ್ಲಿ ಕಳೆದ ಒಂದು ದಶಕದಲ್ಲಿ ಆದ ಬದಲಾವಣೆಗಳನ್ನು ಅರಿಯಲು ಈ ಕೆಳಗಿನ ನಕಾಶೆಯನ್ನು ಗಮನಿಸುವುದು ಸೂಕ್ತವಾದುದು:

ಮೇಲಿನ ನಕಾಶೆಯನ್ನು ಗಮನಿಸಿದಾಗ ಈ ದೇಶದ ಆರ್ಥಿಕ ನೀತಿಗಳು (ವಿದೇಶಿ ಬಂಡವಾಳವನ್ನು ಆಹ್ವಾನಿಸುತ್ತಾ ಅದಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯವನ್ನು ಒದಗಿಸುತ್ತಾ ಸ್ಥಳೀಯವಾದ ಜನ ಬದುಕಿನ ಆರ್ಥಿಕ ವ್ಯವಸ್ಥೆಯನ್ನು ನಿರ್ಲಕ್ಷಿಸಿದ್ದು ಮತ್ತು ಈ ನಿರ್ಲಕ್ಷಕ್ಕೆ ಹೊಣೆಗಾರಿಕೆಯನ್ನು ಜನರ ಮೇಲೆಯೇ ಹೊರೆಸಿದ್ದನ್ನು ನಾವಿಲ್ಲಿ ಗಮನಿಸುವುದು ಅವಶ್ಯಕವಾದುದು) ಅನುಸರಿಸಿದ ಕ್ರಮಗಳಿಂದಾಗಿ ಕರ್ನಾಟಕದಲ್ಲಿ ನಗರೀಕರಣ ಮತ್ತು ಕೈಗಾರೀಕರಣ ಸರಳ ರೇಖಾತ್ಮಕವಾಗಿ ಅಂದರೆ ರಾಷ್ಟ್ರೀಯ ಸುವರ್ಣ ಪಥದ ಹಾದಿಯು ಚೆನ್ನೈರಿಯೇ ಸಾಗಿರುವುದನ್ನು ನಾವು ನೋಡುತ್ತೇವೆ. ಇದನ್ನೇ ನಾವು ನಕಾಶೆಯಲ್ಲಿ ಕಾಣುವುದು. ಅಂದರೆ ಬಹು ಮುಖ್ಯವಾಗಿ ನಾಲ್ಕು ಸರಳ ರೇಖಾತ್ಮಕ ಬೆಳವಣಿಗೆಯನ್ನು 'ಬೆಂಗಳೂರು' ಮಹಾನಗರವನ್ನು ಕೇಂದ್ರವಾಗಿಟ್ಟುಕೊಂಡು ಸಾಗಿರುವುದನ್ನು ಕಾಣುತ್ತೇವೆ:

1. ಬೆಂಗಳೂರು-ರಾಮನಗರ-ಮಂಡ್ಯ ಮತ್ತು ಮೈಸೂರು ರಹದಾರಿಯ ಸುತ್ತಲು ಆದ ಬೆಳವಣಿಗೆಗಳು.

ಈ ರಹದಾರಿಯ ಸುತ್ತಲು ಆದ ಬೆಳವಣಿಗೆಗಳೆಂದರೆ ರಾಮನಗರ ಒಂದು ಜಿಲ್ಲೆಯಾಗಿ ಘೋಷಣೆಯಾದುದು ಮತ್ತು ಅದರ ಸುತ್ತಲೂ ಆದ ಕಾರ್ಯಯೋಜನೆಗಳು ಒಂದೆಡೆಯಾದರೆ ಮತ್ತೊಂದೆಡೆ ಮೈಸೂರಿನವರೆಗೆ ಸುಗಮ ಸಂಚಾರಕ್ಕೆ ಅನುವಾಗುವಂತೆ ರಹದಾರಿಯ ನಿರ್ಮಾಣ. ಇದರೊಡನೆ ಬಂದ ನಂದಿ ಇನ್ಫ್ರಾಸ್ಟ್ರಕ್ಚರ್ ಎಕ್ಸ್

ವಸಾಹತುಶಾಹಿ ಆಧುನಿಕತೆಯ ರಾಜಕೀಯದಲ್ಲಿ ಹೊರಬಂದ ರಾಷ್ಟ್ರೀಯ ಚಳವಳಿ ಮತ್ತು ತದನಂತರದ ಪ್ರಜಾಪ್ರಭುತ್ವದ ಚರ್ಚೆಗಳು ವಿಭಿನ್ನವಾಗಿ ನಡೆಯುತ್ತಿದ್ದಾಗ ಶ್ರಮಣ ಪರಂಪರೆಗಳ ಅಂತರಾಳವನ್ನು ಅರಿತಿದ್ದ ಅಂಬೇಡ್ಕರ್ ರವರು ಬೌದ್ಧಪರಂಪರೆಯಲ್ಲಿ ತಮ್ಮನ್ನೇ ಕಂಡುಕೊಂಡಿದ್ದು, ಆ ಕಾಣ್ಕೆಯ ಪ್ರವಾದಿಯೆಂಬಂತೆ ಬೌದ್ಧಧಮ್ಮದ 'ನವ ಯಾನ'ವನ್ನು ನಮಗೆ ತೆರೆದಿದ್ದಾರೆ. ಆದರೆ ಈ ಸಂಗತಿಯನ್ನು ಮರೆಮಾಚಲು ಅನೇಕ ಭಾರತೀಯ ಬ್ರಾಹ್ಮಣ ಸಮಾಜಶಾಸ್ತ್ರಜ್ಞರು ತಮ್ಮ ಸ್ವಯಂತಂತ್ರವಾದಿ ವರಸೆಯನ್ನು ಮರೆಯುತ್ತಾ ತಮ್ಮನ್ನು 'ವರ್ಣಾಶ್ರಮ' ಧರ್ಮದಲ್ಲಿ ಪ್ರತಿಷ್ಠಾಪಿಸಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ.

ಪ್ರೆಸ್ ಹೈ ವೇ ಮತ್ತದರ ಸುತ್ತ ಬೆಳೆದ ಸಂಘರ್ಷ ಮತ್ತು ವ್ಯವಸಾಯ ಭೂಮಿಯ ಕೇಂದ್ರೀಕರಣ ಮತ್ತು ಖಾಸಗೀಕರಣ. ಈ ಬೆಳವಣಿಗೆಯನ್ನು ಅನುಸರಿಸಿ ಬೆಂಗಳೂರು ಮತ್ತು ಮೈಸೂರಿನಲ್ಲಿ ನರ್ಮ್ ನಗರ ಯೋಜನೆಯನ್ನು ಕೈಗೆತ್ತಿಕೊಂಡದ್ದು. (ಮೈಸೂರಿನಿಂದ ಮಡಿಕೇರಿಯವರೆಗೆ ಮತ್ತೊಂದು ರಹದಾರಿಯನ್ನು ನಾವು ಗಮನಿಸಬಹುದಾದರೂ ಅದು ಇನ್ನೂ ಸಹ ಆಗಬೇಕಾಗಿರುವ ಕೆಲಸ)

2. ಬೆಂಗಳೂರು-ಹಾಸನ ಮತ್ತು ಮಂಗಳೂರು ರಹದಾರಿಯ ಸುತ್ತಲೂ ಕಾಣಿಸಿಕೊಂಡಿರುವ ಬದಲಾವಣೆಗಳು. ಮಂಗಳೂರು ಬಂದರಿನಿಂದ ಸಾಗಿಬಂದ ಇಂಧನ ಮತ್ತು ತೈಲ, ಕಬ್ಬಿಣದ ಅದುರಿನ ರಫ್ತು ಮತ್ತು ರಸಗೊಬ್ಬರ ತಯಾರಿಕಾ ಘಟಕ. ಈ ಅಭಿವೃದ್ಧಿಯ ಸುತ್ತಲೂ ಇಂದಿಗೂ ಸಹ ಪದೇ ಪದೇ ಕಾಣಿಸಿಕೊಳ್ಳುತ್ತಿರುವ ಶಿರಾಡಿಘಾಟ್ ರಸ್ತೆಯ ದುರವಸ್ಥೆ ಅಥವಾ ಅದನ್ನು ಕೇಂದ್ರೀಕರಿಸಿರುವ ಪಾಲಿಟಿಕ್ಸ್. ಇದನ್ನು ಅನುಸರಿಸಿ ಇತ್ತೀಚೆಗೆ ಮತ್ತೆ ಆರಂಭವಾದ ರೈಲು ಸಂಚಾರ.

3. ಬೆಂಗಳೂರು-ತುಮಕೂರು-ಚಿತ್ರದುರ್ಗ-ದಾವಣಗೇರಿ-ಹಾವೇರಿ-ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ರಹದಾರಿ ಮತ್ತದರ ಸುತ್ತಲೂ ಕಾಣಿಸಿಕೊಂಡಿರುವ ಬದಲಾವಣೆಗಳು.

4. ಮಂಗಳೂರು - ಉಡುಪಿ - ಕಾರವಾರ ಹೆದ್ದಾರಿ ಮತ್ತು ಕೊಂಕಣ ರೈಲ್ವೆ ಅಭಿವೃದ್ಧಿ. ಈ ಪಥವನ್ನು ಅನುಸರಿಸಿ ಉದಯಿಸಿರುವ ಬಂದರು ಯೋಜನೆಗಳು, ಕೈಗಾರಿಕೆಗಳು ಮತ್ತು ಸೀ ಬರ್ಡ್ ಹಾಗೂ ಕೈಗಾ ಯೋಜನೆಗಳು.

ಈ ಮೇಲಿನ ಸರಳರೇಖಾತ್ಮಕ ಪಥಗಳಲ್ಲಿ ಬಿಜಾಪುರ-ಬೀದರ್ ಮಾರ್ಗವಾಗಿ ಮಹರಾಷ್ಟ್ರ ಮತ್ತು ಹೈದರಾಬಾದ್ ನಡುವೆ ಸಾಗುವ ಹೆದ್ದಾರಿ ಮತ್ತು ಬೆಂಗಳೂರು-ಬಳ್ಳಾರಿ-ರಾಯಚೂರು-ಗುಲ್ಬರ್ಗಾ ರೈಲು ಮಾರ್ಗ ಇದ್ದರೂ ಸಹ ಈ ಪ್ರದೇಶಗಳಲ್ಲಿ ಅಂಥ ಹೇಳಿಕೊಳ್ಳುವ ಬದಲಾವಣೆಗಳೇನು ಕಾಣಿಸುವುದಿಲ್ಲ. ಹಾಗೆಯೇ ಬೆಂಗಳೂರು ಮತ್ತು ಬಳ್ಳಾರಿಯ ಮೂಲಕವಾಗಿ ಹೈದರಾಬಾದ್‌ಗೆ ಸಾಗುವ ರಹದಾರಿ ಇದ್ದರೂ ಸಹ ಅಲ್ಲಿನ ಬೆಳವಣಿಗೆಗಳು ಸ್ಥಳೀಯವಾದುವು ಎನ್ನಲಾಗುವುದಿಲ್ಲ. ಉದಾಹರಣೆಗೆ ಗಣಿಗಾರಿಕೆ ಮತ್ತು ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳು. ಅವು ಈ ಹಿಂದೆ ಹೇಳಿದಂತೆ ವಿದೇಶಿ ಬಂಡವಾಳದ ಸುಗಮ ಸಂಚಾರಕ್ಕಷ್ಟೆ ಸೀಮಿತವಾದುದು.

ಮೇಲಿನ ಸರಳರೇಖಾತ್ಮಕವಾದ ಬೆಳವಣಿಗೆಗಳಿಂದಾಗಿ ಬೆಂಗಳೂರು ಕೇಂದ್ರವಾಗಿ ಮತ್ತು ಆ ಸರಳರೇಖೆಯ ರಹದಾರಿಗಳಲ್ಲಿ ಬೆಳೆಯುತ್ತಿರುವ ನಗರಗಳು ತಮ್ಮ ಮೂಲಭೂತ ಸೌಕರ್ಯಗಳಿಗಾಗಿ ವ್ಯವಸಾಯ ಭೂಮಿಯನ್ನು ಹೇರಳವಾಗಿ ಆಕ್ರಮಿಸಿಕೊಂಡು ಸ್ಥಳೀಯವಾಗಿ ಇದ್ದಂಥ ಬದುಕಿನ ಕ್ರಮಗಳನ್ನು ಪಲ್ಲಟಗೊಳಿಸುತ್ತವೆ. ಅಲ್ಲದೆ ಈ ಎಲ್ಲಾ ನಗರಗಳಲ್ಲಿ ಕಾಣಿಸಿಕೊಂಡ ರಿಯಲ್ ಎಸ್ಟೇಟ್ ದಂಧೆ ಮತ್ತು ಉಗಮವಾದ ಐಟಿ/ಬಿಟಿ ಹಾಗೂ ಗಾರ್ಮೆಂಟ್ಸ್ ಕಾರ್ಖಾನೆಗಳು ಗ್ರಾಮೀಣ ಪ್ರದೇಶಗಳಿಂದ ಕುಶಲಕರ್ಮಿ ಅಥವಾ ಅತಿ ಹಿಂದುಳಿದ ಜಾತಿಗಳನ್ನು ತಮ್ಮತ್ತ ಸೆಳೆದವು. ಈ ಜನಸಮುದಾಯಗಳಲ್ಲಿ ಪಾರಂಪರಿಕ ಕುಲಕಸುಬುಗಳು ಕಣ್ಮರೆಯಾದವಲ್ಲದೆ, ಈ ಸಮುದಾಯಗಳ ಯುವಜನ ಒಂದಷ್ಟು ಪ್ರೌಢಶಿಕ್ಷಣವನ್ನು ಪಡೆದುಕೊಂಡಿದ್ದ ಕಾರಣ ನಗರಗಳಲ್ಲಿ ಈ ದಶಕದಲ್ಲಿ ಕಾಣಿಸಿಕೊಂಡ ವ್ಯಾಪಾರೀಕರಣ ಮತ್ತು ಕೈಗಾರಿಕೆಗಳಿಗೆ ಅಗತ್ಯವಾದ ಶ್ರಮ ದೊರೆತಂತಾಯಿತು. ಅಲ್ಲದೆ ಈ ನಗರಗಳಿಗೆ ಪೂರಕವಾಗಿಯೇ ಕೇಂದ್ರ ಸರ್ಕಾರದ ನರ್ಮ್ ಯೋಜನೆ ಬಂದದ್ದು. ಹೀಗೆ ನವವಸಾಹತುಶಾಹಿಯ ಆಧುನಿಕತೆ, ಮೇಲೆ ಸೂಚಿಸಿದ ನಕಾಶೆಯನ್ನು ಅನುಸರಿಸಿ ನಗರಗಳ ಸುತ್ತಲೂ ಅನೇಕ 'ವರ್ಗ'ಗಳ ಉದಯ ಕಳೆದ ದಶಕದಲ್ಲಿ ಆಗುತ್ತದೆ.

ಈ ಬೆಳವಣಿಗೆಯಲ್ಲಿ ಕಂಡ ಬಹು ಮುಖ್ಯ ಬದಲಾವಣೆ ಎಂದರೆ ಅದು ಕೇವಲ ಲೇಸೆಫೇರ್ ಥಿಯರಿಯ ಅಥವಾ ಮಾರುಕಟ್ಟೆ ಆಧಾರಿತ ಆರ್ಥಿಕ ಬೆಳವಣಿಗೆಯಾಗಿ ಧಿಡೀರನೆ ಕರ್ನಾಟಕದ ನಗರಗಳಲ್ಲಿ ವಿಚಿತ್ರವಾದ ಶ್ರೀಮಂತರ ಉದಯವಾದುದು. ಈ ಶ್ರೀಮಂತಿಕೆಗೆ ಯಾವುದೇ ರೀತಿಯ ಸಾಂಸ್ಕೃತಿಕವಾದ ಗಟ್ಟಿತನ ಇಲ್ಲವಾಗಿ, ಅದು ತನ್ನನ್ನು ಸಮರ್ಥಿಸಿಕೊಳ್ಳುವ ಸಲುವಾಗಿ 'ಹಿಂದುತ್ವ'ದ ರಾಜಕಾರಣವನ್ನು ಅಗತ್ಯವಾಗಿ ಹಿಡಿದುಕೊಳ್ಳುತ್ತದೆ. ಈ ಕಾರಣದಿಂದಾಗಿ ಜಾಗತೀಕರಣದ ಸೆಕ್ಯುಲರ್ ನೆಲೆಗೆ ಪರ್ಯಾಯವಾಗಿ, ಈ ಶ್ರೀಮಂತ ವರ್ಗ ಹಿಂದುತ್ವವನ್ನು ಆತುಕೊಳ್ಳುತ್ತಿದೆ. ಅಲ್ಲದೆ ಈ ಹಿಂದುತ್ವದ ಹಿಂದಿರುವ ಬ್ರಾಹ್ಮಣ್ಯದ ಶ್ರೇಷ್ಠತೆಯನ್ನೇ ತನ್ನ ಮಾದರಿಯನ್ನಾಗಿ ಅದು ಬಳಸಿಕೊಳ್ಳುತ್ತಿದೆ. ಆದ್ದರಿಂದಲೇ ಬ್ರಾಹ್ಮಣರಲ್ಲದ ಜಾತಿಗಳಲ್ಲೂ ಸತ್ಯನಾರಾಯಣ ಪೂಜೆ ಮುಂತಾಗಿ ಸಂಸ್ಕೃತೀಕರಣದ ವರಸೆಯನ್ನು ನಾವು ಕಾಣುತ್ತೇವೆ. ಈ ಸದಾವಕಾಶವನ್ನು ಬಳಸಿಕೊಂಡ ಬಿಜೆಪಿಯು ಏಕಕಾಲಕ್ಕೆ ಎರಡು ಗುಂಪುಗಳನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಒಂದು - ಈ ದಶಕದಲ್ಲಿ ಉದಯವಾದ ಶ್ರೀಮಂತವರ್ಗವನ್ನು ಮತ್ತು ಇದೇ ದಶಕದಲ್ಲಿ ನಗರಗಳತ್ತ ಬಂದ ಇತರೆ ಹಿಂದುಳಿದ ಜಾತಿಗಳ ಯುವಜನತೆಯನ್ನು ತನ್ನತ್ತ ಸೆಳೆದುಕೊಂಡಿತು. ಹೀಗೆ ಸೆಳೆದುಕೊಳ್ಳುವಾಗ ಈ ಇತರೆ ಹಿಂದುಳಿದ ಜಾತಿಗಳಲ್ಲಿ ಒಂದು ರೀತಿಯ ಸಾಂಸ್ಕೃತಿಕ ದಿವಾಳಿತನ ಕಾಡುತ್ತಿತ್ತು. ಹೀಗಾಗಲೇ ನೋಡಿದಂತೆ ಈ ಜಾತಿಗಳು ತಮ್ಮ ಪಾರಂಪರಿಕ ವೃತ್ತಿಗಳನ್ನು ಕಳೆದುಕೊಂಡು, ತಮ್ಮ ಅಲ್ಪ ವ್ಯವಸಾಯ ಭೂಮಿಗಳನ್ನು ಸಹ ಮಾರಿಕೊಂಡು ಅತಂತ್ರವಾದವು. ಅಲ್ಲದೆ ಪ್ರಜಾಪ್ರಭುತ್ವದಲ್ಲಿ ಈ ಸಮುದಾಯಗಳು ಯಾವುದೇ ರೀತಿಯ ಪ್ರಯೋಜನವನ್ನು ಪಡೆಯಲು ಸೋಲುತ್ತವೆ ಮತ್ತು ಈ ಸಮುದಾಯಗಳಲ್ಲಿ ಹೇಳಿಕೊಳ್ಳುವಂಥ ಯಾವುದೇ ಬಲವಾದ ನಾಯಕತ್ವ ಉದಯವಾಗಲಿಲ್ಲ. ಹಾಗಾಗಿ ಈ ದಶಕದಲ್ಲಿ ಈ ಸಮುದಾಯಗಳು ಹಿಂದುತ್ವವನ್ನು ಒಪ್ಪಿಕೊಳ್ಳುತ್ತವೆ. ಹೀಗಿರುವಾಗ, ಕರ್ನಾಟಕದಲ್ಲಿ ಬೆಳೆದು ಬಂದ ದಲಿತ ಚಳವಳಿ ಮೊದಮೊದಲು ಈ ಜಾತಿ ಸಮುದಾಯಗಳ ಸಮಸ್ಯೆಗಳಿಗೆ ಸ್ಪಂದಿಸಿತಾದರೂ ಸಹ ಕೊನೆಕೊನೆಗೆ ಅದು ಜೆಡಿಎಸ್ ಅಥವಾ 'ಸರ್ವೋದಯ' ಪಕ್ಷಗಳೊಡನೆ ಸೇರಿದಾಗ, ಈ ಸಮುದಾಯಗಳು ಮತ್ತಷ್ಟು ಅತಂತ್ರ ಸ್ಥಿತಿಗೆ ಇಳಿಯುತ್ತವೆ. ಕಾರಣ ದಲಿತ ಸಮುದಾಯಗಳಲ್ಲಿ ಕೆಲವರು ಮೀಸಲಾತಿಯನ್ನು ಬಳಸಿಕೊಂಡು ಆರ್ಥಿಕವಾಗಿ ಗಟ್ಟಿಯಾಗುತ್ತಿದ್ದಂತೆ, ಅವರು ತಮ್ಮದೇ ಆದಂಥ ನೆಲೆಗಳನ್ನು ಕಂಡುಕೊಳ್ಳುತ್ತಾರೆ.

ಇದೂ ಸಹ ಇತರೆ ಹಿಂದುಳಿದ ಜಾತಿಗಳಲ್ಲಿ ಅಭದ್ರತೆಯನ್ನು ಉಂಟುಮಾಡುತ್ತವೆ. ಹೀಗಿರುವಾಗ, ಬಿಜೆಪಿ ಪಕ್ಷವು ಅತ್ತ ದಲಿತರೆಂದು ಗುರುತಿಸಿಕೊಂಡ ಸ್ಪೃಶ್ಯಜಾತಿಗಳ ಅನೇಕ ಮಂದಿಯನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡವಲ್ಲದೆ ಅವರಿಗೆ ತಮ್ಮ ಪಕ್ಷದ ವತಿಯಿಂದ ಎಂಎಲ್ಎ ಟಿಕೆಟ್‌ಗಳನ್ನು ಹಂಚುತ್ತದೆ ಮತ್ತು ಇತರೆ ಹಿಂದುಳಿದ ಜಾತಿಗಳಿಗೂ ಅಗತ್ಯವಾದ ಪ್ರಾತಿನಿಧ್ಯವನ್ನು ನೀಡುತ್ತದೆ. ಹೀಗಾಗಿ ನಗರಗಳಲ್ಲಿ ಧಿಡೀರನೆ ಉದಯವಾದ ಶ್ರೀಮಂತವರ್ಗ ಮತ್ತು ನಗರಗಳಿಗೆ ವಲಸೆ ಬಂದಂಥ ಇತರೆ ಹಿಂದುಳಿದ ವರ್ಗಗಳ ಯುವಜನತೆ ಹಿಂದುತ್ವವನ್ನು ಪ್ರತಿಪಾದಿಸಿದ ಬಿಜೆಪಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡುತ್ತದೆ. ಹೀಗೆ ಮೇಲೆ ಹೇಳಿದಂಥ ಸರಳರೇಖಾತ್ಮಕ ನಗರಗಳಲ್ಲಿ ಆದ ಬೆಳವಣಿಗೆಗಳು ಕರ್ನಾಟಕದಲ್ಲಿ ಬಿಜೆಪಿಯ ಅವಕಾಶಗಳನ್ನು ಮತ್ತಷ್ಟು ಹೆಚ್ಚಿಸಿದವು. ಹೀಗೆ ಬಿಜೆಪಿಯು ಅಧಿಕಾರವನ್ನು ಕರ್ನಾಟಕದಲ್ಲಿ ಪಡೆದುಕೊಳ್ಳುತ್ತದೆ. ಹಾಗಾದರೆ ಮುಂಬರಲಿರುವ ದಿನಗಳಲ್ಲಿ ಬಿಜೆಪಿಯು ತನ್ನಲ್ಲಿ ಯಾವುದೇ ರೀತಿಯ ಭಿನ್ನ ಮತೀಯತೆ ಇದ್ದರೂ ಸಹ ಅದು ಅಧಿಕಾರವನ್ನು ಉಳಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ ಎನ್ನಬಹುದೇ? ಇದು ಹೌದಾದರೆ ನಾವು ಸಂದೇಹ ಪಡಬೇಕಾಗಿಲ್ಲ. ಈ ಅಂಶವನ್ನು ಗಮನಿಸದ 'ಪ್ರಗತಿಪರರು' ತಮ್ಮ ಹಳೇ ಪಟ್ಟುಗಳಲ್ಲೇ ವಿಹರಿಸುತ್ತಿರುವುದು ಆಶಾದಾಯಕವೇನು ಅಲ್ಲ.

ಆದ್ದರಿಂದ ಬಿಜೆಪಿಯೂ ಸಹ ಪ್ರಗತಿಪರರಿಗಿಂತ ಹೆಚ್ಚಾಗಿ ತನ್ನೊಳಗಡೆ ಪ್ರಜಾಸತ್ತಾತ್ಮಕತೆಯನ್ನು ಹೆಚ್ಚಿಸಿಕೊಳ್ಳುತ್ತಾ ಮತ್ತದೇ ಬ್ರಾಹ್ಮಣ್ಯದ ನಿಲುವುಗಳಿಗೆ ಆತುಕೊಳ್ಳುತ್ತಿರುತ್ತದೆ. ಈ ಸಂಗತಿಯನ್ನು ಅತಿ ಸೂಕ್ಷ್ಮವಾಗಿ ನಾವು ಗುರುತಿಸಿಕೊಳ್ಳಬೇಕಾಗುತ್ತದೆ.

ಇನ್ನು ನಮ್ಮ ಎರಡನೇ ಅಂಶವಾದ ಐಡೆಂಟಿಟಿ ಪಾಲಿಟಿಕ್ಸ್‌ನ ಸಂದರ್ಭದಲ್ಲಿ ಭಿನ್ನತೆಗಳನ್ನು ವಿವರಿಸಿಕೊಳ್ಳುವ ಮೂಲಕ ಪ್ರಜಾಪ್ರಭುತ್ವದ ಹೊಸ ಸಾಧ್ಯತೆಗಳೇನು ಎನ್ನುವುದನ್ನು ಇನ್ನು ಮುಂದೆ ಚರ್ಚೆಗೆ ತೆಗೆದುಕೊಳ್ಳಬಹುದು. ಸಮಕಾಲೀನ ಕನ್ನಡ ಜಗತ್ತು ಬಹುರೂಪಿಯಾಗಿ ತನ್ನ ಕುಲ ಪ್ರಜ್ಞೆಯಿಂದ ತೀವ್ರವಾದ ಸವಾಲುಗಳನ್ನು ಎದುರಿಸುತ್ತಿದೆ. ಇಲ್ಲಿ ಕುಲ ಪ್ರಜ್ಞೆ ಎನ್ನುವುದು ಸಂಸ್ಕೃತ ಪರಂಪರೆಯ ಜಾತಿ ಪ್ರಜ್ಞೆ ಅಲ್ಲ. ಅದಕ್ಕೆ ತದ್ವಿರುದ್ಧವಾದ ಎಲ್ಲಾ ಸಮುದಾಯಗಳನ್ನು ಅವುಗಳ ಭಿನ್ನತೆಯ ಆಧಾರದ ಮೇಲೆ ಒಳಗೊಳ್ಳುವಿಕೆಯ ವಿಧಾನ. ಇದಕ್ಕೆ ಇರುವ ತಾತ್ವಿಕ ಆಧಾರಗಳೂ ಸಹ ವೇದಾಂತ ಪ್ರಣೀತ ಜ್ಞಾನ ಮೀಮಾಂಸೆ ಅಲ್ಲ.

ಬದಲಾಗಿ ತನ್ನದೇ ಆದ ರೀತಿಯಲ್ಲಿ ಇಂದಿಗೂ ಒಂದು ಸಮುದಾಯದಲ್ಲಿ ಮನೆದೈವ ಅಥವಾ ಕುಲದೈವವಾಗಿ ಉಳಿದುಕೊಂಡು ಬಂದಿರುವ ಸಾತತ್ಯದ ಪ್ರಜ್ಞೆ ಅದು. ಆದ್ದರಿಂದ ಕುಲ ಪ್ರಜ್ಞೆಯ ಬಗ್ಗೆ ಅಥವಾ ಎತ್ನಿಸಿಟಿಯ ಕುರಿತು ಚರ್ಚಿಸುವಾಗ ಅದನ್ನು ಕೇವಲ ಒಂದು ಸಾಮುದಾಯಿಕ ಅನನ್ಯತೆ ಎಂದಾಗಲಿ ಅಥವಾ ಅದೊಂದು ಸಾಂಸ್ಕೃತಿಕ ತಂತ್ರೋಪಾಯವೆಂದಾಗಲಿ ನೋಡಲಾಗದು. ಬದಲಾಗಿ ಆಧುನಿಕತೆಯನ್ನು ಇದು ಮತ್ತಷ್ಟು ಅರಗಿಸಿಕೊಳ್ಳಲು ಮತ್ತು ಶೋಧಿಸಲು ಹೊರಟಂತೆ ಕಾಣುತ್ತದೆ. ಹಾಗಾಗಿ ಈ ಹಿಂದಿನ ಥಿಯರೆಟಿಕಲ್ ನಿಲುವುಗಳು "Ethnic Claims" ಅನ್ನು ಒಂದು ಸನಾತನಿ/ಪುರಾತನ/ ಪಾರಂಪರಿಕ ಸಂಗತಿಯೆಂದು ಪರಿಗಣಿಸಿದ್ದವು. ಅಲ್ಲದೆ ಆ ಮೂಲಕ ಒಂದು ಸಮುದಾಯ ಭಾವ

(44ನೇ ಪುಟಕ್ಕೆ)

ನಾ ದಿವಾಕರ

ಈ ದೇಶದ ಪ್ರಜೆಗಳು ಇಷ್ಟು ವರ್ಷಗಳ ಕಾಲ ಭ್ರಷ್ಟಾಚಾರವನ್ನು ತಮ್ಮ ವ್ಯವಸ್ಥೆಗೆ ತಗುಲಿರುವ ಕ್ಯಾನ್ಸರ್ ರೋಗ ಎಂದೇ ಭಾವಿಸಿದ್ದರು. ಆದರೆ ಇತ್ತೀಚಿನ, ವಿಶೇಷವಾಗಿ ಕಳೆದ ಎರಡು ವರ್ಷಗಳ ವಿದ್ಯಮಾನಗಳನ್ನು ಗಮನಿಸಿದರೆ ನಿಜವಾದ ಈ ಕ್ಯಾನ್ಸರ್ ರೋಗವನ್ನು ನಿವಾರಿಸಲು ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ವ್ಯವಸ್ಥೆಯ ಗರ್ಭದಲ್ಲಿ ಅಡಗಿರುವ ಕ್ಯಾನ್ಸರ್ ರೋಗಾಣುಗಳು ರೋಗನಿವಾರಣಾ ಕ್ರಮಗಳನ್ನು ಮೀರಿ ನಿಲ್ಲುವ ಸಾಮರ್ಥ್ಯ ಗಳಿಸಿರುವುದು ಸ್ಪಷ್ಟವಾಗುತ್ತಿದೆ.. ಕ್ಯಾನ್ಸರ್ ರೋಗಾಣುಗಳು ಒಂದು ದೇಹವನ್ನು ಪ್ರವೇಶಿಸಿದ ಮೇಲೆ ಎಷ್ಟೇ ರೇಡಿಯಾಲಜಿ, ಕಿಮೋಥೆರಪಿ ಮಾಡಿದರೂ ಮತ್ತೆ ಮತ್ತೆ ಹುಟ್ಟಿಕೊಂಡು ದೇಹದ ಅಂಗಾಂಗಗಳನ್ನು ತಿಂದು ಹಾಕುತ್ತಿರುತ್ತವೆ. ರೋಗಿ ಜರ್ಝರಿತನಾಗಿ ತನ್ನ ಅಂತಃಸತ್ವವನ್ನೆಲ್ಲಾ ಕಳೆದುಕೊಂಡು, ನಿಸ್ತೇಜನಾಗಿ, ಇಹಲೋಕ ಯಾತ್ರೆಯನ್ನು ಮುಗಿಸಿ ಜವರಾಯನ ಪಾದ ಸೇರುವವರೆಗೂ ಈ ರೋಗಾಣುಗಳು ದೇಹವನ್ನು ಬಿಟ್ಟು ತೊಲಗುವುದಿಲ್ಲ. ಹಾಗೆಯೇ ಭಾರತೀಯ ಸಮಾಜ ಮತ್ತು ರಾಜಕಾರಣವನ್ನು ಕ್ಯಾನ್ಸರ್ ರೋಗ ಬಾಧಿಸುತ್ತಿದ್ದರೆ ಅದಕ್ಕೆ ಮೂಲ ಕಾರಣ, ಭ್ರಷ್ಟತೆಯನ್ನೇ ಮೇಳೈಸಿಕೊಂಡಿರುವ ಹಲವು ವ್ಯಕ್ತಿಗಳು ಮತ್ತು ಈ ವ್ಯಕ್ತಿಗಳನ್ನು ಪೋಷಿಸುವ ರಾಜಕೀಯ ಪಕ್ಷಗಳ ರೂಪದಲ್ಲಿರುವ ರೋಗಾಣುಗಳೇ ಆಗಿವೆ.

ಹಳೆಯ ಸಿನಿಮಾ ಗೀತೆಯೊಂದು ನೆನಪಾಗುತ್ತದೆ. ನಡೆ ಮುಂದೆ ನಡೆಮುಂದೆ ಜಗ್ಗದೆಯೆ ಬಗ್ಗದೆಯೆ ನುಗ್ಗಿ ನಡೆಮುಂದೆ. ಹಾಗೆಯೇ ಈ ರೋಗಾಣುಗಳು ಯಾವುದೇ ಲಸಿಕೆ, ಕಿಮೋಥೆರಪಿ, ರೇಡಿಯಾಲಜಿಗಳಿಗೆ ಜಗ್ಗದೆ ಬಗ್ಗದೆ ಹಿಗ್ಗಿ ನಡೆಯುತ್ತಿವೆ. ಈ ರೋಗಾಣುಗಳನ್ನು ನಿವಾರಿಸುವುದಾದರೂ ಹೇಗೆ ? ಇದು ಪ್ರಜೆಗಳ ಮುಂದಿರುವ ಪ್ರಶ್ನೆ. ನಮ್ಮ ದೇಶದ ದುರಂತ ಎಂದರೆ ಅಣ್ಣಾ ಹಜಾರೆಯವರಂತಹ ಗಾಂಧಿವಾದಿಯನ್ನು ದಂಡಿಸಲು ಸರ್ಕಾರ ಸದಾ ಸಿದ್ಧವಾಗಿರುತ್ತದೆ. ಪ್ರಭುತ್ವದ ದೃಷ್ಟಿಯಲ್ಲಿ ಕ್ಯಾನ್ಸರ್ ನಿವಾರಣೆಗೆ ಶ್ರಮಿಸುವ ಈ ಸಾಮಾಜಿಕ ವೈದ್ಯರೂ ಸಹ ಶತ್ರುಗಳಾಗಿಬಿಡುತ್ತಾರೆ. ಕಂಡಲ್ಲಿ ಲೂಟಿ ಮಾಡುವ ಔದ್ಯಮಿಕ ಪ್ರಭುಗಳಿಗೆ, ಪ್ರಜಾ ಪ್ರತಿನಿಧಿಗಳಿಗೆ ಮುಕ್ತ ಸ್ವಾತಂತ್ರ್ಯ ದೊರೆಯುತ್ತದೆ. ಸಾರ್ವಭೌಮ ಪ್ರಜೆಗಳ ಕಣ್ಣೆದುರೇ ನೈಸರ್ಗಿಕ ಸಂಪನ್ಮೂಲಗಳ ಲೂಟಿ ನಡೆಯುತ್ತದೆ. ಜನಸಾಮಾನ್ಯರ ಶ್ರಮದ ಪರಿಣಾಮವಾಗಿ ಶೇಖರಿಸಲ್ಪಟ್ಟ ಅಪಾರ ಧನ ಸಂಪತ್ತು ಅವರ ಕಣ್ಣೆದುರಿನಲ್ಲೇ ದೇವಾಲಯಗಳ, ಮಠಮಾನ್ಯಗಳ ಭಂಡಾರ ಸೇರುತ್ತದೆ. ಈ ಭಂಡಾರಗಳ ಒಡೆಯರಿಗೆ ಲಭ್ಯವಾಗುವ ಸ್ವಾತಂತ್ರ್ಯ ಭ್ರಷ್ಟ ವ್ಯವಸ್ಥೆಯ ವಿರುದ್ಧ ಹೋರಾಡುವ ಕಾಳಜಿಯುಳ್ಳ ಪ್ರಜೆಗಳಿಗೆ ದೊರೆಯುವುದಿಲ್ಲ. ಹಾಗಾಗಿಯೇ ಶೇ. 80ರಷ್ಟು ಶ್ರಮಿಕರು ದಿನಕ್ಕೆ 20 ರೂಗಳ ಆದಾಯದಲ್ಲಿ ಬದುಕುತ್ತಿರುವಾಗ ದೇಶದಲ್ಲಿ ಧನ ಭಂಡಾರಗಳು ರಾರಾಜಿಸುತ್ತಿವೆ. ಇದು ಸ್ವತಂತ್ರ ಭಾರತ ಎದುರಿಸುತ್ತಿರುವ ವಿಡಂಬನೆಯೂ ಹೌದು, ದುರಂತವೂ ಹೌದು.

ಆಧುನಿಕ ರಾಜರಾಳ್ವಿಕೆ

ರಾಜಮಹಾರಾಜರುಗಳ ಕಾಲದಲ್ಲಿ ರಾಜ್ಯದ ಸಂಪತ್ತು ಒಬ್ಬ ಅಧಿನಾಯಕನ ಸ್ವತ್ತಾಗಿರುತ್ತಿತ್ತು. ರಾಜನ ಆಳ್ವಿಕೆ ಎಂದರೆ ತನ್ನ ಈ ಸಂಪತ್ತಿನ ಭಂಡಾರದ ರಕ್ಷಣೆಯೇ ಆಗಿತ್ತು. ತನ್ನ ಸಾಮ್ರಾಜ್ಯದ ವ್ಯಾಪ್ತಿ ಪ್ರದೇಶದ ರಕ್ಷಣೆಗೆ ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡು ಸುಭದ್ರವಾಗಿರುತ್ತಿದ್ದ ರಾಜರುಗಳಿಗೆ ತಮ್ಮ ಬಳಿಯಲ್ಲಿನ ಅಮೂಲ್ಯ ಚರಾಸ್ತಿಗಳ ರಕ್ಷಣೆಗೆ ನೆರವಾಗುತ್ತಿದ್ದುದು ದೇವಾಲಯಗಳೇ. ಇಡೀ ಭಾರತೀಯ ಇತಿಹಾಸದಲ್ಲಿ ಈ ಒಂದು ಪರಂಪರೆಯನ್ನು ಕಾಣಬಹುದು. ಅನ್ಯ ರಾಜ್ಯಗಳ ಮೇಲೆ ಆಕ್ರಮಣ ನಡೆಸಿ ಲೂಟಿ ಹೊಡೆದ, ಸ್ವಾಧೀನಪಡಿಸಿಕೊಂಡ ಅಮೂಲ್ಯ ಚರಾಸ್ತಿಗಳನ್ನು ರಕ್ಷಿಸಲು ದೇವಾಲಯಗಳೇ ಭಂಡಾರಗಳಾಗಿರುತ್ತಿದ್ದವು. ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯ ಮುಂತಾದ ಅಮೂಲ್ಯ ಆಸ್ತಿಯನ್ನು ಕಾಪಾಡಲೆಂದೇ ದೇವಾಲಯಗಳನ್ನು ನಿರ್ಮಿಸಲಾಗುತ್ತಿತ್ತು. ರಾಜರಾಳ್ವಿಕೆಗೆ ಕೋಟೆ, ಅರಮನೆಯಷ್ಟೇ ಮುಖ್ಯ ದೇವಸ್ಥಾನಗಳಾಗಿರುತ್ತಿದ್ದವು. ಗಝನಿ ಮೊಹಮ್ಮದ್ ಭಾರತಕ್ಕೆ 17 ಬಾರಿ ದಂಡೆತ್ತಿ ಬಂದದ್ದು, ಸೋಮನಾಥ ದೇವಾಲಯವನ್ನು ಲೂಟಿ ಮಾಡಿದ್ದೂ ಈ ಆಸ್ತಿಗಾಗಿಯೇ ಎಂದು ಹೇಳಬೇಕಿಲ್ಲ. 17 ಬಾರಿ ಲೂಟಿ ಮಾಡುವಷ್ಟು ಅಪಾರ ಸಂಪತ್ತನ್ನು ಸೋಮನಾಥ ದೇವಾಲಯ ಹೊಂದಿದ್ದುದೇ ಅಚ್ಚರಿ ಮೂಡಿಸುವ ಅಂಶ.

ಇತಿಹಾಸದ ಈ ಘಟನೆಯನ್ನು ಅತಿಶಯೋಕ್ತಿ ಎಂದೇನಾದರೂ ಭಾವಿಸಿದ್ದರೆ ತಪ್ಪಾದೀತು. ಇತ್ತೀಚೆಗೆ ಕೇರಳದ ತಿರುವನಂತಪುರದಲ್ಲಿರುವ ಪದ್ಮನಾಭಸ್ವಾಮಿ ದೇವಾಲಯದ ನೆಲಮಾಳಿಗೆಯಲ್ಲಿ ದೊರೆತಿರುವ ಅಮೂಲ್ಯ ವಸ್ತುಗಳ ಪಟ್ಟಿಯನ್ನು ನೋಡಿದರೆ ಎದೆ ಝಲ್ಲೆನ್ನುತ್ತದೆ. ಸುಪ್ರೀಂ ಕೋರ್ಟ್ ನೇಮಿಸಿರುವ ಏಳು ಸದಸ್ಯರ ತಂಡವು ಜೂನ್ 27ರಿಂದ ಆರಂಭಿಸಿರುವ ಶೋಧದಲ್ಲಿ ದೊರೆತಿರುವ ಅಮೂಲ್ಯ ವಸ್ತುಗಳು ಊಹಿಸಲಸಾಧ್ಯ. ದೇವಾಲಯದ ರಹಸ್ಯ ನೆಲಮಾಳಿಗೆಯಲ್ಲಿ ಲಭ್ಯವಾಗಿರುವ ವಸ್ತುಗಳ ಮೌಲ್ಯ ಸದ್ಯಕ್ಕೆ ಒಂದರಿಂದ ಐದು ಲಕ್ಷ ಕೋಟಿ ರೂಗಳಿಗೂ ಹೆಚ್ಚು ಎಂದು ಹೇಳಲಾಗುತ್ತಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಮುತ್ತು ರತ್ನಗಳನ್ನು ಬೀದಿಯಲ್ಲಿ ಮಾರಾಟ ಮಾಡಲಾಗುತ್ತಿದ್ದುದನ್ನು ಇತಿಹಾಸ ಹೇಳುತ್ತದೆ. ಪದ್ಮನಾಭಸ್ವಾಮಿ ದೇವಾಲಯದ ಈ ಅವತಾರವನ್ನು ನೋಡಿದರೆ ಈ ಇತಿಹಾಸವನ್ನು ನಂಬಲೇಬೇಕಾಗುತ್ತದೆ. ರಾಜರಾಳ್ವಿಕೆಯ ಸಮಾಜ ಎಷ್ಟೇ ಶ್ರೀಮಂತಿಕೆ ಹೊಂದಿದ್ದರೂ ರಾಜ್ಯದ ಸಂಪತ್ತೆಲ್ಲವೂ ರಾಜನಿಗೆ ಸೇರಿದ್ದೇ ಹೊರತು, ಪ್ರಜೆಗಳಿಗೆ ಸೇರುತ್ತಿರಲಿಲ್ಲ. ರಾಜಮಹಾರಾಜರು ಕೂಡಿ ಹಾಕಿದ ಸ್ಥಿರಾಸ್ತಿ ಚರಾಸ್ತಿಗಳೆಲ್ಲವೂ ರಾಜ್ಯದ ಶ್ರಮಜೀವಿಗಳ ಬೆವರಿನ ಫಲವೇ ಆಗಿದ್ದರೂ ಹಕ್ಕುದಾರ ಮಾತ್ರ ರಾಜನೇ ಆಗಿರುತ್ತಿದ್ದ. ಬಹುತೇಕ ಸಂಪತ್ತು ಅನ್ಯ ರಾಜ್ಯಗಳ ಆಕ್ರಮಣಗಳ ನಂತರ ಕ್ರೋಢೀಕರಿಸಿದ ಆಸ್ತಿಯೇ ಆಗಿರುತ್ತಿತ್ತು. ಈಗ ಪದ್ಮನಾಭ ದೇವಾಲಯದಲ್ಲಿ ದೊರೆತಿರುವ ಅಮೂಲ್ಯ ಸಂಪತ್ತನ್ನೂ ಇದೇ ದೃಷ್ಟಿಯಿಂದ ನೋಡಬೇಕಾಗಿದೆ. ಕೆಲವು ಇತಿಹಾಸಕಾರರ ಅಭಿಪ್ರಾಯದಲ್ಲಿ ಯಾವುದೇ ರಾಜರ ಸಂಪತ್ತಿನ ಶೇಖರಣೆಯಾಗುವುದು ಅನ್ಯ ರಾಜ್ಯಗಳ ಮೇಲಿನ ಆಕ್ರಮಣ ಮತ್ತು ಲೂಟಿಯಿಂದ. ಪರ ರಾಜ್ಯಗಳಿಂದ ಲೂಟಿ ಮಾಡಿ ತಂದ ಒಡವೆಗಳನ್ನು ದೇವಾಲಯಗಳಿಗೆ ರಾಜಧನದ ರೂಪದಲ್ಲಿ ಒಪ್ಪಿಸಿ ತಮ್ಮ ಪಾಪಪ್ರಜ್ಞೆಯನ್ನು ತೊಳೆದುಕೊಳ್ಳುವುದು ಎಲ್ಲಾ ರಾಜರುಗಳು ಅನುಸರಿಸುತ್ತಿದ್ದ ಮಾರ್ಗ.

ಹಾಗಾಗಿ ಯಾವುದೇ ರಾಜರ ಭಂಡಾರವಾಗಲೀ, ದೇವಾಲಯಗಳಲ್ಲಿ ಸಂಗ್ರಹಿಸಿರುವ ಸಂಪತ್ತಾಗಲೀ ಜನತೆಗೆ ಸೇರಬೇಕಾದ್ದೇ ಹೊರತು, ದೇವಾಲಯಗಳಿಗಲ್ಲ. ಆದರೆ ದೇವಾಲಯಗಳ ನಿರ್ವಾಹಕರಿಗೆ ಈ ವಾದ ರುಚಿಸುವುದಿಲ್ಲ. ಶಬರಿಮಲೆ ದೇವಾಲಯದ ಟ್ರಸ್ಟಿಯ ಅಭಿಪ್ರಾಯದಲ್ಲಿ ಭಾರತದ ಕಾನೂನು ದೇವರುಗಳನ್ನು ಕಾನೂನು ಬದ್ಧ ಪ್ರಜೆ ಎಂದೇ ಪರಿಗಣಿಸುತ್ತವೆ. (ಅಯೋಧ್ಯಾ ತೀರ್ಪಿನ ಪರಿಣಾಮ ಎಲ್ಲಿಯವರೆಗೆ ಹೋಗಿದೆ ನೋಡಿ!). ಹಾಗಾಗಿ ಈ ಮಹಾಶಯರು ಹೇಳುವುದೆಂದರೆ ಪದ್ಮನಾಭ ಸ್ವಾಮಿ ದೇವಾಲಯದಲ್ಲಿ ದೊರೆ

ಇತ್ತೀಚೆಗೆ ಕೇರಳದ ತಿರುವನಂತಪುರದಲ್ಲಿರುವ ಪದ್ಮನಾಭಸ್ವಾಮಿ ದೇವಾಲಯದ ನೆಲಮಾಳಿಗೆಯಲ್ಲಿ ದೊರೆತಿರುವ ಅಮೂಲ್ಯ ವಸ್ತುಗಳ ಪಟ್ಟಿಯನ್ನು ನೋಡಿದರೆ ಎದೆ ಝಲ್ಲೆನ್ನುತ್ತದೆ. ಸುಪ್ರೀಂ ಕೋರ್ಟ್ ನೇಮಿಸಿರುವ ಏಳು ಸದಸ್ಯರ ತಂಡವು ಜೂನ್ ೨೭ರಿಂದ ಆರಂಭಿಸಿರುವ ಶೋಧದಲ್ಲಿ ದೊರೆತಿರುವ ಅಮೂಲ್ಯ ವಸ್ತುಗಳು ಊಹಿಸಲಸಾಧ್ಯ. ದೇವಾಲಯದ ರಹಸ್ಯ ನೆಲ ಮಾಳಿಗೆಯಲ್ಲಿ ಲಭ್ಯವಾಗಿರುವ ವಸ್ತುಗಳ ಮೌಲ್ಯ ಸದ್ಯಕ್ಕೆ ಒಂದರಿಂದ ಐದು ಲಕ್ಷ ಕೋಟಿ ರೂಗ. ಆಗೂ ಹೆಚ್ಚು ಎಂದು ಹೇಳಲಾಗುತ್ತಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಮುತ್ತು ...ಗಳನ್ನು ಬೀದಿ...ಲ್ಲಿ ಮಾರಾಟ ...ಲಾಗುತ್ತಿದ್ದುದನ್ನು ...ಸ ಹೇಳುತ್ತದೆ.

...ಂಡ ವ್ಯವಸ್ಥೆಯಲ್ಲಿ ಬಂದವನೇ ಜಾಣ!

ಯುವ ಸಮಸ್ತ ಆಸ್ತಿಯೂ ದೇವರಿಗೇ ಸೇರಬೇಕಾದ್ದು. ಅಂದರೆ, ಆ ದೇವರನ್ನು ಪಾಲಿಸಿ ಪೋಷಿಸುವ ಟ್ರಸ್ಟಿಗಳಿಗೆ ಸೇರಬೇಕಾದ್ದು ಎಂದರ್ಥ. ಇದಲ್ಲವೇ ಗಮ್ಮತ್ತು !

ಹಾಗೆ ನೋಡಿದರೆ ಭಾರತದಲ್ಲಿ ಈ ರೀತಿಯ ಭಂಡಾರಗಳಿಗೇನೂ ಕಡಿಮೆಯಿಲ್ಲ. ಸಾಯಿಬಾಬ ನಿಧನಾನಂತರ ಹೊರಬರುತ್ತಿರುವ ಸತ್ಯಗಳನ್ನು ನೋಡಿದರೆ ಧಾರ್ಮಿಕ-ಆಧ್ಯಾತ್ಮಿಕ ಟ್ರಸ್ಟ್‌ಗಳ ಕಿಮ್ಮತ್ತು ತಿಳಿಯುತ್ತದೆ. ಸಾಯಿಬಾಬಾ ಟ್ರಸ್ಟಿನ ಒಟ್ಟು ಘೋಷಿತ ಆಸ್ತಿಯೇ 40 ಸಾವಿರ ಕೋಟಿ ರೂಗಳು. ನಂತರದಲ್ಲಿ ತನಿಖಾಧಿಕಾರಿಗಳಿಗೆ ದೊರೆತ ನಗದು ಮತ್ತಿತರ ವಸ್ತುಗಳ ಮೌಲ್ಯ 30 ಸಾವಿರ ಕೋಟಿಗೂ ಹೆಚ್ಚು. ಎಲ್ಲವೂ ಟ್ರಸ್ಟಿಗೆ ಸೇರಿರುವುದರಿಂದ ಈ ಸಂಪತ್ತಿನಲ್ಲಿ ಅಕ್ರಮವೇ ಇಲ್ಲ ಎಂಬುದು ಆಸ್ತಿಕರ ಅಂಬೋಣ. ಆದರೆ ಇದನ್ನು ಸುಲಭವಾಗಿ ನಂಬಲು ಜನತೆಯೇನೂ ಅಬ್ಬೇಪಾರಿಗಳಲ್ಲ. ಸಾಯಿ ಟ್ರಸ್ಟ್ ಆಗಲಿ, ಪದ್ಮನಾಭಸ್ವಾಮಿ ದೇವಾಲಯವಾಗಲಿ, ತಿರುಪತಿಯಾಗಲಿ ದೇವರ ಹೆಸರಿನಲ್ಲಿ ಸಂಗ್ರಹಿಸಲಾಗುವ ನಗದು, ಒಡವೆಗಳನ್ನು ಟ್ರಸ್ಟಿಗಳು ಹೇಗೆ ಗುಳುಂ ಮಾಡಿದ್ದಾರೆ ಎಂದು ಸಾರಿ ಹೇಳಬೇಕಿಲ್ಲ. ತಿರುಪತಿ ತಿಮ್ಮಪ್ಪನ ಒಟ್ಟು ಆಸ್ತಿಯ ಮೌಲ್ಯ 33 ಸಾವಿರ ಕೋಟಿ ರೂಗಳು. ಇದು ಘೋಷಿತ ಆಸ್ತಿ.

ಭಾರತದಾದ್ಯಂತ ಇಂತಹ ದೇವಾಲಯಗಳ ದಂಡೇ ಇದೆ. ತಮಿಳುನಾಡಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ 600 ಎಕರೆ ವ್ಯಾಪ್ತಿಯ ಗೋಲ್ಡನ್ ಟೆಂಪಲ್ ಇಂತಹ ಶ್ರೀಮಂತ ದೇವಾಲಯಗಳಲ್ಲಿ ಒಂದು. ಹಲವು ರಾಜ್ಯಗಳಲ್ಲಿ ತನ್ನ ಜಾಲ ಹೊಂದಿರುವ ಇಸ್ಕಾನ್‌ನ ಆಸ್ತಿ ಲಕ್ಷಾಂತರ ಕೋಟಿ ರೂಗಳಾಗುತ್ತವೆ. ಅವರ ದೇವಾಲಯಗಳು ನಿರ್ಮಾಣವಾಗುವುದೇ ಅಮೃತಶಿಲೆಯಲ್ಲಿ. ಈ ಎಲ್ಲಾ ದೇವಾಲಯ, ಮಠ ಮಾನ್ಯಗಳು ಆಸ್ತಿ ಮಾಡಿರುವುದು ಜನಸಾಮಾನ್ಯರ ಕಾಣಿಕೆಗಳಿಂದ. ತಾವು ಸಲ್ಲಿಸುವ ಕಾಣಿಕೆಗಳು ದೇವರಿಗೇ ಸಲ್ಲುತ್ತವೆ ಎಂಬ ಜನಸಾಮಾನ್ಯರ ನಂಬಿಕೆ ಇಂತಹ ಅನೇಕ ಚಿನ್ನದ ಗಣಿಗಳನ್ನು ಸೃಷ್ಟಿಸಿದೆ. ಘೋಷಿಸಲಾಗಿರುವ ಆಸ್ತಿಗಳು ಕೇವಲ ಹಿಮಗಡ್ಡೆಯ ತುದಿ ಮಾತ್ರ, ಭಾರತದಲ್ಲಿನ ಧಾರ್ಮಿಕ ಕೇಂದ್ರಗಳಲ್ಲಿ ಸಂಗ್ರಹವಾಗಿರುವ ನಿಧಿಯನ್ನು ಹೊರಗೆ ತೆಗೆದರೆ, ಭಾರತದಷ್ಟು ಸಮೃದ್ಧ ರಾಷ್ಟ್ರ ಮತ್ತೊಂದಿರುವುದಿಲ್ಲ.

ಕಪ್ಪುಹಣದ ಕೂಪಗಳು

ಆದರೂ ಭಾರತದಲ್ಲಿ ಬಂಡವಾಳದ ಕೊರತೆ ಇದೆ. ಬಡತನ ಹೆಚ್ಚಾಗುತ್ತಲೇ ಇದೆ. ಬಡವ ಶ್ರೀಮಂತರ ನಡುವಿನ ಕಂದರ ಹೆಚ್ಚುತ್ತಲೇ ಇದೆ. ಇಲ್ಲಿ ಉತ್ಪಾದಿತವಾಗುವ ಬಂಡವಾಳವೆಲ್ಲವೂ ಮತ್ತಾವುದೋ ದೇಶದಲ್ಲಿ ಕ್ರೋಢೀಕರಣವಾಗುತ್ತಿದೆ. ಹಾಗಾಗಿಯೇ ವಿದೇಶೀ ಬ್ಯಾಂಕುಗಳಲ್ಲಿರುವ ಕಪ್ಪುಹಣವನ್ನು ಭಾರತಕ್ಕೆ ತಂದರೆ ಭಾರತದ ಎಲ್ಲಾ ಸಾಲಗಳನ್ನೂ ತೀರಿಸಿಬಿಡಬಹುದು ಎಂದು ರಾಮದೇವ್‌ರಿಂದ ಹಿಡಿದು ಅದ್ವಾನಿಯವರೆಗೆ ಎಲ್ಲರೂ ಬೊಬ್ಬೆ ಹೊಡೆಯುವವರೇ. ಆದರೆ ಸ್ವಿಸ್ ಬ್ಯಾಂಕ್‌ನಲ್ಲಿ ಇರಬಹುದಾದ ಅಂದಾಜು ಮೊತ್ತ 5 ಲಕ್ಷ ಕೋಟಿ ಎಂದು ಹೇಳಲಾಗುತ್ತದೆ. ಇದು ಪದ್ಮನಾಭಸ್ವಾಮಿಯ ಆಸ್ತಿಗೆ ಸಮ ಅಷ್ಟೇ ! ವಿಡಂಬನೆಯೆಂದರೆ ಇದಕ್ಕಿಂತಲೂ ಹತ್ತು ಪಟ್ಟು ಸಂಪತ್ತನ್ನು ನಮ್ಮಲ್ಲಿನ ದೇವಾಲಯಗಳು ಸಂಗ್ರಹಿಸಿವೆ. ಪದ್ಮನಾಭ ದೇವಾಲಯದಲ್ಲಿ ದೊರೆತದ್ದು ರಾಜರ ಕಾಲದ್ದೇ ಇರಬಹುದಾದರೂ ಅದು ಸಾರ್ವಜನಿಕ ಆಸ್ತಿಯಲ್ಲವೇ? ರಾಜರ ಕೊಡುಗೆ ಎಂದ ಮಾತ್ರಕ್ಕೆ ಅದು ರಾಜರ ಶ್ರಮದ ಫಲ ಎನ್ನಲಾದೀತೇ? ದೇಶದ ಅಭಿವೃದ್ಧಿಗಾಗಿ ಕಿಂಚಿತ್ತೂ ಕಾಣಿಕೆ ನೀಡದೆ, ಸರ್ಕಾರದ ಬೊಕ್ಕಸಕ್ಕೆ ತೆರಿಗೆಯ ರೂಪದಲ್ಲಿ ಸಲ್ಲಬೇಕಾದ ಹಣವನ್ನು ತಮ್ಮ ಹುಂಡಿಗಳಲ್ಲಿ ಸಂಗ್ರಹಿಸುವ ದೇವಾಲಯಗಳ ಟ್ರಸ್ಟಿಗಳು ಸಾರ್ವಜನಿಕರಿಗೆ ಹೊಣೆಯಲ್ಲವೇ?

ಅಟಲ್ ಬಿಹಾರಿ ವಾಜಪೇಯಿಯವರ ಜನಪ್ರಿಯ ಚತುಷ್ಪಥ ಯೋಜನೆ, ಇಡೀ ದೇಶವನ್ನು ಸುತ್ತುವರೆವ ರಸ್ತೆಯನ್ನು ನಿರ್ಮಿಸುವ ಮೂಲಕ ಪ್ರತಿಯೊಂದು ಮಹಾನಗರವನ್ನೂ ಜೋಡಿಸುವ ಮಹತ್ತರ ಉದ್ದೇಶ ಹೊಂದಿದೆ. ಇದಕ್ಕೆ ತಗಲುವ ಅಂದಾಜು ವೆಚ್ಚ 54 ಸಾವಿರ ಕೋಟಿ. ಆಧಾರ್ ಗುರುತಿನ ಚೀಟಿ ಯೋಜನೆಗೆ ತಗಲುವ ವೆಚ್ಚ 1 ಲಕ್ಷ 50 ಸಾವಿರ ಕೋಟಿ. ಇದೇ ರೀತಿಯ ಹಲವು ಯೋಜನೆಗಳಿಗೆ ಸರ್ಕಾರ ವಿಶ್ವಬ್ಯಾಂಕ್ ಬಳಿ ಹಲ್ಲು ಗಿಂಜಿ ಸಾಲ ಕೇಳುತ್ತದೆ. ಅಥವಾ ಕಾರ್ಪೋರೇಟ್‌ಗಳಿಗೆ ಗುತ್ತಿಗೆ ಕೊಟ್ಟು, ಅವರ ತಾಳಕ್ಕೆ ಕುಣಿಯುತ್ತವೆ. ಗಂಗಾ ಕಾವೇರಿ ಯೋಜನೆಯಂತಹ ಬೃಹತ್ ಕಾರ್ಯಗಳಿಗೆ ಸರ್ಕಾರದ ಬಳಿ ಹಣವೇ ಇಲ್ಲವೆನಿಸುತ್ತದೆ. ಹೀಗಿರುವಾಗ ದೇವಾಲಯಗಳಲ್ಲಿ ಸಂಗ್ರಹವಾಗುವ ಅಪಾರ ಸಂಪತ್ತನ್ನು ದೇವರ ಆಸ್ತಿ ಎಂದು ಪರಿಗಣಿಸಿ, ಕೆಲವೇ ಟ್ರಸ್ಟಿಗಳು ಗುಳಕಾಯಿ ಸ್ವಾಹಾ ಮಾಡುವುದು ಎಷ್ಟು ಸರಿ.

ಅಟಲ್ ಬಿಹಾರಿ ವಾಜಪೇಯಿಯವರ ಜನಪ್ರಿಯ ಚತುಷ್ಪಥ ಯೋಜನೆ, ಇಡೀ ದೇಶವನ್ನು ಸುತ್ತುವರೆವ ರಸ್ತೆಯನ್ನು ನಿರ್ಮಿಸುವ ಮೂಲಕ ಪ್ರತಿಯೊಂದು ಮಹಾನಗರವನ್ನೂ ಜೋಡಿಸುವ ಮಹತ್ತರ ಉದ್ದೇಶ ಹೊಂದಿದೆ. ಇದಕ್ಕೆ ತಗಲುವ ಅಂದಾಜು ವೆಚ್ಚ 54 ಸಾವಿರ ಕೋಟಿ. ಆಧಾರ್ ಗುರುತಿನ ಚೀಟಿ ಯೋಜನೆಗೆ ತಗಲುವ ವೆಚ್ಚ 1 ಲಕ್ಷ 50 ಸಾವಿರ ಕೋಟಿ. ಇದೇ ರೀತಿಯ ಹಲವು ಯೋಜನೆಗಳಿಗೆ ಸರ್ಕಾರ ವಿಶ್ವಬ್ಯಾಂಕ್ ಬಳಿ ಹಲ್ಲು ಗಿಂಜಿ ಸಾಲ ಕೇಳುತ್ತದೆ. ಅಥವಾ ಕಾರ್ಪೋರೇಟ್‌ಗಳಿಗೆ ಗುತ್ತಿಗೆ ಕೊಟ್ಟು, ಅವರ ತಾಳಕ್ಕೆ ಕುಣಿಯುತ್ತವೆ. ಗಂಗಾ ಕಾವೇರಿ ಯೋಜನೆಯಂತಹ ಬೃಹತ್ ಕಾರ್ಯಗಳಿಗೆ ಸರ್ಕಾರದ ಬಳಿ ಹಣವೇ ಇಲ್ಲವೆನಿಸುತ್ತದೆ. ಹೀಗಿರುವಾಗ ದೇವಾಲಯಗಳಲ್ಲಿ ಸಂಗ್ರಹವಾಗುವ ಅಪಾರ ಸಂಪತ್ತನ್ನು ದೇವರ ಆಸ್ತಿ ಎಂದು ಪರಿಗಣಿಸಿ, ಕೆಲವೇ ಟ್ರಸ್ಟಿಗಳು ಗುಳಕಾಯಿಸ್ವಾಹಾ ಮಾಡುವುದು ಎಷ್ಟು ಸರಿ. ಒಬ್ಬ ಮಹಾಶಯ ಹೇಳಿದಂತೆ ಅಯೋಧ್ಯೆಯ ತೀರ್ಪಿನ ನಂತರ ದೇವರುಗಳನ್ನು ಕಾನೂನು ರೀತ್ಯಾ ಪ್ರಜೆ ಎಂದೇ ಒಪ್ಪಿಕೊಳ್ಳೋಣ. ಹಾಗಾದರೆ ಆ ಪ್ರಜೆಯೂ ತೆರಿಗೆ, ಆಸ್ತಿ ವಿವರ ನೀಡಬೇಕಲ್ಲವೇ? ಒಬ್ಬ ಸಾಧಾರಣ ಕಾರ್ಮಿಕ ಹತ್ತು ರೂಗಳಷ್ಟು ಆದಾಯ ತೆರಿಗೆ ಕಡಿಮೆ ಕಟ್ಟಿದರೆ ದಂಡ ವಿಧಿಸಿ ಶಿಕ್ಷಿಸುವ ಈ ವ್ಯವಸ್ಥೆಯಲ್ಲಿ ಲಕ್ಷಾಂತರ ಕೋಟಿ ರೂಗಳನ್ನು ಕ್ರೋಢೀಕರಿಸುವ ದೇವಾಲಯಗಳು, ಧಾರ್ಮಿಕ ಕೇಂದ್ರಗಳ ಆಸ್ತಿಪಾಸ್ತಿಗಳಿಗೆ ಮಿತಿಯೇ ಇಲ್ಲ.

ಶ್ರೀಮಂತರ ಕಪ್ಪು ಹಣ ವಿವಿಧ ರೂಪದಲ್ಲಿ ದೈವ ಸನ್ನಿಧಿ ಸೇರುತ್ತವೆ. ಆದರೆ ಧರ್ಮ, ಧಾರ್ಮಿಕ ಸೇವೆ, ದತ್ತಿ ಮುಂತಾದ ಪದಪುಂಜಗಳು ಈ ಧರ್ಮ ಕೇಂದ್ರಗಳನ್ನು ಅಕ್ರಮ ಸಂಪತ್ತಿನ ಅಧಿಕೃತ ಖಜಾನೆಗಳನ್ನಾಗಿ ಮಾಡಿವೆ. ಇಲ್ಲಿ ಸಂಗ್ರಹವಾಗುವ ಸಂಪತ್ತಿಗೂ ತೆರಿಗೆ ಇಲ್ಲ, ಆದಾಯಕ್ಕೂ ತೆರಿಗೆ ಇಲ್ಲ. ಎಲ್ಲವನ್ನೂ ದೇವರಿಗೆ ಅರ್ಪಿಸುವ ನಾಟಕೀಯ ಪ್ರಹಸನದಲ್ಲಿ ಪ್ರತಿಯೊಂದು ದೇವಾಲಯ, ಧಾರ್ಮಿಕ ಟ್ರಸ್ಟಿನ ಹಿಂದೆಯೂ ಒಂದೊಂದು ರಿಯಲ್ ಎಸ್ಟೇಟ್ ಸಾಮ್ರಾಜ್ಯವೇ ಇರುತ್ತದೆ. ಜನಸಾಮಾನ್ಯರು ದೇವರುಗಳ ಮೇಲೆ ಇಟ್ಟಿರುವ ಟ್ರಸ್ಟನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಳ್ಳುವ ಧಾರ್ಮಿಕ ಟ್ರಸ್ಟ್‌ಗಳು ಕಪ್ಪು ಹಣದ ಕೂಪಗಳಾಗಿ ಪರಿಣಮಿಸಿವೆ. ಇಂತಿದ್ದರೂ ಅಚಾನಕ್ಕಾಗಿ ದೊರೆತ ಲಕ್ಷ ಕೋಟಿ ರೂಗಳ ಆಸ್ತಿಯನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಬಳಸಲು ಒಪ್ಪದಿರುವ ಮನಸ್ಸುಗಳು, ದೇವರನ್ನು ಪೂಜಿಸುವುದು ಹೇಗೆ ಸಾಧ್ಯ? ಜನಸೇವೆಯೇ ಜನಾರ್ಧನ ಸೇವೆ ಎಂದು ಹೇಳುತ್ತಿದ್ದ ದೇಶದಲ್ಲಿ ಜನಸೇವೆ ಧನಾರ್ಜನೆಯ ಸೇವೆಯಾಗಿರುವುದು ವಿಪರ್ಯಾಸ. ಇಂತಹ ಒಂದು (ಅ)ವ್ಯವಸ್ಥೆಯನ್ನು ಪೋಷಿಸುವ ಸರ್ಕಾರಗಳಾದರೂ ಎಂತಹುದು?

ಭಂಡ ಸರ್ಕಾರಗಳು

ಒಂದು ಪ್ರಾಮಾಣಿಕ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಭ್ರಷ್ಟಾಚಾರಕ್ಕೆ ಒಂದು ಮಿತಿ ಇರುತ್ತದೆ. ಭ್ರಷ್ಟಾಚಾರವನ್ನು ಸಮರ್ಥಿಸಿಕೊಳ್ಳುವ ಭ್ರಷ್ಟ ಮನೋಭಾವಕ್ಕೂ ಒಂದು ಮಿತಿ ಇರುತ್ತದೆ. "ಯಾರೇ ಕೂಗಾಡಲಿ" ನೀತಿಯನ್ನು ಅನುಸರಿಸುವ ಭಂಡತನಕ್ಕೂ ಒಂದು ಮಿತಿ ಇರುತ್ತದೆ. ಈ ಇತಿಮಿತಿಗಳಿದ್ದಾಗಲೇ ಭಾರತದಂತಹ ಒಂದು ದೇಶದಲ್ಲಿ ಸಾಮಾಜಿಕ-ರಾಜಕೀಯ ವ್ಯವಸ್ಥೆ ಕೊಂಚವಾದರೂ ಆರೋಗ್ಯಕರವಾಗಿ ಕಾಣುತ್ತದೆ. ಆದರೆ ತಮ್ಮ ವಿರುದ್ಧ ಸ್ಪಷ್ಟ ಸಾಕ್ಷ್ಯಾಧಾರಗಳ ಸಮೇತ ಸಾಂವಿಧಾನಿಕ ಸಂಸ್ಥೆಯೊಂದು ಗುರುತರವಾದ ಆರೋಪಗಳನ್ನು ಹೊರಿಸಿದ್ದರೂ ತಮ್ಮ ಹಿಂದೆ ಶಾಸಕರ ದಂಡೇ ಇದೆ, ತಾವೇನೂ ತಪ್ಪು ಮಾಡಿಲ್ಲ, ಅಥವಾ ಮಾಡಿದ್ದರೂ ಹಿಂದಿನವರಿಗಿಂತಲೂ ಹೆಚ್ಚಿನ ಪ್ರಮಾದವನ್ನೇನೂ ಎಸಗಿಲ್ಲ ಎಂದು ನೆಪ ಹೇಳಿ ಸಾಂವಿಧಾನಿಕ ಸಂಸ್ಥೆ ಮತ್ತು ಮೌಲ್ಯಗಳಿಗೇ ಕಲ್ಲು ಹೊಡೆಯುವ ಮುಖ್ಯಮಂತ್ರಿಯೊಬ್ಬರು ರಾಜ್ಯದ ಅಧಿಕಾರ ಚುಕ್ಕಾಣಿಯನ್ನು ಹಿಡಿದಿರುವಾಗ ಯಾವ ವ್ಯವಸ್ಥೆ ತಾನೇ ಆರೋಗ್ಯಕರವಾಗಿರಲು ಸಾಧ್ಯ. ಪಕ್ಷದ ವರಿಷ್ಠರ ಒತ್ತಡಗಳಿಗೆ ಮಣಿದು, ತಮ್ಮ ಷರತ್ತುಗಳಿಗೆ ಪಕ್ಷ ಬದ್ಧರಾಗಲು ಬಯಸಿ, ತಮ್ಮ ಹಠ ಸಾಧಿಸಿದ ನಂತರವೇ ರಾಜೀನಾಮೆ ನೀಡುವ ಪ್ರವೃತ್ತಿ ಅಧಿಕಾರ ತ್ಯಾಗದ ಅನಿವಾರ್ಯತೆಯನ್ನು ತೋರುತ್ತದೆಯೇ ಹೊರತು ಸಂವಿಧಾನ ನಿಷ್ಠೆಯನ್ನಲ್ಲ.

ಕರ್ನಾಟಕದಲ್ಲಿ ಯಡಿಯೂರಪ್ಪನವರ ರಾಜೀನಾಮೆ ಮತ್ತು ಸದಾನಂದ ಗೌಡರ ಪಟ್ಟಾಭಿಷೇಕ ಎರಡೂ ಪ್ರಸಂಗಗಳು ರಾಜಕೀಯ ಭ್ರಷ್ಟತೆ ಮತ್ತು ಅಪಮೌಲ್ಯೀಕರಣದ ಸಂಕೇತವಾಗಿಯೇ ಕಾಣುತ್ತದೆ.

ಲೋಕಾಯುಕ್ತರ ವರದಿ ರಾಜ್ಯ ಭಾಜಪ ಸರ್ಕಾರದ ಅಕ್ರಮಗಳನ್ನು ಕುರಿತದ್ದಾಗಿತ್ತು. ಅಂದರೆ ಕೇವಲ ಯಡಿಯೂರಪ್ಪ ತಪ್ಪಿತಸ್ಥರೆಂದಲ್ಲ. ಇಡೀ ಸರ್ಕಾರವೇ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಿತ್ತು. ಏಕೆಂದರೆ ರಾಜ್ಯ ಸರ್ಕಾರ ಕೈಗೊಳ್ಳುವ ಯಾವುದೇ ನಿರ್ಧಾರವಾದರೂ ಸಚಿವ ಸಂಪುಟದಲ್ಲೇ ತೀರ್ಮಾನವಾಗುತ್ತದೆ, ಆದರೆ ಕರ್ನಾಟಕದಲ್ಲಿ ನಡೆದದ್ದೇನು? ಮುಖ್ಯಮಂತ್ರಿಗಳು ಮಾತ್ರ ಬದಲಾಗಿದ್ದಾರೆ. ಅದೂ ನೆಪಮಾತ್ರಕ್ಕೆ. ತಮ್ಮ ಸೂತ್ರದ ಗೊಂಬೆಯನ್ನೇ ಗದ್ದುಗೆಯಲ್ಲಿ ಕೂರಿಸಿರುವ ಯಡಿಯೂರಪ್ಪ ಸಂಪುಟ ರಚನೆಯಲ್ಲೂ ತಮ್ಮದೇ ಆದ ಪ್ರಭಾವವನ್ನು ಬೀರಿದ್ದಾರೆ. ಮತ್ತದೇ ಮಂತ್ರಿ ಮಹಾಶಯರು ಪೀಠಗಳನ್ನು ಅಲಂಕರಿಸಿದ್ದಾರೆ. ಹೀನಾಯವಾಗಿ ಸೋಲು ಅನುಭವಿಸುವ ಕ್ರಿಕೆಟ್ ತಂಡದ ನಾಯಕನನ್ನು ಮಾತ್ರ ಬದಲಾಯಿಸಿದರೆ ತಂಡದ ಸಾಧನೆ ಉತ್ತಮವಾಗುವುದೇ? ಹಾಗೆಯೇ ಕರ್ನಾಟಕ ಸರ್ಕಾರದ ಗತಿಯೂ ಆಗಲಿದೆ.

ಮತ್ತೊಂದೆಡೆ ಕೇಂದ್ರ ಸರ್ಕಾರದ ಕಾರ್ಯವೈಖರಿಯೂ ಅಷ್ಟೇ ಪ್ರಶ್ನಾರ್ಹ, ಖಂಡನಾರ್ಹವಾಗಿದೆ. ಜನಲೋಕಪಾಲ್ ಮಸೂದೆಗಾಗಿ ದೇಶದ ಪ್ರಜೆಗಳು ಒಕ್ಕೊರಲಿನಿಂದ ಒತ್ತಾಯಿಸುತ್ತಿದ್ದರೂ ತನ್ನದೇ ಆದ ಲೋಕಪಾಲ್ ಮಸೂದೆಯ ಕರಡನ್ನು ಕೇಂದ್ರ ಮಂತ್ರಿಮಂಡಲದಲ್ಲಿ ಅಂಗೀಕರಿಸಿರುವ ಯುಪಿಎ ಸರ್ಕಾರ ನಾಗರಿಕರ ಆಶೋತ್ತರಗಳಿಗೆ ಕವಣೆ ಕಿಮ್ಮತ್ತಿಲ್ಲ ಎಂದು ಮತ್ತೊಮ್ಮೆ ಸಾರಿ ಹೇಳಿದೆ. ಅಣ್ಣಾ ಹಜಾರೆ ನೇತೃತ್ವದ ತಂಡ ಸಮಸ್ತ ಭಾರತೀಯ ನಾಗರಿಕರನ್ನು ಪ್ರತಿನಿಧಿಸುತ್ತದೆಯೋ ಇಲ್ಲವೋ ಅದು ಇಲ್ಲಿ ಅಪ್ರಸ್ತುತ. ಆದರೆ ಈ ನಾಗರಿಕ ಸಮಿತಿ ರೂಪಿಸಿರುವ ಜನಲೋಕಪಾಲ್ ವಿಧೇಯಕದ ಕರಡು ಪ್ರತಿಯ ಪ್ರತಿಯೊಂದು ಅಂಶವೂ ಭಾರತೀಯ ಪ್ರಜೆಗಳ ಮನದಾಳದ ಇಂಗಿತವಾಗಿರುವುದಂತೂ ಸತ್ಯ. ಆದರೆ ಹಜಾರೆಯವರ ಪ್ರಾತಿನಿಧ್ಯವನ್ನೇ ಪ್ರಶ್ನಿಸುವ ಮೂಲಕ ಮನಮೋಹನ ಸಿಂಗ್ ಸರ್ಕಾರ ನಾಗರಿಕ ಹಕ್ಕುಗಳ ಸಿಂಧುತ್ವವನ್ನೇ ಪ್ರಶ್ನಿಸಲು ಹೊರಟಿರುವುದು ಸಂವಿಧಾನಕ್ಕೆ ಅಪಚಾರವೆಸಗಿದಂತಾಗಿದೆ.

ಅಣ್ಣಾ ಹಜಾರೆಯವರ ಉಪವಾಸ ಸತ್ಯಾಗ್ರಹಕ್ಕೆ ಸೂಕ್ತ ಜಾಗವನ್ನು ಒದಗಿಸಲೂ ಕಾನೂನು ಸುವ್ಯವಸ್ಥೆಯ ಕಾರಣಗಳನ್ನು ನೀಡುವ ಕೇಂದ್ರ ಸರ್ಕಾರ ಪ್ರಜೆಗಳ ಪ್ರತಿಭಟನೆಯ ಹಕ್ಕನ್ನೇ ಕಸಿದುಕೊಂಡಿದ್ದನ್ನು ಕಂಡಿದ್ದೇವೆ. ಇದು ಕೇವಲ ಕೇಂದ್ರ ಸರ್ಕಾರದ ತೀರ್ಮಾನವಲ್ಲ. ಜಾಗತೀಕರಣ ಮತ್ತು ನವ ಉದಾರವಾದದ ಪರಿಸರದಲ್ಲಿ ಪ್ರಜೆಗಳ ಆಂದೋಲನಗಳಿಗೆ ಅವಕಾಶ ನೀಡಕೂಡದೆಂಬ ಸಾರ್ವತ್ರಿಕ ಸತ್ಯವನ್ನು ಯುಪಿಎ ಸರ್ಕಾರ ಸಾಕ್ಷಾತ್ ಸಾಧಿಸಿ ತೋರಿಸಿದೆ. ಇತ್ತೀಚೆಗೆ ಪ್ರತಿಯೊಂದು ನಗರದಲ್ಲೂ ಸಾರ್ವಜನಿಕ ಪ್ರತಿಭಟನೆಗೆ ನಿಗದಿತ ಸ್ಥಳ ಮತ್ತು ಮೆರವಣಿಗೆಗೆ ಮಾರ್ಗಗಳನ್ನು ಸೂಚಿಸುವುದು ಪರಿಪಾಠವಾಗಿದೆ. ಅಂದರೆ ಪ್ರಭುತ್ವದ ವಿರುದ್ಧ, ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟಿಸುವ ಸಾರ್ವಭೌಮ ಪ್ರಜೆಗಳಿಗೆ ತಮ್ಮ ಹೋರಾಟ ನಡೆಸಲು ಭೂಮಿಯ ಮೇಲೆ ಸ್ಥಳ ದೊರೆಯಲೂ ಚುನಾಯಿತ ದೊರೆಗಳ ಅಪ್ಪಣೆ ಅಗತ್ಯ. ಇದು ನವ ಉದಾರವಾದದ ಮೂಲ ಧೋರಣೆ. ಹಾಗಾಗಿಯೇ ಅಮೆರಿಕ ಅಣ್ಣಾ ಹಜಾರೆ ಸತ್ಯಾಗ್ರಹದ ಬಗ್ಗೆ ಭಾರತಕ್ಕೆ ಪರೋಕ್ಷವಾಗಿ ಎಚ್ಚರಿಕೆ ನೀಡುತ್ತದೆ. ನವ ಉದಾರವಾದ ಮತ್ತು ಕಾರ್ಪೋರೇಟ್ ಉದ್ಯಮಗಳಿಗೆ ಗಾಂಧಿವಾದವೂ ಮಾವೋವಾದದಷ್ಟೇ ಅಪಾಯಕಾರಿಯಾಗಿ ಕಾಣಬಹುದು. ಏಕೆಂದರೆ ಯಾವುದೇ ಹಿಂಸಾ ಕೃತ್ಯಗಳಲ್ಲಿ ತೊಡಗದೆ ಜನತೆಯನ್ನು ಸಂಘಟಿಸುವ ದಾರ್ಷ್ಟ್ಯತೆ ಈ ಹೋರಾಟಗಳಲ್ಲಿ ಇರುತ್ತದೆ. ಪ್ರತಿಭಟನೆಯ ಹಕ್ಕನ್ನೇ ಕಸಿದುಕೊಳ್ಳುವ ಪ್ರಭುತ್ವದ ಈ ಲಕ್ಷಣಗಳೇ ಭಂಡ ವ್ಯವಸ್ಥೆಗೆ ಭದ್ರ ಬುನಾದಿಯನ್ನು ಒದಗಿಸುತ್ತದೆ.

ಪಕ್ಷಾತೀತ ಲಕ್ಷಣಗಳು

ಭಾರತೀಯ ಸಮಾಜ ಮತ್ತು ರಾಜಕಾರಣಕ್ಕೆ ಮಾರಕವಾಗಿರುವ ಕ್ಯಾನ್ಸರ್ ರೋಗಾಣುಗಳು ಈ ಹಿನ್ನೆಲೆಯಲ್ಲೇ ಹೆಚ್ಚು ಅಪಾಯಕಾರಿಯಾಗುತ್ತವೆ. ಭ್ರಷ್ಟಾಚಾರ ಎಷ್ಟು ಸರ್ವವ್ಯಾಪಿಯಾಗಿ, ಸರ್ವಾಂತರ್ಯಾಮಿಯಾಗಿ ತನ್ನ ಕಬಂಧ ಬಾಹುಗಳನ್ನು ಚಾಚಿದೆ ಎಂದರೆ ಭಾರತದ ಯಾವ ಕ್ಷೇತ್ರವೂ ಇದರಿಂದ ಮುಕ್ತವಾಗಿಲ್ಲ. ಈ ಸಮಾಜಕ್ಕೆ ತಗುಲಿರುವ ಭ್ರಷ್ಟಾಚಾರದ ಪಿಡುಗನ್ನು ಎಷ್ಟೇ ನಿವಾರಿಸಲು ಪ್ರಯತ್ನಿಸಿದರೂ ಹಚ್ಚ ಹೊಸ ರೋಗಾಣುಗಳು ಸೃಷ್ಟಿಯಾಗುತ್ತಲೇ ಇರುತ್ತವೆ. ಇದು ಒಂದು ರೀತಿ ಪುರಾಣದ ರಕ್ತ ಬೀಜಾಸುರನಂತೆ. ಒಂದೊಂದು ತೊಟ್ಟು ರಕ್ತ ಭೂಮಿಯನ್ನು ಸ್ಪರ್ಶಿಸಿದಾಗೆಲ್ಲಾ ಮತ್ತೊಬ್ಬ ಬೀಜಾಸುರ ಹುಟ್ಟಿಕೊಳ್ಳುವ ಹಾಗೆ, ಭಾರತೀಯ ಸಮಾಜವನ್ನು ಬಾಧಿಸುತ್ತಿರುವ ಕ್ಯಾನ್ಸರ್ ರೋಗಾಣುಗಳು ತಮ್ಮ ಉತ್ತರಾಧಿಕಾರಿಗಳನ್ನು ಉತ್ಪತ್ತಿ ಮಾಡುತ್ತಲೇ ಇರುತ್ತವೆ. ಈ ರೋಗ ನಿವಾರಣೆಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಿರುವವರು ಅಸಂಖ್ಯಾತ ಜನ. ಇಂದಿಗೂ ಈ ಪ್ರಯತ್ನ ನಡೆಯುತ್ತಲೇ ಇದೆ. ಆದರೆ ಹಜಾರೆಯಂತಹ ಸಾಮಾಜಿಕ ವೈದ್ಯರು ಒಂದು ಚಿಕಿತ್ಸೆ ಸೂಚಿಸಿದರೆ, ರಾಮದೇವ್ ಅವರಂತಹ ನಕಲಿ ವೈದ್ಯರು ಮತ್ತೊಂದು ರೀತಿಯ ಚಿಕಿತ್ಸೆ ಸೂಚಿಸುತ್ತಾರೆ. ಪರಿಣಾಮ ಎರಡೂ ಫಲಕಾರಿಯಾಗದೆ ರೋಗ ಉಲ್ಬಣಗೊಳ್ಳುತ್ತದೆ. ರೋಗಾಣುಗಳು ದ್ವಿಗುಣವಾಗುತ್ತವೆ. ಸಮಾಜ ನಿಸ್ತೇಜವಾಗುತ್ತಾ ಹೋಗುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ನಾವು ಈ ಪ್ರಕ್ರಿಯೆಯನ್ನೇ ಕಾಣುತ್ತಿದ್ದೇವೆ. ಭಾರತದ ರಾಜಕೀಯ ವ್ಯವಸ್ಥೆಯನ್ನು ಬಾಧಿಸುತ್ತಿರುವ ಪಿಡುಗು ದಿನೇ ದಿನೇ ಉಲ್ಬಣಗೊಳ್ಳುತ್ತಿರುವುದೇ, ಪಕ್ಷಗಳ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವ ರೋಗಾಣುಗಳಿಂದ. ಸಂಸತ್ತಿನಲ್ಲಿ ಭ್ರಷ್ಟಾಚಾರದ ವಿರುದ್ಧ ರಣಕಹಳೆ ಮೊಳಗುವ ಭಾಜಪದ ಹೈಕಮಾಂಡ್ ಕರ್ನಾಟಕದಲ್ಲಿ ಲೋಕಾಯುಕ್ತರಿಂದ ಆರೋಪಕ್ಕೆ ಗುರಿಯಾದ ಮುಖ್ಯಮಂತ್ರಿಯನ್ನು ಪದಚ್ಯುತಗೊಳಿಸಲು ಮೂರು ದಿನಗಳ ಕಾಲ ಶ್ರಮಿಸುವುದು ರಾಜಕೀಯ ಪಕ್ಷಗಳಲ್ಲಿನ ರೋಗಾಣುಗಳ ಚಿಹ್ನೆಯೇ ಅಲ್ಲವೇ? ಇದು ಕೇವಲ ಒಂದು ಪಕ್ಷದ ಲಕ್ಷಣವಲ್ಲ. ವಿವಿಧ ರಾಜ್ಯಗಳಲ್ಲಿ ವಿವಿಧ ರಾಜಕೀಯ ಪಕ್ಷಗಳೂ ಇದೇ ಸಮಸ್ಯೆ ಎದುರಿಸುತ್ತಿವೆ. ತಮ್ಮದು ನಿಷ್ಠಾವಂತರ ಪಕ್ಷ ಎಂದು ಎದೆ ತಟ್ಟಿ ಹೇಳಿಕೊಳ್ಳುವ ಛಾತಿ, ದಾರ್ಷ್ಟ್ಯತೆ ಯಾವುದೇ ಪಕ್ಷಕ್ಕೂ ಉಳಿದಿಲ್ಲ. ಹೆಚ್ಚೆಂದರೆ ನಾವು ಅವರಷ್ಟು ಭ್ರಷ್ಟರಲ್ಲ ಎಂದು ಹೇಳಬಹುದಷ್ಟೆ. ಅಥವಾ ನಮ್ಮ ಆಳ್ವಿಕೆಯಲ್ಲಿ ಹೀಗಿರಲಿಲ್ಲ ಎಂದು ಬೆನ್ನು ತಟ್ಟಿಕೊಳ್ಳಬಹುದು.

ಭಾರತದ ರಾಜಕೀಯ ವ್ಯವಸ್ಥೆಯನ್ನು ಬಾಧಿಸುತ್ತಿರುವ ಪಿಡುಗು ದಿನೇ ದಿನೇ ಉಲ್ಬಣಗೊಳ್ಳುತ್ತಿರುವುದೇ, ಪಕ್ಷಗಳ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವ ರೋಗಾಣುಗಳಿಂದ. ಸಂಸತ್ತಿನಲ್ಲಿ ಭ್ರಷ್ಟಾಚಾರದ ವಿರುದ್ಧ ರಣಕಹಳೆ ಮೊಳಗುವ ಭಾಜಪದ ಹೈಕಮಾಂಡ್ ಕರ್ನಾಟಕದಲ್ಲಿ ಲೋಕಾಯುಕ್ತರಿಂದ ಆರೋಪಕ್ಕೆ ಗುರಿಯಾದ ಮುಖ್ಯಮಂತ್ರಿಯನ್ನು ಪದಚ್ಯುತಗೊಳಿಸಲು ಮೂರು ದಿನಗಳ ಕಾಲ ಶ್ರಮಿಸುವುದು ರಾಜಕೀಯ ಪಕ್ಷಗಳಲ್ಲಿನ ರೋಗಾಣುಗಳ ಚಿಹ್ನೆಯೇ ಅಲ್ಲವೇ? ಇದು ಕೇವಲ ಒಂದು ಪಕ್ಷದ ಲಕ್ಷಣವಲ್ಲ. ವಿವಿಧ ರಾಜ್ಯಗಳಲ್ಲಿ ವಿವಿಧ ರಾಜಕೀಯ ಪಕ್ಷಗಳೂ ಇದೇ ಸಮಸ್ಯೆ ಎದುರಿಸುತ್ತಿವೆ.

ಆದರೆ ಅಕ್ರಮ ಎನ್ನುವ ಪದ ಬಂಡವಾಳಶಾಹಿ ವ್ಯವಸ್ಥೆಯ ಆಂತರ್ಯದಲ್ಲಿ ಅಡಗಿರುವ ಸೂಕ್ಷ್ಮ ತರಂಗ. ಇದು ಸದಾ ಜಾಗೃತವಾಗಿಯೇ ಇರುತ್ತದೆ. ಆಡಳಿತಾರೂಢ ಪಕ್ಷ ಈ ಸೂಕ್ಷ್ಮ ತರಂಗಗಳನ್ನು ಸೂಕ್ತ ರೀತಿಯಲ್ಲಿ, ಪರಿಣಾಮಕಾರಿಯಾಗಿ, ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುವ ಮೂಲಕ ನೇರ ಫಲಾನುಭವಿಯಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲ ಪಕ್ಷಗಳೂ ತಮ್ಮದೇ ಆದ ಪಾತ್ರ ವಹಿಸಿರುವುದನ್ನು ಕರ್ನಾಟಕ ಲೋಕಾಯುಕ್ತ ವರದಿ ಬಯಲು ಮಾಡಿದೆ. ಈ ವಿದ್ಯಮಾನವನ್ನು ಕೇವಲ ರಾಜಕೀಯ ಭ್ರಷ್ಟಾಚಾರದ ದೃಷ್ಟಿಯಿಂದ ನೋಡಿದರೆ ಬಹುಶಃ ಇದರ ಮೂಲ ಎಳೆಗಳನ್ನು ಗ್ರಹಿಸಲಾಗುವುದಿಲ್ಲ. ನವ ಉದಾರವಾದದ ಆರ್ಥಿಕ ನೀತಿಗಳು ಸೃಷ್ಟಿಸುವ ಅನಿವಾರ್ಯತೆಗಳು ಮತ್ತು ಆಳುವ ವರ್ಗಗಳು ತಮ್ಮ ಸುತ್ತಲೂ ನಿರ್ಮಿಸಿಕೊಳ್ಳುವ ಪ್ರಭಾವಳಿಯಲ್ಲೇ ಈ ಸೂಕ್ಷ್ಮ ಎಳೆಗಳು ಅಡಕವಾಗಿರುತ್ತವೆ. ಇಂದು ಅಕ್ರಮ ಗಣಿ ಉದ್ಯಮದಲ್ಲಿ ಮಾತ್ರ ನಡೆಯುತ್ತಿಲ್ಲ. ಪ್ರತಿಯೊಂದು ಔದ್ಯಮಿಕ ಕ್ಷೇತ್ರವೂ ಅಕ್ರಮಗಳ ತಾಣವಾಗಿದೆ. ಖಾಸಗಿ ಕ್ಷೇತ್ರವನ್ನೂ ಸೇರಿದಂತೆ. ಅತಿ ಹೆಚ್ಚು ಲಾಭ ಗಳಿಸುವ ಔದ್ಯಮಿಕ ಕ್ಷೇತ್ರಗಳೆಂದರೆ ಧಾರ್ಮಿಕ ಕ್ಷೇತ್ರ, ಆರೋಗ್ಯ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರ. ಈ ಮೂರೂ ಕ್ಷೇತ್ರಗಳೂ ಸಾಮಾಜಿಕ-ಸಾಂಸ್ಕೃತಿಕ ಅಭ್ಯುದಯದ ಸಂಕೇತಗಳು. ಇದು ಮನುಕುಲದ ವಿಡಂಬನೆಯಲ್ಲವೇ?

ಅಧಿಕಾರ ವಿತರಣೆಯ ವ್ಯಾಪಾರ

ಈ ಅಕ್ರಮ ಎಂಬ ಪದದ ಪೂರ್ಣಾರ್ಥವನ್ನು ಗ್ರಹಿಸಬೇಕಾದರೆ ಪ್ರಸ್ತುತ ಕರ್ನಾಟಕದ ರಾಜಕಾರಣವನ್ನೇ ನೋಡಬೇಕು. "ಆಡಳಿತಾರೂಢ ಭಾರತೀಯ ಜನತಾ

ಪಕ್ಷಕ್ಕೆ ಜನಾದೇಶ ದೊರೆತಿರುವುದು ಸ್ವಚ್ಛ, ಪ್ರಾಮಾಣಿಕ ಮತ್ತು ಪಾರದರ್ಶಕ ಆಡಳಿತ ಒದಗಿಸಲು. ಇನ್ನು ಇಪ್ಪತ್ತು ವರ್ಷಗಳ ಕಾಲ ನಮ್ಮ ಪಕ್ಷ ಅಧಿಕಾರದಲ್ಲಿರುತ್ತದೆ. ಕರ್ನಾಟಕವನ್ನು ದೇಶದ ಮುಂಚೂಣಿ ರಾಜ್ಯವನ್ನಾಗಿ ಮಾಡುತ್ತೇವೆ. ಅಭಿವೃದ್ಧಿಯ ಉತ್ತುಂಗಕ್ಕೆ ಕೊಂಡೊಯ್ಯುತ್ತೇವೆ "ಇದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ತಮ್ಮ ಅಧಿಕಾರಾವಧಿಯಲ್ಲಿ ಪದೇಪದೇ ಹೇಳಿದ ಮಾತು. ಆಪರೇಷನ್ ಕಮಲದಂತಹ ಅಕ್ರಮ ರಾಜಕೀಯ ಪ್ರಕ್ರಿಯೆಯ ಸಂದರ್ಭದಲ್ಲೂ ತಮ್ಮ ಮೌಲ್ಯರಹಿತ ರಾಜಕಾರಣವನ್ನು ಸಮರ್ಥಿಸಿಕೊಳ್ಳಲು ಇದೇ ಪದಪುಂಜಗಳು ನೆರವಾಗಿದ್ದವು. ಜಾಗತಿಕ ಬಂಡವಾಳ ಸಮಾವೇಶ ನಡೆಸುವುದರ ಮೂಲಕ ರಾಜ್ಯ ಅಭಿವೃದ್ಧಿ ಆಗಿಯೇ ಹೋಗಿದೆ, ಇನ್ನೇನು ಸ್ವರ್ಗಕ್ಕೆ ಮೂರೇ ಗೇಣು ಎಂಬಂತೆ ವರ್ತಿಸಿದ ಮುಖ್ಯಮಂತ್ರಿಗಳು ಅಂತಿಮವಾಗಿ ಕರ್ನಾಟಕದ ಜನತೆಗೆ ನೀಡಿದ್ದು ಒಂದು ಭ್ರಷ್ಟಾತಿಭ್ರಷ್ಟ ಸರ್ಕಾರ ಮತ್ತು ಅದರೊಳಗಿನ ಪ್ರಜಾಸತ್ತಾತ್ಮಕ ಮೌಲ್ಯಗಳನ್ನೇ ಅರಿಯದ ಹಲವು ಶಾಸಕರು.

1970ರ ದಶಕದಲ್ಲಿ ಒಂದು ಸಾರ್ವತ್ರಿಕ ಘೋಷಣೆ ಕೇಳಿಬರುತ್ತಿತ್ತು. ಇಂಡಿಯಾ ಈಸ್ ಇಂದಿರಾ ಇಂದಿರಾ ಈಸ್ ಇಂಡಿಯಾ ಎಂಬ ಈ ಘೋಷಣೆ ಸೃಷ್ಟಿಯಾದದ್ದು ಮಾಜಿ ಪ್ರಧಾನಿ ಇಂದಿರಾಗಾಂಧಿಯವರ ರಾಜಕೀಯ ಪ್ರಭಾವ ಮತ್ತು ಪ್ರಾಬಲ್ಯದ ಪರಿಣಾಮ. ಇದೇ ಜಾಡಿನಲ್ಲಿ ಯಡಿಯೂರಪ್ಪ ನಾನಿಲ್ಲದೆ ಪಕ್ಷವೇ ಇಲ್ಲ ಎಂದು ಬೀಗುತ್ತಿದ್ದರೂ ಈಗ ಪಕ್ಷದ ಒತ್ತಡಕ್ಕೆ ಮಣಿದು ತಮ್ಮ ಪದತ್ಯಾಗ ಮಾಡಿದ್ದಾರೆ. ಆದರೆ ಪಕ್ಷದಲ್ಲಿ ತಮ್ಮ ಅಸ್ತಿತ್ವ ಇನ್ನೂ ಅಳಿಸಿಲ್ಲ ಎಂದು ನಿರೂಪಿಸಲು ತಮ್ಮವರನ್ನೇ ಅಧಿಕಾರದ ಗದ್ದುಗೆಯಲ್ಲಿ ಕೂರಿಸಿದ್ದಾರೆ. ಒಂದು ರಾಜ್ಯದ ಮುಖ್ಯಮಂತ್ರಿಯ ಷರತ್ತುಗಳಿಗೆ ಸಂಪೂರ್ಣ ಶರಣಾಗಿ, ಶಾಸಕರ ಅಭಿಪ್ರಾಯವನ್ನೂ ಲೆಕ್ಕಿಸದೆ, ಗುಪ್ತ ಮತದಾನದ ಪ್ರಹಸನದಲ್ಲಿ ಯಡಿಯೂರಪ್ಪನವರ ಕೈಗೊಂಬೆಯನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿರುವ ಭಾಜಪದ ಹೈಕಮಾಂಡ್ ಒಂದೆಡೆ ತನ್ನ ದೌರ್ಬಲ್ಯವನ್ನು ಪ್ರದರ್ಶಿಸಿದ್ದರೆ ಮತ್ತೊಂದೆಡೆ ಪಕ್ಷದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಕಿಂಚಿತ್ತೂ ಬೆಲೆ ಇಲ್ಲದಿರುವುದನ್ನು ಪ್ರದರ್ಶಿಸಿದೆ.

ರಾಜೀನಾಮೆ ನೀಡುವ ಮುನ್ನವೇ ತನ್ನ ಬೆಂಬಲಿಗರನ್ನು ಪೆರೇಡ್ ಮಾಡಿಸುವ ಮೂಲಕ ಹೈಕಮಾಂಡಿಗೆ ಎಚ್ಚರಿಕೆ ನೀಡಿದ್ದ ಯಡಿಯೂರಪ್ಪನವರಿಗೆ ಬೇಕಾಗಿದ್ದುದು ಮುಖ್ಯಮಂತ್ರಿ ಗಾದಿಯಲ್ಲ, ಬದಲಾಗಿ ಆ ಪ್ರಭಾವಶಾಲಿ ಹುದ್ದೆಯಿಂದ ದೊರಕಬಹುದಾದ ಸವಲತ್ತುಗಳು ಮತ್ತು ರಾಜಕೀಯ ಲಾಭ. ಅಕ್ರಮ ಗಣಿಗಾರಿಕೆಯನ್ನು ಪೋಷಿಸುತ್ತಲೇ ತಮ್ಮ ರಾಜಕೀಯ ಬುನಾದಿಯನ್ನು ಭದ್ರಪಡಿಸಿ ಕೊಂಡಿದ್ದ ಮಾಜಿ ಮುಖ್ಯಮಂತ್ರಿಗಳು ಮತ್ತೊಂದೆಡೆ ವೀರಶೈವ ಮಠಗಳನ್ನು ಪೋಷಿಸುವ ಮೂಲಕ ತಮ್ಮ ಸಾಮಾಜಿಕ ತಳಪಾಯವನ್ನೂ ಭದ್ರಪಡಿಸಿಕೊಂಡಿದ್ದರು. ಇವೆರಡರ ಪರಿಣಾಮವೇ ಸದಾನಂದಗೌಡರಂತಹ ಅನುಭವಿ ವ್ಯಕ್ತಿಯ ಪಟ್ಟಾಭಿಷೇಕ. ಕರ್ನಾಟಕದ ಜನತೆ ರಾಜ್ಯ ವಿಧಾನಸಭೆಗಾಗಿ ಆಯ್ಕೆ ಮಾಡಿದ 120 ಭಾಜಪ ಶಾಸಕರಲ್ಲಿ ಯಾರೊಬ್ಬರೂ ಮುಖ್ಯಮಂತ್ರಿಯ ಹುದ್ದೆಗೆ ಅರ್ಹರಲ್ಲ ಎಂದು ಹೈಕಮಾಂಡ್ ನಿರ್ಧರಿಸಿರುವುದು ರಾಜ್ಯದ ಜನತೆಗೆ ಅವಮಾನ ಮಾಡಿದಂತಲ್ಲವೇ?

ಚುನಾಯಿತ ಪ್ರತಿನಿಧಿಗಳನ್ನು ಹೊರತುಪಡಿಸಿ ಪಕ್ಷದ ಹಿತಾಸಕ್ತಿಯನ್ನೇ ಪ್ರಧಾನವಾಗಿ ಪರಿಗಣಿಸಿ ಪಕ್ಷದ ಉಳಿವಿನ ದೃಷ್ಟಿಯಿಂದ ತಮಗೆ ಬೇಕಾದವರನ್ನು ರಾಜ್ಯದ ಮುಖ್ಯಮಂತ್ರಿಗಳನ್ನಾಗಿ ಆಯ್ಕೆ ಮಾಡುವ ಈ ಪದ್ಧತಿ ಭಾಜಪಕ್ಕೆ ಮಾತ್ರ ಸೀಮಿತವಲ್ಲ. ಕಾಂಗ್ರೆಸ್ ಪಕ್ಷವೂ ಅನೇಕ ಸಂದರ್ಭಗಳಲ್ಲಿ ಈ ರೀತಿ ವರ್ತಿಸಿದೆ. ವಿಪರ್ಯಾಸವೆಂದರೆ ಈ ವಿಚಾರ ಮಾಧ್ಯಮಗಳಲ್ಲಿ ಚರ್ಚೆಗೊಳಗಾಗುವುದೇ ಇಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ವ್ಯಕ್ತಿಗತ ಹಿತಾಸಕ್ತಿಗಳು ಅಪ್ರಸ್ತುತ ಎಂದು ಹೇಳಬೇಕಿಲ್ಲ. ಆದರೆ ನವ ಉದಾರವಾದ ಪ್ರೇರಿತ ಆಳ್ವಿಕೆಯಲ್ಲಿ ವ್ಯಕ್ತಿಗಳೇ ರಾಜಕೀಯ ವಿದ್ಯಮಾನಗಳನ್ನು ನಿರ್ಧರಿಸುವುದನ್ನು ಕಾಣುತ್ತಿದ್ದೇವೆ. ಕಾರಣ ಬಂಡವಾಳ ಮತ್ತು ಜಾಗತೀಕರಣ ಪೋಷಿತ ಕಾರ್ಪೋರೇಟ್ ಔದ್ಯಮೀಕರಣ. ಭಾಜಪ ಸರ್ಕಾರ ಉಳಿಯಬೇಕಾದರೆ ಸರ್ಕಾರವನ್ನು ಪೋಷಿಸುವ ಬಂಡವಾಳವೂ ಉಳಿಯಬೇಕು. ತನ್ಮೂಲಕವೇ ಆಳುವ ಪಕ್ಷಗಳ ಶಾಸಕರೂ ಉಳಿಯಬೇಕು. ಹಾಗಾಗಿ ಈ ಬಂಡವಾಳ ಮತ್ತು ಬಂಡವಾಳಿಗರನ್ನು ನಿಯಂತ್ರಿಸುವ ಶಕ್ತಿಯುಳ್ಳ ವ್ಯಕ್ತಿ ಆಳುವ ಪಕ್ಷವನ್ನೂ ನಿಯಂತ್ರಿಸಬೇಕು. ಹಾಗಾಗಿ ಯಡಿಯೂರಪ್ಪನವರ ಎಲ್ಲ ಷರತ್ತುಗಳಿಗೆ ಭಾಜಪ ಹೈಕಮಾಂಡ್ ಶರಣು.

ಈ ಅಧಿಕಾರ ರಾಜಕಾರಣ ಮತ್ತು ಬಂಡವಾಳದ ನಡುವಿನ ಸಂಬಂಧಗಳ ಸೂಕ್ಷ್ಮ ತಂತುಗಳನ್ನು ಗ್ರಹಿಸಬೇಕಾದರೆ ಕರ್ನಾಟಕದ ರಾಜಕೀಯ ಬೆಳವಣಿಗೆಗಳೇ ಅತ್ಯುತ್ತಮ ನಿದರ್ಶನ. ಯಡಿಯೂರಪ್ಪನವರ ಪದಚ್ಯುತಿಯ ಮುಂಚಿನ ಮತ್ತು ನಂತರದ ರಾಜಕೀಯ ಬೆಳವಣಿಗೆಗಳು ರಾಜ್ಯ ರಾಜಕಾರಣದ ಮೇಲೆ ಜಾಗತಿಕ ಬಂಡವಾಳ ಹೊಂದಿರುವ ನಿಯಂತ್ರಣದ ಸಂಕೇತವಾಗಿಯೇ ಕಾಣುತ್ತದೆ. ಭಾಜಪದಲ್ಲಿನ ಎರಡೂ ಬಣಗಳು ನಂಬಿರುವುದೂ ಇದೇ ಬಂಡವಾಳದ ಮೂಲವನ್ನೇ. ನೂತನ ಮುಖ್ಯಮಂತ್ರಿಗಳ ಪ್ರಮಾಣ ವಚನದ ಸಂದರ್ಭದಲ್ಲೂ ಗೈರುಹಾಜರಿಯಾಗಿ, ತಮ್ಮ ಬಣಕ್ಕೆ ಸೂಕ್ತ ಪ್ರಾತಿನಿಧ್ಯ, ಅಂದರೆ ಹೆಚ್ಚು ಲಾಭದಾಯಕ ಮಂತ್ರಿಗಿರಿಗಳು ಎಂದು ಹೇಳಬೇಕಿಲ್ಲ, ದೊರೆಯುವಂತೆ ಒತ್ತಡ ಹೇರಿದ ಜಗದೀಶ್ ಶೆಟ್ಟರ್ ಮೂರೇ ದಿನಗಳಲ್ಲಿ ರಾಜಿಯಾಗಿ 50:50 ಹಂಚಿಕೆಗೆ ಸಿದ್ಧರಾಗಿರುವುದು ಬಂಡವಾಳ ರಾಜಕಾರಣದ ಪ್ರಾಬಲ್ಯದ ಕುರುಹು. ಆಧುನಿಕ ರಾಜಕಾರಣದಲ್ಲಿ ಉಪಮುಖ್ಯಮಂತ್ರಿ ಹುದ್ದೆ ಮತ್ತು ನಿಗಮ ಮಂಡಲಿಗಳ ಅಧಿಕಾರ ಇರುವುದೇ ಅತೃಪ್ತರನ್ನು ತೃಪ್ತಿಪಡಿಸಲು ಎಂದು ಹೇಳಬೇಕಿಲ್ಲ.

ನಮ್ಮ ಪಕ್ಷ ಪ್ರಜಾತಂತ್ರವನ್ನು ಗೌರವಿಸುತ್ತದೆ, ಕುಟುಂಬ ರಾಜಕಾರಣವನ್ನು ಪ್ರೋತ್ಸಾಹಿಸುವುದಿಲ್ಲ, ತಮ್ಮದು ಶಿಸ್ತಿನ ಪಕ್ಷ ಎಂದೆಲ್ಲಾ ಬೊಗಳೆ ಹೊಡೆಯುವ ಭಾಜಪ ವರಿಷ್ಠರಿಗೆ ಪ್ರಜಾತಂತ್ರದಲ್ಲಿ ನಿಜವಾಗಲೂ ಗೌರವ ಇದ್ದಿದ್ದಲ್ಲಿ ಮಾಧ್ಯಮಗಳ ಮುಂದೆ, ಸಾರ್ವಜನಿಕವಾಗಿ ಯಡಿಯೂರಪ್ಪನವರ ಪ್ರಹಸನಗಳಿಗೆ ಅವಕಾಶ ನೀಡುತ್ತಿರಲಿಲ್ಲ. ಬದಲಾಗಿ ಶಾಸಕರ ಸಭೆ ಸೇರಿಸಿ ಎಲ್ಲರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಸೂಕ್ತ ಅಭ್ಯರ್ಥಿಯನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಲಾಗುತ್ತಿತ್ತು. ಆದರೆ ಭಾಜಪದ ವರಿಷ್ಠರು ರಾಜ್ಯ ಸರ್ಕಾರವನ್ನು ತರಕಾರಿ ಮಾರುಕಟ್ಟೆಯನ್ನಾಗಿ ಮಾರ್ಪಡಿಸಿ ಅಧಿಕಾರವನ್ನು ಹಂಚಿಕೆ ಮಾಡುತ್ತಿರುವುದು ಪ್ರಜಾತಂತ್ರ ಮೌಲ್ಯಗಳಿಗೇ ಮಾರಕವಾಗಿದೆ. ಈ ರೀತಿ ತರಕಾರಿ ಮಾರುಕಟ್ಟೆ ವ್ಯವಹಾರ ಭಾಜಪಕ್ಕೆ ಮಾತ್ರ ಸೀಮಿತವಲ್ಲ. ಯುಪಿಎ ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಸೋನಿಯ ಗಾಂಧಿ ಹೇಗೆ ಮನಮೋಹನ್‌ಸಿಂಗ್ ಅವರನ್ನು ನೇಮಿಸಿ ನಂತರ ಅದನ್ನು ಸಂಸದರ ಸಭೆಯಲ್ಲಿ ಅಂಗೀಕರಿಸಲಾಯಿತು ಎಂದು ಎಲ್ಲರಿಗೂ ತಿಳಿದಿದೆ. ಸತ್ಯಾಂಶವೆಂದರೆ ಪ್ರಜಾತಾಂತ್ರಿಕ ಮೌಲ್ಯಗಳು ಇಲ್ಲದಿರುವುದು ಕೇವಲ ಉತ್ತರಾಧಿಕಾರಿಯ ಆಯ್ಕೆಗೆ ಮಾತ್ರ ಸೀಮಿತವಾಗಿಲ್ಲ ಬದಲಾಗಿ ರಾಜಕೀಯ ಪಕ್ಷಗಳ ವರ್ತನೆಯಲ್ಲೇ ಕಂಡುಬರುತ್ತದೆ.

ಭವಿಷ್ಯದ ಮಾರ್ಗವೇನು?

ರಾಷ್ಟ್ರಮಟ್ಟದಲ್ಲಿ ಅಧಿಕಾರ ವಹಿಸಿಕೊಂಡು ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಲು ಹವಣಿಸುತ್ತಿರುವ ಪಕ್ಷವೊಂದು ಪ್ರಜಾತಾಂತ್ರಿಕ ಮೌಲ್ಯಗಳಿಗೆ ಮನ್ನಣೆ ನೀಡದೆ ಭ್ರಷ್ಟ ವ್ಯವಸ್ಥೆಯನ್ನು ಹುಟ್ಟುಹಾಕುವ ರಾಜಕಾರಣಿಗಳ ಒತ್ತಾಸೆಗೆ ಶರಣಾಗಿರುವುದು ಮೌಲ್ಯರಹಿತ ರಾಜಕಾರಣದ ಸಂಕೇತವಾಗಿದೆ. ಪರ್ಯಾಯ ರಾಜಕಾರಣವೇ ಇಲ್ಲದ ಈ ಸಂದರ್ಭದಲ್ಲಿ ಪ್ರಜೆಗಳ ಮುಂದಿನ ಆದ್ಯತೆಗಳೇನು ಎನ್ನುವುದೇ ಮೂರ್ತ ಪ್ರಶ್ನೆ! ಈ ವಿಷಮ ಸನ್ನಿವೇಶದಲ್ಲಿ ಭವಿಷ್ಯದ ಮಾರ್ಗವನ್ನು ಕುರಿತು ಯೋಚಿಸುವಾಗ ಮನಸ್ಸು ವಿಚಲಿತವಾಗುತ್ತದೆ. ದೇಶದ ಸಮಸ್ತ ಜನಾಗ್ರಹವನ್ನೇ ಧಿಕ್ಕರಿಸುವ ಕೇಂದ್ರ ಸರ್ಕಾರ, ಭ್ರಷ್ಟಾಚಾರದ ಬೃಹತ್ ಮೂಟೆಯನ್ನೇ ಹೊತ್ತು ಸಾಗುತ್ತಿದ್ದರೂ ಅಧಿಕಾರ ಬಿಡಲೊಲ್ಲದ ರಾಜ್ಯ ಸರ್ಕಾರ, ತಮ್ಮ ಪಕ್ಷದ ಭ್ರಷ್ಟ ಪರಂಪರೆಯನ್ನು ಹೆಮ್ಮೆಯಿಂದ ಸಮರ್ಥಿಸುವ ಶಾಸಕರು, ಸಂಸದರು ಮತ್ತು ರಾಜಕೀಯ ನಾಯಕರು ಈ ಭಂಡ ವ್ಯವಸ್ಥೆಯಲ್ಲಿ ಹಲ್ಲು ಕಿತ್ತ ಹಾವಿನಂತಾಗಿರುವ ನ್ಯಾಯಾಂಗ ವ್ಯವಸ್ಥೆ, ಇವೆಲ್ಲವನ್ನೂ ನೋಡುತ್ತಿದ್ದರೆ ಭವಿಷ್ಯದ ಬಗ್ಗೆ ಆಶಾಭಾವನೆ ಮೂಡಲು ಹೇಗೆ ಸಾಧ್ಯ. ಲೋಕಾಯುಕ್ತರ ವಿರುದ್ಧ ಕರ್ನಾಟಕದ ಕೆಲವು ಮಂತ್ರಿಗಳು ಹರಿಹಾಯ್ದಿರುವುದನ್ನು ನೋಡಿದರೆ ನಮ್ಮ ಜನಪ್ರತಿನಿಧಿಗಳಲ್ಲಿ ಸಾಂವಿಧಾನಿಕ ನಿಷ್ಠೆ ಎಷ್ಟು ಉಳಿದಿದೆ ಎಂದು ಅರಿವಾಗುತ್ತದೆ. ಅತ್ತ ಕೇಂದ್ರದಲ್ಲಿ ಅಣ್ಣಾ ಹಜಾರೆಯವರ ವಿರುದ್ಧವೂ ಇದೇ ರೀತಿಯ ಅಪ್ರಬುದ್ಧ ಟೀಕೆಗಳು ಕೇಳಿಬರುತ್ತವೆ. ಇದರ ಅರ್ಥವೇನು? ನಮ್ಮ ಪ್ರಜಾಪ್ರತಿನಿಧಿಗಳು ಸಂವಿಧಾನವನ್ನು ಹೇಗೆ ಅರ್ಥೈಸುತ್ತಾರೆ?

ಅರ್ಥ ಇಷ್ಟೇ. "ನಮ್ಮನ್ನು ಜನತೆ ಸಂವಿಧಾನದ ಪ್ರತಿನಿಧಿಗಳಾಗಿ ಆಯ್ಕೆ ಮಾಡಿ ಆಳುವ ಹಕ್ಕನ್ನು ನೀಡಿದ್ದಾರೆ, ಈ ಹಕ್ಕನ್ನು ಕಸಿದುಕೊಳ್ಳಲು ಸಂವಿಧಾನಕ್ಕೂ ಹಕ್ಕು ಇರುವುದಿಲ್ಲ, ಹಾಗೊಮ್ಮೆ ಇದ್ದರೂ ಅದು ನಾವೇ ನಿರೂಪಿಸುವ ಒಂದು ಸೀಮಿತ ಚೌಕಟ್ಟಿನಲ್ಲಿ ಮಾತ್ರ ಇರುತ್ತದೆ. ಸಂವಿಧಾನ ಪ್ರತಿನಿಧಿಸುವ ಭಾರತದ ಸಾರ್ವಭೌಮ ಪ್ರಜೆಗಳಿಗೆ ನಮ್ಮ ತಪ್ಪುಗಳನ್ನು ಎತ್ತಿ ತೋರಿಸುವ ಹಕ್ಕು ಇರುವುದೇ ಹೊರತು ನಮ್ಮನ್ನು ಶಿಕ್ಷಿಸುವ ಹಕ್ಕು ಇರುವುದಿಲ್ಲ. ಹಾಗೊಮ್ಮೆ ಪ್ರಜೆಗಳು ಪ್ರಯತ್ನಿಸಿದರೂ ನಾವು ಇದೇ ಸಂವಿಧಾನದ ಪರಿಧಿಯಲ್ಲೇ ಅಂತಹ ಪ್ರಯತ್ನಗಳನ್ನು ಚಿವುಟಿಹಾಕುತ್ತೇವೆ. ಆಳುವುದು ನಮ್ಮ ಜನ್ಮಸಿದ್ಧ ಹಕ್ಕು. "ಇದು ನಮ್ಮ ಪ್ರಜಾಪ್ರತಿನಿಧಿಗಳು ಪ್ರಜ್ಞಾಪೂರ್ವಕವಾಗಿ ಸ್ವೀಕರಿಸುವ (ಅ)ಸಾಂವಿಧಾನಿಕ ಪ್ರತಿಜ್ಞೆ. ಇದಕ್ಕೆ ಪ್ರತಿಯಾಗಿ ಪ್ರಜೆಗಳು ಯಾವ ರೀತಿಯ ಪ್ರತಿಜ್ಞೆ ಸ್ವೀಕರಿಸಬೇಕು? ಇದು ಪ್ರಜೆಗಳ ವಿವೇಚನೆಗೆ ಬಿಟ್ಟ ವಿಚಾರ.

ಈ ಭಂಡ ವ್ಯವಸ್ಥೆಯಲ್ಲಿ ಉಂಡವನೇ ಜಾಣ. □

ಹಜಾರೆ ಆಂದೋಲನ: ಪ್ರಜಾಸತ್ತೆ ಮೇಲಿನ ಸವಾರಿಯೇ?

ಡಿ. ಎಸ್. ನಾಗಭೂಷಣ

ಅಣ್ಣಾ ಹಜಾರೆ ಆಂದೋಲನ ಈಗ ದೊಡ್ಡ ಸುದ್ದಿ. ಅವರು ಇದರ ಮೊದಲ ಘಟ್ಟವಾಗಿ ಅರಂಭಿಸಿದ ಭ್ರಷ್ಟಾಚಾರ ವಿರೋಧಿ ಆಂದೋಲನ; ಮತ್ತು ಆನಂತರ ಅದರ ಮುಂದುವರಿಕೆಯಾಗಿ ಸಂಘಟಿಸಿದ ಜನಲೋಕಪಾಲ್ ಆಂದೋಲನಕ್ಕಿಂತ ಇಂದು ಹೆಚ್ಚು ಸ್ಫೋಟಕ ಸುದ್ದಿಯಾಗುತ್ತಿರುವುದು, ಅವರ ಬಂಧನದ ವಿರುದ್ಧ ನಡೆದಿರುವ ರಾಷ್ಟ್ರವ್ಯಾಪಿ ಪ್ರತಿಭಟನೆ.

ಈ ದಿನಗಳಲ್ಲಿ ಸುದ್ದಿಯಾಗಲು ವಿಷಯ ಘನತರವಾಗೇನೂ ಇರುವ ಅಗತ್ಯವಿಲ್ಲ. ಇಂದು 24 ತಾಸುಗಳೂ ಹಸಿದ ಹೆಬ್ಬುಲಿಗಳಂತೆ ಅರಚುತ್ತಿರುವ ಟಿವಿ ವಾಹಿನಿಗಳು; ಅವಕ್ಕೆ. ಭೂಗೋಳದ ಸುತ್ತ ಮಾದಕ ವಸ್ತು ವ್ಯಸನಿಗಳಂತೆ ಜೋತುಬಿದ್ದಿರುವ ಹೊಸ ಮಧ್ಯಮ ವರ್ಗವೊಂದು ಸೃಷ್ಟಿಯಾಗಿದೆ. ಹಾಗಾಗಿಯೇ ಈ ಅಣ್ಣಾ ಹಜಾರೆ ಸುತ್ತ ಇದ್ದಕ್ಕಿದ್ದಂತೆ ಎರಡನೇ ಸ್ವಾತಂತ್ರ್ಯ ಹೋರಾಟದ ಘೋಷಣೆ ಕೂಗುವ ಮೂಲಕ, ಇಂದಿನ ಟಿವಿ ಪರಿಭಾಷೆಯಲ್ಲೇ ಹೇಳುವುದಾದರೆ, ಒಂದು 'ಬಿಗ್ ಬಿಗ್ ಸ್ಟೋರಿ'ಯನ್ನು ಕಟ್ಟಲಾಗುತ್ತಿದೆ. ಇದು ಮಾಧ್ಯಮಗಳಿಗೂ ಆಹಾರ; ಅವುಗಳ ಹಿಂದಿರುವ ಉದ್ಯಮಮೂಲ ರಾಜಕೀಯ ಹಿತಾಸಕ್ತಿಗಳಿಗೂ ಲಾಭ! ಅಣ್ಣಾ ಸುತ್ತಲಿನ ಜನಜಂಗುಳಿಯನ್ನೊಮ್ಮೆ ನೋಡಿ. ಅವರಾರೂ ಇಂದಿಗೆ ದುಡಿದು ತಿನ್ನಬೇಕಾದವರಂತೆ ಕಾಣುವುದಿಲ್ಲ. ಎಲ್ಲ ಜೀವನೋಪಾಯಕ್ಕಾಗಿ ಸಾಕಷ್ಟು ಕಾಪು ದಾಸ್ತಾನು ಇಟ್ಟುಕೊಂಡಂತಿರುವವರೇ!

ಹೀಗೆಂದ ಮಾತ್ರಕ್ಕೆ ಅಣ್ಣಾ ಹಜಾರೆ ಎತ್ತಿಕೊಂಡಿರುವ ಪ್ರಶ್ನೆ ನಿಜವಾದದ್ದಲ್ಲ, ತುರ್ತಾದದ್ದಲ್ಲ ಎಂದಲ್ಲ. ಹಾಗಿದ್ದಲ್ಲಿ ಈ 'ಸ್ಟೋರಿ' ನಿರಂತರವಾಗಿ ಕುತೂಹಲ ಉಳಿಸಿಕೊಂಡು ಹೀಗೆ ಸುಸ್ಥಿರವಾಗಿ ಬೆಳೆಯುತ್ತಿರಲಿಲ್ಲ. ಅಣ್ಣಾ ಹೆಸರನ್ನು ರಾಷ್ಟ್ರದಲ್ಲಿನ ಬಹುಪಾಲು ಜನ ಕೇಳಿಯೇ ಇಲ್ಲ. ಅಷ್ಟೇ ಅಲ್ಲ, ಅವರು ಮೊನ್ನೆ ತಾನೇ ತಮಗೆ ಸ್ಪರ್ಧೆ ನೀಡುವಂತೆ ಭ್ರಷ್ಟಾಚಾರ ವಿರೋಧಿ ನಾಟಕವಾಡಲು ಯತ್ನಿಸಿ ಹಾಸ್ಯಾಸ್ಪದರಾಗಿ ಹೋಗಿ, ಆ ವೈಫಲ್ಯವನ್ನು ಮರೆಮಾಚಲೋ ಎಂಬಂತೆ ಈಗ ಈ ಆಂದೋಲನದ ಬೆಂಬಲಕ್ಕಾಗಿ ದೆಹಲಿಗೆ ಬಂದಿರುವ ಬಾಬಾ ರಾಂದೇವ್‌ರಷ್ಟು 'ಜನಪ್ರಿಯ'ರೂ ಅಲ್ಲ. ಅದರೂ ಅವರ ಬಂಧನದ ಸುದ್ದಿ ರಾಷ್ಟ್ರಾದ್ಯಂತ ಕಾಳ್ಗಿಚ್ಚಿನಂತೆ ಹಬ್ಬಿದ್ದರೆ ಅದಕ್ಕೆ ಅರ್ಧ ಕಾರಣ, ನಮ್ಮ ಹೊಟ್ಟೆಬಾಕ ಮಾಧ್ಯಮಗಳು ಮತ್ತು ಅವುಗಳ ಹಿಂದಿರುವ ನವ ಮಧ್ಯಮ ವರ್ಗವು ತನ್ನ ಹೊಸ ಸಂಪತ್ತಿನ ಗಳಿಕೆಯ ಸುಲಭ ಮಾರ್ಗಗಳ ಬಗ್ಗೆ ಹೊಂದಿರುವ ಅಪರಾಧಿ ಭಾವವನ್ನು ಮರೆಮಾಚಿಕೊಳ್ಳಲು ಆವಾಹಿಸಿಕೊಂಡಿರುವ ನೈತಿಕತೆಯ ಅಬ್ಬರದ ಪ್ರದರ್ಶನ. ಇನ್ನರ್ಧ ಕಾರಣ, ಭ್ರಷ್ಟಾಚಾರ ನಿಜವಾಗಿ ತನ್ನ ಪ್ರಮಾಣ ಮತ್ತು ರೀತಿ-ನೀತಿಗಳೆರಡರಲ್ಲೂ ಅಸಹನೀಯ ಮಟ್ಟ ಮುಟ್ಟುವ ಮೂಲಕ ಜನಸಾಮಾನ್ಯರನ್ನೂ ಕಂಗೆಡಿಸಿ, ಅವರ ಸಹಾನುಭೂತಿ ಈ ಆಂದೋಲನದಲ್ಲಿ ಹಿನ್ನೆಲೆಯಲ್ಲಾದರೂ ಸಕ್ರಿಯವಾಗಿರುವುದು.

ಈ ದೃಷ್ಟಿಯಿಂದ ಅಣ್ಣಾ ಹಜಾರೆ ಅವರ ಭ್ರಷ್ಟಾಚಾರ ವಿರೋಧಿ ಆಂದೋಲನ ಸಮರ್ಥನೀಯವೇ. ಅದು ಇಂದು ಅತ್ಯಗತ್ಯವೇ. ಆದರೆ ಪ್ರಶ್ನೆ ಎದ್ದಿರುವುದು, ಈ ಆಂದೋಲನ ಜನ ಜಾಗೃತಿಯ ಹೋರಾಟವಾಗಿ ಉಳಿಯದೆ, ಶಾಸನ ರಚನೆಯ ಕೆಲಸದಲ್ಲಿ ಹಸ್ತಕ್ಷೇಪ ಮಾಡಲು ಹೊರಟು, ಪ್ರಜಾಪ್ರಭುತ್ವದ ಅಡಿಗಲ್ಲುಗಳನ್ನೇ ಅಲ್ಲಾಡಿಸತೊಡಗಿದೆ ಎಂಬ ಆತಂಕದ ಸಂಬಂಧವಾಗಿ. ಅಣ್ಣಾ ಈಗ ಬಂಧನಕ್ಕೊಳಗಾಗಿ ಸರ್ಕಾರ ಪೇಚಿಗೆ ಸಿಕ್ಕಂತಾಗಿರುವುದೂ ಹಸ್ತಕ್ಷೇಪವೆಂದು ಹೇಳಲಾಗುವ ಇಂತಹ ಪ್ರಯತ್ನದಿಂದಾಗಿಯೇ. ಅದೇನೇ ಇರಲಿ, ಸರ್ಕಾರದ ಈ ಪೇಚಿಗೆ, ಇಕ್ಕಟ್ಟಿಗೆ; ಸರ್ಕಾರ ಈ ಆಂದೋಲನದ ಬಗೆಗೆ, ಅದರ ಆರಂಭದಿಂದ ಈ ಘಟ್ಟದವರೆಗೆ ಅನುಸರಿಸಿಕೊಂಡು ಬಂದಿರುವ ಅವಿವೇಕಿ ಮತ್ತು ಉದ್ಧಟತನದ ನೀತಿಯೇ ಕಾರಣವಾಗಿದೆ ಎಂಬುದನ್ನು ಇಲ್ಲಿ ಮೊದಲು ಹೇಳಿಬಿಡಬೇಕು. ಅದು ಈ ಆಂದೋಲನವನ್ನು ಅದು ಎತ್ತಿದ್ದ ಮುಖ್ಯ ಪ್ರಶ್ನೆಗಳ ನೆಲೆಯಲ್ಲಿ ನೇರವಾಗಿ ಮುಖಾಮುಖಿಯಾಗದೆ, ಅದನ್ನು ಅನುಮಾನಾಸ್ಪದಗೊಳಿಸಲು, ಹೀಗಳೆಯಲು ಪ್ರಯತ್ನ ಮಾಡುತ್ತಾ ಬಂದು, ಕೊನೆಗೆ ಈಗ ಆ ಪ್ರಯತ್ನಗಳ ಫಲಗಳು ತನ್ನ ಮುಖಕ್ಕೇ ತಿರುಗಿ ರಾಚುವಂತೆ ಮಾಡಿಕೊಂಡಿದೆ.

ಅಣ್ಣಾ ಆಂದೋಲನಕ್ಕೆ ಜನಾದೇಶವೇ ಇಲ್ಲವೆಂದು ಹೇಳುತ್ತಾ ಬಂದ ಸರ್ಕಾರ, ಕೊನೆಗೆ ಅದರ 'ಅಹಂ' ತೃಪ್ತಿಪಡಿಸಲೋ ಎಂಬಂತೆ ಅದರ ಜೊತೆಗೆ ರಾಜೀಯಾಗಿ ಸಂಧಾನದ ನಾಟಕವಾಡಿತು. ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ನೆನೆಗುದಿಗೆ ಬಿದ್ದಿದ್ದ ಭ್ರಷ್ಟಾಚಾರ ವಿರೋಧಿ ಲೋಕಪಾಲ್ ಕಾನೂನನ್ನು ಅಣ್ಣಾ ಸೂಚಿಸಿದ ಸಮಿತಿಯ ಸದಸ್ಯರೊಂದಿಗೆ ಚರ್ಚಿಸಿ ಜಂಟಿಯಾಗಿ ಸಿದ್ಧಪಡಿಸುವ ಭರವಸೆ ನೀಡಿತು. ಆದರೆ ಕೊನೆಗೆ ಸಂಧಾನ ಮುರಿದುಬಿತ್ತೆಂದು ಹೇಳಿ, ಏಕಪಕ್ಷೀಯವಾಗಿ ತಾನೇ ಒಂದು ಸರ್ಕಾರಿ ಮಸೂದೆಯನ್ನು ಸಿದ್ಧಪಡಿಸಿ ಸಂಸ



ಅಣ್ಣಾ ಅವರ ಬಂಧನದ ಸುದ್ದಿ ರಾಷ್ಟ್ರಾದ್ಯಂತ ಕಾಳ್ಗಿಚ್ಚಿನಂತೆ ಹಬ್ಬಿದ್ದರೆ ಅದಕ್ಕೆ ಅರ್ಧ ಕಾರಣ, ನಮ್ಮ ಹೊಟ್ಟೆಬಾಕ ಮಾಧ್ಯಮಗಳು ಮತ್ತು ಅವುಗಳ ಹಿಂದಿರುವ ನವ ಮಧ್ಯಮ ವರ್ಗವು ತನ್ನ ಹೊಸ ಸಂಪತ್ತಿನ ಗಳಿಕೆಯ ಸುಲಭ ಮಾರ್ಗಗಳ ಬಗ್ಗೆ ಹೊಂದಿರುವ ಅಪರಾಧಿ ಭಾವವನ್ನು ಮರೆಮಾಚಿ ಕೊಳ್ಳಲು ಆವಾಹಿಸಿಕೊಂಡಿರುವ ನೈತಿಕತೆಯ ಅಬ್ಬರದ ಪ್ರದರ್ಶನ. ಇನ್ನರ್ಧ ಕಾರಣ, ಭ್ರಷ್ಟಾಚಾರ ನಿಜವಾಗಿ ತನ್ನ ಪ್ರಮಾಣ ಮತ್ತು ರೀತಿ-ನೀತಿಗಳೆರಡರಲ್ಲೂ ಅಸಹನೀಯ ಮಟ್ಟ ಮುಟ್ಟುವ ಮೂಲಕ ಜನ ಸಾಮಾನ್ಯರನ್ನೂ ಕಂಗೆಡಿಸಿ, ಅವರ ಸಹಾನುಭೂತಿ ಈ ಆಂದೋಲನದಲ್ಲಿ ಹಿನ್ನೆಲೆಯಲ್ಲಾದರೂ ಸಕ್ರಿಯವಾಗಿರುವುದು.

ತ್ತಿನ ಅನುಮೋದನೆಗೆ ಮಂಡಿಸುವ ಸನ್ನಾಹದಲ್ಲಿ ತೊಡಗಿತು. ಈ ಮಸೂದೆ ತನ್ನ ಆಂದೋಲನದ ಉದ್ದೇಶಕ್ಕೇ ಬಗೆದ ದ್ರೋಹ ಎಂದು ಭಾವಿಸಿದ ಅಣ್ಣಾ ತಂಡ ಭ್ರಷ್ಟಾಚಾರದ ವಿರುದ್ಧ ಸಮಗ್ರವೆಂದು ತಾನು ಭಾವಿಸಿರುವ ಮಸೂದೆಯೊಂದನ್ನು ಸಿದ್ಧಪಡಿಸಿ ಅದನ್ನು ಸಂಸತ್ತಿನ ಮುಂದೆ ಮಂಡಿಸಲು ಪರಿಗಣಿಸುವಂತೆ ಆಗ್ರಹಿಸಿತು. ಇದನ್ನು ಸರ್ಕಾರ ತಿರಸ್ಕರಿಸಿದ್ದರಿಂದಾಗಿ, ಅಣ್ಣಾ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಘೋಷಿಸಿದ್ದಾರೆ.

ಇದನ್ನು ಸರ್ಕಾರ ಮಾತ್ರವಲ್ಲ, ಅಣ್ಣಾ ತಂಡದೊಂದಿಗೆ ಹಲವು ಕಾರಣಗಳಿಂದಾಗಿ ಭಿನ್ನಾಭಿಪ್ರಾಯ ಹೊಂದಿರುವ ಹಲವು ನಾಗರಿಕ ವೇದಿಕೆಗಳು ಮತ್ತು ವ್ಯಕ್ತಿಗಳು 'ಬ್ಲಾಕ್‌ಮೇಲ್' ಎಂದು ಬಣ್ಣಿಸುತ್ತಿವೆ. ಅಣ್ಣಾ ಪ್ರಯತ್ನ ಸಂವಿಧಾನದ ಎಲ್ಲೆಗಳನ್ನು ಮೀರಿದ ಅಧಿಕಪ್ರಸಂಗತನ ಎಂದು ಟೀಕಿಸುತ್ತಾ, ಪ್ರಜಾಪ್ರಭುತ್ವದಲ್ಲಿ ಸಂಸತ್ತಿನದೇ ಪರಮಾಧಿಕಾರ; ಅದಕ್ಕೆ ಚ್ಯುತಿಯಾಗಬಾರದು ಎಂದು ಎಚ್ಚರಿಸುತ್ತಿದ್ದಾರೆ. ಅಣ್ಣಾ ತಮ್ಮ ಹಠಮಾರಿತನದಿಂದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಸಂಸ್ಥೆಗಳನ್ನು ನಾಶ ಮಾಡತೊಡಗಿದ್ದಾರೆ ಎಂದು ವಾದಿಸುತ್ತಿವೆ. ಆದರೆ ಇವುಗಳಲ್ಲಿ ಎಷ್ಟು ನಿಜ? ಅಣ್ಣಾದು ಹಠವೇ? ಹಠವೇ ಆಗಿದ್ದರೆ, ಅದು ಎಷ್ಟು ಸರಿ, ನೋಡೋಣ.

ನಮ್ಮದು ಪ್ರಾತಿನಿಧಿಕ ಪ್ರಜಾಪ್ರಭುತ್ವ. ಆದರೆ ಈ ಪ್ರಾತಿನಿಧ್ಯೀಕರಣದ ಪ್ರಕ್ರಿಯೆ ಸಂಪೂರ್ಣ ಭ್ರಷ್ಟಗೊಂಡಿರುವುದು ಎದ್ದು ಕಾಣುತ್ತಿರುವಾಗ, ಈ ಪ್ರಜಾಪ್ರಭುತ್ವದ ಸಂಪ್ರದಾಯ, ಸಂಸ್ಥೆ, ನಿಯಮಗಳಿಗೆ ನಾವು ಅಕ್ಷರಶಃ ಅರ್ಥದಲ್ಲಿ ವಿಧೇಯತೆ ತೋರುವುದು, ಅವುಗಳ ಮತ್ತಷ್ಟು ಅವನತಿಗೆ ಕಾರಣವಾಗಬಹುದಲ್ಲವೇ? ನಮ್ಮ ಸಂವಿಧಾನದ ಪ್ರಕಾರ ಇಲ್ಲಿ ಜನತೆಯದ್ದೇ ಪರಮಾಧಿಕಾರ. ಜನ ಪ್ರತಿನಿಧಿಗಳೇನಿದ್ದರೂ, ಅದರ ಪ್ರತಿಬಿಂಬ ಮಾತ್ರ. ಹಾಗಾಗಿ, ಪ್ರತಿಬಿಂಬ ಕೆಟ್ಟಿದೆ ಎನ್ನಿಸಿದಾಗ, ಆ ಪ್ರತಿಬಿಂಬವನ್ನು ಸರಿಪಡಿಸುವ ಕೆಲಸ ಮಾಡಬೇಕಲ್ಲವೆ? ಅದಕ್ಕಾಗಿ ಜನತೆ ಮತ್ತು ಜನಪ್ರತಿನಿಧಿಗಳ ನಡುವೆ ಹೊಸ ನೆಲೆಯ ಸಂವಾದದ ವೇದಿಕೆಯೊಂದು ನಿರ್ಮಾಣವಾಗಬೇಕಲ್ಲವೇ? ಅದನ್ನೇ ಅಣ್ಣಾ ಮಾಡಲು ಯತ್ನಿಸುತ್ತಿರುವುದಲ್ಲವೇ? ಅವರು ಜನಾಂದೋಲನದ ಮೂಲಕ ಜನಪ್ರತಿನಿಧಿಗಳ ಮೇಲೆ, ಆ ಮೂಲಕ ಸಂಸತ್ತಿನ ಮೇಲೆ ನೈತಿಕ ಒತ್ತಡ ಹೇರಿ ಅದನ್ನು ಜನಪರ ಮಾಡುವ ಪ್ರಯತ್ನವನ್ನಷ್ಟೇ ಮಾಡುತ್ತಿದ್ದಾರೆ. ನಾಲ್ಕು ದಶಕಗಳ ನಂತರವೂ ಸಮರ್ಥವಾದ ಲೋಕಪಾಲ್ ಮಸೂದೆಯೊಂದನ್ನು ಸಿದ್ಧಪಡಿಸಲಾಗದಷ್ಟು ಜಡಗೊಂಡ ಸಂಸದೀಯ ವ್ಯವಸ್ಥೆಗೆ ಅವರು ಎಚ್ಚೆತ್ತ ಜನತೆಯ ಪರವಾಗಿ ಸವಾಲು ಹಾಕಿದ್ದಾರೆ. ಜನಾಂದೋಲನವನ್ನು ಸಂಘಟಿಸುವ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರಿ ಅದರಿಂದ ಮಾನ್ಯತೆ ಗಳಿಸಿಕೊಂಡ ಸಮರ್ಥ ನ್ಯಾಯ ಪಂಡಿತರ ಮಾರ್ಗದರ್ಶನದಲ್ಲಿ ಅವರು ಮಸೂದೆಯೊಂದನ್ನು ಸಿದ್ಧಪಡಿಸಿದ್ದಾರೆ. ಆದರೆ, ಅದನ್ನು ತನ್ನದೇ 'ಆಂತರಿಕ' ಕಾರಣಗಳಿಂದಾಗಿ ಈಗ ಕಣ್ಣೆತ್ತಿ ನೋಡಲೂ ನಿರಾಕರಿಸುತ್ತಿರುವ ಸದ್ಯದ ಸರ್ಕಾರದ ನಿಲುವು ತಮ್ಮ ಜನಾಂದೋಲನದ ಮೂಲಕ ವ್ಯಕ್ತವಾದ ಜನತೆಯ ಆಶೋತ್ತರಗಳಿಗೆ ಬಗೆದ ದ್ರೋಹವಾಗಿ ಅವರಿಗೆ ಕಂಡಿದ್ದರೆ ಆಶ್ಚರ್ಯವೇನು? ಇದನ್ನು ಪ್ರತಿಭಟಿಸಿ ಉಪವಾಸ ಕೂರುವುದು ಸಂವಿಧಾನ ವಿರೋಧಿ ಹೇಗಾಗುವುದು?

ಸರ್ಕಾರವೂ ಸೇರಿದಂತೆ ಅಣ್ಣಾ ವಿರೋಧಿಗಳು ಇದಕ್ಕೆ ನೀಡುವ ಕಾರಣವೆಂದರೆ, ಇವರ ಆಂದೋಲನ ಜನತೆಯನ್ನು ಇಡಿಯಾಗಿ ಪ್ರತಿನಿಧಿಸುವುದಿಲ್ಲ ಎಂಬುದು. ಹಾಗಾದರೆ, ಅಣ್ಣಾ ಪ್ರತಿನಿಧಿಸದ ಜನತೆಯನ್ನು ಒಳಗೊಂಡ ಆಂದೋಲನವಾದರೂ ಎಲ್ಲಿದೆ? ಅಥವಾ ಏಕಿಲ್ಲ? ಅದಿಲ್ಲದೆ, ಅಣ್ಣಾ ನಿಲುವನ್ನು ಸರಿಯಲ್ಲವೆಂದು ಭಾವಿಸುವುದಾದರೂ ಹೇಗೆ? ಅಣ್ಣಾ ತಮಗೆ ಇಡೀ ದೇಶದ ಜನತೆಯ ಬೆಂಬಲವಿದೆಯೆಂದು ಸಾಬೀತುಪಡಿಸಲು ನೂರು ಕೋಟಿ ಜನರೂ ಬೀದಿಗಳ ಮೇಲೆ ಕರೆತರಬೇಕೆ? ಇನ್ನು ಅಣ್ಣಾ ತಂಡ ಸಂಸತ್ತಿನ ಪರಮಾಧಿಕಾರವನ್ನಾಗಲೀ, ಪ್ರಜಾಪ್ರಭುತ್ವದ ಸಂಸ್ಥೆಗಳನ್ನಾಗಲೀ ಎಲ್ಲಿ ಪ್ರಶ್ನಿಸುತ್ತಿದೆ? ಸರ್ಕಾರ ತನ್ನೊಂದಿಗೆ ಸಂಧಾನ ಮುರಿದು, ಇಂದು ಬೃಹದಾಕಾರವಾಗಿ ಬೆಳೆದಿರುವ ಭ್ರಷ್ಟಾಚಾರವನ್ನು ಸಮರ್ಥ ರೀತಿಯಲ್ಲಿ ನಿಗ್ರಹಿಸಲು ಸಾಧ್ಯವಾಗದ ಮಸೂದೆಯೊಂದನ್ನು ಔಪಚಾರಿಕವೆಂಬಂತೆ ಸಿದ್ಧಪಡಿಸಿರುವುದರಿಂದ, ಅದಕ್ಕೆ ಪರ್ಯಾಯವಾಗಿ ಸಂಸತ್ತಿನ ಮುಂದೆ ಮಂಡಿಸಲು ತನ್ನ ಕರಡು ಮಸೂದೆಯನ್ನು ಪರಿಗಣಿಸಬೇಕೆಂದಷ್ಟೇ ಅದು ಕೇಳುತ್ತಿದೆ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸರ್ಕಾರಿ ಮಸೂದೆ ಈಗಿರುವ ರೂಪದಲ್ಲಿ ಸಂಸತ್ತಿನ ಮುಂದೆ ಮಂಡಿತವಾಗಬಾರದೆಂದು ಅದು ಸ್ಪಷ್ಟವಾಗಿ ಸೂಚಿಸುತ್ತಿದೆ. ಏಕೆಂದರೆ ಈಗಿರುವ ಸಂಸತ್ತು ಎಲ್ಲ ಸಾಂವಿಧಾನಿಕ ನಿಯಮಗಳನ್ನೂ ಉಲ್ಲಂಘಿಸಿ ಆಯ್ಕೆಯಾಗಿರುವ ಜನಪ್ರತಿನಿಧಿಗಳಿಂದ ಕೂಡಿರುವ ದುರ್ಬಲ ಸಂಸತ್ತು. ಅದನ್ನು ಔಪಚಾರಿಕ ಮತ್ತು ಸುಲಭ ಮಸೂದೆಯ ಮೂಲಕ ಔಪಚಾರಿಕವಾಗಿ ಮತ್ತು ಸುಲಭವಾಗಿ ಮಣಿಸಿ, ವ್ಯವಸ್ಥೆ ತನ್ನ ಹಿತಾಸಕ್ತಿಯನ್ನು ಮತ್ತು ಜನಾಂದೋಲನದ ಮೂಲಕ ವ್ಯಕ್ತವಾಗಿರುವ ಜನತಾ ಶಕ್ತಿಯನ್ನೇ ನಿರ್ಲಕ್ಷಿಸುವ ತನ್ನ ಎಂದಿನ ಚಾಳಿಯನ್ನು ಮುಂದುವರೆಸಿಕೊಂಡು ಹೋಗಬಲ್ಲುದು ಎಂಬ ಆತಂಕ ಅಣ್ಣಾ ತಂಡದ್ದು. ತಮ್ಮ ಮಸೂದೆ ಜನತೆಯ ಸಮ್ಮುಖದಲ್ಲಿ ನಡೆಯುವ ಸಂಸತ್ತಿನ ಅಗ್ನಿ ಪರೀಕ್ಷೆಯಾಗಬಲ್ಲುದು; ಅದರ ಫಲಿತಾಂಶ ತಮ್ಮ ಮುಂದಿನ ಹಂತದ ಹೋರಾಟಕ್ಕೆ ಆಧಾರವಾಗಬಲ್ಲುದು ಎಂದು ಅಣ್ಣಾ ನಂಬಿದಂತೆ ತೋರುತ್ತದೆ.

ಅಣ್ಣಾ ಮಸೂದೆ ಸರ್ಕಾರಿ ಮಸೂದೆಯಿಂದ ಮುಖ್ಯವಾಗಿ ಭಿನ್ನವಾಗಿರುವುದೆಂದರೆ, ಅದು ಪ್ರಧಾನ ಮಂತ್ರಿ ಮತ್ತು ಉನ್ನತ ನ್ಯಾಯಾಂಗವನ್ನು ಲೋಕಪಾಲ ಕಾಯಿದೆಯ ವ್ಯಾಪ್ತಿಗೆ ಸೇರಿಸಿರುವುದು. ಇದಾಗದೆ, ಲೋಕಪಾಲ್ ಪರಿಕಲ್ಪನೆಯ ಮೂಲ ಉದ್ದೇಶವೇ ಈಡೇರದು ಎಂಬುದು ಅಣ್ಣಾ ತಂಡದ ವಾದ. ಆದರೆ ಇದರ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಸರ್ಕಾರ, ಅಣ್ಣಾ ಮಸೂದೆ ಇದರಿಂದಾಗಿ ಹೇಗೆ ದೋಷಪೂರ್ಣವಾಗಿದೆ, ಇದು ನಮ್ಮ ಸಂವಿಧಾನ ಅಥವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೇಗೆ ದುರ್ಬಲಗೊಳಿಸುತ್ತದೆ ಎಂದು ಜನತೆಗೆ ವಿವರಿಸುವ ಯಾವ ಪ್ರಯತ್ನವನ್ನೂ ಮಾಡಿಲ್ಲ. ಇನ್ನು ಅಣ್ಣಾ ತಂಡದ ಮೇಲೆ ಹಠಮಾರಿತನ ಮತ್ತು ಏಕಪಕ್ಷೀಯತೆಯ ಆರೋಪ ಹೊರಿಸುವ ಇತರರಲ್ಲಿ, ಯಾರಾದರೂ ಏಕೆ ತಮ್ಮದೇ ಮಸೂದೆಯ ಕರಡೊಂದನ್ನು ರಾಷ್ಟ್ರದ ಮುಂದಿಟ್ಟು, ಸರ್ಕಾರಕ್ಕೆ, ಜನತೆಗೆ, ಅಣ್ಣಾಗೆ ಉತ್ತರ ನೀಡಲಾಗದೇ ಹೋಗಿದ್ದಾರೆ?

ಹಜಾರೆ ಆಂದೋಲನದ ಸತ್ಯಾ-ಮಿಥ್ಯೆಗಳು

ನಾಗರೀಕ ಸಮಾಜದ ಹೆಸರಿನಲ್ಲಿ ಇನ್ನು ಮುಂದೆ ಇನ್ನು ಯಾರೋ ಜನಸಂಘಟನೆ ಮಾಡಿ ತಮ್ಮ ಕಾರ್ಯಕ್ರಮವನ್ನು ಒಪ್ಪಿಕೊಳ್ಳಬೇಕೆಂದು ಸರ್ಕಾರದ ಮೇಲೆ ಒತ್ತಡ ಹೇರಲಾರಂಭಿಸಿದರೆ ಏನು ಮಾಡುವುದು? ಹಾಗಾಗಿ ಅಣ್ಣಾ ಆಂದೋಲನ ಕೆಟ್ಟ ಸಂಪ್ರದಾಯವೊಂದಕ್ಕೆ ನಾಂದಿ ಹಾಡಿದಂತಾಗುತ್ತದಲ್ಲವೇ? ಎಂಬುದು ಅಣ್ಣಾ ಆಂದೋಲನದ ಬಗೆಗೆ ಎತ್ತಲಾಗುತ್ತಿರುವ ಇನ್ನೊಂದು ತಕರಾರು. ಪ್ರಜಾಪ್ರಭುತ್ವದಲ್ಲಿ ಯಾರೇ ಆಗಲೀ, ಯಾವುದೇ ಹೆಸರಿನಲ್ಲಿ ಜನಸಂಘಟನೆ ಮಾಡಿ ಕಾರ್ಯಕ್ರಮವೊಂದನ್ನು ಮುಂದಿಡುವುದು ಪ್ರಜಾಪ್ರಭುತ್ವದ ಜೀವಂತಿಕೆಯ ಲಕ್ಷಣ. ಅದನ್ನು ಕೆಟ್ಟ ಸಂಪ್ರದಾಯ ಎಂದು ಪರಿಗಣಿಸುವುದು ಸರ್ವಾಧಿಕಾರಿ ಪ್ರವೃತ್ತಿಯ ಲಕ್ಷಣ. ಯಾರೂ ಸುಮ್ಮ ಸುಮ್ಮನೆ, ಪ್ರಾಮಾಣಿಕ ಸಾಮಾಜಿಕ ಬದ್ಧತೆಯಿಲ್ಲದೆ ಕಾರ್ಯಕ್ರಮ ರೂಪಿಸಿ, ಜನಸಂಘಟನೆ ಮಾಡುವ ಕೆಲಸಕ್ಕೆ ಕೈ ಹಾಕುವುದಿಲ್ಲ. ಆದರೆ ಅದನ್ನು ಗಂಭೀರವಾಗಿ ಪರಿಗಣಿಸಬೇಕೋ ಬೇಡವೋ ಎಂಬುದನ್ನು ಸರ್ಕಾರ ಆ ಸಂಘಟನೆಯ ಹಿಂದಿನ ಜನತಾ ಶಕ್ತಿಯ ಸ್ವರೂಪ, ಗಾತ್ರ ಮತ್ತು ಗುಣಾತ್ಮಕತೆಯ ಆಧಾರದ ಮೇಲೆ ನಿರ್ಧರಿಸುವ ವಿವೇಚನೆ ತೋರಬೇಕು. ಇಲ್ಲವಾದರೆ ಮುಂದಿನ ರಾಜಕೀಯ ಪರಿಣಾಮಗಳನ್ನು ಎದುರಿಸಲು ತಯಾರಿರಬೇಕು, ಈಗ ಅಣ್ಣಾ ಆಂದೋಲನದ ವಿಷಯದಲ್ಲಿ ಎದುರಿಸುತ್ತಿರುವಂತೆ! ಇದನ್ನು ನೀವು ಯಾವ ಕಡೆ ಇರುವಿರೋ ಅದಕ್ಕೆ ತಕ್ಕಂತೆ, ಪ್ರಾತಿನಿಧಿಕ ಪ್ರಜಾಪ್ರಭುತ್ವದ ಶಕ್ತಿ ಅಥವಾ ದೌರ್ಬಲ್ಯ ಎಂದು ವ್ಯಾಖ್ಯಾನಿಸಬಹುದು!

ಇನ್ನು ಬ್ಲಾಕ್‌ಮೇಲ್ ಆರೋಪ. ಬ್ಲಾಕ್‌ಮೇಲ್ ಮಾಡಲು ಸಾಧ್ಯವಾಗುವುದು, ಅಸಹಾಯಕ ಮತ್ತು ದುರ್ಬಲರನ್ನು ಮಾತ್ರ. ಲಕ್ಷಾಂತರ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವ ಸದ್ಯದ ಕೇಂದ್ರ ಸರ್ಕಾರ, ಅಷ್ಟಲ್ಲದಿದ್ದರೂ ಸಾಕಷ್ಟು ಭ್ರಷ್ಟವಾಗಿರುವ ವಿರೋಧ ಪಕ್ಷಗಳ ಎದುರಿಗಲ್ಲದಿದ್ದರೂ, ಅಣ್ಣಾ ಆಂದೋಲನದ ಎದುರು ದುರ್ಬಲವಾಗಿದೆ, ಅಸಹಾಯಕವಾಗಿದೆ. ಹಾಗಾಗಿಯೇ ಅದು ಅಣ್ಣಾ ತಂಡವನ್ನು ಕಣ್ಣಲ್ಲಿ ಕಣ್ಣಿಟ್ಟು ಎದುರಿಸಲಾಗದೆ, ಅಡ್ಡದಾರಿ ಹಿಡಿದು ಅಧಿಕಾರ ದುರ್ಬಳಕೆಯ ಅಗ್ಗದ ಮಾರ್ಗಗಳ ಮತ್ತು ಮಾತುಗಳ ಮೂಲಕ ಅವರನ್ನು ಮಣಿಸಲು ಯತ್ನಿಸುತ್ತಿದೆ.

ಮೊದಲು ತಾನೇ ಗೌರವಾರ್ಹ ರೀತಿಯಲ್ಲಿ ಸಂಧಾನಕ್ಕೆ ಆಹ್ವಾನಿಸಿದ ಅಣ್ಣಾರನ್ನು ಸರ್ಕಾರ ಈಗ ತನ್ನ ಪಕ್ಷದ ಬಾಯಿಬಡುಕ ವಕ್ತಾರರ ಮೂಲಕ ವೈಯುಕ್ತಿಕ ನೆಲೆಯಲ್ಲಿ ವಾಚಾಮಗೋಚರವಾಗಿ ನಿಂದಿಸುತ್ತಿದೆ. ಅವರ ತಂಡದ ಸಂಪನ್ಮೂಲಗಳ ಬಗ್ಗೆ ಆಧಾರರಹಿತ ಆರೋಪಗನ್ನು ಮಾಡತೊಡಗಿದೆ. ತನ್ನ ವಿರುದ್ಧ ಪ್ರತಿಭಟನೆ ಹೀಗೆ ಮಾತ್ರ ನಡೆಯಬೇಕೆಂದು ಪ್ರಜಾಪ್ರಭುತ್ವದ ಪಾಠಗಳನ್ನು ಹೇಳುತ್ತಿದೆ! ಸತ್ಯಾಗ್ರಹದ ಬಗ್ಗೆ ಅಲ್ಪ ತಿಳುವಳಿಕೆಯುಳ್ಳ ಮಕ್ಕಳ ಮುಂದೆಯೂ ನಗೆಪಾಟಲಿಗೆ ಕಾರಣವಾಗು

(35ನೇ ಪುಟಕ್ಕೆ)

ಅಣ್ಣಾ ಹಜಾರೆಗೆ ಜಯವಾಗಲಿ! ಆದರೆ...

ಹರ್ಷಕುಮಾರ್ ಕುಗ್ವೆ

ಅಣ್ಣಾ ಹಜಾರೆ ಪ್ರಾಮಾಣಿಕರು, ಭ್ರಷ್ಟಾಚಾರದ ವಿರುದ್ಧದ ಹೋರಾಟ ಕುರಿತ ಅವರ ಬದ್ಧತೆ ಪ್ರಶ್ನಾತೀತ. ಕಾಂಗ್ರೆಸ್ ನಾಯಕರು ಮತ್ತು ಯುಪಿಎ ಸರ್ಕಾರ ಏನೇ ಹೇಳಲಿ, ಟೀಂ ಅಣ್ಣಾ ಮೇಲೆ ಏನೇ ಗೂಬೆ ಕೂರಿಸಲಿ ಅದು ಅಣ್ಣಾ ಹಜಾರೆಯವರ ನ್ಯಾಯನಿಷ್ಠೆಗೆ ಧಕ್ಕೆಯುಂಟು ಮಾಡಲಾರದು. ಆದರೆ ಈ ಸಂದರ್ಭದಲ್ಲಿ ನಾವೆಲ್ಲರೂ ಕೇಳಿಕೊಳ್ಳಲೇಬೇಕಾದ ಬಹುಮುಖ್ಯ ಪ್ರಶ್ನೆಯೊಂದಿದೆ.

ಪ್ರಾಮಾಣಿಕತೆ, ಬದ್ಧತೆ ಹಾಗೂ ನ್ಯಾಯನಿಷ್ಠೆಗಳು ಮಾತ್ರ ಒಂದು ಚಳವಳಿಯನ್ನು ಯಶಸ್ವಿಗೊಳಿಸುತ್ತವಾ?

ಈ ಕುರಿತು ನನ್ನ ಅಭಿಪ್ರಾಯ ಹಂಚಿಕೊಳ್ಳುವ ಮುನ್ನ ಹೇಳಿಬಿಡುತ್ತೇನೆ. ಜನಲೋಕಪಾಲ ಜಾರಿಗಾಗಿ ಬೆಂಗಳೂರಿನಲ್ಲಿ ಚಳವಳಿ ಆರಂಭಗೊಂಡ ಸಂದರ್ಭದಲ್ಲಿ ನಡೆದ ರ್‍ಯಾಲಿಯಲ್ಲಿ, ನಂತರ ಫ್ರೀಡಂ ಪಾರ್ಕಿನಲ್ಲಿ ನಡೆದ ಧರಣಿಯಲ್ಲಿ ನಾನು ಪಾಲ್ಗೊಂಡಿದ್ದೆ. ಸಮಾಜದ ವಿವಿಧ ಜನವರ್ಗಗಳು ಸ್ಟ್ರೈಕು, ಧರಣಿ ಅಂತೆಲ್ಲಾ ನಡೆಸುವಾಗ ಮುಖ ಸಿಂಡರಿಸಿಕೊಂಡು ಹೋಗುತ್ತಿದ್ದ ಐಟಿ ಗಯ್‌ಗಳು ಅಲ್ಲಿ ಅಂದು ಹೋರಾಟದ ಹುಮ್ಮಸ್ಸಿನಲ್ಲಿ ಕುಳಿತದ್ದು ಕಂಡು ಬಹಳ ಖುಷಿಗೊಂಡಿದ್ದೆ. ನಂತರ ಇತ್ತೀಚೆಗೆ ಅಣ್ಣಾ, ಕಿರಣ್ ಬೇಡಿ, ಕೇಜ್ರಿವಾಲ್ ತಂಡ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಸಿದ ಸಭೆಯಲ್ಲಿ ಪಾಲ್ಗೊಂಡಿದ್ದೆ. ಕೇಜ್ರಿವಾಲ್ ಅವರು ತಮ್ಮ ಕರಡಿನ ಪರವಾಗಿ ಮಂಡಿಸಿದ ಪ್ರತಿಯೊಂದಕ್ಕೂ ಅಲ್ಲಿದ್ದ ಎಲ್ಲರಂತೆ ನಾನೂ ಬೆಂಬಲ ಸೂಚಿಸಿದ್ದೆ. ಸರ್ಕಾರಿ ಲೋಕಪಾಲ ಮಸೂದೆಯನ್ನು ಎಲ್ಲರಂತೆ ನಾನೂ ಖಂಡಿಸಿದೆ. ಅರವಿಂದ ಕೇಜ್ರಿವಾಲ್ ಕರಡು ರಚಿಸಿ ಪ್ರಶಾಂತ್ ಭೂಷಣ್ ಹಾಗೂ ಶಾಂತಿ ಭೂಷಣ್ ತಿದ್ದುಪಡಿ ಮಾಡಿರುವ ಜನಲೋಕಪಾಲ ಕರಡನ್ನು ಪೂರ್ತಿ ಓದಿ ಅರ್ಥಮಾಡಿಕೊಂಡ ಮೇಲೆ ನನಗೆ ಪ್ರಾಮಾಣಿಕವಾಗಿ ಅನ್ನಿಸಿರುವುದೇನೆಂದರೆ ಅಗು ಜಾರಿಯಾಗಲೇಬೇಕು ಎನ್ನುವುದು. ಅದು ಭ್ರಷ್ಟಾಚಾರವನ್ನು ಪೂರ್ತಿ ನಿರ್ಮೂಲಿಸುವುದಿಲ್ಲ ಎನ್ನುವುದು ನಿಜವಾದರೂ ಭ್ರಷ್ಟರಿಗೆ ಮೂಗುದಾರವನ್ನಂತೂ ಹಾಕುವುದರಲ್ಲಿ ಸಂಶಯವಿಲ್ಲ. ಈ ದೇಶದಲ್ಲಿ ತಾಂಡವವಾಡುತ್ತಿರುವ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಕಂಡು ಏನಾದರೂ ಪರಿಹಾರ ಬೇಕೆಂದು ಪರಿತಪಿಸುತ್ತಿರುವ ಕೋಟ್ಯಾಂತರ ಜನರಲ್ಲಿ ನಾನೂ ಒಬ್ಬ. ಭ್ರಷ್ಟಾಚಾರದ ಕಾರ್ಗತ್ತಲಿನಲ್ಲಿ ಜನಲೋಕಪಾಲವು ಒಂದು ಸಣ್ಣ ಬೆಳಕಿಂಡಿ ಎನ್ನುವುದು ನನ್ನ ಅಭಿಪ್ರಾಯ.

ಇದಿಷ್ಟು ನನ್ನ ಆಂಟಿಸಿಪೇಟರಿ ಬೇಲ್.

ಈಗ ವಿಷಯಕ್ಕೆ ಬರೋಣ. ಬರೀ ಪ್ರಾಮಾಣಿಕತೆ, ಬದ್ಧತೆಗಳು ಯಾವ ಹೋರಾಟವನ್ನೂ ಯಶಸ್ವಿಗೊಳಿಸಲು ಸಾಧ್ಯವಿಲ್ಲ. ಚಳವಳಿಯ ಯಶಸ್ಸಿಗೆ ಅತ್ಯವಶ್ಯಕವಾಗಿ ಬೇಕಾದದ್ದು ವ್ಯವಸ್ಥಿತ ಸಂಘಟನೆ ಹಾಗೂ ದೂರದೃಷ್ಟಿ. ಅಣ್ಣಾ ಹಜಾರೆಯವರು ಬಂಧಿತರಾದ ನಂತರದಲ್ಲಿ ಇಡೀ ಚಳವಳಿ ಒಂದು ನೆಗೆತವನ್ನು ಸಾಧಿಸಿರುವ ಹೊತ್ತಿನಲ್ಲಿ ಕೊಂಚ ಹಿಂತಿರುಗಿ ನೋಡಿದರೆ ಸ್ಪಷ್ಟವಾಗಿ ತೋರುವುದೆಂದರೆ ಈ ಚಳವಳಿಗೆ ವ್ಯವಸ್ಥಿತ ಸಂಘಟನೆಯಾಗಲೀ ದೂರದೃಷ್ಟಿಯಾಗಲೀ ಇಲ್ಲ ಎನ್ನುವುದು. ಈ ಸಂಘಟನೆ ಎಷ್ಟೊಂದು ಜಾಳುಜಾಳಾಗಿದೆ ಎಂದರೆ ಅಣ್ಣಾ ಹಜಾರೆಗೆ ಬಿಡಿ ಸ್ವತಃ ಕೇಜ್ರೀವಾಲ್, ಕಿರಣ್ ಬೇಡಿಯವರಿಗೇ ಅದರ ಮೇಲೆ ಹಿಡಿತ ಇಲ್ಲ. ಉದಾಹರಣೆಗೆ, ಬೆಂಗಳೂರಿನಲ್ಲಿ ಚಳವಳಿಯ ಮೇಲೆ ಸಂಪೂರ್ಣ ಹಿಡಿತ ಸಾಧಿಸಿರುವವರು ಲೋಕಸತ್ತಾ ಪಾರ್ಟಿ ಹಾಗೂ ರವಿಶಂಕರ್ ಗುರೂಜಿ ಶಿಷ್ಯರು. ಇವರಿಬ್ಬರಿಗೂ ಪ್ರತ್ಯೇಕ ಅಜೆಂಡಾಗಳಿವೆ. ಬಿಜೆಪಿ ಹಾಗೂ ಅಬ್ಬರಿಸಿ ಬೊಬ್ಬಿಡುವ ವಿದೂಷಕರ ಪರಿಷತ್ತಿನವರು ಹೋರಾಟವನ್ನು ಬೆಂಬಲಿಸಿ ಪ್ರತಿಭಟನೆ ಮಾಡಿದ್ದಾರೆ. ಆದರೆ ಅಣ್ಣಾ ಅವರ ಜನಲೋಕಪಾಲದ ಬಗೆಗೆ ಅವರಿಗೆ ಸಂಪೂರ್ಣ ಭಿನ್ನಾಭಿಪ್ರಾಯವಿದೆ. ಅಂದರೆ ಅವರಿಗೆ ಈ ದೇಶದಲ್ಲಿ ಭ್ರಷ್ಟಾಚಾರ ನಿಯಂತ್ರಣವಾಗುವುದು ಬೇಕಾಗೇ ಇಲ್ಲ. ಅವರ ಹಿಡನ್ ಅಜೆಂಡಾ ಏನಿದ್ದರೂ ಕಾಂಗ್ರೆಸ್ ಬೀಳಿಸುವುದು. ಮೊನ್ನೆ ಸಂತೋಷ್ ಹೆಗಡೆ ವರದಿ ನೀಡಿದ್ದ ದಿನವೇ ಎಬಿವಿಪಿ ಕೇಂದ್ರದ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ ನಡೆಸಿತ್ತು. ಯಡಿಯೂರಪ್ಪನವರ ಭ್ರಷ್ಟಾಚಾರವನ್ನು ಖಂಡಿಸುವ ಕನಿಷ್ಠ ಪ್ರಾಮಾಣಿಕತೆಯನ್ನು ಎಬಿವಿಪಿ ತೋರಲಿಲ್ಲ ಎನ್ನುವುದೇ ಅದರ ಇಬ್ಬಂದಿತನವನ್ನು ತೋರಿಸುತ್ತದೆ. ಇದೆಲ್ಲಾ ಟೀಂ ಅಣ್ಣಾಗೆ ತಿಳಿದಿಲ್ಲವೇ?. ತಿಳಿದೂ ಇಂತಹವರನ್ನು ದೂರ ಇಟ್ಟು ಚಳವಳಿಯ ಪರಿಶುದ್ಧತೆಯನ್ನು ಕಾಪಾಡಿಕೊಳ್ಳದಿದ್ದರೆ ಅಂತಿಮವಾಗಿ ದುರ್ಬಲಗೊಳ್ಳುವುದು ಇಡೀ ಚಳವಳಿಯೇ ಅಲ್ಲವೇ? ಬೆಂಗಳೂರಿನಲ್ಲಿ ಭಾಷಣ ಮಾಡಿದ ಅಣ್ಣಾ ರಾಜ್ಯ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಒಂದೇ ಒಂದು ಮಾತಾಡಿದ್ದರೂ ಸಮಾಧಾನವಾಗುತ್ತಿತ್ತು. ಆದರೆ ಅವರಿಗ್ಯಾಕೆ ಜಾಣಕುರುಡು ಎಂದು ತಿಳಿಯಲಿಲ್ಲ.

ನಿಜ. ಇಂದು ಇಡೀ ದೇಶದಲ್ಲಿ ಒಂದು ಗಣನೀಯ ಮಟ್ಟದ ಜನರನ್ನು ಕದಲಿಸುವ ಶಕ್ತಿ ಇದ್ದರೆ ಅದು ಅಣ್ಣಾ ಹಜಾರೆಗೆ ಮಾತ್ರ, ಅದು ಮಾಧ್ಯಮಗಳ ಹೈಪ್ ಇರಲಿ ಮತ್ತೇನೇ ಇರಲಿ. ಇಂದು ಸಹಸ್ರಾರು ಯುವಕರು, ವಿದ್ಯಾರ್ಥಿಗಳು, ನಾಗರಿಕರಿಗೆ ಅಣ್ಣಾ ಒಂದು ಆಶಯ. ಹೀಗಾಗಿಯೇ ಅಣ್ಣಾ ಅವರ ಮೇಲೆ ಇರುವ ಹೊಣೆ

ಅಣ್ಣಾ ಹಜಾರೆಯವರು ಬಂಧಿತರಾದ ನಂತರದಲ್ಲಿ ಇಡೀ ಚಳವಳಿ ಒಂದು ನೆಗೆತವನ್ನು ಸಾಧಿಸಿರುವ ಹೊತ್ತಿನಲ್ಲಿ ಕೊಂಚ ಹಿಂತಿರುಗಿ ನೋಡಿದರೆ ಸ್ಪಷ್ಟವಾಗಿ ತೋರುವುದೆಂದರೆ ಈ ಚಳವಳಿಗೆ ವ್ಯವಸ್ಥಿತ ಸಂಘಟನೆಯಾಗಲೀ ದೂರದೃಷ್ಟಿಯಾಗಲೀ ಇಲ್ಲ ಎನ್ನುವುದು. ಈ ಸಂಘಟನೆ ಎಷ್ಟೊಂದು ಜಾಳುಜಾಳಾಗಿದೆ ಎಂದರೆ ಅಣ್ಣಾ ಹಜಾರೆಗೆ ಬಿಡಿ ಸ್ವತಃ ಕೇಜ್ರೀವಾಲ್, ಕಿರಣ್ ಬೇಡಿಯವರಿಗೇ ಅದರ ಮೇಲೆ ಹಿಡಿತ ಇಲ್ಲ. ಉದಾಹರಣೆಗೆ, ಬೆಂಗಳೂರಿನಲ್ಲಿ ಚಳವಳಿಯ ಮೇಲೆ ಸಂಪೂರ್ಣ ಹಿಡಿತ ಸಾಧಿಸಿರುವವರು ಲೋಕಸತ್ತಾ ಪಾರ್ಟಿ ಹಾಗೂ ರವಿಶಂಕರ್ ಗುರೂಜಿ ಶಿಷ್ಯರು. ಇವರಿಬ್ಬರಿಗೂ ಪ್ರತ್ಯೇಕ ಅಜೆಂಡಾಗಳಿವೆ.

ಗಾರಿಕೆಯೂ ಹೆಚ್ಚಿನದ್ದು. ತಮ್ಮ ಪ್ರತಿಯೊಂದು ಹೆಜ್ಜೆಯನ್ನೂ ದೇಶದ ಹಿತದಿಂದ ಹುಷಾರಾಗಿ ಇಡಬೇಕಾದ ಜವಾಬ್ದಾರಿ ಅವರದ್ದಾಗಿದೆ. ಆದರೆ ಇಲ್ಲಿ ಅಂತಹ ತಾಳ್ಮೆಯ, ಹುಷಾರಿತನದಲ್ಲಿ ಅವರು ಹೋಗುತ್ತಿಲ್ಲ. ಬರೀ ಭಾವೋನ್ಮಾದದಲ್ಲೇ ಚಳವಳಿಯನ್ನು ಕೊಂಡೊಯ್ಯುತ್ತಿರುವುದು ನಿಚ್ಚಳವಾಗಿದೆ.

ಈ ಚಳವಳಿ ಮಧ್ಯಮವರ್ಗದ ಜೊತೆ ಸಮಾಜದ ಬಹುದೊಡ್ಡ ವರ್ಗವಾದ ರೈತಾಪಿ, ಕಾರ್ಮಿಕರು, ಆದಿವಾಸಿಗಳನ್ನು, ಹಾಗೂ ಇಂತಹ ಹೋರಾಟದಲ್ಲಿ ಅತ್ಯಂತ ಸಮರ್ಥವಾಗಿ ನಿಲ್ಲಬಲ್ಲ ದಲಿತ ವರ್ಗವನ್ನು ಒಳಗೊಳ್ಳಲು ಏನು ಮಾಡುತ್ತಿದೆ? ಕೇಜ್ರಿವಾಲ್‌ರ ಸಂಘಟನೆಗೆ ಅದರ ಅಗತ್ಯವೇ ಕಾಣುತ್ತಿಲ್ಲ.

ಈಗ ಈ ಚಳವಳಿಯ ತಾಂತ್ರಿಕ ಅಂಶವನ್ನು ನೋಡೋಣ. ಜನಲೋಕಪಾಲವು ಜಾರಿಯಾಗಬೇಕು ನಿಜ. ಅದು ರಾಜಕಾರಣಿಗಳ ಭ್ರಷ್ಟಾಚಾರದ ಉದ್ಯಮಕ್ಕೆ ದೊಡ್ಡ ಬ್ರೇಕ್ ಹಾಕುತ್ತದೆ. ಹೀಗಾಗಿ ಅವರು ಒಪ್ಪಿಗೆ ಕೊಡುವುದಿಲ್ಲ. ಆದರೆ ಅಂತಹ ಕಾಯ್ದೆ ಜಾರಿಯಾಗಬೇಕಾದರೆ ಸಂವಿಧಾನಬದ್ಧವಾಗಿ ಸಂಸತ್ತಿನ ಮೂಲಕವೇ ಜಾರಿಯಾಗಬೇಕು. ಹೀಗಿರುವಾಗ ಇಲ್ಲಿ ಎರಡೇ ದಾರಿ. ಒಂದೋ ಅಣ್ಣಾ ಚಳವಳಿ ಎಲ್ಲಾ ಕ್ಯಾಬಿನೆಟ್ ಸದಸ್ಯರ ಮನವೊಲಿಸಿ ಅದು ಮಂಡನೆಯಾಗುವಂತೆ ನೋಡಿಕೊಳ್ಳುವುದು. ನಂತರ ಸಂಸತ್ ಸದಸ್ಯರ (ಸರಳ ಬಹುಮತಕ್ಕೆ ಬೇಕಾದಷ್ಟು) ಮನವೊಲಿಸುವುದು. ಒಂದಿಲ್ಲೊಂದು ಕಾರಣ ಹೇಳಿ ಕಳೆದ 40 ವರ್ಷಗಳಿಂದ ಒಂದು ದುರ್ಬಲ ಲೋಕಪಾಲವನ್ನೇ ಜಾರಿಗೊಳಿಸದ ರಾಜಕೀಯ ಪಕ್ಷಗಳೂ ಕೊನೆಗೂ ಇದನ್ನು ಜಾರಿಗೊಳಿಸುವ ಸಾಧ್ಯತೆ ತೀರಾ ಕಡಿಮೆ. ಇದು ಸಾಧ್ಯವಾಗದ ಕಾಲಕ್ಕೆ ಸ್ವತಃ ಟೀಂ ಅಣ್ಣಾ ಒಂದು ರಾಜಕೀಯ ಪಕ್ಷ ರಚಿಸಿ ಸಂಸತ್ತಿನೊಳಗೆ ಪ್ರವೇಶಿಸಿ ಇದಕ್ಕಾಗಿ ಹೋರಾಟ ನಡೆಸುವುದು. ಈ ಎರಡು ದಾರಿಗಳನ್ನು ಬಿಟ್ಟು ಬೇರೆ ದಾರಿ ಎಲ್ಲಿದೆ? ಇದರ ಕುರಿತು ಸುಪ್ರೀಂ ಕೋರ್ಟೂ ಕೂಡಾ ಬೆಂಬಲ ಸೂಚಿ ಸುವ ಸಾಧ್ಯತೆ ಕಡಿಮೆ. ಯಾಕಂದರೆ ನ್ಯಾಯಾಂಗ ಕೂಡಾ ಲೋಕಪಾಲದ ಸುಪರ್ದಿಯಲ್ಲಿ ಇರಬೇಕು ಎನ್ನುವ ಬೇಡಿಕೆಯನ್ನು ಇಂದು ಬಹುಮಟ್ಟಿಗೆ ಭ್ರಷ್ಟಗೊಂಡಿರುವ ನ್ಯಾಯಾಧೀಶರೇ ಬೆಂಬಲಿಸಲಾರರು.

ಹೀಗಿರುವಾಗ ಈ ಚಳವಳಿಯ ಗುರಿಯಾದರೂ ಏನು? ಅಂಧಕನ ಕೈಯ ಅಂಧಕ ಹಿಡಿದಂತೆ ಹಜಾರೆಯ ಕೈಯನ್ನು ನಾವುಗಳು ಹಿಡಿಯುತ್ತಿದ್ದೇವೆ ಅನ್ನಿಸುವುದಿಲ್ಲವೇ. ಮಾತ್ರವಲ್ಲಾ 'ಅಣ್ಣಾ ನಿಮ್ಮ ಹಿಂದೆ ನಾವಿದ್ದೇವೆ. ನೀವು ಪ್ರಾಣ ತ್ಯಾಗಮಾಡಿದರೂ ಅಡ್ಡಿ ಇಲ್ಲ' ಎನ್ನುವ ಧೋರಣೆ ತೋರುತ್ತಿರುವ ನಮಗೆ ಯಾವ ಮಟ್ಟಿಗಿನ ಸಿದ್ಧತೆ ಇದೆ?. ಹೆಚ್ಚೆಂದರೆ ಫೇಸ್‌ಬುಕ್ ಟ್ವಿಟ್ಟರ್‌ಗಳಲ್ಲಿ ನಮ್ಮ ಆಕ್ರೋಶ ತೋರಿಸಬಹುದಷ್ಟೇ?.

ಚಳವಳಿ ಯಾವ ದಿಕ್ಕಿನಲ್ಲಿ ಹೋಗಬೇಕು ಎನ್ನುವ ಕುರಿತು ಯಾವ ಸ್ಪಷ್ಟತೆಯೂ ಇಲ್ಲದೇ ಹೀಗೆ ಭಾವೋನ್ಮಾದದಿಂದ ಮುನ್ನುಗ್ಗುವುದು ಈ ದೇಶಕ್ಕೆ ಒಳ್ಳೆಯದು ಮಾಡುತ್ತದೆಯಾ?

ಇಲ್ಲಿ ನಡೆಯುತ್ತಿರುವ ಚಳವಳಿಯ ಉದ್ದೇಶ ಕೇವಲ ಒಂದು ಕಾಯ್ದೆಯನ್ನು ಜಾರಿ ಮಾಡುವುದು. ಆದರೆ ಅದು ಪಡೆದುಕೊಳ್ಳುತ್ತಿರುವ ಪ್ರಚಾರವ್ಯಾಪ್ತಿ ಮಾತ್ರ ಇಡೀ ವ್ಯವಸ್ಥೆಯನ್ನು ಬುಡಮೇಲು ಮಾಡುವುದು. ಅಣ್ಣಾ ಇನ್ನೂ ಹೆಚ್ಚೆಚ್ಚು ದಿನ ಉಪವಾಸ ಮಾಡಿದಂತೆ ಇಡೀ ದೇಶದಲ್ಲಿ (ಮಾಧ್ಯಮ ತಲುಪುವ ದೇಶ) ಇನ್ನಷ್ಟು ಆತಂಕ ಹೆಚ್ಚುತ್ತದೆ. ಆದರೆ ಆಳುವ ಪಕ್ಷ ಹಾಗೂ ವಿರೋಧ ಪಕ್ಷಗಳು ಬಗ್ಗುವುದು ಕಡಿಮೆ.

ಇಂತಹ ಭಾವೋನ್ಮಾದದ ಹಾಗೂ ಆತಂಕಪೂರಿತ ವಾತಾವರಣದಲ್ಲಿ ಏನಾಗಬಹುದು ಎಂಬ ಆಲೋಚನೆ ನಮ್ಮಲ್ಲಿದೆಯೆ? ಇಲ್ಲಿ ಚಳವಳಿಯಲ್ಲಿ ಅಪ್ರಾಮಾಣಿಕವಾಗಿ ಭಾಗವಹಿಸುತ್ತಿರುವ ಸಂವಿಧಾನ ವಿರೋಧಿ ಶಕ್ತಿಗಳು ದೇಶದಾದ್ಯಂತ ಒಂದು ಪ್ರಕ್ಷೋಭೆ ಸೃಷ್ಟಿಸಲು ಅದನ್ನು ಬಳಸಿಕೊಳ್ಳಬಹುದು. ಸರ್ಕಾರ ಹೋರಾಟವನ್ನು ಬಗ್ಗುಬಡಿಯಲು ಇನ್ನಷ್ಟು ಆಕ್ರಮಣಕಾರಿಯಾಗಬಹುದು. ಲಾಟಿಚಾರ್ಜು, ಗೋಲೀಬಾರ್‌ಗಳು ಟೀವಿಗಳಲ್ಲಿ ಮತ್ತಷ್ಟು ರಂಜಕವಾಗಿ ಪ್ರಸಾರವಾಗಬಹುದು. ಟಿಆರ್‌ಪಿ ರೇಟ್ ಹೆಚ್ಚಬಹುದು. ಆದರೆ ಜನಲೋಕಪಾಲ ಜಾರಿಯಾಗುವುದಿಲ್ಲ! ನೆನಪಿರಲಿ.

ಇಲ್ಲವಾದರೆ ಅಣ್ಣಾ ಹಜಾರೆ ಮತ್ತು ತಂಡ ಇಡೀ ಸಂಸದೀಯ ಪ್ರಜಾಪ್ರಭುತ್ವವನ್ನು ಬದಲಾಯಿಸಿ ಇನ್ನೂ ಉತ್ತಮ ವ್ಯವಸ್ಥೆ ಜಾರಿಗೊಳಿಸುವ ಪರ್ಯಾಯ ಸೂಚಿಸಲಿ. ಒಪ್ಪುವುದು ಬಿಡುವುದು ಜನರಿಗೆ ಬಿಟ್ಟದ್ದು. ಆದರೆ ಈಗ ಮಾಡುತ್ತಿರುವಂತೆ ಈ ಚಳವಳಿ ಎಲ್ಲಿಗೆ ತಲುಪುತ್ತದೆ ಎಂಬ ಕನಿಷ್ಠ ದೂರದೃಷ್ಟಿಯಿಲ್ಲದೇ ವಿಚ್ಛಿದ್ರಕಾರಿಗಳಿಗೆ ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಅವಕಾಶ ನೀಡುವುದು ಬೇಡ. ಇತ್ತೀಚೆಗೆ ಮಧ್ಯಪ್ರಾಚ್ಯದಲ್ಲಿ ಈಜಿಪ್ಟ್‌ನಲ್ಲಿ, ಟುನಿಷಿಯಾದಲ್ಲಿ ಹೀಗೇ ಸ್ವಪ್ರೇರಿತ ದಂಗೆಗಳಾದವು. ಅಧಿಕಾರ ಹಸ್ತಾಂತರವಾಯಿತು. ಆದರೆ ಇಂದು ಈ ದೇಶಗಳಲ್ಲಿ ಅಧಿಕಾರ ವಹಿಸಿಕೊಂಡಿರುವ ಈ ಹಿಂದಿನ 'ಕ್ರಾಂತಿಕಾರಿ'ಗಳು ಹೊಸ ವ್ಯವಸ್ಥೆಯನ್ನು ತಾವೇ ನಡೆಸಬೇಕಾಗಿ ಬಂದಿರುವಾಗ ಎಂಥಾ ಗಂಭೀರ ಪಡಿಪಾಟಲುಗಳನ್ನು ಎದುರಿಸುತ್ತಿದ್ದಾರೆ ನೋಡಿ. ಇದೇ ಪರಿಸ್ಥಿತಿ ಪಕ್ಕದ ನೇಪಾಳದಲ್ಲೂ ಏರ್ಪಟ್ಟಿದೆ.

ಒಂದು ವಿಷಯವನ್ನು ಮರೆಯದಿರೋಣ. ಚಳವಳಿಯ ಸಂಘಟನೆ, ದಾರಿ ಸರಿಯಿರದಿದ್ದರೆ ಅದು ಸಫಲಗೊಳ್ಳುವ ಸಾಧ್ಯತೆಯೂ ಕಡಿಮೆ. ಒಂದೊಮ್ಮೆ ಈ ಚಳವಳಿ ಕೆಟ್ಟ ರೀತಿಯಲ್ಲಿ ಪರ್ಯಾವಸಾನವಾದರೆ, ವಿಫಲವಾದರೆ ಏನಾಗುತ್ತದೆ? ಆಗುವುದಿಷ್ಟೆ– ಮುಂದಿನ 50 ವರ್ಷ ಭ್ರಷ್ಟಾಚಾರದ ವಿರುದ್ಧ ಮಾತನಾಡುವ ಒಬ್ಬನೇ ಒಬ್ಬ ಈ ದೇಶದಲ್ಲಿರುವುದಿಲ್ಲ. ಅಂತಹ ಹತಾಷೆ, ನಿರಾಸೆ ಎಲ್ಲೆಡೆ ಆವರಿಸಿಕೊಳ್ಳುತ್ತೆ. ಟೀಂ ಅಣ್ಣಾ ಈ ವಿಷಯವನ್ನು ಪರಿಗಣಿಸಿದೆಯಾ? ಇಲ್ಲವೇ ಇಲ್ಲ. ಇದ್ದಿದ್ದರೆ ಅಣ್ಣಾ ಈಗ ಮಾಡುತ್ತಿರುವಂತೆ ಮಾಡುವ ಬದಲು ಮೊದಲು ದೇಶದಾದ್ಯಂತ ಉತ್ತಮ ಸಂಘಟನೆಗೆ ಮುಂದಾಗುತ್ತಿದ್ದರು. ಈಗ ವ್ಯಕ್ತವಾಗುತ್ತಿರುವ ಬೆಂಬಲದ ಮಹಾಪೂರವನ್ನು ಸಾಂಘಿಕ ಶಕ್ತಿಯಾಗಿ ಮಾರ್ಪಡಿಸುತ್ತಿದ್ದರು. ನಿಜವಾದ ದೇಶನಾಯಕನಾಗುತ್ತಿದ್ದರು. ಬೇಕಾದರೆ ಇನ್ನೂ ನಾಲ್ಕು ವರ್ಷ ತಯಾರಿ ನಡೆಸಿ ನಿಜವಾದ ಬದಲಾವಣೆಯ ಹರಿಕಾರನಾಗುತ್ತಿದ್ದರು. ಅಂತಹ ಯಾವ ಲಕ್ಷಣ ಗಳೂ ಇಲ್ಲ.

ಹಜಾರೆ ಆಂದೋಲನದ ಸತ್ಯಾ-ಮಿಥ್ಯೆಗಳು

ಹೀಗಾಗಿ ಈ ಹಿಂದೆ ಉತ್ಸಾಹದಿಂದಲೇ ಅಣ್ಣಾ ಚಳವಳಿಯನ್ನು ಒಂದು ಆಶಯವಾಗಿ ನೋಡಿದ ನನ್ನಂತವರಿಗೆ ಇಂದು ನಿರಾಸೆಯಾಗುತ್ತಿದೆ.

ಇವೆಲ್ಲವನ್ನೂ ಹೊರತು ಪಡಿಸಿದ ಮತ್ತೊಂದು ಮುಖ್ಯವಾದ ವಿಷಯವಿದೆ.

ಇಂದು ಅಣ್ಣಾ ಚಳವಳಿಯಲ್ಲಿ ಭಾಗವಹಿಸುತ್ತಿರುವವರು ಒಂದು ಭ್ರಮೆಯಲ್ಲಿರುವುದಂತೂ ಸತ್ಯ. ಅಣ್ಣಾ ಗೆದ್ದರೆ ಭ್ರಷ್ಟಾಚಾರ ಸಂಪೂರ್ಣ ನಿಯಂತ್ರಣವಾಗಿಬಿಡುತ್ತದೆ ಎಂಬ 'ಫೂಲ್ಸ್ ಪ್ಯಾರಡೈಸ್'. ಅದು. ನಾವು ಅರ್ಥ ಮಾಡಿಕೊಳ್ಳಬೇಕಿರುವುದಿಷ್ಟೆ. ಈ ದೇಶದಲ್ಲಿ ನೂರು ಜನ ಲೋಕಪಾಲಗಳು ಬಂದರೂ ಭ್ರಷ್ಟಾಚಾರ ಪೂರ್ತಿ ನಿರ್ಮೂಲನೆಯಾಗುವುದಿಲ್ಲ. ಎಲ್ಲಿಯವರೆಗೆ? ಭ್ರಷ್ಟಾಚಾರಕ್ಕೆ ಮೂಲವಾಗಿರುವ ಒಂದು ಆರ್ಥಿಕ ಸಾಮಾಜಿಕ ವ್ಯವಸ್ಥೆ ಇರುವವರೆಗೆ.

ಅಷ್ಟಕ್ಕೂ ಭಾರತದಲ್ಲಿ ಭ್ರಷ್ಟಚಾರ ವ್ಯಾಪಕಗೊಂಡಿದ್ದು ಯಾವಾಗ? ಮತ್ತು ಹೇಗೆ? ಸಂಶಯವೆ ಇಲ್ಲ. ಯಾವಾಗ ನವ ಉದಾರವಾದಿ ನೀತಿಗಳು (Neo Liberal Policies)ಇಲ್ಲಿ ಜಾರಿಯಾದವೋ, ಯಾವಾಗ ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳ ವಿದೇಶಿ ನೇರ ಹೂಡಿಕೆ (FDI) ಹಾಗೂ ವಿದೇಶಿ ಸಾಂಸ್ಥಿಕ ಹೂಡಿಕೆಗಳ (FII)ಹೆಸರಲ್ಲಿ ಬಂಡವಾಳ ಬಂಡವಾಳ?ನ್ನುವುದು ದಂಡಿದಂಡಿಯಾಗಿ ನುಗ್ಗತೊಡಗಿತೋ? ಯಾವಾಗ ಖಾಸಗೀಕರಣ ಈ ದೇಶದ ಸಾರ್ವಜನಿಕ ಕ್ಷೇತ್ರವನ್ನು ನುಂಗಿ ಹಾಕತೋಡಗಿತೋ, ಯಾವಾಗ ಸರ್ಕಾರ ನಡೆಸುವವರಿಗೆ ಕೈಗಾರಿಕೆಗಳನ್ನು ನಡೆಸುವ ಕೆಲಸ ತಪ್ಪಿ ಬರೀ ಎಂಒಯುಗಳಿಗೆ (Memorandum Of Understanding) ಸಹಿ ಹಾಕುವ, ಹೂಡಿಕೆ ಅಪಹೂಡಿಕೆಗಳನ್ನು ಮ್ಯಾನೇಜ್ ಮಾಡುವ ಕೆಲಸ ಮಾತ್ರ ಉಳಿಯಿತೋ, ಭ್ರಷ್ಟಾಚಾರಕ್ಕೆ ಇನ್ನಿಲ್ಲದ ಅವಕಾಶ ದೊರೆತು ಯಾವಾಗ ದೊಡ್ಡ ದೊಡ್ಡ ಖಾಸಗಿ ಕಾರ್ಪೋರೇಷನ್‌ಗಳು, ಕಂಪನಿಗಳು ದೊಡ್ಡ ಮೊತ್ತದ ಆಮಿಷಗಳನ್ನು ಒಡ್ಡತೊಡಗಿದರೋ ಆಗಲೇ ತಾನೆ ಭ್ರಷ್ಟಾಚಾರ ಎನ್ನುವುದು ಸರ್ವಾಂತರ್ಯಾಮಿಯೂ, ಸರ್ವಶಕ್ತವೂ, ಸರ್ವವ್ಯಾಪಿಯೂ ಆದದ್ದು? ಈ ದೇಶದ ಆರ್ಥಿಕ ನೀತಿಗಳಲ್ಲೇ ಭ್ರಷ್ಟಾಚಾರದ ಮೂಲವಡಗಿರುವ ಅದರ ಕುರಿತು ಏನೂ ಮಾತನಾಡದ ಜನಲೋಕಪಾಲವಾಗಲೀ ಲೋಕಪಾಲವಾಗಲೀ ಭ್ರಷ್ಟಾಚಾರವನ್ನು ಹೇಗೆ ನಿಯಂತ್ರಿಸುತ್ತದೆ ಹೇಳಿ? ಹೆಚ್ಚೆಂದರೆ ಈಗ ನಾವು ಕರ್ನಾಟಕದಲ್ಲಿ ಹೇಗೆ 'ಲೋಕಾಯುಕ್ತ ಬಲೆಗೆ ಬಿದ್ದ ಹೆಗ್ಗಣ'ಗಳನ್ನು ದಿನನಿತ್ಯ ನೋಡುತ್ತಿದ್ದೇವೆಯೋ ಹಾಗೆ ದೇಶದಾದ್ಯಂತ ಹೆಗ್ಗಣಗಳ ಪಟ್ಟಿ ಬೆಳೆಯುತ್ತಾ ಹೋಗಬಹುದು. ಇಂದು ರಾಜಕಾರಣಿಗಳು ಭಾಗಿಯಾಗಿರುವ ಯಾವುದೇ ಹಗರಣಗಳನ್ನು ನೋಡಿ. ಅಲ್ಲಿ ಭ್ರಷ್ಟರು ರಾಜಕಾರಣಿಗಳು ಮಾತ್ರವಲ್ಲ. ಅವರಿಗೆ ಲಕ್ಷಾಂತರ ಕೋಟಿ ರೂಪಾಯಿಗಳನ್ನು ನೀಡುವ ಕಾರ್ಪೋರೇಷನ್‌ಗಳೂ ಇವೆ. ಆದರೆ ಜನಲೋಕಪಾಲ ಅವುಗಳ ಬಗ್ಗೆ ಎಲ್ಲೂ ಮಾತನಾಡುವುದಿಲ್ಲವಲ್ಲ?. ಭ್ರಷ್ಟಾಚಾರ ಒಂದು ಬೃಹತ್ ಆಲದ ಮರವಿದ್ದಂತೆ. ಜನಲೋಕಪಾಲದ ಶಕ್ತಿ ಇರುವುದು ಒಂದು ಕೊಂಬೆಯನ್ನು ಅಲ್ಲಾಡಿಸುವುದು ಮಾತ್ರ. ಅದರಿಂದಾಗಿ ಅಕ್ಕ ಪಕ್ಕದ ಇನ್ನಷ್ಟು ಕೊಂಬೆಗಳು ಅಲ್ಲಾಡಬಹುದೇ ವಿನಃ ಮರದ ಬುಡ ಅಲ್ಲಾಡುವುದಿಲ್ಲ. ಇನ್ನು ಆ ಮರವನ್ನು ಉರುಳಿಸುವ ಮಾತು ಬಹಳ ದೂರದ್ದು. □

ತಾಜಾ ಸಂತನ ರಕ್ತರಹಿತ ಕ್ಷಿಪ್ರ ಕ್ರಾಂತಿ!

ಅರುಂಧತಿ ರಾಯ್
ಅನು: ಎಂ ಆರ್ ಸತ್ಯಪ್ರಕಾಶ್

ಅಣ್ಣಾ ಅವರದು ಗಾಂಧೀವಾದಿ ಪ್ರತಿಭಟನಾ ಮಾರ್ಗ ಇರಬಹುದು, ಆದರೆ ಅವರ ಬೇಡಿಕೆ ಮಾತ್ರ ಖಂಡಿತ ಸಮಂಜಸವಾದುದಲ್ಲ. ಗಾಂಧೀಜಿ ಅವರು ಪ್ರತಿ ಪಾದಿಸುತ್ತಿದ್ದ ಅಧಿಕಾರ ವಿಕೇಂದ್ರೀಕರಣಕ್ಕೆ ವ್ಯತಿರಿಕ್ತವಾಗಿ ರುವ ಜನ ಲೋಕಪಾಲ್ ಮಸೂದೆ, ಕ್ರೂರವಾದ ಭ್ರಷ್ಟಾ ಚಾರ ವಿರೋಧಿ ಕಾಯ್ದೆ. ಇದರ ಪ್ರಕಾರ ಆಯ್ದ ಕೆಲವೇ ಮಂದಿ ದೇಶದ ಬೃಹತ್ ಆಡಳಿತಶಾಹಿಗೆ ಒಳಪಡುವ ಸಾವಿರಾರು ಉದ್ಯೋಗಿಗಳ ಮೇಲೆ ವಿಚಾರಣೆ ಮಾಡುವ ಅಧಿಕಾರ ಹೊಂದಿರುತ್ತಾರೆ. ಪ್ರಧಾನಮಂತ್ರಿ ಅವರನ್ನೊಳಗೊಂಡಂತೆ ನ್ಯಾಯಾಂಗ ವ್ಯವಸ್ಥೆ, ಸದನದ ಸದಸ್ಯರು, ಮತ್ತು ಆಡಳಿತ ಶಾಹಿಯ ಎಲ್ಲ ಮಟ್ಟದ ಅಧಿಕಾರಿಗಳು ಕಾಯ್ದೆಯ ವ್ಯಾಪ್ತಿಗೆ ಬರುತ್ತಾರೆ.

ಕಳೆದ ಕೆಲವು ದಿನಗಳಿಂದ ನಾವು ಟೆಲಿವಿಷನ್ ಪರದೆಯ ಮೇಲೆ ನೋಡುತ್ತಿರುವುದನ್ನು ಒಂದು ವೇಳೆ ಕ್ರಾಂತಿ ಎಂದು ಕರೆಯಬಹುದಾದರೆ, ಇದು ನಿಜಕ್ಕೂ ಇತ್ತೀಚೆಗಿನ ಅತ್ಯಂತ ಮುಜುಗರ ತರುವಂತಹ ಮತ್ತು ಅಪ್ರಬುದ್ಧವಾದ ಕ್ರಾಂತಿಗಳಲ್ಲೊಂದು. ಜನಲೋಕಪಾಲ್ ಮಸೂದೆಯ ಬಗ್ಗೆ ನಿಮಗೆ ಏನೇ ಪ್ರಶ್ನೆಗಳಿರಬಹುದು, ಆ ಎಲ್ಲ ಪ್ರಶ್ನೆಗಳಿಗೆ ಸಿಗಬಹುದಾದ ಉತ್ತರ ಇಲ್ಲಿವೆ: ಉತ್ತರ ಗುರುತಿಸಿ– (ಎ) ವಂದೇ ಮಾತರಂ (ಬಿ) ಭಾರತ ಮಾತೆಗೆ ಜೈ (ಸಿ) ಭಾರತ ಎಂದರೆ ಅಣ್ಣಾ, ಅಣ್ಣಾ ಎಂದರೆ ಭಾರತ (ಡಿ) ಜೈ ಹಿಂದ್.

ಪ್ರತ್ಯೇಕವಾದ ಕಾರಣಗಳಿಂದಾಗಿ ಹಾಗೂ ಸಂಪೂರ್ಣವಾಗಿ ಭಿನ್ನ ರೀತಿಯಿಂದ ಮಾವೋವಾದಿಗಳು ಮತ್ತು ಜನಲೋಕಪಾಲ್ ಮಸೂದೆಯ ನಡುವೆ ಒಂದು ಸಾಮ್ಯತೆ ಇದೆ–ಇವೆರಡೂ ಭಾರತೀಯ ರಾಜ್ಯಾಂಗ ವ್ಯವಸ್ಥೆಯನ್ನು ಬುಡಮೇಲು ಮಾಡುವ ಇರಾದೆ ಹೊಂದಿವೆ. ಅತ್ಯಂತ ಕಡುಬಡವರಾದ ಆದಿವಾಸಿಗಳನ್ನು ಹೊಂದಿದ ಶಸ್ತ್ರಸಜ್ಜಿತವಾದ ಮಾವೋವಾದಿ ಸೈನ್ಯ ತಳಮಟ್ಟದ ಹೋರಾಟ ಮಾಡಿ ದರೆ, ದಿಢೀರನೆ ಸೃಷ್ಟಿಯಾದ ತಾಜಾ ಸಂತನ ನಾಯಕತ್ವದಲ್ಲಿ ಬಹು ತೇಕ ನಗರದ ಮೇಲ್ಮಧ್ಯಮ ವರ್ಗದ ಜನರನ್ನು ಹೊಂದಿದ ಮತ್ತೊಂದು ಸೈನ್ಯ ಗಾಂಧೀವಾಧಿ ಮಾರ್ಗದ ಮೂಲಕ ರಕ್ತರಹಿತ ಕ್ಷಿಪ್ರಕ್ರಾಂತಿ ಮಾಡಲು ಹೊರಟಿದೆ. (ಸರ್ಕಾರ ಕೂಡ ತನ್ನನ್ನೇ ತಾನು ಕಿತ್ತೊಗೆಯಲು ಏನೆಲ್ಲಾ ಮಾಡಬಹುದೋ ಅದೆಲ್ಲವನ್ನೂ ಚಾಚೂ ತಪ್ಪದೆ ಮಾಡುತ್ತಿದೆ.)

2011ರ ಏಪ್ರಿಲ್ ತಿಂಗಳಲ್ಲಿ, ಅಂದರೆ ಅಣ್ಣಾ ಹಜಾರೆ ಅವರ ಮೊದಲ "ಅಮರಣಾಂತ ಉಪವಾಸ"ದ ಸಂದರ್ಭದಲ್ಲಿ ಸರ್ಕಾರ ಭ್ರಷ್ಟಾಚಾರದ ಹಗರಣಗಳ ಸುಳಿಯಿಂದ ಪಾರಾಗಿ ಸ್ವಲ್ಪಮಟ್ಟಿಗಿನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಜಂಟಿ ರಚನಾ ಸಮಿತಿಯಲ್ಲಿ ಪಾಲ್ಗೊಳ್ಳುವಂತೆ 'ಟೀಂ ಅಣ್ಣಾ' ("ನಾಗರಿಕ ಸಮಿತಿ" ಇಟ್ಟುಕೊಂಡಿರುವ ಹೆಸರು)ಗೆ ಕೇಂದ್ರ ಸರ್ಕಾರ ಆಹ್ವಾನ ನೀಡುತ್ತದೆ. ಆದರೆ ಕೆಲವು ತಿಂಗಳ ಬಳಿಕ ಸರ್ಕಾರ ಜಂಟಿ ಸಮಿತಿಯನ್ನು ಕಡೆಗಣಿಸಿ ತನ್ನದೇ ಆದ ಮಸೂದೆ ಯನ್ನು ಸದನದಲ್ಲಿ ಮಂಡಿಸುತ್ತದೆ. ಹಲವಾರು ಸಮಸ್ಯೆಗಳನ್ನು ಹೊಂದಿದ್ದ ಈ ಮಸೂದೆ ಎಲ್ಲ ವಲಯಗಳಲ್ಲಿ ಟೀಕೆಗೆ ಗುರಿ ಯಾಗುತ್ತದೆ.

ನಂತರ, ಆಗಸ್ಟ್ 16ರಂದು ಬೆಳಿಗ್ಗೆ ತಮ್ಮ ಎರಡನೆಯ "ಅಮರಣಾಂತ ಉಪವಾಸ" ಆರಂಭಿಸುವ ಮೊದಲೇ ಅಥವಾ ಯಾವುದೇ ರೀತಿ ಕಾನೂನು ಉಲ್ಲಂಘಿಸುವ ಮೊದಲೇ ಅಣ್ಣಾ ಹಜಾರೆ ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗುತ್ತದೆ. ಇದರಿಂದಾಗಿ ಜನ ಲೋಕಪಾಲ್ ಮಸೂದೆಯ ಅನುಷ್ಠಾನಕ್ಕೆ ನಡೆಯುತ್ತಿದ್ದ ಚಳವಳಿ ಒಮ್ಮೆಲೇ ಪ್ರತಿಭಟನೆಯ ಹಕ್ಕು ಮತ್ತು ಪ್ರಜಾತಂತ್ರ ವ್ಯವಸ್ಥೆಯ ಉಳಿವಿನ ಹೋರಾಟವಾಗಿ ಬದಲಾಗುತ್ತದೆ. ಹೀಗೆ 'ಎರಡನೆಯ ಸ್ವತಂತ್ರ ಚಳವಳಿ' ನಡೆದ ಕೆಲವೇ ಗಂಟೆಗಳ ಬಳಿಕ ಅಣ್ಣಾ ಅವರನ್ನು ಬಿಡುಗಡೆ ಮಾಡಲಾಗುತ್ತದೆ. ಬುದ್ಧಿವಂತ ಅಣ್ಣಾ ಜೈಲಿನಿಂದ ಹೊರಬರಲು ನಿರಾಕರಿಸಿ ತಿಹಾರ್ ಜೈಲಿನಲ್ಲಿಯೇ ಗೌರವಾನ್ವಿತ ಅತಿಥಿಯಾಗಿ ಉಳಿಯುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಭಟನೆ ನಡೆಸುವ ಹಕ್ಕಿಗಾಗಿ ಒತ್ತಾಯಿಸುತ್ತಾ ಅಣ್ಣಾ ಸೆರೆಮನೆಯಿಂದಲೇ ಉಪವಾಸ ಸತ್ಯಾಗ್ರಹ ಆರಂಭಿಸುತ್ತಾರೆ. ಮುಂದಿನ ಮೂರು ದಿನಗಳಲ್ಲಿ ತಿಹಾರ್ ಜೈಲಿನ ಹೊರಗಡೆ ಟೆಲಿವಿಷನ್ ವ್ಯಾನ್‌ಗಳು ಮತ್ತು ಜನಜಂಗುಳಿ ಬೀಡು ಬಿಟ್ಟಿದ್ದರೆ, ಇದರ ನಡುವೆ 'ಟೀಂ ಅಣ್ಣಾ'ದ ಸದಸ್ಯರು ಬಿಗಿಯಾದ ಸುರಕ್ಷತೆ ಹೊಂದಿದ ತಿಹಾರ್ ಜೈಲಿನ ಒಳ ಹೊರಗೂ ಆರಾಮಾಗಿ ಓಡಾಡಿಕೊಂಡಿದ್ದರು. ಎಲ್ಲ ರಾಷ್ಟ್ರೀಯ ಸುದ್ದಿವಾಹಿನಿಗಳಲ್ಲಿ ಬಿತ್ತರಿಸಲು



ಹಜಾರೆ ಆಂದೋಲನದ ಸತ್ಯಾ-ಮಿಥ್ಯೆಗಳು

ಮಣಿಪುರದಲ್ಲಿ ಯಾರನ್ನಾದರೂ ಕೊಲ್ಲಬಹುದಾದ ಅಧಿಕಾರವನ್ನು ಭಾರತೀಯ ಸೈನ್ಯಕ್ಕೆ ನೀಡಿರುವ ಕಾಯಿದೆಯನ್ನು ವಿರೋಧಿಸಿ ಕಳೆದ 10 ವರ್ಷಗಳಿಂದ ಉಪವಾಸ ಕೈಗೊಂಡಿರುವ ಇರೋಮ್ ಶರ್ಮಿಳಾ.

ಜೈಲಿನಿಂದ ಅಣ್ಣಾ ಅವರ ವಿಡಿಯೋ ಸಂದೇಶಗಳನ್ನು ತರುತ್ತಿದ್ದರು. (ಈ ದೇಶದಲ್ಲಿ ಬೇರೆ ಯಾವ ವ್ಯಕ್ತಿಗೆ ಈ ಸವಲತ್ತು ಸಿಗಲು ಸಾಧ್ಯ?) ಈ ಮಧ್ಯೆ ದೆಹಲಿ ಮಹಾ ನಗರ ಪಾಲಿಕೆಯ ಸುಮಾರು 250 ಮಂದಿ ಕೆಲಸ ಗಾರರು, 15 ಟ್ರಕ್‌ಗಳು ಮತ್ತು ಆರು ಜೆಸಿಬಿಗಳೊಂದಿಗೆ ರಾಮ ಲೀಲಾ ಮೈದಾನವನ್ನು ವಾರಾಂತ್ಯದ ಅದ್ದೂರಿ ಸಮಾರಂಭಕ್ಕೆ ಸಜ್ಜುಗೊಳಿಸುವಲ್ಲಿ ನಿರತರಾಗಿದ್ದರು. ಇಷ್ಟು ದಿನ ಕಾದ ಬಳಿಕ, ಜೈಕಾರ ಕೂಗುವ ಜನರ ಮಧ್ಯೆ, ಕ್ರೇನ್‌ಗಳ ಮೇಲಿಟ್ಟ ಕ್ಯಾಮೆರಾಗಳ ಎದುರು, ಭಾರತದ ಅತ್ಯಂತ ದುಬಾರಿ ವೈದ್ಯರ ಕಣ್ಗಾವಲಿನಲ್ಲಿ, ಅಣ್ಣಾ ಅವರ "ಅಮರಣಾಂತ ಉಪವಾಸ"ದ ಮೂರನೆಯ ಪರ್ವ ಆರಂಭವಾಗುತ್ತದೆ. ಈ ಮಧ್ಯೆ "ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಭಾರತ ಒಂದೇ," ಎಂದು ಟಿ.ವಿ ನಿರೂಪಕರೊಬ್ಬರು ಸ್ವಯಂ ರೋಮಾಂಚಿತರಾಗುತ್ತಾರೆ.

ಅಣ್ಣಾ ಅವರದು ಗಾಂಧೀವಾದಿ ಪ್ರತಿಭಟನಾ ಮಾರ್ಗ ಇರಬ ಹುದು, ಆದರೆ ಅವರ ಬೇಡಿಕೆ ಮಾತ್ರ ಖಂಡಿತ ಸಮಂಜಸವಾದುದಲ್ಲ. ಗಾಂಧೀಜಿ ಅವರು ಪ್ರತಿಪಾದಿಸುತ್ತಿದ್ದ ಅಧಿಕಾರ ವಿಕೇಂದ್ರೀಕರಣಕ್ಕೆ ವ್ಯತಿರಿಕ್ತವಾಗಿರುವ ಜನ ಲೋಕಪಾಲ್ ಮಸೂದೆ, ಕ್ರೂರವಾದ ಭ್ರಷ್ಟಾಚಾರ ವಿರೋಧಿ ಕಾಯ್ದೆ. ಇದರ ಪ್ರಕಾರ ಆಯ್ದ ಕೆಲವೇ ಮಂದಿ ದೇಶದ ಬೃಹತ್ ಆಡಳಿತಶಾಹಿಗೆ ಒಳಪಡುವ ಸಾವಿರಾರು ಉದ್ಯೋಗಿಗಳ ಮೇಲೆ ವಿಚಾರಣೆ ಮಾಡುವ ಅಧಿಕಾರ ಹೊಂದಿರುತ್ತಾರೆ. ಪ್ರಧಾನಮಂತ್ರಿ ಅವರನ್ನೊಳಗೊಂಡಂತೆ ನ್ಯಾಯಾಂಗ ವ್ಯವಸ್ಥೆ, ಸದನದ ಸದಸ್ಯರು, ಮತ್ತು ಆಡಳಿತಶಾಹಿಯ ಎಲ್ಲ ಮಟ್ಟದ ಅಧಿಕಾರಿಗಳು ಕಾಯ್ದೆಯ ವ್ಯಾಪ್ತಿಗೆ ಬರುತ್ತಾರೆ. ವಿಚಾರಣೆಗೆ ಪೊಲೀಸ್ ಶಕ್ತಿಯನ್ನು ಪೂರಕವಾಗಿ ಬಳ ಸಬಹುದು. ವಿಚಾರಣೆ, ಸರ್ವೇಕ್ಷಣೆ ಮತ್ತು ಶಿಕ್ಷಿಸುವ ಅಧಿಕಾರ ಲೋಕಪಾಲ್‌ಗಿರುತ್ತದೆ. ಪ್ರತ್ಯೇಕವಾದ ಜೈಲುಗ ಳಿಲ್ಲ ಎಂಬುದನ್ನು ಹೊರತುಪಡಿಸಿದರೆ ಲೋಕಪಾಲ್, ಭ್ರಷ್ಟರನ್ನು ನಿಗ್ರಹಿಸುವ ಸಲುವಾಗಿ ಕಾರ್ಯನಿರ್ವಹಿಸುವ ಸ್ವತಂತ್ರವಾದ ಆಡಳಿತ ಯಂತ್ರವಾಗಿ ಕೆಲಸ ಮಾಡಲಾರಂಭಿಸುತ್ತದೆ. ಈಗ ದೇಶದಲ್ಲಿ ಅಸ್ತಿತ್ವದಲ್ಲಿರುವ ಒಂದು ವ್ಯವಸ್ಥೆಯ ಜೊತೆಗೆ ಮತ್ತೊಂದು ವ್ಯವಸ್ಥೆ ಸೃಷ್ಟಿಯಾಗುತ್ತದೆ.

ನಾವು ಭ್ರಷ್ಟಾಚಾರವನ್ನು ಹೇಗೆ ಅರ್ಥೈಸಿಕೊಳ್ಳುತ್ತೇವೆ ಎಂಬುದರ ಮೇಲೆ ಈ ವ್ಯವಸ್ಥೆಯ ಯಶಸ್ಸು ನಿಂತಿದೆ. ಭ್ರಷ್ಟಾಚಾರ ಕೇವಲ ಶಾಸನಾತ್ಮಕವಾದ ವಿಚಾರವೇ, ಅಥವಾ ಭ್ರಷ್ಟಾಚಾರ ಎಂದರೆ ಆರ್ಥಿಕ ವಂಚನೆಯೇ, ಲಂಚಗುಳಿತನವೇ, ಅಥವಾ ಕೆಲವೇ ಮಂದಿಯ ಕೈಯಲ್ಲಿ ಅಧಿಕಾರ ಕೇಂದ್ರೀಕೃತವಾಗಿರುವ ಅಸಮಾನ ಸಮಾಜದಲ್ಲಿ ಸಾಮಾಜಿಕ ವ್ಯವಹಾರ ನಡೆಸಲು ಬೇಕಾದ ಕರೆನ್ಸಿಯೇ? ಶಾಪಿಂಗ್ ಮಾಲ್‌ಗಳೇ ತುಂಬಿರುವ ನಗರವೊಂದನ್ನು ಊಹಿಸಿಕೊಳ್ಳಿ. ಇಲ್ಲಿ ರಸ್ತೆ ಬದಿಯ ವ್ಯಾಪಾರಿಯೊಬ್ಬ ಮಾಲ್‌ಗಳಿಗೆ ಹೋಗಲಾಗದ ತನ್ನ ಗ್ರಾಹಕರೊಂದಿಗೆ ವ್ಯಾಪಾರ ಮಾಡಲು ಬೀಟ್ ಪೊಲೀಸ್ ಮತ್ತು ಮುನಿಸಿಪಾಲಿಟಿಯವರಿಗೆ ಸಣ್ಣ ಪ್ರಮಾಣದ ಲಂಚ ಕೊಡಬೇಕಾಗುತ್ತದೆ. ಹಾಗಾದರೆ ಇದು ಕ್ಷಮಿಸಲಿಕ್ಕಾಗದ ಭ್ರಷ್ಟಾಚಾರವೇ? ಇನ್ನು ಮುಂದೆ ಆತ ಲೋಕಪಾಲ್ ಪ್ರತಿನಿಧಿಗೂ ಲಂಚ ಕೊಡಬೇಕಾಗುತ್ತದೆಯೇ? ಸಾಮಾನ್ಯ ಜನರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವ ವ್ಯವಸ್ಥೆಯ ಅಸಮಾನತೆಯನ್ನು ಸರಿಪಡಿ ಸಬೇಕೆ ಅಥವಾ ಜನರಿಗೆ ಇನ್ನೊಂದು ರೀತಿ ತಲೆನೋ ವಾಗಬಲ್ಲ ಮತ್ತೊಂದು ಅಧಿಕಾರ ಯಂತ್ರವನ್ನು ಸೃಷ್ಟಿಸಬೇಕೆ?

ಈ ಮಧ್ಯೆ ಅಣ್ಣಾ ಅವರ ಕ್ರಾಂತಿಯಲ್ಲಿ ಕಂಡು ಬರುತ್ತಿರುವ ರಾಷ್ಟ್ರೀಯತೆ, ಬಾವುಟ ಹಿಡಿದು ಅತಿಯಾದ ದೇಶಪ್ರೇಮ ತೋರ್ಪಡಿಸುತ್ತಿರುವವರ ವೇಷಭೂಷಣ, ರಂಗಸಜ್ಜಿಕೆಯ ಹಿಂದೆ ಮೂಲತಃ ಮೀಸಲಾತಿ ವಿರೋಧಿ ಪ್ರತಿಭಟನೆ, ವಿಶ್ವಕಪ್ ಗೆಲುವಿನ ಪೆರೇಡ್, ಮತ್ತು ಅಣುಪರೀಕ್ಷೆಯ ಸಂಭ್ರಮಾಚರಣೆಯ ಉನ್ಮಾದ ಕೆಲಸ ಮಾಡುತ್ತಿದೆ. 'ಉಪವಾಸ'ಕ್ಕೆ ಬೆಂಬಲ ವ್ಯಕ್ತಪಡಿಸ ದವರು 'ನಿಜವಾದ ಭಾರತೀಯರೇ ಅಲ್ಲ' ಎಂದು ಸೂಚಿಸುವಂತಿದೆ ಇವರ ಅರ್ಭಟ. 24 ಗಂಟೆಗಳ ಟಿ.ವಿ ವಾಹಿನಿಗಳಂತೂ ದೇಶದಲ್ಲಿ ವರದಿ ಮಾಡಲು ಇನ್ಯಾವ ವಿಷಯವೇ ಇಲ್ಲವೆಂದು ನಿರ್ಧರಿಸಿಬಿಟ್ಟಿವೆ.

ಇಲ್ಲಿ 'ಉಪವಾಸ' ಎಂದರೆ, ಎಎಫ್‌ಎಸ್‌ಪಿಎ (Armed Forces Special Powers Act) ವಿರುದ್ಧ ಕಳೆದ ಹತ್ತು ವರ್ಷಗಳಿಂದ ಇರೋಮ್ ಶರ್ಮಿಳಾ ಕೈಗೊಂಡಿರುವ ಉಪವಾಸ ಖಂಡಿತ ಅಲ್ಲ. (ಆಕೆಗೆ ಬಲವಂತವಾಗಿ ಆಹಾರ ನೀಡಲಾಗುತ್ತಿದೆ.) ಅನುಮಾನ ಬಂದರೆ ಮಣಿಪುರದಲ್ಲಿ ಯಾರನ್ನಾದರೂ ಕೊಲ್ಲಬಹುದಾದ ಅಧಿಕಾರ ಭಾರತೀಯ ಸೈನ್ಯಕ್ಕೆ ಎಎಫ್‌ಎಸ್‌ಪಿಎ ನೀಡಿದೆ. 'ಉಪವಾಸ' ಎಂದರೆ ಕೂಡಂಕುಲಂನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಅಣುಶಕ್ತಿ ಕೇಂದ್ರಕ್ಕೆ ವಿರೋಧ ವ್ಯಕ್ತಪಡಿಸಿ ನಡೆಯುತ್ತಿರುವರಿಲೇ ಉಪವಾಸವಲ್ಲ. 'ಜನರು' ಎಂದರೆ ಶರ್ಮಿಳಾಗೆ ಬೆಂಬಲ ವ್ಯಕ್ತಪಡಿಸುತ್ತಿರುವ ಮಣಿಪುರಿಗಳಲ್ಲ. ಅಥವಾ ಜಗತ್‌ಸಿಂಗ್‌ಪುರ್‌ನಲ್ಲಿ ಶಸ್ತ್ರಸಜ್ಜಿತ ಪೊಲೀಸರು ಮತ್ತು ಗಣಿ ಮಾಫಿಯಾದವರನ್ನು ಎದುರಿಸುತ್ತಿರುವ ಜನರೂ ಅಲ್ಲ. ಅಥವಾ ಕಳಿಂಗ ನಗರ್, ನಿಯಾಮ್‌ಗಿರಿ, ಬಸ್ತರ್, ಜೈತಪುರ್‌ನ ಜನರೂ ಅಲ್ಲ. ಅಥವಾ ಭೋಪಾಲ್ ಅನಿಲ ಸೋರಿಕೆಯ ಬಲಿಪಶುಗಳೂ ಅಲ್ಲ. ನರ್ಮದಾ ಕಣಿವೆಯಲ್ಲಿ ಸರ್ದಾರ್ ಸರೋವರ್ ಅಣೆಕಟ್ಟೆಗಳಿಂದ ಬುಡಮೇಲಾಗಿರುವ ಸಮುದಾಯಗಳೂ ಅಲ್ಲ. ನೊಯಿಡಾ, ಪುಣೆ, ಹರಿಯಾಣ ಮತ್ತು ದೇಶದ ಇತರೆಡೆ ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರ ಭೂಮಿ ಕಸಿದುಕೊಳ್ಳುವುದನ್ನು ವಿರೋಧಿಸುತ್ತಿರುವ ರೈತರೂ ಅಲ್ಲ. ಇಲ್ಲಿ 'ಜನರು' ಎಂದರೆ ಟೀಂ ಅಣ್ಣಾ' ಸಿದ್ಧಪಡಿ ಸಿರುವ ಜನಲೋಕಪಾಲ್ ಮಸೂದೆ ಲೋಕಸಭೆಯಲ್ಲಿ ಮಂಡನೆಯಾಗಿ ಅಂಗೀಕಾರಗೊಳ್ಳದಿದ್ದರೆ ಉಪವಾಸಮಾಡಿ ಸಾಯುವೆನೆಂದು ಬೆದರಿಸುತ್ತಿರುವ 74 ವರ್ಷದ ವ್ಯಕ್ತಿಯ ಕಾರ್ಯಕ್ರಮ ನೋಡಲು ನೆರೆದಿರುವ 'ಜನರು.' ಹೇಗೆ ಯೇಸುಕ್ರಿಸ್ತ ಹಸಿದವರಿಗೆ ಉಣಿಸಲು ಪವಾಡ ಸದೃಶ ರೀತಿಯಲ್ಲಿ ಕೆಲವೇ ಮೀನುಗಳನ್ನು ರಾಶಿ ರಾಶಿ ಮೀನುಗಳನ್ನಾಗಿ ಪರಿವರ್ತಿಸಿದನೋ ಹಾಗೆ, ಕೆಲವು ಸಾವಿರ ಜನರನ್ನು ಲಕ್ಷಾಂತರ, ಕೋಟ್ಯಾಂತರ ಜನರೆಂದು ಪವಾಡ ಸೃಷ್ಟಿಸುತ್ತಿರುವ ಟಿ.ವಿ ವಾಹಿನಿಗಳು "ಕೋಟ್ಯಾಂತರ ಜನರ ಧ್ವನಿ ಮಾತನಾಡುತ್ತಿವೆ" ಎಂದು ಬೊಗಳೆ ಬಿಡುತ್ತಿವೆ. "ಭಾರತ ಎಂದರೆ ಅಣ್ಣಾ" ಎಂದು ಬೊಬ್ಬಿಡುತ್ತಿವೆ.

ಹಾಗಾದರೆ ಈತ ಯಾರು, ಯಾರು ಈ ನವ ಸಂತ, ಸಾವಿರಾರು ಜನರ ಧ್ವನಿಯಾಗಿರುವ ಈ ಅಣ್ಣಾ ಯಾರು? ವಿಪರ್ಯಾಸವೆಂದರೆ ಹಲವಾರು ಪ್ರಮುಖ ವಿಚಾರಗಳ ಬಗ್ಗೆ ಈತನ ಅಭಿಪ್ರಾಯ ಏನೆಂಬುದನ್ನು ನಾವು ಎಲ್ಲಿಯೂ ಕೇಳಿಯೇ ಇಲ್ಲ. ತನ್ನದೇ ರಾಜ್ಯದಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆಗಳ ಬಗ್ಗೆ ಅಣ್ಣಾ ಎಂದೂ ಮಾತನಾಡಲಿಲ್ಲ. ಆಪರೇಷನ್ ಗ್ರೀನ್ ಹಂಟ್ ಬಗ್ಗೆ ಚಕಾರವೆತ್ತಲಿಲ್ಲ. ಸಿಂಗೂರ್, ನಂದಿಗ್ರಾಮ್, ಲಾಲ್‌ಗಢ್ ಬಗ್ಗೆ ಇವತ್ತಿಗೂ ಬಾಯಿ ಬಿಟ್ಟಿಲ್ಲ, ಪೋಸ್ಕೋ, ಅಥವಾ ರೈತರ ಹೋರಾಟಗಳು, ವಿಶೇಷ ಆರ್ಥಿಕ ವಲಯಗಳು, ಇವ್ಯಾವುದರ ಬಗ್ಗೆ ಮಾತನಾಡಿಲ್ಲ. ಮಧ್ಯಭಾರತದ ಅರಣ್ಯ ಪ್ರದೇಶಗಳಿಗೆ ಸೇನೆಯನ್ನು ಕಳುಹಿಸಲು ಭಾರತ ಸರ್ಕಾರ ಆಲೋಚಿಸುತ್ತಿರುವುದರ ಬಗ್ಗೆ ಅಣ್ಣಾ ಅವರ ಗಮನ ಹರಿದಿಲ್ಲ.

(34ನೇ ಪುಟಕ್ಕೆ)

ಅಂಬೇಡ್ಕರ್ ಮಾರ್ಗ ಮತ್ತು ಅಣ್ಣಾ ಹಜಾರೆಯವರ ವಿಧಾನ

ಸುಖ್‌ದೇವ್ ಥೋರಟ್
ಅನು: ಎಸ್ ಮರಿಸ್ವಾಮಿ

[ಡಾ॥ ಅಂಬೇಡ್ಕರ್ ಅವರ ಉದಾಹರಣೆಯನ್ನನುಸರಿಸಿ ಅಣ್ಣಾ ಪಂಗಡ ಸಂವಿಧಾನಿಕ ವಿಧಾನಗಳನ್ನು ಉಪಯೋಗಿಸಬೇಕು ಮತ್ತು ಅವುಗಳಲ್ಲಿ ಜನರ ನಂಬಿಕೆ ಹೆಚ್ಚಾಗುವಂತೆ ಮಾಡಬೇಕು. ಇಲ್ಲದಿದ್ದಲ್ಲಿ ಸಂವಿಧಾನಿಕವಲ್ಲದ ಮತ್ತು ಒತ್ತಡ ಹೇರುವಂತ ವಿಧಾನಗಳಷ್ಟೇ ಕೆಲಸ ಮಾಡುತ್ತವೆ ಎಂಬ ಸಂದೇಶವನ್ನು ಅವರು ಜನರಿಗೆ ಕಳುಹಿಸುತ್ತಾರೆ.]

ಕೆಲ ದಿನಗಳ ಹಿಂದೆ ಜನರ ಗುಂಪೊಂದು ದಹಲಿಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರವನ್ನೊಳಗೊಂಡ ಭಿತ್ತಿ ಫಲಕಗಳನ್ನಿಡಿದು ಲೋಕಪಾಲ ಸ್ಥಾಪಿಸುವ ಸಂಬಂಧ ಅಣ್ಣಾ ಅನುಸರಿಸುತ್ತಿರುವ ವಿಧಾನವನ್ನು ವಿರೋಧಿಸಿ ಒಂದು ಪ್ರದರ್ಶನ ಮಾಡಿದರು. ಸಂವಿಧಾನವನ್ನು ಮಾರ್ಪಡಿಸುವ ಯಾವುದೇ ಯತ್ನವನ್ನು ದಲಿತರು ಅನುಮಾನದಿಂದ ನೋಡುವುದೇ ಹೆಚ್ಚು. ಅಣ್ಣಾ ಮತ್ತು ಪಂಗಡ ಅವರು ಪ್ರಸ್ತಾಪಿಸಿರುವ ಲೋಕಪಾಲ್ ಕರಡು ಮಸೂದೆ ಬೇರೆಲ್ಲರಿಗಿಂತ ದಲಿತರಿಗೇ ಹೆಚ್ಚು ಸಹಾಯಕಾರಿ ಎಂದು ಹೇಳುತ್ತಿದೆ. ಇದು ನನ್ನನ್ನು ಡಾ॥ ಅಂಬೇಡ್ಕರ್ ಅವರ ನಿಲುವು ಮತ್ತು ಅಣ್ಣಾ ಮತ್ತು ಅವರ ಪಂಗಡ ಅನುಸರಿಸುತ್ತಿರುವ ಚಳವಳಿಯ ವಿಧಾನ ಇವುಗಳನ್ನು ಒಂದಕ್ಕೊಂದು ಹೋಲಿಸಿ ನೋಡುವಂತೆ ಪ್ರೇರೇಪಿಸಿತು.

ನವೆಂಬರ್ 25, 1949ರಂದು ಕರಡು ಸಂವಿಧಾನವನ್ನು ಸಲ್ಲಿಸಿದ ನಂತರ ತಮ್ಮ ಕೊನೆಯ ದೂರದೃಷ್ಟಿಯುಕ್ತ ಭಾಷಣದಲ್ಲಿ ಈಗ ತಾನೆ ಜನಿಸಿರುವ ನಮ್ಮ ಪ್ರಜಾಪ್ರಭುತ್ವಕ್ಕೆ ಮೂರು ಬಗೆಯ ಅಪಾಯಗಳು ಸಾಧ್ಯ ಎಂದು ಡಾ॥ ಅಂಬೇಡ್ಕರ್ ಅವರು ಎಚ್ಚರಿಸಿದರು. ಇವು ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯಗಳಿಗೆ, ಸಂವಿಧಾನೇತರ ವಿಧಾನಗಳ ಉಪಯೋಗಗಳಿಗೆ ಮತ್ತು ವ್ಯಕ್ತಿಪೂಜೆಗಳಿಗೆ ಸಂಬಂಧಿಸಿದವುಗಳಾಗಿರುತ್ತವೆ ಎಂದು ಅವರು ಮುಂದುವರೆಸಿದರು.

ಮೊದಲು ಡಾ॥ ಅಂಬೇಡ್ಕರ್ ಅವರು ಒಬ್ಬ ವ್ಯಕ್ತಿಗೆ ಒಂದು ಮತ ಎಂಬ ನಿಯಮದಿಂದುಂಟಾದ ರಾಜಕೀಯ ಸಮಾನತೆ ಮತ್ತು ಸಾಮಾಜಿಕ ಮತ್ತು ನಮ್ಮ ಸಮಾಜದಲ್ಲಿ ಮನೆಮಾಡಿರುವ ಆರ್ಥಿಕ ಜೀವನದಲ್ಲಿನ ಅಸಮಾನತೆ ಇವುಗಳಿಂದುಟಾದ ವೈರುಧ್ಯಗಳಿಗೆ ಬೊಟ್ಟು ಮಾಡಿ ತೋರಿಸಿದರು. ರಾಜಕೀಯ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಅದನ್ನು ಒಂದೇ ರೀತಿಯ ಜೀವಕಣಗಳ ಮತ್ತು ಎಳೆಗಳ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ತಳಹದಿಯ ಮೇಲೆ ಸ್ಥಾಪಿಸಬೇಕಾಗುತ್ತದೆ ಎಂದು ಅವರು ವಾದಿಸಿದರು. ಈ ವೈರುಧ್ಯವನ್ನು ನಾವು ಆದಷ್ಟೂ ಬೇಗ ನಿವಾರಿಸಬೇಕು. ಇಲ್ಲದಿದ್ದಲ್ಲಿ ಈ ತಾರತಮ್ಯದಿಂದ ನರಳುತ್ತಿರುವವರು ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನೇ ಚಿಂದಿಮಾಡುತ್ತಾರೆ ಎಂದು ಅವರು ಎಚ್ಚರಿಸಿದರು. ಭಾರತೀಯರಾದ ನಾವು ತೀವ್ರ ಅಸಮಾನತೆಯನ್ನು ಕಡಿಮೆ ಮಾಡಲು ಗಂಭೀರ ಪ್ರಯತ್ನ ಮಾಡುತ್ತಿದ್ದೇವಾದರೂ, ನಮ್ಮ ರಾಜಕೀಯ ಪ್ರಜಾಪ್ರಭುತ್ವ ದೇಶದ ಕೆಲಭಾಗಗಳಲ್ಲಿ ಉಂಟಾಗಿರುವ ಅತೃಪ್ತಿಯಿಂದಾಗಿ ಬಲವಾದ ಒತ್ತಡಕ್ಕೆ ಒಳಗಾಗಿದೆ.

ಡಾ॥ ಅಂಬೇಡ್ಕರ್ ಅವರ ಎರಡನೆ ಮತ್ತು ಅತಿ ಮುಖ್ಯವಾದ ಎಚ್ಚರಿಕೆ ಈವೊತ್ತಿನ ಸಂದರ್ಭದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಗುರಿಗಳನ್ನು ತಲುಪಲು ಉಪಯೋಗಿಸುವ ವಿಧಾನಗಳಿಗೆ ಸಂಬಂಧಿಸಿದುದಾಗಿದೆ. ಬದಲಾವಣೆ ತರಲು ಜನರು ಹಿಂಸಾತ್ಮಕ ಮತ್ತು ಒತ್ತಡ ಹೇರುವಂತಹ ವಿಧಾನಗಳನ್ನು ತ್ಯಜಿಸಬೇಕೆಂದು ಅವರು ಜನರಿಗೆ ಮನವಿ ಮಾಡಿದರು. ಇದರರ್ಥ ನಾಗರೀಕರಿಂದ ಕಾಯ್ದೆ ಭಂಗ, ಅಸಹಕಾರ, ಅತಿ ಒತ್ತಡ ತರುವಂತ ಸತ್ಯಾಗ್ರಹ, ಉಪವಾಸ ಮುಂತಾದವುಗಳ ಉಪಯೋಗವನ್ನು ನಾವು ತ್ಯಜಿಸಬೇಕು. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿನ ಇವುಗಳ ಉಪಯೋಗವನ್ನು ನೆನಪಿಸುತ್ತಾ ಡಾ॥ ಅಂಬೇಡ್ಕರ್ ಹೀಗೆ ಹೇಳಿದರು. "ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಗಳನ್ನು ಈಡೇರಿಸಲು ಬೇರಾವುದೇ ದಾರಿ ಇಲ್ಲದಿದ್ದಾಗ ಸಂವಿಧಾನಾತ್ಮಕವಲ್ಲದ ವಿಧಾನಗಳನ್ನು ಬಳಸುವುದನ್ನು ನ್ಯಾಯಯುತವೆಂದು ಕರೆಯು

ಬದಲಾವಣೆ ತರಲು ಜನರು ಹಿಂಸಾತ್ಮಕ ಮತ್ತು ಒತ್ತಡ ಹೇರುವಂತಹ ವಿಧಾನಗಳನ್ನು ತ್ಯಜಿಸಬೇಕೆಂದು ಅಂಬೇಡ್ಕರ್ ಜನರಿಗೆ ಮನವಿ ಮಾಡಿದರು. ಇದರರ್ಥ ನಾಗರೀಕರಿಂದ ಕಾಯ್ದೆ ಭಂಗ, ಅಸಹಕಾರ, ಅತಿ ಒತ್ತಡ ತರುವಂತ ಸತ್ಯಾಗ್ರಹ, ಉಪವಾಸ ಮುಂತಾದವುಗಳ ಉಪಯೋಗವನ್ನು ನಾವು ತ್ಯಜಿಸಬೇಕು. ಬೇರಾವುದೇ ದಾರಿ ಇಲ್ಲದಿದ್ದಾಗ ಸಂವಿಧಾನಾತ್ಮಕವಲ್ಲದ ವಿಧಾನಗಳನ್ನು ಬಳಸುವುದನ್ನು ನ್ಯಾಯಯುತವೆಂದು ಕರೆಯುವುದು ಸಾಧ್ಯವಿತ್ತು". ಆದರೆ ಅಂತಹ ದಾರಿಗಳು ಇರುವಾಗ ಆ ವಿಧಾನಗಳನ್ನು ಉಪಯೋಗಿಸುವುದು ಅವರ ಅಭಿಪ್ರಾಯದಲ್ಲಿ ಅರಾಜಕತೆಯ ವ್ಯಾಕರಣವಲ್ಲದೆ ಮತ್ತೇನೂ ಅಲ್ಲ.

ವುದು ಸಾಧ್ಯವಿತ್ತು". ಆದರೆ ಅಂತಹ ದಾರಿಗಳು ಇರುವಾಗ ಆ ವಿಧಾನಗಳನ್ನು ಉಪಯೋಗಿಸುವುದು ಅವರ ಅಭಿಪ್ರಾಯದಲ್ಲಿ "ಅರಾಜಕತೆಯ ವ್ಯಾಕರಣವಲ್ಲದೆ ಮತ್ತೇನೂ ಅಲ್ಲ". "ಒಂದು ರಾಷ್ಟ್ರವಾಗಿ ಅವುಗಳನ್ನು ಎಷ್ಟು ಬೇಗ ಬಿಟ್ಟುಬಿಡುತ್ತೇವೆಯೊ ಅಷ್ಟೂ ಒಳ್ಳೆಯದು", ಎಂದು ಅವರು ಪ್ರತಿಪಾದಿಸಿದರು.

ಡಾ॥ ಅಂಬೇಡ್ಕರ್ ಅವರ ಮೂರನೆ ಎಚ್ಚರಿಕೆ ವ್ಯಕ್ತಿ ಪೂಜೆಗೆ ಸಂಬಂಧಿಸಿದುದಾಗಿದೆ. ಪ್ರಖ್ಯಾತ ವ್ಯಕ್ತಿಗಳ "ಕಾಲ ಬುಡದಲ್ಲಿ ತಮ್ಮ ಸ್ವಾತಂತ್ರ್ಯಗಳನ್ನಿಡುವ ಅಥವಾ ಸಂಸ್ಥೆಗಳನ್ನು ಬುಡಮೇಲು ಮಾಡಲು ಸಾಧ್ಯವಾಗುವಂತೆ ಅವರಿಗೆ ಎತೇಚ್ಚ ಅಧಿಕಾರವನ್ನು ನೀಡುವ" ರಾಜಕೀಯ ಸಂಸ್ಕೃತಿಯ ಬಗ್ಗೆ ಅವರು ಗಂಭೀರ ಆತಂಕಕ್ಕೊಳಗಾಗಿದ್ದರು. ದೇಶಕ್ಕಾಗಿ ತಮ್ಮ ಜೀವನ ಪರ್ಯಂತ ದುಡಿದ ಮಹಾನ್ ವ್ಯಕ್ತಿಗಳಿಗೆ ಕೃತಜ್ಞರಾಗಿರುವುದರಲ್ಲಿ ತಪ್ಪೇನಿಲ್ಲ ಎಂದು ಅವರು ನಂಬಿದ್ದರು. ಆದರೆ ಕೃತಜ್ಞತೆಗೂ ಒಂದು ಮಿತಿ ಇದೆ. ತನ್ನ ಘನತೆಯ ಬೆಲೆ ತೆತ್ತು ಯಾರೂ ಕೃತಜ್ಞತೆ ತೋರಬೇಕಿಲ್ಲ. ಮತ್ತು ಯಾವ ರಾಷ್ಟ್ರವೂ ತನ್ನ ಸ್ವಾತಂತ್ರ್ಯದ ಬೆಲೆ ತೆತ್ತು ಕೃತಜ್ಞವಾಗಬಾರದು. ಈ ಎಚ್ಚರಿಕೆ ಬೇರೆಲ್ಲಾ ದೇಶಗಳ ಜನರಿಗಿಂತ ಭಾರತೀಯರ ವಿಷಯದಲ್ಲಿ ಹೆಚ್ಚು ಅವಶ್ಯಕವಾದುದು. ಏಕೆಂದರೆ ಭಕ್ತಿ ಅಥವಾ ಅರ್ಪಣಾ ಮನೋಭಾವ ಅಥವಾ ವ್ಯಕ್ತಿ ಪೂಜೆ ಪ್ರಪಂಚದ ಬೇರೆಲ್ಲಾ ದೇಶಗಳ ರಾಜಕೀಯದಲ್ಲೆಲ್ಲೂ ಕಾಣಲಾಗದಂತಹ ಮಹತ್ವದ ಪಾತ್ರವನ್ನು ಭಾರತದ ರಾಜಕೀಯದಲ್ಲಿ ವಹಿಸುತ್ತಿದೆ ಎಂದು ಅವರು ವಾದಿಸಿದರು. ಧರ್ಮದಲ್ಲಿ ಭಕ್ತಿ ಅಥವಾ ವ್ಯಕ್ತಿ ಪೂಜೆ ಆತ್ಮದ ಮುಕ್ತಿಯ ಒಂದು ಮಾರ್ಗವಿರಬಹುದು. ಆದರೆ ರಾಜಕೀಯದಲ್ಲಿ ಭಕ್ತಿ ಅಥವಾ ವ್ಯಕ್ತಿ ಪೂಜೆ ಅವನತಿ ಮತ್ತು ಕೊನೆಗೆ ನಿರಂಕುಶ ಪ್ರಭುತ್ವಕ್ಕೆ ರಾಜಮಾರ್ಗ ಎಂದು ಅವರು ಎಚ್ಚರಿಸಿದರು.

ಡಾ॥ ಅಂಬೇಡ್ಕರ್ ಅವರ ಈ ದೃಷ್ಟಿಕೋನ 1920 ಮತ್ತು 1930ರ ದಶಕಗಳಲ್ಲಿ ಅವರು ನಡೆಸಿದ ಅಸ್ಪೃಶ್ಯತಾ ವಿರೋಧಿ ಆಂದೋಲನದಲ್ಲಿ ಅವರು ಉಪಯೋಗಿಸಿದ ಸಂವಿಧಾನಿಕ ವಿಧಾನಗಳಲ್ಲಿ ಅವರಿಗಿದ್ದ ಆಳವಾದ ಬದ್ಧತೆಯ ಮೂಲಕ ವಿಕಾಸ ಹೊಂದಿದುದಾಗಿರುತ್ತದೆ. 1920 ಮತ್ತು 1930ರ ದಶಕಗಳಲ್ಲಿ ಡಾ॥ ಅಂಬೇಡ್ಕರ್ ಅವರು ಸಾರ್ವಜನಿಕ ಬಾವಿಗಳು, ಕೆರೆಗಳು ಮತ್ತು ಹಿಂದೂ ದೇವಾಲಯಗಳನ್ನು ಅಸ್ಪೃಶ್ಯರಿಗೆ ತೆರೆಸಲೋಸ್ಕರ ಅನೇಕ ಚಳವಳಿಗಳನ್ನು ನಡೆಸಿದರು. ಈ ಸಂದರ್ಭದಲ್ಲಿ ಅಂತಹ ಎರಡು ಚಳವಳಿಗಳನ್ನು ನೆನಪಿಸಿಕೊಳ್ಳುವುದು ಅವಶ್ಯಕ. ಅವಾವುವೆಂದರೆ ಮಹಾಡ್‌ನ ಕೆರೆಯ ನೀರನ್ನು ಅಸ್ಪೃಶ್ಯರು ಉಪಯೋಗಿಸುವ ಅವಕಾಶಕ್ಕಾಗಿ ಹೂಡಿದ ಚಳವಳಿ ಮತ್ತು ನಾಸಿಕ್‌ನ ಪ್ರಖ್ಯಾತ ಕಾಳಾರಾಮ್ ದೇವಸ್ಥಾನ ಪ್ರವೇಶಕ್ಕಾಗಿ ಹೂಡಿದ ಚಳವಳಿ. ಈ ಎರಡೂ ಚಳವಳಿಗಳಲ್ಲಿ ಡಾ॥ ಅಂಬೇಡ್ಕರ್ ಅವರು ಹಿಂಸಾತ್ಮಕ ಮೇಲ್ಜಾತಿ ಹಿಂದೂಗಳನ್ನು ಎದುರಿಸಬೇಕಾಯಿತು. ಬ್ರಿಟಿಷರು ಕಾಂಪೌಂಡ್ ಗೋಡೆಯ ಮೇಲೆ ಕುಳಿತ ಪ್ರೇಕ್ಷಕರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಮಹಾಡ್ ಚಳವಳಿಯನ್ನು 1927ರಲ್ಲಿ ಪ್ರಾರಂಭಿಸಿದರು. ಆದರೆ 'ಅಸ್ಪೃಶ್ಯರು' ಆ ಕೆರೆಯ ನೀರನ್ನು ತೆಗೆದುಕೊಳ್ಳುವ ಅಧಿಕಾರವನ್ನು 1937ರಲ್ಲಿ ಕೋರ್ಟ್ ಆದೇಶದ ಮೂಲಕ ಪಡೆದರು. ಅದೊಂದು ಖಾಸಗಿ ಕೆರೆ ಎಂಬ ವಾದ ಮಂಡಿಸಿ ಮೇಲ್ಜಾತಿ ಹಿಂದೂಗಳು ಅಸ್ಪೃಶ್ಯರು ಆ ಕೆರೆಯ ಹತ್ತಿರ ಬರದಂತೆ ಕೋರ್ಟ್ ಆದೇಶ ಪಡೆಯಲು ಯಶಸ್ವಿಯಾಗಿದ್ದರು. ಡಾ॥ ಅಂಬೇಡ್ಕರ್ ಅವರು ಆ ಕೋರ್ಟ್ ಆದೇಶಕ್ಕೆ ಮನ್ನಣೆ ನೀಡಿ ಆ ಕೆರೆಗೆ ತೆಗೆದುಕೊಂಡು ಹೋಗಬೇಕೆಂದಿದ್ದ ಎರಡನೆ ಜಾತಾವನ್ನು ಕೈ ಬಿಟ್ಟರು. ಆದರೆ ಅವರು ಕೋರ್ಟ್‌ಗಳ ಮೂಲಕ ಹೋರಾಟ ನಡೆಸಿದರು ಮತ್ತು 10 ವರ್ಷಗಳ ನಂತರ 1937ರಲ್ಲಿ ನ್ಯಾಯ ದೊರಕಿಸಿಕೊಂಡರು. ಅವರು ಇದನ್ನು ಕಾನೂನಿನ ಮೂಲಕ, ಶಾಂತಿಯುತ ಜನರ ಚಳವಳಿಯ ಮೂಲಕ ಉಪವಾಸ ಮತ್ತು ಸತ್ಯಾಗ್ರಹಗಳ ಯಾವ ಒತ್ತಡವನ್ನೂ ತರದೆ ಸಾಧಿಸಿದರು.

ಅದೇ ರೀತಿ ಕಾಳಾರಾಮ್ ದೇವಸ್ಥಾನ ಪ್ರವೇಶದ ಚಳವಳಿಯೂ ಸಹ 1930ರಿಂದ 1934ರ ವರೆಗೆ ನಾಲ್ಕು ವರ್ಷ ನಡೆಯಿತು. ಗಾಂಧೀಜಿಯವರ ಬೆಂಬಲ ಇದ್ದಾಗ್ಯೂ ಪೂಜಾರಿಗಳ ತೀವ್ರ ವಿರೋಧವನ್ನು ಪರಿಗಣಿಸಿ ಅವರು ಚಳವಳಿಯನ್ನು ಕೈ ಬಿಟ್ಟರು. ಆದರೆ ಅವರು ನಂತರದ ನಾಲ್ಕು ವರ್ಷ ಶಾಂತಿಯುತ ಚಳವಳಿಯ ಜೊತೆಗೇ ಒಂದು ಕಾನೂನು ಸಮರವನ್ನು ನಡೆಸಿದರು ಮತ್ತು ಕೊನೆಯಲ್ಲಿ 1939ರಲ್ಲಿ ಅಸ್ಪೃಶ್ಯರಿಗೆ ದೇವಸ್ಥಾನ ಪ್ರವೇಶದ ಹಕ್ಕು ಪಡೆಯುವಲ್ಲಿ ಯಶಸ್ವಿಯಾದರು.

1920 ಮತ್ತು 1930ರ ದಶಕದಲ್ಲಿ ಡಾ॥ ಅಂಬೇಡ್ಕರ್ ಅವರು ಅಸ್ಪೃಶ್ಯತಾ ವಿರೋಧಿ ಹೋರಾಟದಲ್ಲಿ ಶಾಂತಿಯುತ ಜನಾಂದೋಲನ ಮತ್ತು ಕಾನೂನು ಹೋರಾಟ ಎರಡನ್ನೂ ಜೊತೆಯಲ್ಲಿ ಕೊಂಡೊಯ್ದರು. 'ಅಸ್ಪೃಶ್ಯರ' ಮೇಲೆ ಹಿಂಸೆಗಳು ನಡೆದ ಸಂದರ್ಭಗಳಲ್ಲಿಯೂ ಸಂವಿಧಾನೇತರ ವಿಧಾನಗಳು ತಮ್ಮ ಮೇಲೆ ಹಿಡಿತ ಸಾಧಿಸುವುದಕ್ಕೆ ಅವಕಾಶ ಕೊಡಲಿಲ್ಲ. ಒಂದು ಸಾರಿ ಅವರು ಗಾಂಧೀಜಿಯವರೊಡನೆ ಮುಖಾಮುಖಿಯಾದರು. ಅಸ್ಪೃಶ್ಯರಿಗೆ ಪ್ರತ್ಯೇಕ ಮತಗಟ್ಟೆ ನೀಡುವುದನ್ನು ವಿರೋಧಿಸಿ ಗಾಂಧೀಜಿಯವರು ಆಮರಣಾಂತ ಉಪವಾಸ ಕೈಗೊಂಡಿದ್ದ ಸಂದರ್ಭ ಅದು. ಆಗ ಅವರು ತಮ್ಮ ಪ್ರತ್ಯೇಕ ಮತಗಟ್ಟೆಗಳ ಒತ್ತಾಯದ ಜೊತೆ ಹೊಂದಾಣಿಕೆ ಮಾಡಿಕೊಂಡು ಇವತ್ತಿನ ರಾಜಕೀಯ ಮೀಸಲಾತಿಯನ್ನು ಒಪ್ಪಬೇಕಾಯಿತು. ಗಾಂಧೀಜಿಯವರ ಒತ್ತಡ ತಂತ್ರ ಅವರು ತಮ್ಮ ಪ್ರತ್ಯೇಕ ಮತಗಟ್ಟೆಗಳ ಒತ್ತಾಯವನ್ನು ಕೈಬಿಡುವಂತೆ ಮಾಡಿತು. ಅದರ ಪರಿಣಾಮವನ್ನು ಇಂದು ನಾವು ನೋಡುತ್ತಿದ್ದೇವೆ. ಭಾರತದ ಸಂವಿಧಾನ ಅಭಿಪ್ರಾಯ ಭೇದ, ಚರ್ಚೆ, ಪಾರ್ಲಿಮೆಂಟರಿ ಸ್ಥಾಯಿ ಸಮಿತಿಗಳ ಮೇಲೆ ಪ್ರಭಾವ ಬೀರುವುದು, ವಿಷಯ ಪರಿಶೀಲಿಸುವ ಮಂತ್ರಿಗಳ ಕೂಟ, ಖಾತೆಯ ಮಂತ್ರಿಗಳು, ಪ್ರಧಾನ ಮಂತ್ರಿಗಳು ಇವರುಗಳ ಜೊತೆ ವಿಚಾರ ವಿನಿಮಯ ಮತ್ತು ಕೊನೆಗೆ ಕೋರ್ಟುಗಳಲ್ಲಿ ಹೋರಾಟ ಹಾಗೂ ಶಾಂತಿಯುತ ಚಳವಳಿ ಇವೆಲ್ಲದ್ದಕ್ಕೂ ಬೇಕಾದಷ್ಟು ಅವಕಾಶ ನೀಡಿದೆ. ಎಂಬುದನ್ನು ಅರಿತುಕೊಳ್ಳಬೇಕು. ಅನೇಕ ರಾಜಕೀಯ ಪಕ್ಷಗಳು ಈಗಾಗಲೇ ಅಣ್ಣಾ ಪಂಗಡದ ಕಡೆ ಇರುವುದರಿಂದ ಮಧ್ಯೆ ಭೂಮಿಕೆಗೆ ಬರುವ ಸಾಧ್ಯತೆ ಎದ್ದು ಕಾಣುತ್ತದೆ.

ನಾಗರೀಕ ಸಮಾಜದ ಕಾರ್ಯಕರ್ತರು ತಮ್ಮ ಸತತ ಹೋರಾಟದ ಫಲವಾಗಿ ಎರಡು ಯು.ಪಿ.ಎ ಸರ್ಕಾರಗಳು ಜನರ ಅನೇಕ ಮೂಲಭೂತ ಹಕ್ಕುಗಳನ್ನು ಒಪ್ಪಿ ಅವುಗಳನ್ನು ಕಾನೂನುಗಳಾಗಿ ಪರಿವರ್ತನೆ ಮಾಡಿಸುವುದರಲ್ಲಿ ಯಶಸ್ವಿಯಾಗಿವೆ. ಇವೆಲ್ಲವನ್ನೂ ಅವು ಸಂವಿಧಾನದ ಚೌಕಟ್ಟಿನೊಳಗೇ ಮಾಡಲು ಸಾಧ್ಯವಾಗಿದೆ ಎಂಬುದು ನಮ್ಮ ಅನುಭವ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗದ ಖಾತರಿ ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ, ಅರಣ್ಯ ಕಾಯ್ದೆಯಡಿಯಲ್ಲಿ ಹಲವು ಹಕ್ಕುಗಳು, ಶಿಕ್ಷಣದ ಹಕ್ಕು, ಈಗ ಆಹಾರದ ಹಕ್ಕು ಇವು ನಾಗರೀಕ ಸಮಾಜ ಸಂವಿಧಾನಿಕ ವಿಧಾನಗಳ ಮೂಲಕ ಜಾರಿಗೊಳಿಸಲು ಯಶಸ್ವಿಯಾಗಿರುವ ಕ್ರಾಂತಿಕಾರಕ ಕಾಯ್ದೆಗಳು. ಈಗ ಅಣ್ಣಾ ಪಂಗಡಕ್ಕೆ ಸಂವಿಧಾನಿಕ ವಿಧಾನಗಳನ್ನು ಉಪಯೋಗಿಸಿ ಅಂತಹ ವಿಧಾನಗಳಲ್ಲಿ ಜನರ ನಂಬಿಕೆ ಹೆಚ್ಚುವಂತೆ ಮಾಡುವ ಅವಕಾಶವಿದೆ. ಇಲ್ಲದಿದ್ದಲ್ಲಿ ಒತ್ತಡ ತರುವಂತ ಮತ್ತು ಸಂವಿಧಾನ ಬಾಹಿರ ವಿಧಾನಗಳು ಮಾತ್ರ ಕೆಲಸ ಮಾಡುತ್ತವೆ ಎಂಬ ಸಂದೇಶವನ್ನು ಅಣ್ಣಾ ಪಂಗಡ ಜನರಿಗೆ ಕಳುಹಿಸುತ್ತದೆ.

ಡಾ॥ ಅಂಬೇಡ್ಕರ್ ಅವರು ಹೇಳಿದಂತೆ ಭಾರತದ ಸಂಸ್ಕೃತಿಯ ಕೆಲವು ಬೆಳವಣಿಗೆಗಳ ಕಾರಣದಿಂದ ನಮ್ಮ ಜನರು ವ್ಯಕ್ತಿ ಪೂಜೆಗೆ ಹೆಚ್ಚು ಬಲಿಯಾಗುತ್ತಾರೆ. ವ್ಯಕ್ತಿ ಪೂಜೆ ಅಥವಾ ಭಕ್ತಿ ಏನನ್ನು ಮಾಡಬಲ್ಲುದು ಎಂಬುದಕ್ಕೆ ಹೇಗೆ ಯೋಗ ಕಲಿಸುವ ಅಧ್ಯಾಪಕನೊಬ್ಬ ಕೆಲ ವರ್ಷಗಳಲ್ಲಿ ಯೋಗ ಉಪಾಸಕರನ್ನು ಧರ್ಮೋಪಾಸಕರಾಗಿ ಮತ್ತು ಕೊನೆಗೆ ರಾಜಕೀಯ ಬೆಂಬಲಿಗರನ್ನಾಗಿ ಮಾರ್ಪಡಿಸಿದ ಎನ್ನುವುದು ವ್ಯಕ್ತಿ ಪೂಜೆ ಅಥವಾ ಭಕ್ತಿ ಏನನ್ನು ಸಾಧಿಸಬಲ್ಲುದು ಎಂಬುದಕ್ಕೆ ಒಂದು ಉತ್ಕೃಷ್ಟ ಉದಾಹರಣೆ. ಮತ್ತೊಬ್ಬ ಧರ್ಮ ಪ್ರಚಾರಕ ತನ್ನ ಧಾರ್ಮಿಕ ಅನುಯಾಯಿಗಳನ್ನು ರಾಜಕೀಯ ಗುರಿಗಾಗಿ ಉಪಯೋಗಿಸುವುದಾಗಿ ಹೆದರಿಸಿದ್ದಾನೆ. ಅವನು ಹೇಳುವಂತೆ ಅವರು ಅವನನ್ನು ನಂಬಿ ಅನುಸರಿಸುವುದರಿಂದ ಅವರೊಡನೆ ಈ ವಿಷಯದ ಚರ್ಚೆ ಅನಾವಶ್ಯಕ.

ಡಾ॥ ಅಂಬೇಡ್ಕರ್ ಅವರು ಹೇಳಿದಂತೆ ಭಾರತದ ಸಂಸ್ಕೃತಿಯ ಕೆಲವು ಬೆಳವಣಿಗೆಗಳ ಕಾರಣದಿಂದ ನಮ್ಮ ಜನರು ವ್ಯಕ್ತಿ ಪೂಜೆಗೆ ಹೆಚ್ಚು ಬಲಿಯಾಗುತ್ತಾರೆ. ವ್ಯಕ್ತಿ ಪೂಜೆ ಅಥವಾ ಭಕ್ತಿ ಏನನ್ನು ಮಾಡಬಲ್ಲುದು ಎಂಬುದಕ್ಕೆ ಹೇಗೆ ಯೋಗ ಕಲಿಸುವ ಅಧ್ಯಾಪಕನೊಬ್ಬ ಕೆಲ ವರ್ಷಗಳಲ್ಲಿ ಯೋಗ ಉಪಾಸಕರನ್ನು ಧರ್ಮೋಪಾಸಕರಾಗಿ ಮತ್ತು ಕೊನೆಗೆ ರಾಜಕೀಯ ಬೆಂಬಲಿಗರನ್ನಾಗಿ ಮಾರ್ಪಡಿಸಿದ ಎನ್ನುವುದು ವ್ಯಕ್ತಿ ಪೂಜೆ ಅಥವಾ ಭಕ್ತಿ ಏನನ್ನು ಸಾಧಿಸಬಲ್ಲುದು ಎಂಬುದಕ್ಕೆ ಒಂದು ಉತ್ಕೃಷ್ಟ ಉದಾಹರಣೆ.

ಹಜಾರೆ ಆಂದೋಲನದ ಸತ್ಯಾ-ಮಿಥ್ಯೆಗಳು

ನಮ್ಮ ಹೊಸ ಪ್ರಜಾಪ್ರಭುತ್ವಕ್ಕೆ ಪ್ರಜಾಸತ್ತಾತ್ಮಕತೆ ವಿರೋಧಿ ಜಾತಿಪದ್ಧತಿ ಆಧಾರವಾಗಿದೆ. ಆ ಚೌಕಟ್ಟಿನೊಳಗೇ ಅದು ನಡೆದು ಬರುತ್ತಿದೆ. ಆದುದರಿಂದ ಇಂತಹ ಸಂದರ್ಭದಲ್ಲಿ ಸಂವಿಧಾನಿಕ ವಿಧಾನಗಳನ್ನು ಅನುಸರಿಸುವ ಮತ್ತು ಸಂವಿಧಾನಿಕ ವಿಧಾನ ಮತ್ತು ಸಾಮಾಜಿಕ ನೀತಿಯನ್ನು ಬಲಪಡಿಸುವ ಅವಶ್ಯಕತೆ ಇದ್ದು ಅವನ್ನು ಉದ್ದೇಶಪೂರ್ವಕವಾಗಿ ಪ್ರೋತ್ಸಾಹಿಸಿ ಬೆಳೆಸಬೇಕಾಗುತ್ತದೆ ಎಂಬುದನ್ನು ಅಣ್ಣಾ ಪಂಗಡ ಗುರುತಿಸಬೇಕು. ಕರಡು ಲೋಕಪಾಲ ಮಸೂದೆ ಬಹಳ ಮಹತ್ವದ ಒಂದು ಕಾಯ್ದೆಯಾಗಿದ್ದು ಅದನ್ನು ಒಂದು ಅಸಹಜ ಸಮಯದಲ್ಲಿ ಅತೀವ ಒತ್ತಡದಡಿ ಕಾಯಿದೆ ಮಾಡಲು ಸಾಧ್ಯವಿಲ್ಲ. ಅದರ ಎಲ್ಲ ಮುಖಗಳನ್ನೂ ಬಹಳ ಎಚ್ಚರಿಕೆಯಿಂದ ಚರ್ಚಿಸಬೇಕಾಗುತ್ತದೆ ಮತ್ತು ಸಮಾಜದ ಎಲ್ಲ ವರ್ಗಗಳ ಒಟ್ಟಭಿಪ್ರಾಯ ರೂಪಿಸಬೇಕಾಗುತ್ತದೆ. ದಲಿತರು ಈಗಾಗಲೇ ಅಂತಹ ಕಾಯ್ದೆಯಡಿ ತಮಗುಂಟಾಗಬಹುದಾದ ತೊಂದರೆಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಜಾತಿ ಭಾವನೆ ಮತ್ತು ಪೂರ್ವಾಗ್ರಹಗಳಿಂದ ತುಂಬಿದ ನಮ್ಮ ಸಮಾಜದಲ್ಲಿ ಈ ಅನೇಕ ಅಧಿಕಾರಗಳನ್ನು ಕೇಂದ್ರೀಕರಿಸಲ್ಪಟ್ಟಿರುವ ಕಾಯ್ದೆ ದುರುಪಯೋಗವಾಗಬಹುದು ಎಂಬ ಆತಂಕ ಅವರಿಗಿದೆ.

2004 ಮತ್ತು 2010ರ ಮಧ್ಯೆ ಪರಿಶಿಷ್ಟ ಜಾತಿಗಳ ಕಮೀಷನರ್ ಅವರಿಗೆ ಸರ್ಕಾರಿ ನೌಕರರು ಸಲ್ಲಿಸಿದ ಸುಮಾರು 11,469 ಫಿರ್ಯಾದುಗಳು ಜಾತಿ ಪೂರ್ವಾಗ್ರಹಗಳಿಗೆ ಸಂಬಂಧಿಸಿದವಾಗಿದ್ದುವು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಅತ್ಯಾಚಾರ ವಿರೋಧ) ಕಾಯಿದೆ 1989ರಡಿ ನೀಡಲಾದ ಅನೇಕ ಸಾವಿರ ಫಿರ್ಯಾದುಗಳು ಇನ್ನೂ ವಿಚಾರಣೆಯ ಹಂತದಲ್ಲಿವೆ. ಅವುಗಳಲ್ಲನೇಕ ಈ ಪಂಗಡದ ಜನರಿಗೆ ಸರ್ಕಾರಿ ಅಧಿಕಾರಿಗಳ ನ್ಯಾಯಯುತವಾದ ಅಧಿಕಾರವನ್ನು ಉಪಯೋಗಿಸಿ ಹಿಂಸೆ ನೀಡುವ ಅಥವಾ ತೊಂದರೆ ಕೊಡುವ ಉದ್ದೇಶದಿಂದ ಇತರರು ತಪ್ಪು ಮಾಹಿತಿ ನೀಡಿದ ಪ್ರಕರಣಗಳಿಗೆ ಸಂಬಂಧಿಸಿದುವಾಗಿವೆ. ಆದ್ದರಿಂದ ದಲಿತರು ಹೀಗೆ ದುರುದ್ದೇಶದಿಂದ, ಜಾತಿ ಪೂರ್ವಾಗ್ರಹಗಳಿಂದ ಈ ಕಾಯ್ದೆಯಡಿ ಬರುವ ಫಿರ್ಯಾದುಗಳಿಂದ ತಮಗೆ ರಕ್ಷಣೆ ಕೇಳುತ್ತಿದ್ದಾರೆ. ಸರ್ಕಾರ ಸರಿಯಾಗಿಯೇ ಈ ಕರಡು ಕಾಯ್ದೆಯನ್ನು ಮುಕ್ತ ಚರ್ಚೆಗಾಗಿ ಸ್ಥಾಯಿ ಸಮಿತಿಯ ಮುಂದೆ ತಂದಿದೆ. ಸ್ಥಾಯಿ ಸಮಿತಿ ಎಲ್ಲ ಪಕ್ಷಗಳ ಪಾರ್ಲಿಮೆಂಟಿನ ಸದಸ್ಯರನ್ನು ಹೊಂದಿದ್ದು ಈ ಕಾಯ್ದೆ ಯಾವ ಒತ್ತಡವೂ ಇಲ್ಲದೆ ಎಲ್ಲ ವರ್ಗಗಳ ಪ್ರತಿನಿಧಿಗಳಿಂದ ಚರ್ಚಿಸಲ್ಪಡುತ್ತದೆ.

ಸಾಮಾಜಿಕ ಬದಲಾವಣೆಯ ದಾರಿ ಬಹಳ ಕ್ಲಿಷ್ಟವಾದದ್ದು ಎಂದು ಹಜಾರೆಯವರಿಗೆ ಗೊತ್ತು. ಅವರು ಇದಕ್ಕೆ ಮುನ್ನ ದಲಿತರಿಗೆ ಅನೇಕ ವಿಧದಲ್ಲಿ ಸಹಾಯ ನೀಡಿದ್ದಾರೆ. ದಲಿತರು ಪಡೆದಿದ್ದ ಸಾಲಗಳನ್ನು ಹಳ್ಳಿಯ ಇತರರಿಂದ ವಂತಿಗೆ ಪಡೆದು ತೀರಿಸಿದ್ದಾರೆ. ಆದರೂ ಅವರು ಬೇರೆ ಬೇರೆ ಜಾತಿಗಳ ಮಧ್ಯೆ ಸಹೋದರತೆಯನ್ನು ಬೆಳೆಸಲು ಸಾಧ್ಯವಾಗಲಿಲ್ಲ. ಬೇರೆ ಬೇರೆ ಜಾತಿಗಳು ಪ್ರತ್ಯೇಕ ಭಾಗಗಳಲ್ಲಿಯೆ ಈಗಲೂ ವಾಸಿಸುತ್ತಿವೆ. ಲಂಚ ಅಸ್ಪೃಶ್ಯತೆಯಂತೆ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿದೆ. ಆದುದರಿಂದ ಶಿಕ್ಷಣ ಮತ್ತು ನೀತಿಯ ಪುನರುತ್ಥಾನ ಅದರ ನಿರ್ಮೂಲನೆಗೆ ಬೇಕಾಗುತ್ತದೆ.

(ಸೌಜನ್ಯ: ದಿ ಹಿಂದೂ) □

ರಕ್ತರಹಿತ ಕ್ಷಿಪ್ರ ಕ್ರಾಂತಿ!

(31ನೇ ಪುಟದಿಂದ)

ಆದರೆ ಅಣ್ಣಾ ರಾಜ್ ಠಾಕ್ರೆ ಅವರ 'ಮರಾಠಿ ಮನೂಸ್' ಹುಚ್ಚುತನವನ್ನು ಬೆಂಬಲಿಸುತ್ತಾರೆ, 2002ರಲ್ಲಿ ಮುಸ್ಲಿಮರ ನರಮೇಧಕ್ಕೆ ಕುಮ್ಮಕ್ಕಾಗಿದ್ದ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಅವರ 'ಅಭಿವೃದ್ಧಿ ಮಾದರಿ'ಯನ್ನು ಪ್ರಶಂಸಿಸುತ್ತಾರೆ. (ಈ ಬಗ್ಗೆ ಸಾರ್ವಜನಿಕ ಖಂಡನೆ ವ್ಯಕ್ತವಾದ ಬಳಿಕ ಅಣ್ಣಾ ತಮ್ಮ ಹೇಳಿಕೆಯನ್ನು ಮಾತ್ರ ಹಿಂಪಡೆದುಕೊಂಡರು, ಪ್ರಶಂಸೆಯನ್ನಲ್ಲ.)

ಈ ಎಲ್ಲ ನಾಟಕಗಳ ನಡುವೆ, ಗಂಭೀರವಾದ ಕೆಲವು ಪತ್ರಕರ್ತರು ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಆರ್‌ಎಸ್‌ಎಸ್‌ನೊಂದಿಗೆ ಅಣ್ಣಾ ಅವರ ಸಂಬಂಧ ಕುರಿತ ವರದಿ ಈಗ ನಮ್ಮ ಮುಂದಿದೆ. ಅಣ್ಣಾ ಅವರ ಸ್ವಂತ ಊರು ರಾಲೇಗಾಂವ್ ಸಿದ್ಧಿಯಲ್ಲಿ ಅಧ್ಯಯನ ನಡೆಸಿರುವ ಮುಕುಲ್ ಶರ್ಮ, ಅಲ್ಲಿ ಕಳೆದ 25 ವರ್ಷಗಳಿಂದ ಗ್ರಾಮ ಪಂಚಾಯಿತಿ ಅಥವಾ ಸಹಕಾರ ಸಂಘಗಳ ಚುನಾವಣೆ ನಡೆದೇ ಇಲ್ಲ ಎಂಬ ಮಾಹಿತಿಯನ್ನು ನೀಡಿದ್ದಾರೆ. 'ಹರಿಜನ'ರ ಬಗ್ಗೆ ಅಣ್ಣಾ ಅವರ ವಿಚಾರಧಾರೆ ನಮಗೆ ಗೊತ್ತೇ ಇದೆ: "ಪ್ರತಿಯೊಂದು ಗ್ರಾಮದಲ್ಲಿ ಓರ್ವ ಚಮ್ಮಾರ, ಓರ್ವ ಬಡಗಿ, ಓರ್ವ ಕುಂಬಾರ, ಮತ್ತಿತರ ಜಾತಿಯವರು ಇರಬೇಕೆಂಬುದು ಮಹಾತ್ಮ ಗಾಂಧಿ ಅವರ ನಿಲುವಾಗಿತ್ತು. ಎಲ್ಲ ಸಮುದಾಯದವರು ತಂತಮ್ಮ ಕಸುಬುಗಳನ್ನು ಮಾಡಬೇಕು, ಆ ಮೂಲಕ ಒಂದು ಗ್ರಾಮ ಸ್ವಾವಲಂಬಿಯಾಗಲು ಸಾಧ್ಯ. ರಾಲೇಗಾಂವ್ ಸಿದ್ಧಿಯಲ್ಲಿ ನಾವು ಪಾಲಿಸಿಕೊಂಡು ಬರುತ್ತಿರುವುದು ಇದನ್ನೇ."

'ಟೀಂ ಅಣ್ಣಾ'ದ ಬಹುತೇಕ ಸದಸ್ಯರು ಮೀಸಲಾತಿ ವಿರೋಧಿ ಚಳವಳಿಯಲ್ಲಿದ್ದವರು ಎಂದರೆ ಈಗ ಆಶ್ಚರ್ಯವೇನಾಗುವುದಿಲ್ಲ ಅಲ್ಲವೇ? ಅಣ್ಣಾ ಹಜಾರೆ ಅವರ 'ಎರಡನೆಯ ಸ್ವತಂತ್ರ ಚಳವಳಿ'ಯನ್ನು ನಿಭಾಯಿಸುತ್ತಿರುವ ಜನ ಕೋಕಾ-ಕೋಲಾ ಮತ್ತು ಲೇಹ್‌ಮನ್ ಸಹೋದರರರಿಂದ ಹಣಕಾಸಿನ ಅನುದಾನ ಪಡೆಯುತ್ತಿರುವ ಎನ್‌ಜಿಓಗಳನ್ನು ನಡೆಸುತ್ತಿರುವುದು ಸುಳ್ಳೇ? ಟೀಂ ಅಣ್ಣಾದ ಪ್ರಮುಖರಾದ ಅರವಿಂದ ಕೇಜ್ರಿವಾಲ್ ಮತ್ತು ಮನೀಷ್ ಸಿಸೋಡಿಯಾ ಅವರು ನಡೆಸುವ ಕಬೀರ್ ಎಂಬ ಸಂಸ್ಥೆಗೆ ಕಳೆದ ಮೂರು ವರ್ಷಗಳಲ್ಲಿ 4,00,000 ಯುಎಸ್ ಡಾಲರ್ ಹಣ ಹರಿದು ಬಂದಿದೆ. ಅಣ್ಣಾ ಅವರ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಹಣ ಒದಗಿಸಿರುವ ಹಲವಾರು ಸಂಸ್ಥೆಗಳು ಅಲ್ಯುಮಿನಿಯಂ ಕಾರ್ಖಾನೆಗಳನ್ನು ನಡೆಸುತ್ತಿವೆ, ಬಂದರುಗಳನ್ನು ನಿರ್ಮಿಸುತ್ತಿವೆ, ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸುತ್ತಿವೆ, ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿವೆ. ಬಹುತೇಕ ಸಂಸ್ಥೆಗಳು ಕೋಟ್ಯಾಂತರ ರೂ. ವಹಿವಾಟು ನಡೆಸುವ ಬೃಹತ್ ಉದ್ಯಮ ಸಂಸ್ಥೆಗಳನ್ನು ಹೊಂದಿರುವ ರಾಜಕಾರಣಿಗಳೊಂದಿಗೆ ನಂಟು ಇರಿಸಿಕೊಂಡಿವೆ. ಇವರಲ್ಲಿ ಕೆಲವರ ಮೇಲೆ ಭ್ರಷ್ಟಾಚಾರ ಮತ್ತಿತರ ಆರೋಪಗಳಿವೆ. ಇವರೆಲ್ಲರೂ ಯಾಕೆ ಅಣ್ಣಾ ಅವರ ಚಳವಳಿಯ ಮೇಲೆ ಇಷ್ಟು ಆಸಕ್ತಿ ತೋರಿಸುತ್ತಿದ್ದಾರೆ?

ಸರ್ಕಾರ ತನ್ನ ಸಾಂಪ್ರದಾಯಿಕ ಕರ್ತವ್ಯಗಳಿಂದ ದೂರ ಸರಿಯುತ್ತಾ, ಕಾರ್ಪೊರೇಟ್ ಸಂಸ್ಥೆಗಳು ಮತ್ತು ಎನ್‌ಜಿಓಗಳು ಸರ್ಕಾರ ನಿರ್ವಹಿಸಬೇಕಾದ ಕೆಲಸಗಳನ್ನು (ನೀರು ಸರಬರಾಜು, ವಿದ್ಯುಚ್ಛಕ್ತಿ, ಸಾರಿಗೆ, ದೂರ ಸಂಪರ್ಕ, ಗಣಿಗಾರಿಕೆ, ಆರೋಗ್ಯ, ಶಿಕ್ಷಣ) ತಮ್ಮ ಸುಪರ್ದಿಗೆ ತೆಗೆದುಕೊಳ್ಳುತ್ತಿರುವ ಸಂದರ್ಭದಲ್ಲಿ; ಕಾರ್ಪೊರೇಟ್ ಸಂಸ್ಥೆಗಳ ಮಾಲೀಕತ್ವದ ಮಾಧ್ಯಮ ಸಂಸ್ಥೆಗಳು ಭಯ ಹುಟ್ಟಿಸುವ ರೀತಿಯಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುತ್ತಿರುವ ಸಂದರ್ಭದಲ್ಲಿ; ಕಾರ್ಪೊರೇಟ್ ಸಂಸ್ಥೆಗಳು, ಮಾಧ್ಯಮ ಸಂಸ್ಥೆಗಳು, ಮತ್ತು ಎನ್‌ಜಿಓಗಳು ಕೂಡ ಲೋಕಪಾಲ್ ಮಸೂದೆಯ ವ್ಯಾಪ್ತಿಗೆ ಬರಲಿ ಎಂದು ಆಲೋಚಿಸುವುದು ಸಹಜ. ಆದರೆ ಪ್ರಸ್ತುತ ಮಸೂದೆ ಇವರೆಲ್ಲರನ್ನು ತನ್ನ ವ್ಯಾಪ್ತಿಯಿಂದ ಹೊರಗಿರಿಸಿದೆ.

ಇತರ ಎಲ್ಲರಿಗಿಂತ ಎತ್ತರದ ದನಿಯಲ್ಲಿ ಅರಚುವುದರ ಮೂಲಕ, ದುಷ್ಟ ರಾಜಕಾರಣಿಗಳು ಮತ್ತು ಭ್ರಷ್ಟ ಸರ್ಕಾರ ಎಂಬ ಭ್ರಮೆ ಹುಟ್ಟಿಸುವ ಆಂದೋಲನ ಸೃಷ್ಟಿಸುವುದರ ಮೂಲಕ, ಅತ್ಯಂತ ಜಾಣತನದಿಂದ ತಾವು ಮಾತ್ರ ಮಸೂದೆಯ ವ್ಯಾಪ್ತಿಯಿಂದ ಹೊರಗುಳಿದಿದ್ದಾರೆ ಇವರು. ಸರ್ಕಾರವನ್ನು ರಾಕ್ಷಸನಂತೆ ಬಿಂಬಿಸುವ ಮೂಲಕ ಮುಂಬರುವ ದಿನಗಳಲ್ಲಿ ಸರ್ಕಾರ ಸಾರ್ವಜನಿಕ ವಲಯದಿಂದ ಸಂಪೂರ್ಣವಾಗಿ ಹೊರಬರುವಂತೆ ಒತ್ತಡ ಹೇರಲು ಭೂಮಿಕೆ ಸಿದ್ಧಪಡಿಸುತ್ತಿದ್ದಾರೆ. ನಂತರ ಎರಡನೆಯ ಹಂತದ ಆರ್ಥಿಕ ಸುಧಾರಣೆಗೆ ಪಟ್ಟು ಹಿಡಿಯಬಹುದು-ಇದರಿಂದ ಇನ್ನೂ ಹೆಚ್ಚಿನ ಖಾಸಗೀಕರಣ, ಭಾರತದ ಮೂಲಭೂತ ಸೌಕರ್ಯ ಮತ್ತು ನೈಸರ್ಗಿಕ ಸಂಪತ್ತನ್ನು ಮುಕ್ತವಾಗಿ ಬಳಸಲು ಅಡೆತಡೆಗಳಿಲ್ಲದ ವಾತಾವರಣ ಸೃಷ್ಟಿಯಾಗುವುದರಲ್ಲಿ ಸಂಶಯವಿಲ್ಲ. ಕಾರ್ಪೊರೇಟ್ ಭ್ರಷ್ಟಾಚಾರ ಶಾಸನಬದ್ಧವಾಗುವ ದಿನ ಕೂಡ ದೂರವಿಲ್ಲ. ಅದಕ್ಕೆ ಲಾಬಿ ಶುಲ್ಕ ಎಂದೂ ಹೆಸರಿಡಬಹುದು.

ಕೇವಲ ಇಪ್ಪತ್ತು ರೂಪಾಯಿಯಲ್ಲಿ ದಿನವೊಂದನ್ನು ದೂಡುತ್ತಿರುವ ಸುಮಾರು 830 ಮಿಲಿಯನ್ ಜನರಿಗೆ ಈ ರೀತಿ ಕೆಲವು ಕಾಯ್ದೆಗಳನ್ನು ಬಲಪಡಿಸುವುದರಿಂದಾಗುವ ಪ್ರಯೋಜನವಾದರೂ ಏನು? ಮುಂಬರುವ ದಿನಗಳಲ್ಲಿ ಈ ದೇಶ ಆಂತರಿಕ ಕಲಹವನ್ನು ಎದುರಿಸುವಂತಾಗಬೇಕೆ?

ಶಾಸನ ಸಭೆಗಳಲ್ಲಿ ಅಪರಾಧಿಗಳು ಅಥವಾ ಶ್ರೀಮಂತ ಜನಪ್ರತಿನಿಧಿಗಳನ್ನು ಹೊಂದಿರುವ ಭಾರತದ ಪ್ರಜಾತಂತ್ರ ವ್ಯವಸ್ಥೆಯ ವೈಫಲ್ಯದಿಂದಾಗಿ ಈ ಸಂಕಷ್ಟ ಹುಟ್ಟಿಕೊಂಡಿದೆ. ಈ ಪ್ರಜಾತಂತ್ರ ವ್ಯವಸ್ಥೆಯ ಒಂದು ಸಂಸ್ಥೆ ಕೂಡ ಸಾಮಾನ್ಯ ಜನರ ಕೈಗೆಟುಕುವುದಿಲ್ಲ. ರಾಷ್ಟ್ರಧ್ವಜವನ್ನು ಹೊತ್ತವರನ್ನು ಕಂಡು ಮೋಸ ಹೋಗಬೇಡಿ. ಆಫ್ಘಾನಿಸ್ಥಾನದ ಬುಡಕಟ್ಟು ನಾಯಕರು ಮಾಡುತ್ತಿರುವ ಯುದ್ಧದಷ್ಟೇ ಭೀಕರವಾಗಿರುವ ಈ 'ಎರಡನೆಯ ಸ್ವತಂತ್ರ ಹೋರಾಟ' ಸಂವಿಧಾನಬದ್ಧ ಸರ್ಕಾರದ ತಲೆಯ ಮೇಲೆ ಕೂರಲು ಸಜ್ಜಾಗಿರುವ ವ್ಯವಸ್ಥೆಯನ್ನು ಭಾರತದಲ್ಲಿ ಸೃಷ್ಟಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ಕಣ್ಣಿಗೆ ಕಾಣುತ್ತಿರುವುದಕ್ಕಿಂತ ಹೆಚ್ಚು ಅಪಾಯ ಇದರಲ್ಲಿದೆ.

(ಸೌಜನ್ಯ: ದಿ ಹಿಂದೂ) □

ಪ್ರಜಾ ಸತ್ತೆ ಮೇಲಿನ ಸವಾರಿಯೇ?

(27ನೇ ಪುಟದಿಂದ)

ವಂತಹ ಷರತ್ತುಗಳನ್ನು ಅವರ ಉಪವಾಸ ಸತ್ಯಾಗ್ರಹದ ರೀತಿ ನೀತಿಗಳ ಮೇಲೆ ಹಾಕಲು ಯತ್ನಿಸಿದೆ! ಈ ಪ್ರಯತ್ನದಲ್ಲಿ ಸೋತಾಗ, ಅದರ ಇಡೀ ಜವಾಬ್ದಾರಿಯನ್ನು ಪೊಲೀಸ್ ವ್ಯವಸ್ಥೆಯ ಮೇಲೆ ಹಾಕಿ, ಮತ್ತಷ್ಟು ನಗೆ ಪಾಟಲಿಗೆ ಈಡಾಗುತ್ತಿದೆ.

ಇದರ ಪರಿಣಾಮವೆಂದರೆ, ಅಣ್ಣಾ ತಂಡ, ಮತ್ತವರ ಬೆಂಬಲಿಗ ಗುಂಪಿಗೆ ಮತ್ತಷ್ಟು ಬಲ ಬಂದಂತಾಗಿದೆ. ವಿರೋಧ ಪಕ್ಷಗಳೂ ಈ ಸಂದರ್ಭವನ್ನು ಬಳಸಿಕೊಂಡು ಸರ್ಕಾರದ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟಿವೆ. ಸುವ್ಯವಸ್ಥಿತ ಸಂಘಟನೆಯ ಬಲ ಹೊಂದಿರುವ ಬಿಜೆಪಿಯಂತಹ ಪಕ್ಷ ತನ್ನೆಲ್ಲ ಪರಿವಾರದ ಮಾನವ ಸಂಪನ್ಮೂಲಗಳನ್ನು, ಸಂಘಟನಾ ಜಾಣ್ಮೆಯನ್ನು ಅಣ್ಣಾ ಆಂದೋಲನದ ಹಿಂದೆ ನಿಯೋಜಿಸತೊಡಗಿದೆ. ಜೊತೆಗೆ ಶಂಖ ಊದುವ ಮತ್ತು ಜಾಗಟೆ ಬಾರಿಸುವವರ ದಂಡೂ ಅಲ್ಲಿ ಸೇರತೊಡಗಿದೆ. ಈ ಮಧ್ಯೆ ನಮ್ಮ ಯಡಿಯೂರಪ್ಪನವರೂ ಅಣ್ಣಾಗೆ ಬೆಂಬಲವಾಗಿ ಧರಣಿ ಬೇರೆ ಕೂರಲಿದ್ದಾರಂತೆ! ಇದೆಲ್ಲದಕ್ಕೆ ಕಿರೀಟವಿಟ್ಟಂತೆ ಬಾಬಾ ರಾಂದೇವ್ ಮತ್ತು ರವಿಶಂಕರ್ ಗುರೂಜಿ ಬೇರೆ ಆಶೀರ್ವಚನ ನೀಡಲು ಧಾವಿಸಿ ಬಂದಿದ್ದಾರೆ. ಇದನ್ನೆಲ್ಲ ನೋಡಿ ಗಾಬರಿಯಾಗತೊಡಗಿರುವ ಇತರ ಪಕ್ಷಗಳು ಅಣ್ಣಾ ಆಂದೋಲನ ಕುರಿತಂತೆ ಸ್ಪಷ್ಟ ನಿಲುವು ತಳೆಯಲಾಗದೆ ಗೊಂದಲಗೊಂಡಿವೆ. ಈ ಗೊಂದಲದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನವೇ ತನ್ನ ದೃಷ್ಟಿಕೇಂದ್ರವನ್ನು ಕಳೆದುಕೊಂಡರೆ ಆಶ್ಚರ್ಯವಿಲ್ಲ!

ಏಕೆಂದರೆ ಉನ್ಮತ್ತ ಬೆಂಬಲಿಗರಿಂದ ಅಣ್ಣಾ ಅವರನ್ನು ಜೆಪಿಗೆ ಹೋಲಿಸುವ, ಅವರ ಆಂದೋಲನವನ್ನು ಎರಡನೇ ಸ್ವಾತಂತ್ರ್ಯ ಹೋರಾಟವೆಂದು ಕರೆಯುವ ರಾಜಕಾರಣ ಆರಂಭವಾಗಿದೆ. ಇದು ರಾಜಕಾರಣ ಏಕೆಂದರೆ, ಹಾಗೆಂದು ಕರೆಯುವವರಿಗೆ ಜೆಪಿಯವರ ಅಥವಾ ಸ್ವಾತಂತ್ರ್ಯ ಆಂದೋಲನದ ಪ್ರಾಥಮಿಕ ಪರಿಚಯವೂ ಇರಲು ಸಾಧ್ಯವಿಲ್ಲ! ಜೆಪಿ ಕಳೆದ ಎಪ್ಪತ್ತರ ದಶಕದ ಆರಂಭದಲ್ಲಿ ಇಂದಿರಾ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ವ್ಯಕ್ತವಾಗತೊಡಗಿದ ಅಶಾಂತಿಗೆ ಧ್ವನಿ ನೀಡಲಾರಂಭಿಸಿದರಾದರೂ, ಅದಕ್ಕೊಂದು ಕಾರ್ಯಾಚರಣೆಯ ರೂಪು ನೀಡಬೇಕಾಗಿ ಬಂದಾಗ, 'ಸಂಪೂರ್ಣ ಕ್ರಾಂತಿ'ಯ ಪರಿಕಲ್ಪನೆಯನ್ನು ಜನತೆಯ ಮುಂದಿಟ್ಟರು. ಇದರ ಹಿಂದೆ ಗಾಂಧೀಜಿಯ ನೆಚ್ಚಿನ ಶಿಷ್ಯರಲ್ಲೊಬ್ಬರಾಗಿ ಕಲಿತ ರಾಜಕೀಯ ಪಾಠಗಳು, ಸಮಾಜವಾದಿ ಆಂದೋಲನದ ನಾಯಕರಾಗಿ ಕಲಿತ ತಾತ್ವಿಕ ವಿವೇಚನೆಯ ಕೌಶಲ್ಯಗಳು ಇದ್ದವು. ಹಾಗಾಗಿಯೇ ಅವರಿಗೆ ಭ್ರಷ್ಟಾಚಾರವೆಂಬುದು ಕೇವಲ ಒಂದು ರೋಗಲಕ್ಷಣವೇ ಹೊರತು ಅದೇ ರೋಗವಲ್ಲ ಎಂಬ ಒಳನೋಟ ಸಾಧ್ಯವಾಯಿತು. ಅ ತಿಳುವಳಿಕೆಯೊಂದಿಗೆ ಅವರು ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ರಾಷ್ಟ್ರ ಪುನರ್ನಿರ್ಮಾಣದ ಆಂದೋಲನವಾಗಿ ಪರಿವರ್ತಿಸಿದರು.

ಆದರೆ ಅಣ್ಣಾ ಭ್ರಷ್ಟಾಚಾರ ವಿರೋಧೀ ಆಂದೋಲನವನ್ನು ಕೇವಲ ಲೋಕಪಾಲ ಮಸೂದೆಯ ಆಂದೋಲನವನ್ನಾಗಿ ಮಾತ್ರ ಸೀಮಿತಗೊಳಿಸಿ ಬೆಳೆಸುತ್ತಿರುವ ರೀತಿ ನೋಡಿದರೆ, ರಾಷ್ಟ್ರಮಟ್ಟದ ಆಂದೋಲನವೊಂದನ್ನು ನಿರ್ವಹಿಸಬಲ್ಲ ಪ್ರಬುದ್ಧತೆ ಮತ್ತು ಕುಶಲತೆ ಇವರಿಗಿದೆಯೇ ಎಂಬ ಅನುಮಾನವಂತೂ ಉಂಟಾಗುತ್ತದೆ. ಅವರು ಗುಜರಾತ್‌ನ ಮೋದಿ ಸರ್ಕಾರದ ಬಗ್ಗೆ, ಅದೊಂದು ಭ್ರಷ್ಟಾಚಾರ ರಹಿತ ಮಾದರಿ ಸರ್ಕಾರವೆಂಬಂತೆ ಮೆಚ್ಚುಗೆ ವ್ಯಕ್ತಪಡಿಸಿದಾಗ ಭ್ರಷ್ಟಾಚಾರ ಕುರಿತ ಇವರ ಕಲ್ಪನೆ ಎಷ್ಟು ಮುಗ್ಧವಾದದ್ದು, ಸೀಮಿತವಾದದ್ದು ಎಂಬುದರ ಸುಳಿವು ಸಿಕ್ಕಿತಾದರೂ, ಇಂದಿನ ದಿನಗಳಲ್ಲಿ ಅಪರೂಪವೆನಿಸುವ ಅವರ ಸರಳತೆ, ಶ್ರದ್ಧೆ, ಹೋರಾಟದ ಮನೋಭಾವ ಅವರಲ್ಲಿ ಜನತೆಗೆ ನಂಬಿಕೆ ಹುಟ್ಟಿಸಿದವು. ಆದರೆ ಅವರನ್ನು ಗಾಂಧೀವಾದಿಯೆಂದು ಮಾಧ್ಯಮಗಳು ಬಿಂಬಿಸುತ್ತಿರುವುದು ಮಾತ್ರ ಅವುಗಳ ಅಜ್ಞಾನದ ಪರಮಾವಧಿ ಎಂದೇ ಹೇಳಬೇಕು. ಮಾಜಿ ಯೋಧರಾದ ಅವರು ವಿವೇಕಾನಂದರ ಸಾಹಿತ್ಯ ಮತ್ತು ಭಗತ್ ಸಿಂಗ್-ಸುಖದೇವ್‌ರ ತ್ಯಾಗ ಬಲಿದಾನಗಳ ಕಥೆಗಳಿಂದ ಸ್ಫೂರ್ತಿ ಪಡೆದು ಸಮಾಜ ಸುಧಾರಣೆಯ ಮೂಲಕ ತಮ್ಮದೇ ಮಿತಿಗಳಲ್ಲಿ ನವ ಭಾರತ ಕಟ್ಟಹೊರಟವರು.

ಈವರೆಗೂ ಅವರ ಕಾರ್ಯಕ್ಷೇತ್ರ ಅವರ ಹಳ್ಳಿ ರಾಲೇಗಾಂವ್‌ನ ಪುನರ್ನಿರ್ಮಾಣಕ್ಕೆ ಮತ್ತು ಸ್ವಲ್ಪ ಮಟ್ಟಿಗೆ ಅದರ ವಿಸ್ತರಣೆಯಾಗಿ, ಮಹಾರಾಷ್ಟ್ರದ ರಾಜಕಾರಣದ ಸ್ವಚ್ಛೀಕರಣಕ್ಕೆ ಸೀಮಿತವಾಗಿತ್ತು. ಅವರು ತಮಗೆ ರಾಷ್ಟ್ರೀಯ ಖ್ಯಾತಿ ತಂದುಕೊಟ್ಟಿರುವ ತಮ್ಮ ಹಳ್ಳಿಯ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಪುನಾರಚನೆಗೆ, ಜನರ ಮನಃಪರಿವರ್ತನೆಗೆ ಹಿಂಸೆಯನ್ನೂ ಬಳಸುತ್ತಾರೆ. ಆದರೆ ಕೊನೆಯ ಅಸ್ತ್ರವಾಗಿ! ಇದನ್ನು ಅಲ್ಲಿಲ್ಲಿ ಓದಿ ಕೇಳಿದ್ದ ನಾನು, ಕೆಲವು ವರ್ಷಗಳ ಹಿಂದೆ ಅಣ್ಣಾ ಹಜಾರೆಯವರು ನಾನಿದ್ದ ಚಿತ್ರದುರ್ಗಕ್ಕೆ ಮುರುಘಾ ಮಠ ನೀಡಿದ ಬಸವಶ್ರೀ ಪ್ರಶಸ್ತಿ ಪಡೆಯಲು ಬಂದಾಗ(ಈ ಪ್ರಶಸ್ತಿಗೆ ಅವರ ಹೆಸರನ್ನು ಸೂಚಿಸಿದವರಲ್ಲಿ ನಾನೂ ಒಬ್ಬನಾಗಿದ್ದುದರಿಂದ, ಮಠದಲ್ಲಿದ್ದ ನನ್ನ ಕೆಲವು ಗೆಳೆಯರು ಅವರನ್ನು ಅಸ್ವಸ್ಥನಾಗಿದ್ದ ನನ್ನನ್ನು ಭೇಟಿ ಮಾಡಿಸಲು ನಮ್ಮ ಮನೆಗೆ ಕರೆತಂದಿದ್ದರು) ಅವರನ್ನು ಕೇಳಿಯೇ ಖಚಿತಪಡಿಸಿಕೊಂಡೆ. ಹಾಗಾಗಿ ಅವರನ್ನು ಗಾಂಧೀವಾದಿಯೆಂದು ಗುರುತಿಸುವುದು ಅಪದ್ಧವಾದೀತು! ಬಹುಶಃ ಅವರು ಮಹಾರಾಷ್ಟ್ರದ ಸಾಮಾನ್ಯ ರೈತನಂತೆ ಖಾದಿ ವಸ್ತ್ರ ಮತ್ತು ಟೋಪಿಧಾರಿಯಾಗಿರುವುದರಿಂದ ಅವರನ್ನು ಇತರರು ಗಾಂಧಿವಾದಿಯೆಂದು ಗುರುತಿಸುತ್ತಿರಬಹುದು!.

ಆದರೀಗ ಅವರ ಆಂದೋಲನ ಅವರನ್ನು ಅನಿವಾರ್ಯವಾಗಿ ಗಾಂಧೀವಾದಿಯನ್ನಾಗಿ ಮಾಡುತ್ತಿರುವಂತೆ ತೋರುತ್ತಿದೆ! ಏಕೆಂದರೆ ಈಗವರು ನಿರ್ವಹಿಸಬೇಕಾದದ್ದು ತಮ್ಮ ಹಳ್ಳಿ ಸಮಸ್ಯೆಯನ್ನಲ್ಲ. ಹಾಗಾಗಿ ಅವರು ತತ್ವಶಃ ಮತ್ತು ವ್ಯಕ್ತಿಶಃ ಗಾಂಧೀವಾದಿಯಾಗದೆ, ತಮ್ಮ ಸೀಮಿತ ಸಂಪನ್ಮೂಲಗಳ ಮೂಲಕ ಬೃಹತ್ ಜನಸ್ತೋಮವನ್ನಾಗಲೀ, ಬೃಹತ್ ವ್ಯವಸ್ಥೆಯನ್ನಾಗಲೀ ನಿರ್ವಹಿಸಲಾಗುವುದಿಲ್ಲ. ಹಾಗಾಗಿಯೇ ಅವರು ಮೊನ್ನೆ ಅಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸುವ ಮುನ್ನ ರಾಜಘಾಟ್‌ನಲ್ಲಿ ವಿಶಾಲವಾಗಿ ಬಿಳಿ ವಸ್ತ್ರ ಹಾಸಿ, ಅದರ ಮಧ್ಯೆ ಮಾಧ್ಯಮಗಳಿಗಾಗಿ ಸುಂದರ ಚಿತ್ರಕ್ಕಾಗಿ ಕೂತಂತೆ ಧ್ಯಾನಕ್ಕೆ ಕೂತು ಜನರ ಗಮನ ಸೆಳೆದು ತಮ್ಮ ಆಂದೋಲನಕ್ಕೊಂದು ಹೊಸ ಅಧ್ಯಾತ್ಮಿಕ ಪ್ರಭೆಯೊಂದನ್ನು ಗಳಿಸಿಕೊಳ್ಳಲು ಯತ್ನಿಸಿದ್ದಾರೆ. (ಹಿಂದೊಮ್ಮೆ ವಿ.ಪಿ.ಸಿಂಗ್ ಅವರಿಗೂ, ಅವರ ಅಭಿಮಾನಿಗಳು ಮತ್ತು ಮಾಧ್ಯಮದವರೂ ಸೇರಿ ಗಾಂಧಿ ವೇಷ ಹಾಕಿಸಿ ಕೂರಿಸಿ ಚಿತ್ರ ತೆಗೆದು ಎಲ್ಲ ಕಡೆ ಪ್ರಚಾರ ಮಾಡಿದ್ದರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು!) ಅವರು ಇದನ್ನು ಯಾವ ತಾತ್ವಿಕ ಸಿದ್ಧತೆಯೊಂದಿಗೆ ಎಷ್ಟು ಮನಃ ಪೂರ್ವಕವಾಗಿ ಮಾಡಿದರೆಂಬುದು ಮುಂದಿನ ದಿನಗಳ ಅವರ ನಡೆಗಳು ಹೇಳಲಿವೆ. ಏಕೆಂದರೆ ಅವರು ಕೆಲವೇ ದಿನಗಳ ಹಿಂದೆ ಬೆಂಗಳೂರಿನ ಸಭೆಯೊಂದರಲ್ಲಿ ಆಡಿದ ಸ್ವಯಂ ಪ್ರಶಂಸೆಯ ಮಾತುಗಳು ಅವರು ನಿಜವಾಗಿ ಭಾರತದ ಜನಸಾಮಾನ್ಯರ ಹೃದಯದಲ್ಲಿ ಸ್ಥಾನ ಪಡೆಯಲು ಅವರಿನ್ನೂ ಬಹಳ ದೂರ ಕ್ರಮಿಸಬೇಕಿದೆ ಎಂಬುದನ್ನು ಸೂಚಿಸುವಂತಿದ್ದವು.

ಅದೇನೇ ಇರಲಿ, ಅವರು ತಮ್ಮ ಅಭಿಮಾನಿಗಳ ಉತ್ಪ್ರೇಕ್ಷೆಯ ಮಾತುಗಳಿಂದ ತಮ್ಮ ನಿಜ ಗಾತ್ರವನ್ನು ಮೀರಿ ಊದುತ್ತಾ ಹೋಗಿ ಒಂದು ದಿನ ತಮ್ಮ ಶಕ್ತಿಗೆ ಮೀರಿದ ಸಾಹಸಕ್ಕೆ ಕೈಹಾಕಿ ಅಪ್ರಸ್ತುತವಾಗಿ ಹೋಗಿಬಿಡುವರೋ (ಇತ್ತೀಚೆಗೆ ಅವರ ಬೆಂಬಲಿಗರು ಜನರಾಶಿ ನೋಡಿ ಉನ್ಮತ್ತರಾದಂತೆ, ಅಣ್ಣಾರನ್ನು ದೈವತ್ವಕ್ಕೆ ಏರಿಸುವ ಪ್ರಯತ್ನದಂತೆ ಕಾಣುವ ಷರತ್ತುಗಳನ್ನು ಸರ್ಕಾರಕ್ಕೆ ಹಾಕುತ್ತಾ ಆಂದೋಲನದ ಪ್ರಜಾಸತ್ತಾತ್ಮಕ ಸ್ವರೂಪಕ್ಕೇ ಧಕ್ಕೆ ತರುವ ಮೂಲಕ ಈ ಪ್ರಕ್ರಿಯೆಯನ್ನು ಆರಂಭಿಸಿದಂತಿದೆ!) ಅಥವಾ ಗಾಂಧಿಯ ನಿಜ ಪ್ರಭಾವದಿಂದ ಒಳಗೇ ಬೆಳೆಯುತ್ತಾ ಹೋಗಿ ಸದ್ಯದ ಮಾಧ್ಯಮ ಬಿಂಬವನ್ನು ಮೀರಿ ನಿಜವಾದ ಜನ ನಾಯಕರಾಗುವರೋ ಎಂಬುದು ಸದ್ಯದ ಸಂದರ್ಭ ಹುಟ್ಟಿಸಿರುವ ಮಹತ್ವದ ಪ್ರಶ್ನೆ. ಅದಕ್ಕೆ ಉತ್ತರ, ಅವರು ಭ್ರಷ್ಟಾಚಾರ ವಿರೋಧೀ ಆಂದೋಲನವನ್ನು, ಈ ರಾಕ್ಷಸ ಭ್ರಷ್ಟಾಚಾರದ ಬೇರುಗಳು ಇಂದಿನ ಯಾವ ಅಮಾನವೀಯ ಮತ್ತು ಅನಾಗರಿಕ ಅಭಿವೃದ್ಧಿ ರಾಜಕಾರಣದ ಆಳಗಳಲ್ಲಿ ಹರಡಿಕೊಂಡಿವೆಯೋ ಆ ಅಭಿವೃದ್ಧಿ ರಾಜಕಾರಣದ ವಿರುದ್ಧದ ಆಂದೋಲನವನ್ನಾಗಿ ವಿಸ್ತರಿಸುವ ಅಗತ್ಯವನ್ನು ಮನಗಾಣ ಬಲ್ಲಷ್ಟು ಬೆಳೆಯಬಲ್ಲರೇ ಎಂಬುದನ್ನು ಅವಲಂಬಿಸಿದೆ. ಆಗ ಅವರ ಆಂದೋಲನ ಭ್ರಷ್ಟಾಚಾರದ ಬಹುಬಾಹುಗಳನ್ನು ಗುರುತಿಸಿ ಒಂದು ದೊಡ್ಡ ಮತ್ತು ಸಮಗ್ರ ರಾಜಕೀಯ ಆಂದೋಲನವಾಗಿ ಬೆಳೆದು ತನ್ನ ಸಾರ್ಥಕತೆಯ ನಿಜವಾದ ಅಗ್ನಿ ಪರೀಕ್ಷೆಯನ್ನು ಎದುರಿಸಲು ಸಿದ್ಧವಾಗುತ್ತದೆ. □

ಹಜಾರೆರವರೊಡನೆ ನಾಗಭೂಷಣ್ ದಂಪತಿಗಳು

ಸಾಧನೆಗೆ ಅಂಗವಿಕಲತೆ ಸಮಸ್ಯೆಯೇ ಅಲ್ಲ...

ಅಂಗವಿಕಲರಲ್ಲಿ ಹುದುಗಿರುವ ಪ್ರತಿಭೆಯು ಬೆಳಕಿಗೆ ಬರುವಂತಾಗಲು
ಸರ್ಕಾರ ಅವರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ.

ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು:

* ಶಿಕ್ಷಣ
* ಉದ್ಯೋಗ ಮತ್ತು ತರಬೇತಿ
* ಪುನರ್ವಸತಿ
* ಸಾಮಾಜಿಕ ಭದ್ರತೆ
* ವಿದ್ಯಾರ್ಥಿ ವೇತನ
* ಶ್ರವ್ಯ ಗ್ರಂಥಾಲಯ ಸ್ಥಾಪನೆ
* ಸ್ವಯಂ ಉದ್ಯೋಗ
* ದೂರವಾಣಿ ಬೂತ್ ಸೌಲಭ್ಯ
* ಸಾಲ ಸೌಲಭ್ಯ
* ವಿಮಾ ಯೋಜನೆ
* ಮಾಸಿಕ ನಿರ್ವಹಣೆ ಭತ್ಯೆ (ರೂ. ೪೦೦/-)
* ಉದ್ಯೋಗದಲ್ಲಿ ಶೇಕಡ ೩ರಷ್ಟು ಮೀಸಲು
* ವಿಶೇಷ ವಾಹನ
* ರಿಯಾಯಿತಿ ಬಸ್ ಪಾಸ್
* ಅಂಗವಿಕಲರಿಗಾಗಿ ಶಾಲೆಗಳು

ಉದಾಸೀನತೆ ಬಿಡಿ – ಉತ್ತೇಜನ ನೀಡಿ

ಕರ್ನಾಟಕ ವಾರ್ತೆ
Karnataka Information

ಕೂಗು ಮಾರಿಯ ಮನಸ್ಸು

ಕರುಳೊಳಗಿಂದ ಪ್ರವಹಿಸಿ ದಮನಿಯೊಳಗೆ
ಹೆಪುಗಟ್ಟಿದ್ದ ನನ್ನದೆಂಬ ಹಂದರಕ್ಕೆ
ಹೂಗುಚ್ಛ ನೀನಾಗಬೇಕೆಂದು
ಶಬರಿಯಂತೆ ಕಾದಿದ್ದವಳು

ನಿನ್ನ ಪೂರ್ವಜರಿಗೆ ಸಿದ್ಧಾರ್ಥ ಬೋಧಿಸಿದ್ದ
ಕರುಣೆ, ಪ್ರೀತಿ, ಸಮಾನತೆಯೆಂಬ ಆಗರದಲ್ಲಿ
ಈಜಾಡಿದವಳಲ್ಲ.

ಆದುದರಿಂದ
ಮಡಿದವರ ಮಗ್ಗುಲಲ್ಲಿ ಮತ್ತಷ್ಟು ಬಗ್ಗರಿಗಳ
ರಾಶಿ ಬಿದ್ದರೂ
ಮರುಕದ ದನಿ ದಮನಿಯೊಳಗೆ ಗುನುಗುತ್ತಿಲ್ಲ
ಏಕೆಂದರೆ, ನಾ ಕೊಳ್ಳುವ ಸರಕುಗಳಲಿ
ಅದರ ಸೊಗಡಿರುತ್ತಿರಲಿಲ್ಲ.

ನಿನ್ನನ್ನು ಅಪ್ಪಿ ಮುದ್ದಾಡಿದವರೆಲ್ಲರೂ
ಚೀರದೆ ಬಾನಿಗಟ್ಟಲೆ ಉಪ್ಪಿನ ಹನಿಗಳನ್ನು
ಸುರಿಸಿ ಬಗ್ಗರಿಗಳನ್ನು ಕೊಳೆಸಿದರೂ
ನನ್ನ ಕೂಗು ಮಾರಿಯ
ಮನಸ್ಸಂತು ಸಿದ್ಧಾರ್ಥನಿಗೆ ಶರಣೆನ್ನದು.



○ ದಾಸನೂರು ಕೂಸಣ್ಣ

ಒಪ್ಪಿಗೆ ವಯಸ್ಸಿನ ಗೊಂದಲ

(15ನೇ ಪುಟದಿಂದ)

ಬಾಲಗಂಗಾಧರ ತಿಲಕರೂ ಸೇರಿದಂತೆ ಮುಖ್ಯವಾಹಿನಿಯ ಹಲವು ನಾಯಕರು ವಿರೋಧಿಸಿದರು.

ನಿಜವಾಗಿ ಒಪ್ಪಿಗೆ ವಯಸ್ಸಿನ ಚರ್ಚೆ ಶುರುವಾಗಿದ್ದು 1889ರಲ್ಲಿ 11 ವರ್ಷದ ಫೂಲಮ್ನಿ ಎಂಬ ಬಂಗಾಳಿ ಹುಡುಗಿ ಮದುವೆಯಾಗಿ 35 ವರ್ಷದ ತನ್ನ ಗಂಡ ಹರಿಮೋಹನ ಮೈತಿಯ ಜೊತೆ ದೈಹಿಕ ಸಂಪರ್ಕದ ಸಮಯದಲ್ಲಿ ತೀವ್ರ ರಕ್ತಸ್ರಾವವಾಗಿ ತೀರಿಕೊಂಡಾಗ. ಎಳೆಯ ಹುಡುಗಿಯ ದಾರುಣ ಸಾವು ಒಪ್ಪಿಗೆ ವಯಸ್ಸನ್ನು 10ರಿಂದ 12ಕ್ಕೇರಿಸುವಂತೆ ಮಾಡಿತು. ಎಂದರೆ 12 ವರ್ಷದ ಒಳಗೆ ಗಂಡನೇ ಆದರೂ ಹುಡುಗಿಯ ಜೊತೆ ಲೈಂಗಿಕ ಸಂಪರ್ಕ ಹೊಂದಿದಲ್ಲಿ ಅದು ಅತ್ಯಾಚಾರ ಎಂದು ಪರಿಗಣಿತವಾಯಿತು. ಇದಾದ ನಂತರ ಒಪ್ಪಿಗೆ ವಯಸ್ಸಿನ ಮೊದಲೇ 'ಓಡಿಹೋದ' ಜೋಡಿಗಳಲ್ಲಿ ಗಂಡನ್ನು 'ಅಪಹರಣ'ದ ತಪ್ಪಿಗೆ ಶಿಕ್ಷೆಗೊಳಪಡಿಸಿದರೆ, ಓಡಿಹೋದ ಹುಡುಗಿಗೆ ಅಪಹರಣಕ್ಕೆ ಕುಮ್ಮಕ್ಕು ಕೊಟ್ಟಳೆಂಬ ಕಾರಣಕ್ಕೆ ಶಿಕ್ಷಿಸುವುದು ಮುಂದುವರೆಯಿತು.

ಅಂದಿನ ಸಾಮಾಜಿಕ ಸುಧಾರಣಾಕಾರರು ಮಹಿಳೆ ಸಮಾಜ ಕಟ್ಟುವಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಬಯಸಿ ಶಿಕ್ಷಣ, ವಿಧವಾ ಪದ್ಧತಿ ರದ್ಧತಿ ಇತ್ಯಾದಿಗಳ ಸಲುವಾಗಿ ಶ್ರಮಿಸಿದರೂ, ಸ್ವತಂತ್ರಪೂರ್ವದಲ್ಲಿ ಜ್ಯೋತಿ ಬಾಫುಲೆ ಹಾಗೂ ಸ್ವಾತಂತ್ರ್ಯ ನಂತರ ಅಂಬೇಡ್ಕರರನ್ನು ಹೊರತುಪಡಿಸಿ ಮಹಿಳಾ ಚಳವಳಿ ಜಾತಿ ಪ್ರಶ್ನೆಯನ್ನು ದೂರವೇ ಇಟ್ಟಿತು. ಜಾತಿಪದ್ಧತಿಯೆನ್ನುವುದು ಅಖಂಡ ವ್ಯವಸ್ಥೆ. ವ್ಯಕ್ತಿಗತ ಸುಧಾರಣೆಗಾಗಿ ಕಾನೂನು ಬಂದರೂ ಒಳವಿವಾಹ, ಜಾತಿ ಆಚರಣೆಗಳು ಮುಂದುವರೆದಂತೆ ವರದಕ್ಷಿಣೆ, ಬಾಲ್ಯವಿವಾಹಗಳೂ ಅದರ ಇನ್ನೊಂದು ಭಾಗವಾಗಿ ಮುಂದುವರೆಯಿತು.

ಈ ಒಪ್ಪಿಗೆ ವಯಸ್ಸಿನ ವಿವಾದ ಇಂದಿಗೂ ನಿಂತಿಲ್ಲ. 'ಪೆನೆಟ್ರೇಟಿವ್' ಅಲ್ಲದ ಲೈಂಗಿಕ ಸಂಪರ್ಕಕ್ಕೆ ಒಪ್ಪಿಗೆ ವಯಸ್ಸು 12 ವರ್ಷ (ವಿವಾಹದ ಹೊರತಾಗಿ) ಎಂದು ನಿಗದಿ ಮಾಡಿದ ಕಾಯ್ದೆಯೊಂದು ಇದೇ ವರ್ಷದ ಫೆಬ್ರುವರಿ ತಿಂಗಳಿನಲ್ಲಿ ಸಂಸತ್ತಿನ ಮುಂದೆ ಚರ್ಚೆಗೆ ಬಂದಾಗ ತೀವ್ರ ವಿವಾದಗಳೆದ್ದಿದ್ದನ್ನು ಇಲ್ಲಿ ನೆನೆಯಬಹುದು. ಈಗಲೂ ವ್ಯಾಟಿಕನ್ ನಗರ ರಾಷ್ಟ್ರದಲ್ಲಿ ಒಪ್ಪಿಗೆ ವಯಸ್ಸು 12 ಅಂತೆ! ಇದು ಸ್ಪೇನ್‌ನಲ್ಲಿ 13, ಅಮೆರಿಕದಲ್ಲಿ 16, ಮಡಗಾಸ್ಕರ್‌ನಲ್ಲಿ 20 ವರ್ಷ! ಬಹುಪಾಲು ಇಸ್ಲಾಮಿಕ್ ದೇಶಗಳು ವಿವಾಹಬಾಹಿರ ಲೈಂಗಿಕತೆಗೆ ಅವಕಾಶವಿಲ್ಲವೆಂದು ಒಪ್ಪಿಗೆ ವಯಸ್ಸಿನ ಬಗ್ಗೆ ಮಾತಾಡುವುದಿಲ್ಲ. ಎಷ್ಟೇ ವಯಸ್ಸಾದರೂ ವಿವಾಹಕ್ಕೆ ಅನುಮತಿ ಸಿಕ್ಕರೆ ಲೈಂಗಿಕ ಸಂಪರ್ಕಕ್ಕೂ ಒಪ್ಪಿಗೆ ಸಿಕ್ಕಂತೆಯೇ ಎಂಬ ಧೋರಣೆ ಅದರ ಹಿಂದಿದೆ.

ಪ್ರಸ್ತುತ ಬಹುಪಾಲು ಕಾಯ್ದೆ ಕಾನೂನುಗಳು ಮಹಿಳಾಪರವಾಗಿಯೇ ಇದ್ದರೂ, ಸಮಾಜವು ವಿವಾಹದ ವಿಷಯದಲ್ಲಿ ಇನ್ನೂ ಉದಾರವಾಗಿ ಚಿಂತಿಸಬೇಕಾಗಿದೆ. ಇಲ್ಲವಾದಲ್ಲಿ ಸಾಂವಿಧಾನಿಕ ಪ್ರಯತ್ನಗಳೆಲ್ಲ ಕಾಗದದ ಹುಲಿಗಳಾಗಿಯೇ ಉಳಿಯುತ್ತವೆ. ಬಾಲ್ಯವಿವಾಹ ತಡೆಯಲು ಯತ್ನಿಸಿದ ರಾಜಸ್ಥಾನದ ಭನವಾರಿ ದೇವಿಯಂಥವರು ಸಾಮೂಹಿಕ ಅತ್ಯಾಚಾರದ 'ಶಿಕ್ಷೆ'ಗೆ ಗುರಿಯಾಗುತ್ತಲೇ ಇರುತ್ತಾರೆ. □

ನಾಡಿ ಬಂಗಾರ ಪೇಟೆ

ಸ್ವತಂತ್ರ ಭಾರತದ ವೈಚಿತ್ರ್ಯವೆಂದರೆ, ನಮ್ಮ ದೇಶ ಒಂದು ಸಾರ್ವಭೌಮ ಪ್ರಜಾತಂತ್ರವಾಗಿದ್ದರೂ ಸಹ ಪ್ರಜೆಗಳ ಸಾರ್ವಭೌಮತ್ವಕ್ಕೆ ಇಲ್ಲಿ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ. ಅಥವಾ ಸಾರ್ವಜನಿಕ ಅಭಿಪ್ರಾಯಕ್ಕೆ ಆಳ್ವಿಕರಿಂದಾಗಲೀ, ಅಧಿಕಾರಿ ವರ್ಗಗಳಿಂದಾಗಲೀ ಮನ್ನಣೆಯೂ ಇಲ್ಲ. ದೇಶದ ಸಂಪತ್ತು ಸಾರ್ವಜನಿಕರ ಸಂಪತ್ತು, ದೇಶದ ರಕ್ಷಣೆ ಎಂದರೆ ಸಾರ್ವಜನಿಕರ ರಕ್ಷಣೆ, ದೇಶದ ಅಭಿವೃದ್ಧಿ ಎಂದರೆ ಸಾರ್ವಜನಿಕರ ಏಳಿಗೆ ಇವೆಲ್ಲವೂ ಯಾವುದೇ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲ ಮಂತ್ರಗಳಾಗಿರುವುದು ಸಹಜ. ಆದರೆ ವಿಶ್ವದ ಅತಿ ದೊಡ್ಡ ಪ್ರಜಾತಂತ್ರ ದೇಶವಾದ ಭಾರತದಲ್ಲಿ ಈ ಪ್ರವೃತ್ತಿ ವಿಭಿನ್ನ ರೀತಿಯಲ್ಲಿ ವ್ಯಕ್ತವಾಗುತ್ತಿದೆ. ಇಲ್ಲಿ ಸಾರ್ವಜನಿಕರ ಆಸ್ತಿ ಎಂದರೇನು ಎಂಬುದೇ ಒಂದು ಜಿಜ್ಞಾಸೆ. ಬದಲಾಗಿ ಸಾರ್ವಭೌಮ ಪ್ರಜೆಗಳಿಗೆ ಸಂವಿಧಾನದತ್ತವಾಗಿ ಒದಗಿಬರುವ ಎಲ್ಲವೂ ಪ್ರಭುತ್ವದ ಆಸ್ತಿಯಾಗಿ ಬಿಡುತ್ತದೆ. ಸಾರ್ವಜನಿಕರಿಗೆ ಸೇರಬೇಕಾದ ಸಂಪತ್ತು ಯಾವುದೇ ಅಡೆತಡೆಯಿಲ್ಲದೆ ಸರ್ಕಾರದ ಸ್ವಾಧೀನ ಪ್ರಕ್ರಿಯೆಗೆ ಬಲಿಯಾಗಿಬಿಡುತ್ತದೆ. ದೇಶದ ಪ್ರಗತಿ ಮತ್ತು ಅಭಿವೃದ್ಧಿ ಮಂಜಿನ ಪರದೆಯಂತೆ ಈ ಸ್ವಾಧೀನ ಪ್ರಕ್ರಿಯೆಗಳನ್ನು ಮುಚ್ಚಿಬಿಡುತ್ತದೆ.

ಈ ಪ್ರಶ್ನೆಯನ್ನು ಎರಡು ಮಜಲುಗಳಲ್ಲಿ ನೋಡಬಹುದು. ಒಂದು ಮಾನವನ ಅಭ್ಯುದಯ ಮತ್ತು ಅಸ್ತಿತ್ವಗಳಿಗೆ ಮೂಲಭೂತವಾಗಿ ಅಗತ್ಯವಾಗಿರುವ ಭೂಮಿಯ ಪ್ರಶ್ನೆ. ಭೂಮಿ ಯಾರ ಸ್ವತ್ತೂ ಅಲ್ಲ. ಅದು ಯಾವುದೇ ಒಂದು ಪ್ರದೇಶದಲ್ಲಿ ವಾಸಿಸುವ ಪ್ರಜೆಗಳ ನೈಸರ್ಗಿಕ ಹಕ್ಕು. ಆದರೆ ಬಂಡವಾಳ ವ್ಯವಸ್ಥೆಯಲ್ಲಿ ಭೂಮಿ ಒಂದು ಮಾರುಕಟ್ಟೆಯ ಸರಕು. ಹಾಗೆಯೇ ಜನರ ಬದುಕೂ ಸಹ. ಹಾಗಾಗಿ ಭಾರತದಂತಹ ಬಂಡವಾಳ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಲಭ್ಯವಾಗಬೇಕಾದ ಭೂಮಿ ಸರ್ಕಾರದ ಸ್ವತ್ತಾಗಿಬಿಡುತ್ತದೆ. ದೇಶದ ಸಂವಿಧಾನಕ್ಕೆ ಅನುಗುಣವಾಗಿ, ಕಾನೂನು ರೀತ್ಯಾ ತನ್ನ ಪರಿಶ್ರಮದಿಂದ, ಬೆವರಿನ ದುಡಿಮೆಯಿಂದ ಭೂಮಿಯನ್ನು ಬಳಸಿ ದೇಶದ ಉತ್ಪಾದನೆಗೆ ತನ್ನದೇ ಆದ ಕೊಡುಗೆ ನೀಡುವ ಕೃಷಿಕನಿಗೆ ಆ ಭೂಮಿಯ ಮೇಲಿನ ಹಕ್ಕು ಇರುವುದು ಸರ್ಕಾರ ಅಥವಾ ಪ್ರಭುತ್ವದ ಇಚ್ಛೆಯ ಮೇರೆಗೆ ಮಾತ್ರ. ಹಾಗಾಗಿ ಈ ಭೂಮಿಯನ್ನು ಸರ್ಕಾರ ಯಾವ ಸಂದರ್ಭದಲ್ಲಿ ಬೇಕಾದರೂ ಸ್ವಾಧೀನ ಪಡಿಸಿಕೊಳ್ಳಬಹುದು. ಇದಕ್ಕೆ ಪೂರಕವಾಗಿರುವುದು ಬ್ರಿಟೀಷ್ ಸಾಮ್ರಾಜ್ಯದ ವಸಾಹತು ಕಾಯ್ದೆ 1894ರ ಭೂ ಸ್ವಾಧೀನ ಕಾಯ್ದೆ. ಈ ಕಾಯ್ದೆಯೇ ಪೋಸ್ಕೋ, ವೇದಾಂತ, ಮಿಟ್ಟಲ್, ರಿಲೈಯನ್ಸ್, ಅಂಬಾನಿ, ಟಾಟಾಗಳಿಗೆ ಭಗವದ್ಗೀತೆ ಇದ್ದಂತೆ.

ಎರಡನೆಯ ವಿದ್ಯಮಾನವೆಂದರೆ ಅರಣ್ಯ ಸಂಪತ್ತು ಮತ್ತು ಅರಣ್ಯವನ್ನೇ ನಂಬಿ ಬಾಳುವ ಆದಿವಾಸಿಗಳ ಜೀವನ. ಶತಮಾನಗಳ ಮೂಲಕ, ಪಾರಂಪರಿಕವಾಗಿ, ತಲೆಮಾರುಗಳನ್ನು ದಾಟಿ ಅರಣ್ಯಗಳಲ್ಲೇ ತಮ್ಮ ಇಡೀ ಕಾಲಮಾನವನ್ನು ಕಳೆದಿರುವ ಆದಿವಾಸಿಗಳು ಇಂದು ಅತಿ ಹೆಚ್ಚು ಅತಂತ್ರತೆ ಎದುರಿಸುತ್ತಿದ್ದರೆ ಅದಕ್ಕೆ ಮೂಲ ಕಾರಣ ನವ ಉದಾರವಾದ ಪ್ರೇರಿತ ಕಾರ್ಪೋರೇಟ್ ಔದ್ಯಮೀಕರಣ ಮತ್ತು ಈ ಪ್ರಕ್ರಿಯೆಯ ಹಿಂದೆ ಬಲವಾಗಿ ನಿಂತಿರುವ ಪ್ರಭುತ್ವದ ನವ ಆರ್ಥಿಕ ನೀತಿ. ವಿಚಿತ್ರವಾದ ಸಂಗತಿ ಎಂದರೆ ಲಕ್ಷಾಂತರ ಎಕರೆ ಅರಣ್ಯ ಪ್ರದೇಶಗಳನ್ನು ಒತ್ತುವರಿ ಮಾಡಿಕೊಂಡು ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡುವ ಶ್ರೀಮಂತರು ನಿರ್ಭೀತಿಯಿಂದ, ಯಾವುದೇ ಕಾನೂನಿನ ಭಯವಿಲ್ಲದೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಲೇ ಇರುತ್ತಾರೆ. ಆದರೆ ತಮ್ಮ ಸೀಮಿತ ಅರಣ್ಯ ಪ್ರದೇಶಗಳಲ್ಲಿ ಅಲ್ಲಿನ ಉತ್ಪಾದನೆಯನ್ನೇ ನಂಬಿ, ಹೊರಗಿನ ಪ್ರಪಂಚದ ಅರಿವೇ ಇಲ್ಲದೆ ತಮ್ಮ ಪಾಡಿಗೆ ಜೀವನ ನಡೆಸುತ್ತಿರುವ ಆದಿವಾಸಿಗಳನ್ನು ಏಕಾಏಕಿ ಉಚ್ಚಾಟಿಸಲಾಗುತ್ತದೆ. ಕಾರ್ಪೋರೇಟ್ ಉದ್ಯಮಿಗಳಿಗೆ ಹಾಸುವ ಕೆಂಪುಗಂಬಳಿಯ ಮಾರ್ಗದಲ್ಲಿ ಹಾಸುಗಲ್ಲುಗಳಾಗಿ ಪರಿಣಮಿಸುವ ಆದಿವಾಸಿಗಳು ತಮ್ಮ ನೈಸರ್ಗಿಕ ನೆಲೆಗಳಿಂದ ಉಚ್ಚಾಟಿಸಲ್ಪಡುತ್ತಾರೆ. ಅಭಿವೃದ್ಧಿಗಾಗಿ.

ಒಂದಿಂತಿಷ್ಟು ಹಣ ನೀಡಿ, ನೊಂದಣಿ ಮಾಡಿಸಿಕೊಂಡ ಭೂಮಿಯ ಮೇಲೆ ತಮ್ಮ ಶಾಶ್ವತ ನೆಲೆ ಸ್ಥಾಪಿಸಿಕೊಳ್ಳುವ ನಗರವಾಸಿಗಳಿಗೆ ಒದಗುವ ಸಾಂವಿಧಾನಿಕ ಹಕ್ಕು, ತಲೆತಲಾಂತರಗಳಿಂದ ತಾವು ನಂಬಿ ಬಾಳುತ್ತಿರುವ ಅರಣ್ಯ ಪ್ರದೇಶಗಳ ಮೇಲೆ ಆದಿವಾಸಿಗಳಿಗೆ ಒದಗುವುದಿಲ್ಲ. ಇದು ವಿಪರ್ಯಾಸವಲ್ಲವೇ? ಶ್ರೀಮಂತ ನಗರವಾಸಿಗಳನ್ನು ಮೂಲ ನೆಲೆಯಿಂದ ಉಚ್ಚಾಟಿಸಲು ಮುಂದಾದರೆ ನ್ಯಾಯಾಲಯದ ಮೊರೆ ಹೋಗುತ್ತಾರೆ. ತಡೆಯಾಜ್ಞೆ ನೀಡಲಾಗುತ್ತದೆ. ವರುಷಗಳ ಕಾಲ ಅಕ್ರಮ ಆಸ್ತಿಯನ್ನೂ ಅನುಭವಿಸುವ ಅವಕಾಶ ಇವರಿಗೆ

ಪಾಪ ಕೂಪಗಳ ಸ್ವತಂತ್ರ ಭಾರತ

ಕಾರ್ಪೋರೇಟ್ ಉದ್ಯಮಿಗಳಿಗೆ ಹಾಸುವ ಕೆಂಪು ಗಂಬಳಿಯ ಮಾರ್ಗದಲ್ಲಿ ಹಾಸುಗಲ್ಲುಗಳಾಗಿ ಪರಿಣಮಿಸುವ ಆದಿವಾಸಿಗಳು ತಮ್ಮ ನೈಸರ್ಗಿಕ ನೆಲೆಗಳಿಂದ ಉಚ್ಚಾಟಿಸಲ್ಪಡುತ್ತಾರೆ. ಅಭಿವೃದ್ಧಿಗಾಗಿ. ಒಂದಿಂತಿಷ್ಟು ಹಣ ನೀಡಿ, ನೊಂದಣಿ ಮಾಡಿಸಿಕೊಂಡ ಭೂಮಿಯ ಮೇಲೆ ತಮ್ಮ ಶಾಶ್ವತ ನೆಲೆ ಸ್ಥಾಪಿಸಿಕೊಳ್ಳುವ ನಗರವಾಸಿಗಳಿಗೆ ಒದಗುವ ಸಾಂವಿಧಾನಿಕ ಹಕ್ಕು, ತಲೆತಲಾಂತರಗಳಿಂದ ತಾವು ನಂಬಿ ಬಾಳುತ್ತಿರುವ ಅರಣ್ಯ ಪ್ರದೇಶಗಳ ಮೇಲೆ ಆದಿವಾಸಿಗಳಿಗೆ ಒದಗುವುದಿಲ್ಲ. ಇದು ವಿಪರ್ಯಾಸವಲ್ಲವೇ?

ಇರುತ್ತದೆ. ಆದರೆ ಆದಿವಾಸಿಗಳಿಗೆ ಈ ಸಾಂವಿಧಾನಿಕ ಹಕ್ಕುಗಳು ಅನ್ವಯಿಸುವುದೇ ಇಲ್ಲ ಎನಿಸುತ್ತದೆ. ಪ್ರಸಕ್ತ ವಿದ್ಯಮಾನಗಳನ್ನು ನೋಡಿದರೆ ಹೀಗನಿಸುವುದು ಸಹಜ. ನಗರವಾಸಿಗಳ ಉಚ್ಚಾಟನೆಗೆ ಮುನ್ನ ನೋಟಿಸ್ ನೀಡಿ, ಒಂದು ತಿಂಗಳ ಗಡುವನ್ನೂ ನೀಡಲಾಗುತ್ತದೆ. ಆಕ್ಷೇಪಣೆಗಳಿಗೆ ಅವಕಾಶ ಇರುತ್ತದೆ. ಆದರೆ ಆದಿವಾಸಿಗಳಿಗೆ ಇಂತಹ ಯಾವುದೇ ಅವಕಾಶಗಳೂ ಇರುವುದಿಲ್ಲ. ಇವರ ಮೂಲೋತ್ಪಾಟನೆಗೆ ಸಲ್ವಾಜುಡುಂನಂತಹ ಕೊಲ್ಲುವ ಪಡೆಗಳನ್ನೂ ರಚಿಸಲಾಗುತ್ತದೆ. ಮಕ್ಕಳಿಗೆ ಗುಮ್ಮ ಬಂತು ಎಂದು ಓಡಿಸುವ ಹಾಗೆ ಆದಿವಾಸಿಗಳಿಗೆ ಮಾವೋವಾದಿಗಳ ಭೀತಿ ಹುಟ್ಟಿಸಿ ಉಚ್ಚಾಟಿಸಲಾಗುತ್ತದೆ. ಈ ಎರಡೂ ವಿದ್ಯಮಾನಗಳ ಹಿನ್ನೆಲೆಯಲ್ಲಿ ಉದ್ಭವಿಸುವ ಮೂಲ ಪ್ರಶ್ನೆ ಸಾರ್ವಜನಿಕ ಆಸ್ತಿ ಮತ್ತು ಅಸ್ತಿತ್ವವನ್ನು ಕುರಿತಾದದ್ದು.

ಸಾರ್ವಜನಿಕರ ಆಸ್ತಿಯ ನೆಲೆಗಟ್ಟಿನಲ್ಲೇ ನಮ್ಮ ದೇಶವನ್ನು ಕಾಡುವ ಮತ್ತೊಂದು ವಿದ್ಯಮಾನವೆಂದರೆ ಸಂಪತ್ತಿನ ಶೇಖರಣೆ ಮತ್ತು ಅದರ ಉತ್ತರದಾಯಿತ್ವ. ಯಾವುದೇ ವ್ಯಕ್ತಿ ಅಥವಾ ಸಂಘಟನೆ ಅಥವಾ ಸಂಸ್ಥೆ ಕಾಲಾನುಕ್ರಮದಲ್ಲಿ ಶೇಖರಿಸುವ ಸಂಪತ್ತು ಯಾರಿಗೆ ಸೇರಬೇಕು ಎನ್ನುವುದು ಮತ್ತೊಂದು ಜಿಜ್ಞಾಸಾಪೂರ್ವಕ ಪ್ರಶ್ನೆ. ಇತ್ತೀಚಿನ ತಿರುವನಂತಪುರದ ಪದ್ಮನಾಭ ಸ್ವಾಮಿ ದೇವಾಲಯ ಪ್ರಕರಣದ ಹಿನ್ನೆಲೆಯಲ್ಲಿ ನೋಡಿದಾಗ ಭಾರತದಲ್ಲಿನ ಧಾರ್ಮಿಕ ಸಂಘ ಸಂಸ್ಥೆಗಳು ಸಂಗ್ರಹಿಸಿರುವ ಅತ್ಯಮೂಲ್ಯ ಸಂಪತ್ತು ಸಾರ್ವಜನಿಕರ ಆಸ್ತಿಯೇ ಅಲ್ಲವೇ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಪದ್ಮನಾಭಸ್ವಾಮಿ ದೇವಾಲಯದಲ್ಲಿ ಈವರೆಗೆ ದೊರೆತಿರುವ ಅಮೂಲ್ಯ ಚಿನ್ನದ ಆಭರಣಗಳ ಮೌಲ್ಯ ಒಂದು ಲಕ್ಷ ಕೋಟಿ ಎಂದು ಹೇಳಲಾಗುತ್ತಿದೆ. ಇನ್ನೂ ಒಂದು ಭಂಡಾರವನ್ನು ತೆರೆಯಲಾಗಿಲ್ಲ. ಟ್ರವಾಂಕೂರ್ ರಾಜಮನೆತನದ ರಾಜಧನವನ್ನೊಳಗೊಂಡ ಈ ವಸ್ತುಗಳು ದೇವಾಲಯದ ಆಸ್ತಿ, ಇದರ ಮೇಲೆ ದೇವಾಲಯದ ಟ್ರಸ್ಟಿಗಳಿಗೆ ಮಾತ್ರ ಹಕ್ಕಿರುತ್ತದೆ ಎಂಬ ವಾದ ಕೇಳಿಬರುತ್ತಿದೆ.

ಅಂದರೆ ರಾಜಮನೆತನಗಳು ಸಂಗ್ರಹಿಸಿದ ಸಂಪತ್ತೆಲ್ಲವೂ ರಾಜರಿಗೇ ಸೇರಿದ್ದು ಎಂದಂತಾಯಿತು. ಆಧುನಿಕ ಪರಿಭಾಷೆಯಲ್ಲಿ ಇದನ್ನು ನೋಡಿದಾಗ ಭಾರತದ ಪ್ರಭುತ್ವವೂ ಇದೇ ವಾದವನ್ನು ಮಂಡಿಸುತ್ತದೆಯಲ್ಲವೇ? ಯಾವುದೇ ರಾಜ ಮಹಾರಾಜರಾಗಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಜನತೆಯ ಮೇಲೆ ತೆರಿಗೆ ವಿಧಿಸುವ ಮೂಲಕ, ಅನ್ಯ ರಾಜ್ಯಗಳನ್ನು ಆಕ್ರಮಿಸಿ ಲೂಟಿ ಮಾಡುವ ಮೂಲಕ ಅಥವಾ ಸಣ್ಣ ಪುಟ್ಟ ಸಾಮ್ರಾಟರ ಕಪ್ಪ ಕಾಣಿಕೆಗಳ ಮೂಲಕ. ಇವೆಲ್ಲವೂ ಸಾರ್ವಜನಿಕ ಆಸ್ತಿಯಲ್ಲವೇ? ಈ ಸಂಪತ್ತನ್ನು ರಾಜರುಗಳು ದೇವಾಲಯಗಳಿಗೆ ರಾಜಧನದ ರೂಪದಲ್ಲಿ ನೀಡಿದ ಮಾತ್ರಕ್ಕೆ ಸಂಪತ್ತಿನ ಮೇಲೆ ಸಾರ್ವಜನಿಕರ ಹಕ್ಕು ಇಲ್ಲವಾಗುವುದೇ? ದೇವಾಲಯವನ್ನು ನಿರ್ವಹಿಸಲು ಕೆಲವೇ ವ್ಯಕ್ತಿಗಳು ತಮ್ಮ ಸ್ವಂತ ಹಿತಾಸಕ್ತಿಗಳಿಗಾಗಿ ರಚಿಸಿಕೊಳ್ಳುವ ಟ್ರಸ್ಟ್‌ಗಳು ಈ ಸ್ವತ್ತಿನ ಮೇಲೆ ಹೇಗೆ ಅಧಿಕಾರ ಚಲಾಯಿಸಲು ಸಾಧ್ಯ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೋದಾಗ ಮೇಲೆ ಉಲ್ಲೇಖಿಸಿದ ಭೂಸ್ವಾಧೀನ ಮತ್ತು ಆದಿವಾಸಿಗಳ ಪ್ರಶ್ನೆಯೂ ಎದುರಾಗುತ್ತದೆ.

ಭಾರತದಲ್ಲಿ ದೇವಾಲಯ, ಮಠ, ಮಸೀದಿ, ಚರ್ಚುಗಳಿಗೇನೂ ಕಡಿಮೆಯಿಲ್ಲ. ಎಲ್ಲ ಧಾರ್ಮಿಕ ಕೇಂದ್ರಗಳಲ್ಲೂ ಅಪಾರ ಸಂಪತ್ತಿನ ಶೇಖರಣೆಯಾಗಿರುವುದೂ ದಿಟ. ಪದ್ಮನಾಭಸ್ವಾಮಿ ದೇವಾಲಯ ಇದೀಗ ಹೊರಬಂದ ಸತ್ಯ. ಇದಕ್ಕೂ ಮಿಗಿಲಾದ ತಿರುಪತಿ, ಉಡುಪಿ, ಇಸ್ಕಾನ್, ಕಂಚಿ, ಸಾಯಿಬಾಬ, ಶಿರಡಿ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಧರ್ಮ ಕೇಂದ್ರಿತ ಸಂಸ್ಥೆಗಳ ಸಂಪತ್ತಿನ ಕ್ರೋಢೀಕರಣವಾಗುವುದಾದರೂ ಹೇಗೆ. ಜನಸಾಮಾನ್ಯರು ತಾವು ದೇವರಿಗೆ ಅರ್ಪಿಸುವ ಪ್ರತಿಯೊಂದು ವಸ್ತುವೂ ದೇವರಿಗೇ ಸೇರುವುದೆಂಬ ಭಾವುಕ ನಂಬಿಕೆಯಿಂದ ಅರ್ಪಿಸುತ್ತಾರೆ. ಆದರೆ ಇವೆಲ್ಲವೂ ತಲುಪುವುದು ಟ್ರಸ್ಟಿಗಳಿಗೆ, ಧಾರ್ಮಿಕ ಸಂಸ್ಥೆಗಳ ಒಡೆಯರಿಗೆ ಎಂದು ಅವರಿಗೂ ತಿಳಿದಿರುತ್ತದೆ. ಆದರೂ ಏಕೆ ಸಲ್ಲಿಸುತ್ತಾರೆ. ತಮ್ಮ ಪಾಪಪ್ರಜ್ಞೆ ಕಳೆದುಕೊಳ್ಳಲು ಅಥವಾ ತಮ್ಮ ಸಂಕಷ್ಟಗಳಿಗೆ ಸ್ವತಃ ಸಾಂತ್ವನ ಪಡೆಯಲು. ಇಲ್ಲಿ ಸಾಮಾನ್ಯ ಜನರ ಅರ್ಪಣೆಗಳಿಗಿಂತಲೂ ಅಮೂಲ್ಯವಾದದ್ದು ಶ್ರೀಮಂತರ ಅರ್ಪಣೆಗಳು. ತಮ್ಮ ವ್ಯಾವಹಾರಿಕ ಜೀವನದಲ್ಲಿ ಅಕ್ರಮವಾಗಿ ಸಂಪಾದಿಸಿದ ಆಸ್ತಿಯ ಒಂದು ಪಾಲನ್ನು ದೇವರಿಗೆ ಅರ್ಪಿಸುವ ಮೂಲಕ ಕೃತಾರ್ಥರಾಗುವ ಶ್ರೀಮಂತರ ಕಪ್ಪುಹಣ ಈ ಭಂಡಾರಗಳಲ್ಲಿ ಹುದುಗಿರುವುದು ಸರ್ವಕಾಲಿಕ ಸತ್ಯ.

ದೇವಾಲಯಗಳಿರಲಿ ಮಠಗಳ ಆಸ್ತಿಯನ್ನೇ ನೋಡಿ. ಧರ್ಮಸ್ಥಳ, ಶೃಂಗೇರಿ, ಆದಿಚುಂಚನಗಿರಿ, ಆರ್ಟ್ ಆಫ್ ಲಿವಿಂಗ್, ಬಾಬಾ ರಾಮದೇವರ ಪತಂಜಲಿ, ಮಾಧ್ವ ಮಠಗಳು, ಶಂಕರ ಮಠಗಳು, ಲಿಂಗಾಯತ ಮಠಗಳು ಇವೆಲ್ಲವೂ ಹೊಂದಿರುವ ಸ್ಥಿರಾಸ್ತಿ ಚರಾಸ್ತಿಗಳ ಲೆಕ್ಕ ಎಲ್ಲಿಯಾದರೂ ದೊರಕುವುದೇ? ಸಾವಿರಾರು ಎಕರೆ ಭೂಮಿ, ಕೋಟ್ಯಾಂತರ ಬೆಲೆ ಬಾಳುವ ಕಟ್ಟಡಗಳು ಈ ಧರ್ಮ ಕೇಂದ್ರಗಳ ಸುಪರ್ದಿಯಲ್ಲಿರುತ್ತವೆ. ಇದರ ಉತ್ತರದಾಯಿತ್ವ ಯಾರದು ಎಂಬ ಪ್ರಶ್ನೆ ಎದುರಾದಾಗ, ಧರ್ಮ, ನಂಬಿಕೆ ಎದುರಾಗುತ್ತದೆ. ಈ ಧರ್ಮ ಕೇಂದ್ರಗಳು ಕೆಲವೇ ನಿರ್ದಿಷ್ಟ ಪ್ರದೇಶಗಳಿಗೆ ಒದಗಿಸುವ ಹಲವು ಸೌಕರ್ಯಗಳನ್ನೇ ಮುಂದಿಟ್ಟುಕೊಂಡು ಸಂಪತ್ತಿನ ಕ್ರೋಢೀಕರಣವನ್ನು ಸಮರ್ಥಿಸಿಕೊಳ್ಳಲಾಗುತ್ತದೆ. ಆದರೆ ಈ ಆಸ್ತಿಯಿಂದ ಸಮಸ್ತ ನಾಗರಿಕರಿಗಾಗಲೀ, ದೇಶದ ಒಟ್ಟು ಉತ್ಪಾದನೆಗಾಗಲೀ ಯಾವುದೇ ಪ್ರಯೋಜನ ಉಂಟೇ ಎಂದು ಪ್ರಶ್ನಿಸಿದಾಗ ಭ್ರಮನಿರಸನವಾಗುವುದೇ ಹೆಚ್ಚು. ಇಷ್ಟಕ್ಕೂ ಈ ಧರ್ಮ ಕೇಂದ್ರಗಳು ಬದುಕುವುದೇ ಸಾರ್ವಜನಿಕರ ಬೆವರಿನ ಬಲದಿಂದ. ಉಚಿತ ಊಟ ನೀಡುವ ಧರ್ಮ ಸಂಸ್ಥೆಗಳು ಆಹಾರ ಧಾನ್ಯಗಳನ್ನೂ ಸಾರ್ವಜನಿಕರಿಂದ ಉಚಿತವಾಗಿಯೇ ಪಡೆಯುವುದು ಸತ್ಯವಲ್ಲವೇ? ಕೆರೆಯ ನೀರನು ಕೆರೆಗೆ ಚೆಲ್ಲುವ ಈ ಕ್ರಿಯೆಗೆ ಸೇವೆಯ ರಂಗು ನೀಡುವುದೇಕೆ?

ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ಪ್ರಸಕ್ತ ಸನ್ನಿವೇಶವನ್ನು ನೋಡಿದಾಗ ಭಾರತದ ಆಳ್ವಿಕರು ರಾಜಪರಂಪರೆಯ ಮನಸ್ಥಿತಿಯಿಂದ ಇನ್ನೂ ಹೊರಬಂದಿಲ್ಲ ಎಂಬ ಸಂಗತಿ ವೇದ್ಯವಾಗುತ್ತದೆ. ರಾಜ ಸಂಗ್ರಹಿಸಿದ ಆಸ್ತಿಯೆಲ್ಲವೂ ರಾಜನಿಗೇ ಸೇರಬೇಕಾದ್ದು ಎಂದು ವಾದಿಸುವಂತೆಯೇ ಸರ್ಕಾರದ ಒಡೆತನದಲ್ಲಿರುವ ಇಡೀ ಭರತ ಭೂಮಿ ಆಳ್ವಿಕರಿಗೆ ಸೇರಿದ್ದು ಎಂದು ವಾದಿಸಲಾಗುತ್ತದೆ. ಒಂದು ಕಾಲದಲ್ಲಿ ರಾಜಮಹಾರಾಜರುಗಳು ತಮ್ಮ ಅಮೂಲ್ಯ ಆಸ್ತಿಯನ್ನು ರಕ್ಷಿಸುವ ದೃಷ್ಟಿಯಿಂದ ದೇವಾಲಯಗಳಲ್ಲಿ ಬಚ್ಚಿಡುತ್ತಿದ್ದರು. ಏಕೆಂದರೆ ಎಂತಹ ಆಕ್ರಮಣಕಾರರಾದರೂ ದೇವಾಲಯಗಳನ್ನು ಲೂಟಿ ಮಾಡುವುದಿಲ್ಲ ಎಂಬ ನಂಬಿಕೆ. ಆದರೆ ಇತಿಹಾಸ ಈ ನಂಬಿಕೆಯನ್ನು ಹುಸಿಯಾಗಿಸಿದೆ. ಪ್ರತಿಯೊಂದು ಆಕ್ರಮಣದಲ್ಲೂ ದೇವಾಲಯಗಳ ಲೂಟಿಯಾಗಿದೆ. ಇದು ಧರ್ಮಾತೀತ ಸತ್ಯ. ಅಂದು ರಾಜರುಗಳು ಹೂಡಿದ ತಂತ್ರವನ್ನೇ ಇಂದಿನ ಪ್ರಜಾತಾಂತ್ರಿಕ ಪ್ರಭುಗಳು ಅನುಸರಿಸುತ್ತಿದ್ದಾರೆ. ತಮ್ಮ ಎಲ್ಲ ಕಪ್ಪು ಹಣವನ್ನು, ಅಕ್ರಮ ಸಂಪಾದನೆಯನ್ನು ಧರ್ಮ ಕೇಂದ್ರಗಳಲ್ಲಿ ಹುದುಗಿಸಿಡುತ್ತಿದ್ದಾರೆ.

ಭಾರತದಲ್ಲಿನ ಧರ್ಮ ಕೇಂದ್ರಗಳಲ್ಲಿರುವ ಒಟ್ಟು ಆಸ್ತಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಲ್ಲಿ, ನಮ್ಮಷ್ಟು ಸುಭಿಕ್ಷ ದೇಶ ಮತ್ತೊಂದು ಇರಲಿಕ್ಕಿಲ್ಲ. ಆದರೆ ಧರ್ಮ, ನಂಬಿಕೆ ಮತ್ತು ಮತೀಯ ಅಸ್ಮಿತೆಗಳು ರಾಷ್ಟ್ರಪ್ರೇಮದ ವ್ಯಾಖ್ಯಾನವನ್ನೇ ನಿರ್ಧರಿಸುವ ಪ್ರಸ್ತುತ ಸನ್ನಿವೇಶದಲ್ಲಿ ಇದು ಸಾಧ್ಯವೇ ಎನಿಸುತ್ತದೆ. ಸ್ವಿಸ್ ಬ್ಯಾಂಕುಗಳಲ್ಲಿ ಅಕ್ರಮವಾಗಿ ಇಟ್ಟಿರುವ ಲಕ್ಷಾಂತರ ಕೋಟಿ ರೂಗಳನ್ನು ಹಿಂಪಡೆಯುವ ಆಗ್ರಹ ಬಲಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಭಾರತದ ಗರ್ಭದಲ್ಲೇ ಅಡಗಿರುವ ಕಪ್ಪು ಹಣದ ನಿಧಿಯನ್ನು ಕುರಿತು ಚರ್ಚೆಯೇ ನಡೆಯದಿರುವುದು ವಿಪರ್ಯಾಸ.

ಬಂಡವಾಳ ಶೇಖರಣೆ ಹೆಚ್ಚಾಗಿ ಸಂಪತ್ತಿನ ಕ್ರೋಢೀಕರಣವಾದಂತೆಲ್ಲಾ ಬಡವ ಶ್ರೀಮಂತರ ನಡುವಿನ ಕಂದರ ಹೆಚ್ಚಾಗುತ್ತಲೇ ಹೋಗುತ್ತದೆ. ಭಾರತದ ಸಂದರ್ಭದಲ್ಲಿ ಈ ಪಾಪ ಕೃತ್ಯಕ್ಕೆ ನೇರವಾಗಿ ಹೊಣೆಯಾಗುವುದು ಧರ್ಮ ಕೇಂದ್ರಗಳು ಮತ್ತು ಕಾರ್ಪೋರೇಟ್ ಉದ್ಯಮಿಗಳು ಹಾಗೂ ಇವುಗಳನ್ನು ಪ್ರೋತ್ಸಾಹಿಸಿ ಪೋಷಿಸುವ ಪ್ರಭುತ್ವ. ಭ್ರಷ್ಟಾಚಾರ ವಿರೋಧಿ ಆಂದೋಲನದ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳು ಚರ್ಚೆಯಾಗದಿರುವುದು ಸೋಜಿಗವೇ. □

ಭಾರತದಲ್ಲಿ ದೇವಾಲಯ, ಮಠ, ಮಸೀದಿ, ಚರ್ಚುಗಳಿಗೇನೂ ಕಡಿಮೆಯಿಲ್ಲ. ಎಲ್ಲ ಧಾರ್ಮಿಕ ಕೇಂದ್ರಗಳಲ್ಲೂ ಅಪಾರ ಸಂಪತ್ತಿನ ಶೇಖರಣೆಯಾಗಿರುವುದೂ ದಿಟ. ಪದ್ಮನಾಭಸ್ವಾಮಿ ದೇವಾಲಯ ಇದೀಗ ಹೊರಬಂದ ಸತ್ಯ. ಇದಕ್ಕೂ ಮಿಗಿಲಾದ ತಿರುಪತಿ, ಉಡುಪಿ, ಇಸ್ಕಾನ್, ಕಂಚಿ, ಸಾಯಿಬಾಬ, ಶಿರಡಿ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಧರ್ಮ ಕೇಂದ್ರಿತ ಸಂಸ್ಥೆಗಳ ಸಂಪತ್ತಿನ ಕ್ರೋಢೀಕರಣವಾಗುವುದಾದರೂ ಹೇಗೆ. ಜನಸಾಮಾನ್ಯರು ತಾವು ದೇವರಿಗೆ ಅರ್ಪಿಸುವ ಪ್ರತಿಯೊಂದು ವಸ್ತುವೂ ದೇವರಿಗೇ ಸೇರುವುದೆಂಬ ಭಾವುಕ ನಂಬಿಕೆಯಿಂದ ಅರ್ಪಿಸುತ್ತಾರೆ. ಆದರೆ ಇವೆಲ್ಲವೂ ತಲುಪುವುದು ಟ್ರಸ್ಟಿಗಳಿಗೆ, ಧಾರ್ಮಿಕ ಸಂಸ್ಥೆಗಳ ಒಡೆಯರಿಗೆ ಎಂದು ಅವರಿಗೂ ತಿಳಿದಿರುತ್ತದೆ.

ಸಾಹಿತ್ಯ, ಸಮುದಾಯ, ಸಂಸ್ಕೃತಿಗಳ ಸಮರ್ಥ ವಿಶ್ಲೇಷಣೆ

ಪುಸ್ತಕ ಅವಲೋಕನ



ಲೇ: ಡಾ. ವಿಜಯಕುಮಾರ ಎಂ. ಬೋರಟ್ಟಿ
ಪ್ರಕಾಶನ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೨೦೧೧
ಬೆಲೆ: ರೂ. ೨೦೦/-

ಮಹೇಶ ತಿಪ್ಪಶೆಟ್ಟಿ

ಕರ್ನಾಟಕದಲ್ಲಿ 12ನೇ ಶತಮಾನ ಹಲವು ಚಿಂತನೆಗಳಿಗೆ ಮಾರ್ಗಮಾಡಿಕೊಟ್ಟಿದೆ. ಇದನ್ನು ಭಕ್ತಿ ಚಳವಳಿಯ ಕಾಲ ಎಂದು ಗುರುತಿಸಲಾಗಿದೆ. ದೇಶದ ಇತರ ಭಾಗದ ಭಕ್ತಿ ಚಳವಳಿಗಿಂತ ಭಿನ್ನ ನೆಲೆಯಲ್ಲಿ ಇಲ್ಲಿ ಭಕ್ತಿ ಚಳವಳಿ ರೂಪಗೊಂಡಿತ್ತು. ಇದು ಕೇವಲ ಆತ್ಮೋದ್ಧಾರದ ಕನಸು ಕಾಣದೆ ಸಮಾಜದ ಎಲ್ಲ ವರ್ಗದ ಜನರಿಗೆ ಆತ್ಮಾಭಿಮಾನದಿಂದ ಬದುಕುವ ಅವಕಾಶ ಒದಗಿಸಿತು. 12ನೇ ಶತಮಾನದ ಸಂದರ್ಭದ ಬಗ್ಗೆ ಮೌಖಿಕ ಸಾಹಿತ್ಯದಿಂದ ಹಿಡಿದು ವೆಬ್ ಸಾಹಿತ್ಯದವರೆಗೆ ಅಪಾರ ವಿಷಯಗಳು ಅಭಿವ್ಯಕ್ತಗೊಂಡಿವೆ. ವಿಶೇಷವಾಗಿ ವಸಾಹತುಶಾಹಿ ಕಾಲದಲ್ಲಿ ಲಿಂಗಾಯತವನ್ನು ವಿವಿಧ ದೃಷ್ಟಿಯಿಂದ ನೋಡಿದ ಬಗ್ಗೆ ಈ ಪುಸ್ತಕದಲ್ಲಿ ವಿಶಿಷ್ಟ ವಿವರಣೆಗಳಿವೆ.

ವೈದಿಕತೆಯೇ ಭಾರತದ ಪ್ರಧಾನಧಾರೆ ಸಂಸ್ಕೃತಿಯಲ್ಲ. ಇಲ್ಲಿ ಅವೈದಿಕ ಸಂಸ್ಕೃತಿಗಳು ಪ್ರಾಚೀನ ಕಾಲದಿಂದಲೂ ಜನರ ಬದುಕನ್ನು ಕಟ್ಟುವ ಕೆಲಸ ಮಾಡಿವೆ. ಅವೈದಿಕ ಸಂಸ್ಕೃತಿಗಳಿಗೆ ಪ್ರಾದೇಶಿಕ ಗುಣ ಇದೆ. ವಚನ ಸಂಸ್ಕೃತಿಗೆ ಸಂಬಂಧಿಸಿದಂತೆ ಕೆಳಗಿನ ಹಂತಗಳನ್ನು ಗುರುತಿಸಬಹುದು. ಸಂಗ್ರಹಣೆ, ಸಂಕಲನ, ವಿಶ್ಲೇಷಣೆ ಹಾಗೂ ಸಂಶೋಧನೆ. ಸಂಗ್ರಹಿತ ವಿಷಯಗಳನ್ನು ಸರಳವಾಗಿ ವಿಶ್ಲೇಷಣೆ ಮಾಡಬಹುದು. ಆದರೆ 12ನೇ ಶತಮಾನದ ಸಂಶೋಧನೆಗೆ ಖಚಿತ, ಲಿಖಿತ ದಾಖಲೆಗಳ ಕೊರತೆ ಇದೆ ಎಂಬುದನ್ನು ಮರೆಯುವಂತಿಲ್ಲ.

ಈ ಗ್ರಂಥ ಕೇವಲ ವಚನ ಸಾಹಿತ್ಯದ ವಿಶ್ಲೇಷಣೆಯನ್ನು ಮಾತ್ರ ಒಳಗೊಂಡಿಲ್ಲ. ಇದರ ಓದು ಇಡೀ ಕನ್ನಡ ಸಾಹಿತ್ಯ, ಸಮುದಾಯ ಹಾಗೂ ಸಂಸ್ಕೃತಿ ತಿಳಿಯಲು ನೆರವಾಗುತ್ತದೆ. ಪಶ್ಚಿಮದ ಪ್ರಭಾವ ಪೌರ್ವಾತ್ಯದ ಮೇಲೆ ಕೇವಲ ತಂತ್ರಜ್ಞಾನದ ಮಟ್ಟಕ್ಕೆ ಉಳಿಯದೇ ಬದುಕನ್ನು 'ವಸ್ತುನಿಷ್ಠ' ಹಾಗೂ 'ವೈಜ್ಞಾನಿಕ' ದೃಷ್ಟಿಕೋನದಿಂದ ನೋಡುವ ವಿಧಾನ ರೂಪಿಸಿತು. ವಸಾಹತುಶಾಹಿತ್ವವು ಬದುಕನ್ನು ಸೂಕ್ಷ್ಮ-ಸಂಕೀರ್ಣ ರೀತಿಯಲ್ಲಿ ಬದಲಿಸಿದೆ. ಈ ಗ್ರಂಥ 'ಪಾರಾಯಣ'ದೃಷ್ಟಿಯ ಓದುಗರಿಗೆ ಸಲ್ಲದು. ಗಂಭೀರ ಓದುಗರನ್ನು ಮಾತ್ರ ಈ ಕೃತಿ ಆಕರ್ಷಿಸುತ್ತದೆ. 'ಶಬ್ದದೊಳಗಣ ನಿಶ್ಶಬ್ದ'ವನ್ನು ಓದುಗ ಗ್ರಹಿಸಬೇಕಾಗುತ್ತದೆ.

'ಪೌರ್ವಾತ್ಯದ ಮರು ಚಿಂತನೆ...' ಎಂಬ ಮೊದಲ ಲೇಖನ ನ್ಯಾಷನಲ್ ಯುನಿವರ್ಸಿಟಿ ಆಫ್ ಸಿಂಗಾಪುರ ಆಯೋಜಿಸಿದ ವಿಚಾರ ಸಂಕಿರಣದಲ್ಲಿ ಮಂಡನೆಯಾಗಿದೆ. ಈ ಲೇಖನದಲ್ಲಿ 30 ಕೃತಿಗಳ ಉಲ್ಲೇಖ ಹಾಗೂ 88 ಅಡಿ ಟಿಪ್ಪಣಿಗಳಿವೆ ಎಂದರೆ ವಿಷಯ ಮಂಡನೆಯ ಬಿತ್ತರ ಗ್ರಹಿಸಬಹುದು. ಸಿ.ಪಿ.ಬ್ರೌನ್ ಹಾಗೂ ವುರ್ಥರವರು ಲಿಂಗಾಯತ ಧರ್ಮ ಗ್ರಂಥಗಳನ್ನು ಬೇರೆ ಬೇರೆ ಕಾರಣಕ್ಕಾಗಿ ಅಭ್ಯಸಿಸಿದ್ದಾರೆ. ಬ್ರೌನ್‌ರು ಲಿಂಗಾಯತ ಸಾಹಿತ್ಯದ ಮೇಲ್ಮೆಯನ್ನು ಹೊರ ಜಗತ್ತಿಗೆ ತೋರಿಸಲು ಉತ್ಸಾಹ ತೋರಿದರೆ, ವುರ್ಥರು ಲಿಂಗಾಯತರ 'ಕೂಪ ಮಂಡೂಕ' ಪ್ರವೃತ್ತಿಯನ್ನು ಬಯಲು ಮಾಡುವ ಪ್ರಯತ್ನ ಮಾಡಿದ್ದಾರೆ. 12ನೇ ಶತಮಾನದ ಪೂರ್ವಾರ್ಧದಲ್ಲಿ ಭಾರತೀಯ ಸಂಸ್ಕೃತಿಗಳ ಬಗ್ಗೆ ಇದ್ದ ವಿವಾದಗಳನ್ನು ಎರಡು ಚಿಂತನಾ ವೇದಿಕೆಗಳ ಹಿನ್ನೆಲೆಯಲ್ಲಿ ಗುರುತಿಸಬಹುದು. ಜೇಮ್ಸ್‌ಮಿಲ್‌ರವರು ರೂಪಿಸಿದ 'ಯುಟಿಲಿಟೆರಿಯನ್' ವೇದಿಕೆ ಹಾಗೂ ವಿಲಿಯಂಜೋನ್ಸರು ಹುಟ್ಟುಹಾಕಿದ 'ಇಂಡಾಲಜಿಸ್ಟ್' ವೇದಿಕೆ.

ಸಿ.ಪಿ.ಬ್ರೌನರು ಲಿಂಗಾಯತರ ಧರ್ಮಕ್ಕೆ ಸಂಬಂಧಿಸಿದಂತೆ ಬ್ರಾಹ್ಮಣರು ಒದಗಿಸುತ್ತಿದ್ದ ಮಾಹಿತಿಗಳ ಬಗ್ಗೆ ಕ್ರಮೇಣ ಸಂಶಯ ತಾಳಿದರು ಹಾಗೂ ಬ್ರಾಹ್ಮಣರು ಲಿಂಗಾಯತರ ಬಗ್ಗೆ ಪೂರ್ವಾಗ್ರಹ ಪೀಡಿತರು ಎಂಬ ನಿರ್ಣಯಕ್ಕೆ ಬಂದರು. ವಿಶೇಷವಾಗಿ ಇಟಲಿಯ ಪ್ರವಾಸಿ ಡೆಲ್ಲಾ ವೆಲ್ಲೆ, ಪ್ರಾನ್ಸಿಸ್ ಬುಕನ್, ಅಬೆಡುಬಾಯಿಸ್ ಸಂಗ್ರಹಿಸಿದ ಮಾಹಿತಿ ತಪ್ಪು ಎಂದು ತಿಳಿದು ಬ್ರೌನರು ಖುದ್ದಾಗಿ ಮಾಹಿತಿ ಸಂಗ್ರಹಿಸಲು ಪ್ರಾರಂಭಿಸಿದರು (ಪು-9). ವಿಶೇಷ ಎಂದರೆ ಲಿಂಗಾಯತರು ಹಿಂದೂಗಳಿಗಿಂತ ಹೇಗೆ ಭಿನ್ನ ಎಂಬುದನ್ನು ಬ್ರೌನರು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ(ಪು.9). ಕ್ರೈಸ್ತ ಪುರಾಣಗಳನ್ನು ಹಾಗೂ ಬಸವ ಪುರಾಣಗಳ ಮಧ್ಯ ಹಲವು ಹೋಲಿಕೆಗಳನ್ನು ಬ್ರೌನ್ ವಿವರಿಸುತ್ತಾರೆ. ಬೇಡರಕಣ್ಣಪ್ಪನನ್ನು ಸಂತ ಲೂಸಿಯಾಗೆ ಹೋಲಿಸುತ್ತಾರೆ. ಮಾನವಶಾಸ್ತ್ರ ವಿದ್ಯಾರ್ಥಿಯಂತೆ ಲಿಂಗಾಯತ ಸಾಹಿತ್ಯ ವಹಾಬಿ ಸಾಹಿತ್ಯಕ್ಕೆ ಹೇಗೆ ಸಮೀಪವಾಗಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡಿದ್ದಾರೆ. ವಿಶೇಷ ಎಂದರೆ ಲಿಂಗಾಯತರನ್ನು 'ಪ್ರೊಟೆಸ್ಟೆಂಟ ಕ್ರೈಸ್ತ'ರೆಂದು ವರ್ಣಿಸಿ ಬಸವಣ್ಣನೆ ಲಿಂಗಾಯತ ಧರ್ಮದ ಸ್ಥಾಪಕ ಎಂದು ಬ್ರೌನ್ ದಾಖಲಿಸುತ್ತಾರೆ (ಪು.12). ಬಸವಪೂರ್ವ ಶೈವಧರ್ಮ 'ಯಾತ್ರೆ, ತಪಸ್ಸು, ಬಲಿ' ಮುಂತಾದವುಗಳನ್ನು ಅಪೇಕ್ಷಿಸಿದರೆ, ಲಿಂಗಾಯತ, ಗುರು, ಲಿಂಗ, ಜಂಗಮವನ್ನು ಗೌರವಿಸುತ್ತದೆ (ಪು.12). ಲಿಂಗಾಯತರ ಆಂತರಿಕ ಪಂಥಗಳನ್ನು ವಿವರಿಸುತ್ತ ಬ್ರೌನರು ಪಂಚಪೀಠಗಳ ಹಿನ್ನೆಲೆಗಳನ್ನು ಸಂಶಯಿಸುತ್ತಾರೆ (ಪು.13). 'ಪ್ರಭುಲಿಂಗಲೀಲೆ' ಮಹಿಳಾ ಪರವಾಗಿದ್ದದನ್ನು ಶ್ಲಾಘಿಸುತ್ತಾ, ಬಿಜ್ಜಳ ಹಾಗೂ ಬಸವನ ಕೊನೆಗುಲದ ಸಂದರ್ಭದ ಅಂಶಗಳು ಪಿತೂರಿ, ಹಿಂಸೆಯಿಂದ ಕೂಡಿತ್ತು ಎಂದು ವಿವರಿಸುತ್ತಾರೆ(ಪು.13). ಒಟ್ಟಿಗೆ ಲಿಂಗಾಯತ ಸಾಹಿತ್ಯದ ಬಗ್ಗೆ ಬ್ರೌನರ ಗೌರವ ಹೆಚ್ಚು ಇತ್ತು.

19ನೇ ಶತಮಾನದ ಪ್ರಾರಂಭದಲ್ಲಿ ಪಾದ್ರಿಗಳು ಹಾಗೂ ಲಿಂಗಾಯತರ ನಡುವೆ ಧಾರ್ಮಿಕ, ಸಾಂಸ್ಕೃತಿಕ ಸಂಘರ್ಷಗಳು ಲಿಂಗಾಯತ ಸಾಹಿತ್ಯದ ಭಾಷಾಂತರ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಿವೆ. ಈ ಹಂತದಲ್ಲಿ ಬಾಶೆಲ್‌ಮಿಶನ್ ಚರ್ಚ್ ಧಾರವಾಡ, ಹುಬ್ಬಳ್ಳಿ, ಬೆಟಗೇರಿ, ಮಲಸಮುದ್ರ ಹಾಗೂ ಗುಳೇದಗುಡ್ಡಗಳಲ್ಲಿ ಚರ್ಚ್ ಸ್ಥಾಪಿಸಿತು. 1838ರಲ್ಲಿ ಮೊಗ್ಲಿಂಗ್ ಧಾರವಾಡ ಜಿಲ್ಲೆಯಲ್ಲಿ 13 ಸಾವಿರ ಜನ ಲಿಂಗಾಯತರು ಇದ್ದಾರೆ ಎಂದು ದಾಖಲಿಸಿದ್ದ. ವುರ್ಥನು ಕನ್ನಡ ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದರಿಂದ ಆತನ ಬರವಣಿಗೆ ಮೌಲಿಕವಾಗಿದೆ. ಮುಖ್ಯವಾಗಿ ಲಿಂಗಾಯತರು ಕ್ರೈಸ್ತ ಧರ್ಮಕ್ಕೆ ಮರುಳಾದಂತೆ ಕಾಣುವದಿಲ್ಲ. ಬರಗಾಲದಲ್ಲಿ ಕ್ರಿಸ್ತನು ಏಕೆ ಮಳೆ ತರಿಸಲಾರ ಎಂಬ ಪ್ರಶ್ನೆಯನ್ನು ಲಿಂಗಾಯತರು ಹಾಕುತ್ತಾರೆ(ಪು.20). ಒಟ್ಟಿಗೆ ವುರ್ಥರು ಮಾನಸಿಕ ಕ್ಷೋಬೆಗೆ ಒಳಗಾಗಿದ್ದಾರೆ. ವುರ್ಥರು ಮಾಡಿದ ಸಾಧನೆ ಎಂದರೆ ಲಿಂಗಾಯತ ಪುರಾಣಗಳ ಲೋಪದೋಷಗಳನ್ನು ಎತ್ತಿ ಹಿಡಿದು ಕ್ರೈಸ್ತ ಮತದ ಶ್ರೇಷ್ಠತೆ ಸಾಧಿಸುವದಾಗಿತ್ತು. ಭಾಷಾಂತರ ನಿಯಮಗಳನ್ನು ಗಾಳಿಗೆ ತೂರಿ ಲಿಂಗಾಯತರ ಆಗಿನ ವೈರಿಗಳಾದ ಜೈನರ ಚಾಳಿಸಿನಿಂದ ನೋಡುತ್ತಾರೆ. ವುರ್ಥರು ಲಿಂಗಾಯತ ಧರ್ಮದ ಬಗ್ಗೆ ಅವಹೇಳನಕಾರಿ ಬರವಣಿಗೆ ಮಾಡಿದ್ದಾರೆ ಎಂಬ ಸಂಶಯ ಬರುತ್ತದೆ.

ವುರ್ಥರು ಬಸವಕಲ್ಯಾಣದ ಬಗ್ಗೆ ಬಹಳ ಹಗುರವಾಗಿ ಬರೆಯುತ್ತಾರೆ. ಇದನ್ನು ಮರು ಸೃಷ್ಟಿಸಲಾಗದು ಎಂದು ಹೇಳುತ್ತಾರೆ(ಪು.27). ಆದರೆ ಈಗ ಬಸವಕಲ್ಯಾಣ ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಉಸ್ತುವಾರಿಯಲ್ಲಿ ಹೊಸ ರೂಪ ಪಡೆಯತೊಡಗಿದೆ. ಕ್ರಿಸ್ತನೆ ನಿಜವಾದ ಪ್ರಭು ಎಂದು ಹೇಳುತ್ತ ಈ ಪಾದ್ರಿಗಳು ಬಸವನ ಅವತಾರ ಎಂದು ಹೇಳುತ್ತಾರೆ. ಒಟ್ಟಿಗೆ ವುರ್ಥರು ಬರೆದ ಲಿಂಗಾಯತ ಸಾಹಿತ್ಯ ಹಲವು ಮಿಥ್ಯಗಳಿಂದ ಕೂಡಿದೆ. ವಸಾಹತು ಕಾಲಘಟ್ಟದಲ್ಲಿ ಭಾಷಾಂತರ ಭಿನ್ನ ಮಜಲುಗಳಿಂದ ಕೂಡಿತ್ತು. ಬ್ರೌನರು ಲಿಂಗಾಯತವನ್ನು ಆದರ್ಶವಾದಿ, ಉದಾರವಾದಿ ಎಂದು ಕರೆದರೆ, ವುರ್ಥರು ಲಿಂಗಾಯತವನ್ನು ಜಾತಿವಾದಿಗಳೆಂದು ವರ್ಣಿಸುತ್ತಾ ಬಹುದೇವೋಪಾಸನೆ, ಮೂಢನಂಬಿಕೆ, ಪರಮತ ದ್ವೇಷ ಮುಂತಾದವುಗಳನ್ನು ದಾಖಲಿಸಿದ್ದಾರೆ. ಕರ್ನಾಟಕದ

ಲಿಂಗಾಯತರು ವುರ್ಥನ ಭಾಷಾಂತರ ಮನ್ನಿಸುವಲ್ಲಿ ಗೊಂದಲಗಳಿವೆ.

ಎರಡನೇ ಅಧ್ಯಾಯ 'ಅಳಿವರ ಉಳಿವರ ಸುಳಿವರ ನಿಲವ ನೋಡ...' ಎಂಬ ಲೇಖನ ಬೆಳಗಾವಿಯಲ್ಲಿ ಜರುಗಿದ ವಿಚಾರ ಸಂಕಿರಣದಲ್ಲಿ ಮಂಡಿಸಲಾಗಿದೆ. 'ಪ್ರಳಯ' ಎಂಬ ಶಬ್ದಕ್ಕೆ ಲೇಖಕರು ಇಲ್ಲಿ ಹೊಸ ವ್ಯಾಖ್ಯಾನ ನೀಡಿದ್ದಾರೆ. ಪ್ರಳಯ ಎಂದರೆ ಕೇವಲ 'ಇಲ್ಲವಾಗುವದಲ್ಲ'. ನಮ್ಮ ಪ್ರಸ್ತುತ ಸಾಹಿತ್ಯ ಪರಿಸ್ಥಿತಿಯನ್ನು ಮತ್ತು ಅದರ ಇತಿಹಾಸವನ್ನು ನಾವು ಅರಿವು ಮಾಡಿಕೊಳ್ಳದೆಹೋದಾಗ ಆಗುವ ಶೂನ್ಯತೆಯನ್ನು ಪ್ರಳಯ ಎಂದು ಸಂಕೇತಿಸಬಹುದು(ಪು.43). ಲಿಂಗಾಯತರು ವಸಾಹತುಶಾಹಿ ಸಾಹಿತ್ಯದಿಂದ ತಮಗೆ ಬೇಕಾದುದನ್ನು ಮಾತ್ರ ಆಯ್ಕೆ ಮಾಡಿ ಕೊಂಡಿದ್ದಾರೆ. ಇದರಿಂದ ಸಂಸ್ಕೃತಿಯಲ್ಲಿ 'ಏಕರೂಪತೆ' ಉಂಟಾಗುವ ಸಾಧ್ಯತೆ ಇದೆ ಎಂದು ಬೋರಟ್ಟಿಯವರು ಸಂಶಯಿಸಿದ್ದಾರೆ. ಲಿಂಗಾಯತ ಧರ್ಮ ನಿರಂತರವಾಗಿ ಸಂಘರ್ಷದಿಂದಲೆ ಬೆಳೆದಿದೆ.

ಅನುಭವ ಮಂಟಪದ ವಿವಾದವನ್ನು ಇಲ್ಲಿ ಸ್ಮರಿಸಬಹುದು. 1919ರಲ್ಲಿ ಶ್ರೀನಿವಾಸಾಚಾರ್ಯರು ಶುಭೋದಯ ಪತ್ರಿಕೆಯಲ್ಲಿ ಬಸವಣ್ಣ ಹಾಗೂ ಅಲ್ಲಮನ ಬಗ್ಗೆ ಅವಹೇಳನಕಾರಿ ಲೇಖನ ಬರೆದರು. ಇದನ್ನು ಸಿದ್ರಾಮಪ್ಪ ಪಾವಟೆ ಹಾಗೂ ವೀರಪ್ಪ ಬಿಳಿಅಂಗಡಿಯವರು ವಿರೋಧಿಸಿ ನ್ಯಾಯಾಲಯದ ಮೊರೆ ಹೋಗಿದ್ದರು. ಬಸವಣ್ಣನ ಹುಟ್ಟಿನ ಬಗ್ಗೆ ಇಂದಿಗೂ ಹಲವು ವಿಭಿನ್ನ ಕೃತಿಗಳು ಬರತೊಡಗಿವೆ. ಬಸವಣ್ಣ ವಿಶ್ವಕರ್ಮ, ಕುರುಬ, ಪರಿಶಿಷ್ಟ ಜಾತಿಯಲ್ಲಿ ಹುಟ್ಟಿದನೆಂಬ ವಾದಗಳು ಇವೆ. ಒಟ್ಟಿಗೆ ವಸಾಹತುಶಾಹಿ ಕಾಲಘಟ್ಟದಲ್ಲಿ ಪುರಾಣ ಮತ್ತು ವಚನ ಪಂಥಿಯರ ನಡುವೆ ಘರ್ಷಣೆ ಪ್ರಾರಂಭವಾಯಿತು.

ಮೂರನೆಯ ಅಧ್ಯಾಯ ಬೋರಟ್ಟಿಯವರ ಪಿ.ಎಚ್‌ಡಿ ಪ್ರಬಂಧದ ಭಾಗವಾಗಿದೆ. ಮಾರ್ಗ- 1 ಮಹಾಚೈತ್ರ, ಧರ್ಮಕಾರಣ ಮುಂತಾದ ಪುಸ್ತಕಗಳ ಬಗ್ಗೆ ಹಲವು ವಿವಾದಗಳು ಹುಟ್ಟಿಕೊಂಡಿವೆ. ಸಾಮಾನ್ಯ ಓದುಗರು ಅವುಗಳು ಅಧ್ಯಯನ ಯೋಗ್ಯವೆಂದು ಗ್ರಹಿಸದೆ, ಸಾಹಿತ್ಯೇತರ ಕಾರಣಗಳಿಗಾಗಿ ವಿರೋಧಿಸಿದರು(ಪು.58). ಇಂತಹ ಸಂದರ್ಭಗಳು ಸಾಹಿತ್ಯವನ್ನು ರಾಜಕೀಯಗೊಳಿಸುವ ಯತ್ನ ಜರುಗಿ ಲಿಂಗಾಯತ ಸಮಾಜದ, ಧರ್ಮ ಹಾಗೂ ಇತಿಹಾಸದ ಬಗ್ಗೆ ಮರು ಚಿಂತನೆ ಪ್ರಾರಂಭವಾಯಿತು. ತಮ್ಮ ಸಾಹಿತ್ಯ ಹಾಗೂ ಚರಿತ್ರೆಯನ್ನು ಹಲವು ಬಿಕ್ಕಟ್ಟು ವಿವಾದಗಳಲ್ಲಿಯೂ ಲಿಂಗಾಯತರು ಸಮುದಾಯಿಕ ಐಡೆಂಟಿಟಿಯನ್ನು ಉಳಿಸಿಕೊಳ್ಳಲು ಹವಣಿಸಿದ್ದಾರೆ(ಪು.59,61). 1920ರ ಸುಮಾರಿಗೆ ಲಿಂಗಾಯತ ಸಮಾಜ ತನ್ನ ಸಮುದಾಯಕ ಹಾಗೂ ಆಂತರಿಕ ಅಸ್ತಿತ್ವವನ್ನು ಹೊರ ಸಮಾಜಗಳೊಂದಿಗೆ ಹೇಗೆ ರೂಪಿಸಿಕೊಳ್ಳಲು ಯತ್ನಿಸಿತು ಎಂಬುದನ್ನು ಲೇಖಕರು ಹಲವು ಅಂಶಗಳ ಹಿನ್ನೆಲೆಯಲ್ಲಿ ವಿವರಿಸುವ ಯತ್ನ ಮಾಡಿದ್ದಾರೆ.

20ನೇ ಶತಮಾನದ ಪ್ರಾರಂಭ ಘಟ್ಟದಲ್ಲಿ ಲಿಂಗಾಯತ ಸಮುದಾಯದಲ್ಲಿ ಉಂಟಾದ ಸಾಮಾಜಿಕ ಆರ್ಥಿಕ ರಾಜಕೀಯ ಹಾಗೂ ಸಾಂಸ್ಕೃತಿಕ ಪಲ್ಲಟಗಳನ್ನು ವಸ್ತುನಿಷ್ಠವಾಗಿ ದಾಖಲಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಇತ್ತೀಚೆಗೆ ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಹೇರಲು ಕೇಂದ್ರ ಸರಕಾರ ನಿರಾಕರಿಸಿತು. ಇದು ನೀಡಿದ ಹಲವು ಕಾರಣಗಳಲ್ಲಿ ಲಿಂಗಾಯತರ ವಿರೋಧವನ್ನು

ವೀರಶೈವ ಹಾಗೂ ಲಿಂಗಾಯತ ಪದಗಳು ಪರೋಕ್ಷವಾಗಿ ಪಂಚಪೀಠ ಹಾಗೂ ವಿರಕ್ತ ಮಠಗಳ ಬಿರುಕನ್ನು ಸೂಚಿಸುತ್ತವೆ. ಬಸವಣ್ಣ ಪಂಚಪೀಠದವರಿಗೆ ಕೇವಲ ಒಬ್ಬ ಭಕ್ತ. ಬಸವಣ್ಣನ ಬಗ್ಗೆ ಗುರುಪೀಠದವರ ವಿರೋಧ ವಿಚಿತ್ರವಾಗಿದೆ.

ಕಟ್ಟಿಕೊಳ್ಳಲು ಕೇಂದ್ರ ಸರಕಾರ ಸಿದ್ಧವಿರಲಿಲ್ಲ. ಇಲ್ಲಿ ಲಿಂಗಾಯತರು ತಮ್ಮ ಆಂತರಿಕ ವೈರುದ್ಯಗಳಲ್ಲಿ ಹೇಗೆ ಒಗ್ಗಟ್ಟು ಪ್ರದರ್ಶಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಅಲ್ಲದೇ ಶುಭೋದಯ ಪತ್ರಿಕೆಯ ಲೇಖನ 'ಅಭಿವ್ಯಕ್ತಿ' ಸ್ವಾತಂತ್ರದ ಹೆಸರಿನಲ್ಲಿ ಲಿಂಗಾಯತ ಧಾರ್ಮಿಕ ಭಾವನೆಗಳಿಗೆ ನೋವು ಉಂಟಾಗಿದೆ ಎಂದು ವಾದ ಮಾಡಲಾಯಿತು. ಈ ಸಮುದಾಯದ ಆಂತರಿಕ ವಿಷಯಗಳಲ್ಲಿ ಪರಕೀಯರು ಮೂಗು ತೂರಿಸುವದನ್ನು ಜರಿಯಲಾಯಿತು. ಲಿಂಗಾಯತರಲ್ಲಿ ಬ್ರಾಹ್ಮಣ ವಿರೋಧಿ ಅಲೆಯನ್ನು ಈ ಲೇಖನ ಸೃಷ್ಟಿಸಿತು. ಕಾಶಿನಾಥಶಾಸ್ತ್ರಿ ಎಂಬುವವರು ಪಂಚಾಚಾರ್ಯರ ಪರವಾಗಿ ಬೇರೆಯವರ ಹೆಸರಿನಲ್ಲಿ ಲೇಖನಗಳನ್ನು ಬರೆದು ಮತ್ತೆ ವಿವಾದ ಸೃಷ್ಟಿಸಿದರು. ಇದರಿಂದಾಗಿ ಲಿಂಗಾಯತರು ತಮ್ಮ ತತ್ವ ಇತಿಹಾಸ ಮುಂತಾದವುಗಳ ಬಗ್ಗೆ ಮರುಚಿಂತನೆ ಪ್ರಾರಂಭಿಸಿದರು.

ಪಾಶ್ಚಾತ್ಯ ವಿದ್ವಾಂಸರು ಲಿಂಗಾಯತದ ಅಧ್ಯಯನಕ್ಕೆ ನಾಂದಿ ಹಾಡಿದರು ಹಾಗೂ ಅದನ್ನು ವಿವಿಧ ಉದ್ದೇಶಕ್ಕಾಗಿ ಬಳಸಿಕೊಂಡರು(ಪು.69). ಈ ಧರ್ಮದ ಅಧ್ಯಯನದ ಬಗ್ಗೆ ಇರುವ ಅನೇಕ ವಿಷಯಗಳು ತಪ್ಪುತಪ್ಪಾದ ವಿವರವನ್ನು ಒಳಗೊಂಡಿವೆ(ಪು.69-76).ವುರ್ಥ ಎಂಬುವರು ಲಿಂಗಾಯತರ ನಂಬಿಕೆಗಳನ್ನು ವಿಚಿತ್ರ ರೀತಿಯಲ್ಲಿ ಲೇವಡಿ ಮಾಡುತ್ತ ಲಿಂಗಾಯತರ ಉದ್ಧಾರಕ್ಕಾಗಿ ಕ್ರೈಸ್ತ ಪಾದ್ರಿಗಳು ಭಾರತಕ್ಕೆ ಬಂದಿದ್ದಾರೆ ಎಂದು ಹೇಳಿದರು(ಪು.72). ಲಿಂಗಾಯತ ಸಮುದಾಯದ ಅಧ್ಯಯನದಲ್ಲಿ ಇರುವ ವೈರುದ್ಯಗಳನ್ನು ದಾಖಲಿಸುತ್ತಾ, 1880ರಲ್ಲಿ ಬ್ರಾಹ್ಮಣತ್ವದ ಹಕ್ಕನ್ನು ಪಡೆಯಲು ಲಿಂಗಾಯತರು ಇಟ್ಟ ಸ್ವಾಭಿಮಾನದ ಮೊದಲ ಹೆಜ್ಜೆ ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ.

ಹಿರೆಮಲ್ಲೂರ ಈಶ್ವರನ್ ಲಿಂಗಾಯತ ಸಾದರ ಪಂಗಡಕ್ಕೆ ಸೇರಿದ ಸಮಾಜ ವಿಜ್ಞಾನಿ. ಇವರು ಲಿಂಗಾಯತದ ಸಮುದಾಯಕ ಮೇಲ್ಚಲನೆಯನ್ನು (ಸಂಸ್ಕೃತಾನುಕರಣಕ್ಕೆ ಬದಲಾಗಿ ಬಳಸಿದ ಪದ) ಮೂರು ಹಂತಗಳಲ್ಲಿ ಗುರುತಿಸಿದ್ದಾರೆ. ಉದಾ: ಚಿದ್ರಕ್ತ, ಏಕೀಭಾವತ್ವ ಹಾಗೂ ವ್ಯಕ್ತಿನಿಷ್ಠ ಹಂತ. 1890ರಲ್ಲಿ ಮೊದಲ ಹಂತದಲ್ಲಿ ಸಮುದಾಯಕ ಒಳಿತಿನಭಾವ ಮುಖ್ಯವಾಗಿತ್ತು. ಸಂಘಟನೆಯ ಕೊರತೆ ಅನುಭವಿಸುತ್ತಿದ್ದ ಲಿಂಗಾಯತರನ್ನು ಒಂದು ಗೂಡಿಸಿ ರಾಜಕೀಯ ಸಾಮಾಜಿಕ ಸಮಗ್ರತೆ ತರುವ ಕಾರ್ಯ ಜರುಗಿತು. 1950ರಿಂದ ರಾಜಕೀಯ ಬಲ ಪ್ರದರ್ಶಿಸುವ ಪ್ರಯತ್ನವನ್ನು ಲಿಂಗಾಯತರು ಮಾಡಿದರು. 1950ರ ನಂತರ ನಾಯಕರಲ್ಲಿ ಸ್ವಹಿತಾಸಕ್ತಿ ಬೆಳೆಯಿತು. ಈ ಸಂದರ್ಭದಲ್ಲಿ ಕರ್ನಾಟಕದ ಏಕೀಕರಣ ಚಳವಳಿ ಉತ್ತರ ಕರ್ನಾಟಕದಲ್ಲಿ ತೀವ್ರಗೊಂಡಿದ್ದನ್ನು ಹಾಗೂ ಮೈಸೂರ ಭಾಗದ ಒಕ್ಕಲಿಗರು ಈ ಚಳವಳಿಯನ್ನು ವಿರೋಧಿಸಿದ್ದನ್ನು ಲೇಖಕರು ದಾಖಲಿಸಬಹುದಿತ್ತು. ಲಿಂಗಾಯತರು ತಮ್ಮ ಸಾಂಸ್ಕೃತಿಕ ಅಸ್ತಿತ್ವವನ್ನು ಪ್ರದರ್ಶಿಸುವದು ಕಾಲದ ಅಗತ್ಯವಾಗಿತ್ತು. ಹೀಗಾಗಿ ತಮಗೆ ಬೇಕಾದ ಸಾಹಿತ್ಯವನ್ನು ಪೋಷಿಸುತ್ತಾ ಬೇಡಾದ ಸಾಹಿತ್ಯಕ್ಕೆ ಗೋರಿ ತೊಡಿದ ಸಂದರ್ಭವನ್ನು ಕಾಣಬಹುದು. ಈ ಹಂತದಲ್ಲಿ ಸಮುದಾಯದ ಸಂಘಟನೆಗೆ ಹಾಗೂ ಸಾಹಿತ್ಯದ ಪ್ರಸಾರಕ್ಕೆ ತಂತ್ರಜ್ಞಾನದ ಬೆಳವಣಿಗೆ ನೆರವು ನೀಡಿತು.

ಲಿಂಗಾಯತರನ್ನು ಆಧುನೀಕರಣಗೊಳಿಸುವಲ್ಲಿ 19ನೇ ಶತಮಾನದ ಕೊನೆಗೆ ಕರಿಬಸವಶಾಸ್ತ್ರೀಗಳು, ವೀರ ಸಂಗಪ್ಪ, ಗಿಲಗಂಚಿ ಗುರುಸಿದ್ಧಪ್ಪ, ಅರಟಾಳ ರುದ್ರಗೌಡ, ಶಿರಸಂಗಿ ಲಿಂಗರಾಜ ಮುಂತಾದವರು ವಿಶೇಷವಾಗಿ ಶ್ರಮಿಸಿದ್ದಾರೆ. ಈ ಒಟ್ಟು ಹೋರಾಟದ ಪ್ರತಿಫಲ ಎಂದರೆ ಮೈಸೂರು ಸರಕಾರ ಇವರನ್ನು ಲಿಂಗಿ ಬ್ರಾಹ್ಮಣರೆಂದು ಗುರುತಿಸಿತು. ಜೊತೆಗೆ ಸಂಖ್ಯಾಬಲ ಆಧಾರವಾಗಿಟ್ಟುಕೊಂಡು ಹೋರಾಟಕ್ಕೆ ಹೊಸ ಹೆಜ್ಜೆ ಹಾಕಲಾಯಿತು. ಬ್ರಾಹ್ಮಣತ್ವ ಸಾಧಿಸಹೋರಟ ಲಿಂಗಾಯತರ ಕ್ರಿಯೆಯನ್ನು ಕೇವಲ ಸಂಸ್ಕೃತಾನುಕರಣ ಎಂದು ಕರೆಯಲಾಗದು. ಬ್ರಾಹ್ಮಣ್ಯದ ಮೂಲ ಬಂಡವಾಳವಾದ ಮಡಿ ಮೈಲಿಗೆ ಕಲ್ಪನೆಯನ್ನು ಬ್ರಾಹ್ಮಣರ ವಿರೋಧಕ್ಕೆ ಬಳಸಿಕೊಂಡ ಲಿಂಗಾಯತರು ಇತರ ಕೆಳಜಾತಿಗಳನ್ನು ಬ್ರಾಹ್ಮಣ ವಿರೋಧಿಯನ್ನಾಗಿ ರೂಪಿಸಲು ಯತ್ನಿಸಿದರು. ಲಿಂಗಾಯತ ಸಾಹಿತ್ಯಕ್ಕೆ ಹೊಸ ರೂಪಕೊಟ್ಟು ಹೊಸ ತಲೆಮಾರಿನ ಲೇಖಕರಿಗೆ ಬಸವನ ಕ್ರಾಂತಿಗಿಂತ ವೀರಶೈವದ ಪ್ರಾಚೀನತೆ ಮುಖ್ಯವಾಗಿತ್ತು(ಪು.85-89). ಬಹುಶಃ ಅಖಿಲ ಭಾರತ ವೀರಶೈವ ಮಹಾಸಭೆಯ ಸಮ್ಮೇಳನಗಳ ಅಧ್ಯಕ್ಷ ಪೀಠದಲ್ಲಿ ವೀರಶೈವದ ಪ್ರಾಚೀನತೆಗೆ ಹೆಚ್ಚು ಒತ್ತು ಕೊಟ್ಟ ಸಂದರ್ಭಗಳನ್ನು ಕಾಣಬಹುದು(ಪು.85-89).

ಮೂರನೇ ಅಧ್ಯಾಯದಲ್ಲಿ ಗುರು-ವಿರಕ್ತರ ತಾತ್ವಿಕ ನಿಲವು, ಬ್ರಾಹ್ಮಣ, ಪಂಚಪೀಠ, ವಿರಕ್ತರ ಹಿನ್ನೆಲೆಗಳ ಚರ್ಚೆ ತಾರಕಕ್ಕೇರಿದ ವಿಷಯಗಳನ್ನು ಒಳಗೊಂಡಿದೆ. ವೀರಶೈವ ಹಾಗೂ ಲಿಂಗಾಯತ ಪದಗಳು ಪರೋಕ್ಷವಾಗಿ ಪಂಚಪೀಠ ಹಾಗೂ ವಿರಕ್ತ ಮಠಗಳ ಬಿರುಕನ್ನು ಸೂಚಿಸುತ್ತವೆ. ಬಸವಣ್ಣ ಪಂಚಪೀಠದವರಿಗೆ ಕೇವಲ ಒಬ್ಬ ಭಕ್ತ. ಬಸವಣ್ಣನ ಬಗ್ಗೆ ಗುರುಪೀಠದವರ ವಿರೋಧ ವಿಚಿತ್ರವಾಗಿದೆ. ಬಸವಣ್ಣನ ಭಾವಚಿತ್ರವಿರುವ ಸ್ವಾಗತ ಕಮಾನು ಇದ್ದರೆ ಅದನ್ನು ತೆಗೆಯಿಸಿ ಮೆರವಣಿಗೆಯಲ್ಲಿ ಮುಂದೆಹೋದ ಸಂದರ್ಭಗಳಿವೆ. ಇಂತಹ ಹುಚ್ಚುತನವನ್ನು ಪಾಶ್ಚಾತ್ಯ ವಿದ್ವಾಂಸರು ಲೇವಡಿ ಮಾಡಿದ್ದಾರೆ. ಬಸವಣ್ಣನ ಭಾವಚಿತ್ರ ತೆಗೆಯಿಸಿ ಮೆರವಣಿಗೆಯಲ್ಲಿ ಸಾಗಿದ ಪಂಚಪೀಠದ ಸ್ವಾಮಿಗಳಿಗೆ ಮುಂದಿನ ಸ್ವಾಗತ ಕಮಾನಿನಲ್ಲಿ ಪಂಡಿತ ನೆಹರೂರವರು ಬೂಟುಗಾಲಿನಲ್ಲಿ ಮೇಲೆ ನಿಂತ ಭಾವಚಿತ್ರ ಯಾವ ಗೊಂದಲವನ್ನು ಸೃಷ್ಟಿಸಲಿಲ್ಲ.

ಗುರು ವಿರಕ್ತರ ನಡುವೆ ಸೇತುವೆ ಕಟ್ಟಲು ಇಂದಿಗೂ ನಿರಂತರ ಪ್ರಯತ್ನಗಳು ನಡೆದಿವೆ. ಆದರೆ ಅವು ಯಶಸ್ವಿ ಯಾಗಿಲ್ಲ. ಬಸವ ಸಮಿತಿ, ವೀರಶೈವ ಮಹಾಸಭೆ, ಶರಣ ಸಾಹಿತ್ಯ ಪರಿಷತ್ ಮುಂತಾದವುಗಳುಕೆಲವು ವ್ಯಕ್ತಿಗಳ ನಿಯಂತ್ರಣದಲ್ಲಿವೆ. ಲಿಂಗಾಯತರಲ್ಲಿ ಒಂದು ಕಾಲಕ್ಕೆ Centripetel ಗುಣ

(45ನೇ ಪುಟಕ್ಕೆ)

ವೈಚಾರಿಕ ಕೃತಿಯೊಂದರ ಅಚ್ಚಳಿಯದ ಪ್ರಭಾವ

ಇತಿಹಾಸದ ವಸ್ತುಸ್ಥಿತಿಗಳನ್ನು ನಮ್ಮ ಪಠ್ಯಪುಸ್ತಕಗಳು ಬೋಧಿಸುವ ವಿಧಾನದಿಂದಾಗಿ ನಮ್ಮಲ್ಲಿ ವಾಸ್ತವಿಕ ತಿಳಿವಳಿಕೆಗಿಂತ ಹೆಚ್ಚಾಗಿ ಪೌರಾಣಿಕ ಪವಾಡೀಕೃತ ಪರಿಕಲ್ಪನೆಗಳು ಮಾತ್ರ ಎಳೆಯ ವಯಸ್ಸಿನಲ್ಲಿ ಮೂಡಿಸುತ್ತವೆ. ಧರ್ಮಗುರುವೆಂದರೆ ಅದರಲ್ಲೂ ಲೋಕ ಪ್ರಸಿದ್ಧ ಶಂಕರಾಚಾರ್ಯನೆಂದರೆ ಉಪದೇಶ ನೀಡಲು ಅಥವಾ ಧ್ಯಾನ ಮಾಡಲು ಜಿಂಕೆಯ ಚರ್ಮದ ಮೇಲೆ ಆಸೀನನಾಗಿರುವ ಭಂಗಿಯೊಂದನ್ನು ಮಾತ್ರ ಕಲ್ಪಿಸಿಕೊಳ್ಳ ಬಲ್ಲವನಾಗಿದ್ದ ನನಗೆ ಧರ್ಮ ಪ್ರಚಾರದ ಹಿಂದೆ, ತತ್ವದರ್ಶನದ ಪ್ರತಿಪಾದನೆಯ ಮುಖವಾಡದ ಹಿಂದೆ ಎಷ್ಟು ಹಿಂಸೆ, ಕ್ರೌರ್ಯ, ದುರಾಚಾರ ಅಡಗಿರಬಹುದೆಂಬುದು ಈ ಕೃತಿಯ ಓದಿನಿಂದ ಅರಿವಿಗೆ ಬಂದಿತು.

'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಕನ್ನಡದ ಒಂದು ಪ್ರಮುಖ ವೈಚಾರಿಕ ಕೃತಿ. ಆ ಕೃತಿಯ ಮೌಲ್ಯ ಅದರ ಗಾತ್ರವನ್ನು ಮೀರಿದ್ದು. ಕನ್ನಡದ ಹೊಸ ಓದುಗರಿಗೆ ಈವರೆವಿಗೂ ಅದರ ಮಹತ್ವ ಕಡಿಮೆಯಾಗಿಲ್ಲ. ಬ್ರಾಹ್ಮಣಶಾಹಿ ಮೌಲ್ಯಗಳು ಮತ್ತು ಮತಾಂಧ ನಿಲುವುಗಳನ್ನು ಖಚಿತವಾಗಿ ವಿರೋಧಿಸಲು ಬೇಕಾಗಿರುವ ವೈಚಾರಿಕತೆ ಬೆಳೆಸಿಕೊಳ್ಳಲು ಈ ಕೃತಿಯೊಳಗಿರುವ ಅಧ್ಯಯನಪೂರ್ವಕ ಮಾಹಿತಿ ಒಂದು ಅತ್ಯುತ್ತಮ ಮಾರ್ಗದರ್ಶನ ನೀಡುತ್ತದೆ. ಶಂಕರಾಚಾರ್ಯ ಇತಿಹಾಸ ಕಾಲಘಟ್ಟದ ಒಂದು ಹಂತದಲ್ಲಿ ಇತರೆ ಧರ್ಮೀಯರ ಮೇಲೆ ನಡೆಸಿದ ದುರಾಕ್ರಮಣ ಯಾವ ಬಗೆಯದು ಎಂಬುದನ್ನು ವಿವರಿಸುತ್ತಲೇ ಒಟ್ಟಾರೆಯಾಗಿ ಹಿಂದೂ ಧರ್ಮ ಎಂಬ ಪೋಷಾಕು ಧರಿಸಿಕೊಂಡಿರುವ ಬ್ರಾಹ್ಮಣ ಧರ್ಮವು ಪ್ರತಿಪಾದಿಸುವ ಜನವಿರೋಧಿ ನೀತಿಯೇನೆಂಬುದನ್ನು ಈ ಕೃತಿ ಬಹಳ ಪರಿಣಾಮಕಾರಿಯಾಗಿ ವಿವರಿಸುತ್ತದೆ. ಈ ಕೃತಿ ಬಂದು ಈಗ ಹೆಚ್ಚೂ ಕಡಿಮೆ ಮೂವತ್ತು ವರ್ಷಗಳಾಗುತ್ತಿದೆ. ಇದೇ ಬಗೆಯ ಪರಿಣಾಮಕಾರಿತ್ವವುಳ್ಳ ಹಲವಾರು ಕೃತಿಗಳು ಕನ್ನಡದಲ್ಲಿ ಬಂದಿವೆ. ಆದರೆ ಅವುಗಳಿಗೆ ಒಂದು ಮಾರ್ಗ ಪ್ರವರ್ತಕ ಕೃತಿಯ ರೀತಿಯಲ್ಲಿ ಇದು ಮೂರು ದಶಕಗಳಿಗಿಂತ ಮೊದಲೇ ಬಂದಿತ್ತೆಂಬುದು ಅದರ ಪ್ರಸ್ತುತತೆಯನ್ನು ನಿದರ್ಶಿಸುತ್ತದೆ. ನನ್ನ ಆರಂಭಕಾಲದ ವೈಚಾರಿಕ ಕೃತಿಗಳ ಅಧ್ಯಯನದಲ್ಲಿ ಈ ಕೃತಿ ಬೀರಿದ ಪರಿಣಾಮ ಮರೆಯಲಾಗದಂತಿದೆ.

ಮೈಸೂರು ಮಹಾರಾಜಾ ಕಾಲೇಜಿನಲ್ಲಿ 1982–83ರಲ್ಲಿ ನಾನು ಪ್ರಥಮ ವರ್ಷದ ಬಿ ಎ ವಿದ್ಯಾರ್ಥಿ. ಪತ್ತೇದಾರಿ ಕಾದಂಬರಿ, ರಮ್ಯ ಚಿತ್ರಣದ ಐತಿಹಾಸಿಕ ಕಾದಂಬರಿಗಳು ಹಾಗೂ ಪ್ರೇಮ ಕಥಾನಕದ ಕತೆ ಕಾದಂಬರಿಗಳು ಆಗ ನನ್ನ ಮೆಚ್ಚಿನ ಪುಸ್ತಕಗಳಾಗಿದ್ದವು. ಚಿತ್ರದುರ್ಗದ ಅತ್ಯಂತ ಸಾಧಾರಣವಾದ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಸಿಕ್ಕುತ್ತಿದ್ದ ಇಂತಹ ಪುಸ್ತಕಗಳನ್ನು ನಾನು ಬೇಕಾದಷ್ಟು ಓದಿದ್ದೆ. ಮೈಸೂರಿಗೆ ಬಂದ ಮೇಲೆ ಬಿ ಎ ತರಗತಿಯಲ್ಲಿದ್ದ ಅಧ್ಯಾಪಕರು ಪಾಠ ಮಾಡುವಾಗ ಮಾತನಾಡುತ್ತಿದ್ದ ವೈಚಾರಿಕ ವಿಷಯಗಳಿಂದಾಗಿ ಒಂದುಮಟ್ಟಿಗೆ ಕಥೆ ಕಾದಂಬರಿಗಳ ರಂಜನೆಯನ್ನು ಹೊರತುಪಡಿಸಿದ ವಿಚಾರಗಳನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿ ಉಂಟಾಯಿತು. ಮಹಾರಾಜ ಕಾಲೇಜಿನ ದೊಡ್ಡ ಗ್ರಂಥಾಲಯಕ್ಕೆ ಹೋಗಿ ಪುಸ್ತಕಗಳನ್ನು ಹುಡುಕುವುದು ಇರುವುದರಲ್ಲೇ ಓದಿಸಿಕೊಳ್ಳುವ ಗುಣ ಹೊಂದಿದ್ದ ವೈಚಾರಿಕ ಕೃತಿಗಳನ್ನು ಓದುವುದು ಆಗ ನನಗೆ ಒಂದು ಹವ್ಯಾಸವಾಗಿ ರೂಪುಗೊಳ್ಳತೊಡಗಿತು.

ಆ ಸಂದರ್ಭದಲ್ಲಿ ನನಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿದ್ಯಾರ್ಥಿ ಸಂಘಟನೆಯಾದ ಎಸ್ ಎಫ್ ಐ ಸಂಪರ್ಕ ಕೂಡ ಏರ್ಪಟ್ಟಿತು. ಅದರ ಮುಖಂಡರು ಮಾತನಾಡುತ್ತಿದ್ದ ವಿಷಯಗಳು ಧರ್ಮ, ಸಮಾಜ, ರಾಜಕೀಯ, ಸಾಹಿತ್ಯ ಮುಂತಾದ ಬೇರೆ ಬೇರೆ ಅಂಶಗಳನ್ನು ಒಳಗೊಂಡಿರುತ್ತಿದ್ದವು. ವ್ಯವಸ್ಥೆಯ ವಿರೋಧಿಯಾಗಿ ವಾದ ಮಾಡುವುದು, ಹಾಗೆ ವಾದ ಮಾಡಲು ಬೇಕಿರುವ ವಿಚಾರಗಳನ್ನು ತಿಳಿದುಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಹಾಸ್ಟೆಲ್ ಜೀವನದಲ್ಲಿದ್ದ ನನ್ನ ಬಿಡುವಲ್ಲಿ ಸಾಕಷ್ಟು ಗಂಭೀರವಾಗಿಯೇ ಮಾಡತೊಡಗಿದೆ. ಅಂತಹ ಸಂದರ್ಭದಲ್ಲಿ ನನ್ನ ಕೈಗೆ ಸಿಕ್ಕ ಕೃತಿ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಎಂಬ ಕೆ.ಎಸ್ ಭಗವಾನ್ ಅವರ ಕೃತಿ. ಅದಾಗ ಕೇವಲ ನಲವತ್ತೋ ಐವತ್ತೋ ಪುಟಗಳ ಪುಟ್ಟ ಪುಸ್ತಿಕೆಯಾಗಿತ್ತು. ಮುಖಪುಟದ ಮೇಲೆ ಯಾವ ಚಿತ್ರಗಳೂ ಇರದೆ ಪುಸ್ತಕದ ಶೀರ್ಷಿಕೆ ಮತ್ತು ಲೇಖಕರ ಹೆಸರನ್ನು ಮಾತ್ರ ಹೊಂದಿದ್ದ ಒಂದು ಕೃತಿಯಾಗಿತ್ತು. ಕಮ್ಯುನಿಸ್ಟ್ ಪಕ್ಷದ ಸಂಪರ್ಕದಲ್ಲಿ ಓಡಾಡತೊಡಗಿದ್ದ ನಾನು ಮುಖಪುಟದ ಬಣ್ಣಗಳನ್ನು ನೋಡಿ ಪುಸ್ತಕ ಆರಿಸಿಕೊಳ್ಳುವ ಅಭ್ಯಾಸ ಕ್ರಾಂತಿಕಾರಿ ಅಭಿರುಚಿ ಅಲ್ಲವೆಂದು ಕಲಿತುಕೊಳ್ಳತೊಡಗಿದ್ದೆ.

ಕಮ್ಯುನಿಸ್ಟ್ ಪಕ್ಷದ ಹಲವಾರು ವೈಚಾರಿಕ ಪುಸ್ತಿಕೆಗಳೂ ಕೂಡ (ಉದಾ: ಎಸ್ ಜಿ ಸರ್‌ದೇಸಾಯಿ, ಬರ್ದನ್, ಬಿ ವಿ ಕಕ್ಕಿಲಾಯ ಮುಂತಾದವರು ಬರೆದಿದ್ದು) ಹೀಗೆ ಹೆಚ್ಚು ಅಲಂಕರಣೆಗಳಿಲ್ಲದೆ ಮುದ್ರಿತವಾಗಿ ಬಂದಿದ್ದ ಕೃತಿಗಳಾದ್ದರಿಂದ ನನಗೆ ಈ ಕೃತಿಯನ್ನು ಓದಲು ಆರಿಸಿಕೊಳ್ಳಲಿಕ್ಕೆ ಹೆಚ್ಚು ಕಷ್ಟವಾಗಲಿಲ್ಲ. ಅದರಲ್ಲೂ ಮಠ, ಮಠಾಧೀಶರು, ವೇದ, ಪುರಾಣ ಇವುಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ಮಾಹಿತಿ ಒದಗಿಸುವ ಕೃತಿಗಳ ಬಗ್ಗೆ ನನಗೆ ಹೆಚ್ಚು ಆಸಕ್ತಿ ಮೂಡತೊಡಗಿತ್ತು. ಯಾಕೆಂದರೆ ನಾನು ಆಗ ಎಸ್ ಎಫ್ ಐ ನ ಮೈಸೂರು ಘಟಕದ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದೆ. ಸಹ ವಿದ್ಯಾರ್ಥಿಗಳನ್ನು ಸಂಘಟನೆಗೆ ಸೇರಿಸಿಕೊಳ್ಳುವ ಸಲುವಾಗಿ ನಾನು ಅವರ ಮನ ಮುಟ್ಟುವಂತೆ ಮಾತನಾಡಬೇಕೆಂದರೆ ಓದಿಕೊಳ್ಳುವುದು ಅನಿವಾರ್ಯವಾಗಿತ್ತು. ಇಂತಹ ಸಂದರ್ಭದಲ್ಲೇ 'ಶಂಕರಾ ಚಾರ್ಯ ಮತ್ತು ಪ್ರತಿಗಾಮಿತನ' ಕೃತಿಯನ್ನು ನಾನು ಓದಿದ್ದು.

ಆ ಕೃತಿಯ ವಿಚಾರ ಪ್ರತಿಪಾದನೆ ಹಾಗೂ ಅದಕ್ಕೆ ಪೂರಕವಾಗಿ ಒದಗಿಸಲ್ಪಟ್ಟಿರುವ ಸಂಸ್ಕೃತ ಶ್ಲೋಕಗಳ ಉಲ್ಲೇಖ ಮುಂತಾದವುಗಳೆಲ್ಲ ನನ್ನ ಮನಸ್ಸಿನಲ್ಲಿ ಈಗಲೂ ಅಚ್ಚಳಿಯದೆ ನಿಂತಿವೆ. ನೆನಪಿನಿಂದ ಅವು ಸುಲಭವಾಗಿ ಮರೆಯಾಗಲಾಗದಷ್ಟು ಪ್ರಖರವಾದ ವಿಚಾರ ಸರಣಿಯನ್ನು ಆ ಕೃತಿ ಒಳಗೊಂಡಿತ್ತಾದ್ದರಿಂದ ವೈಚಾರಿಕತೆಯನ್ನು ಕಲಿಯಬೇಕೆಂದು ಪ್ರೇರಣೆಗೊಂಡಿದ್ದ ನನ್ನ ಬುದ್ದಿ ಮತ್ತು ಭಾವಕ್ಕೆ ಅದು ಬಹಳ ಒಳ್ಳೆಯ ಸಾಮಗ್ರಿಯನ್ನು ಒದಗಿಸಿತ್ತು. ಶಂಕರಾಚಾರ್ಯರು ತಮ್ಮ ಶಿಷ್ಯಪಡೆ ಸಮೇತ ಬೌದ್ಧ ವಿಹಾರಗಳನ್ನು, ಬುದ್ಧನ ಪ್ರತಿಮೆಗಳನ್ನು ನಾಶ ಮಾಡಿದ್ದು, ನೂರಾರು ಬೌದ್ಧ ಭಿಕ್ಕುಗಳ ಸಾವಿಗೆ ಕಾರಣವಾದದ್ದು ಮುಂತಾದ ವಿವರಗಳು ಶಂಕರಾಚಾರ್ಯನ ಬಗ್ಗೆ ನನಗಿದ್ದ ಬಾಲಕಲ್ಪನೆಗಳನ್ನು ಸಂಪೂರ್ಣವಾಗಿ ತೊಡೆದುಹಾಕಿತು. ಶಂಕರಾಚಾರ್ಯ ಬಹಳ ದೊಡ್ಡ ಆಚಾರ್ಯ ಎಂಬಷ್ಟು ಪರಿಚಯ ಮಾತ್ರ ಆಗ ನನಗಿತ್ತು. ಅಷ್ಟು ದೊಡ್ಡ ಪಂಡಿತನಾದ ಕಾವಿಧಾರಿ ಸನ್ಯಾಸಿ ತಾನು ನಂಬಿದ ಸಿದ್ಧಾಂತಗಳನ್ನು ಪ್ರತಿಪಾದಿಸಲು ಚರ್ಚೆ, ತರ್ಕ, ವಾಗ್ವಾದಗಳನ್ನು ಮಂಡಿಸುತ್ತಾನೆಂಬುದು ಮಾತ್ರ ನನ್ನ ಕಲ್ಪನೆಯಾಗಿತ್ತು. ರಾಜರ ಸೈನಿಕ ಪಡೆಗಳ ಹಾಗೆ ಒಂದು ಧಾರ್ಮಿಕ ಪಂಥದ ಮುಖಂಡರು ಹಾಗೂ ಅದರ ಅನುಯಾಯಿಗಳು ಕಾರ್ಯಾಚರಣೆ ನಡೆಸಿ ತಮ್ಮ ವಿರೋಧಿಗಳನ್ನು ಬಗ್ಗು ಬಡಿದ ಘಟನೆಗಳು ನಡೆದಿರಬಹುದು ಎಂಬ ಪರಿಕಲ್ಪನೆಯೇ ನನಗೆ ಆಘಾತಕಾರಿಯಾಗಿತ್ತು.



ಇತಿಹಾಸದ ವಸ್ತುಸ್ಥಿತಿಗಳನ್ನು ನಮ್ಮ ಪಠ್ಯಪುಸ್ತಕಗಳು ಬೋಧಿಸುವ ವಿಧಾನದಿಂದಾಗಿ ನಮ್ಮಲ್ಲಿ ವಾಸ್ತವಿಕ

ತಿಳಿವಳಿಕೆಗಿಂತ ಹೆಚ್ಚಾಗಿ ಪೌರಾಣಿಕ ಪವಾಡೀಕೃತ ಪರಿಕಲ್ಪನೆಗಳು ಮಾತ್ರ ಎಳೆಯ ವಯಸ್ಸಿನಲ್ಲಿ ಮೂಡಿಸುತ್ತವೆ. ಧರ್ಮಗುರುವೆಂದರೆ ಅದರಲ್ಲೂ ಲೋಕಪ್ರಸಿದ್ಧ ಶಂಕರಾಚಾರ್ಯನೆಂದರೆ ಉಪದೇಶ ನೀಡಲು ಅಥವಾ ಧ್ಯಾನ ಮಾಡಲು ಜಿಂಕೆಯ ಚರ್ಮದ ಮೇಲೆ ಆಸೀನನಾಗಿರುವ ಭಂಗಿಯೊಂದನ್ನು ಮಾತ್ರ ಕಲ್ಪಿಸಿಕೊಳ್ಳಬಲ್ಲವನಾಗಿದ್ದ ನನಗೆ ಧರ್ಮ ಪ್ರಚಾರದ ಹಿಂದೆ, ತತ್ವದರ್ಶನದ ಪ್ರತಿಪಾದನೆಯ ಮುಖವಾಡದ ಹಿಂದೆ ಎಷ್ಟು ಹಿಂಸೆ, ಕ್ರೌರ್ಯ, ದುರಾಚಾರ ಅಡಗಿರಬಹುದೆಂಬುದು ಈ ಕೃತಿಯ ಓದಿನಿಂದ ಅರಿವಿಗೆ ಬಂದಿತು (ನಾನು ನಂತರ ಓದಿದ ಡಿ ಡಿ ಕೋಸಾಂಬಿ, ದೇಬಿ ಪ್ರಸಾದ್ ಚಟ್ಟೋಪಾಧ್ಯಾಯ ಮುಂತಾದವರ ಕೃತಿಗಳಲ್ಲಿ ಈ ಬಗೆಯ ಧಾರ್ಮಿಕ ಪಂಥಗಳ ನಡುವಿನ ಸಂಘರ್ಷ, ಆ ಸಂಘರ್ಷಗಳ ಹಿಂದಿದ್ದ ರಾಜಕೀಯ ಬೌತಿಕ ಕಾರಣಗಳು ಮುಂತಾದವುಗಳನ್ನೆಲ್ಲ ವಿವರವಾಗಿ ತಿಳಿಸಿಕೊಟ್ಟವು). ಈ ಬಗೆಯದೊಂದು ದುರಾಚಾರವನ್ನು ಶಂಕರಾಚಾರ್ಯ ಬೌದ್ಧರ ಮೇಲೆ ನಡೆಸಿದನೆಂಬ ವಿಷಯ ನನ್ನನ್ನು ಬಹುವಾಗಿ ಕಾಡಿತು (ಶ್ರೀವೈಷ್ಣವ ಪಂಥದ ಪ್ರತಿಪಾದಕ ನಾದ ರಾಮಾನುಜಾಚಾರ್ಯ ಕೂಡ ಆಗಿನ ಮೈಸೂರು ರಾಜ್ಯದಲ್ಲಿ ಜೈನರ ವಿರುದ್ಧ ಇಂತಹುದೇ ದೌರ್ಜನ್ಯ ನಡೆಸಿದ್ದಲ್ಲದೆ ನೂರಾರು ಜೈನ ಮುನಿಗಳ ಸಾವಿಗೂ ಕಾರಣನಾಗಿದ್ದನೆಂಬ ಅಂಶ ನಂತರದಲ್ಲಿ ನನಗೆ ತಿಳಿದುಬಂದ ವಿಷಯವಾಗಿತ್ತು).

ಈ ಶಂಕರಾಚಾರ್ಯ ಪ್ರತಿಪಾದಿಸಿದ ಅದ್ವೈತ ಸಿದ್ಧಾಂತಕ್ಕೆ ಪಾರಮಾರ್ಥಿಕ ನೀತಿ ಬೇರೆ ಇದೆ ಹಾಗೂ ವ್ಯಾವಹಾರಿಕ ನೀತಿ ಬೇರೊಂದಿದೆ ಎಂಬುದನ್ನು ಕೂಡ ಕೆ ಎಸ್ ಭಗವಾನ್ ಈ ಪುಸ್ತಕದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಬ್ರಹ್ಮ ಸತ್ಯ, ಜಗತ್ ಮಿಥ್ಯ ಎನ್ನುವ ಶಂಕರಾಚಾರ್ಯ, ಈ ಮಿಥ್ಯೆಯ ಜಗತ್ತಿನ ಮಿಥ್ಯಾ ಅಸ್ತಿತ್ವರೂಪವಾದ ಚಾಂಡಾಲನೊಬ್ಬನು ಎದುರಾದೊಡನೆ ತನಗೆ ಮೈಲಿಗೆಯಾಗುತ್ತದೆಂದು ಹೌಹಾರಿದ ಉದಾಹರಣೆಯನ್ನು ನಾನು ಮೊದಲು ಕಂಡಿದ್ದು ಈ ಕೃತಿಯಲ್ಲಿಯೇ. ಚಾಂಡಾಲ ಜಾತಿಯ ಆ ತತ್ವಜ್ಞಾನಿ ಸ್ವತಃ ಶಂಕರನಿಗೆ ಅವನು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತದಲ್ಲಿರುವ ದ್ವಿಮುಖ ನೀತಿಯನ್ನು ಮನಗಾಣಿಸಿದ ಎಂಬ ಉಲ್ಲೇಖವನ್ನು ಈ ಕೃತಿಯಲ್ಲಿ ಓದಿ, ದೊಡ್ಡ ದೊಡ್ಡ ದಾರ್ಶನಿಕ ಮೀಮಾಂಸೆಗಳಲ್ಲೂ ಒಳಹೊಕ್ಕು ನೋಡಿದರೆ ಬೇಕಾದಷ್ಟು ಕುತರ್ಕಗಳಿರುತ್ತವೆಂಬ ಸಂಗತಿ ಒಂದು ಬೀಜರೂಪಿಯಾಗಿ ನನ್ನೊಳಗೆ ನಾಟಿಕೊಂಡಿತು. ಬ್ರಹ್ಮನೆಂದರೆ ದೇವರಲ್ಲ, ಬ್ರಹ್ಮ ಎಂಬುದು ಹಲವು ವಿಷಯಗಳಿಗೆ ಅನ್ವಯವಾಗುವ ಪರಿಕಲ್ಪನೆ, ಇದನ್ನು ಉಪನಿಷತ್ತುಗಳು ಯಾವ ಯಾವ ಬಗೆಯಲ್ಲಿ ವರ್ಣಿಸುತ್ತವೆ ಎಂಬುದನ್ನೂ ಕೂಡ ಅತ್ಯಂತ ಪರಿಣಾಮಕಾರಿಯಾಗಿ ಮನಮುಟ್ಟುವಂತೆ ಈ ಕೃತಿಯಲ್ಲಿ ವಿವರಿಸಲಾಗಿತ್ತು.

ಉಪನಿಷತ್ತುಗಳು ಬ್ರಾಹ್ಮಣರ ಕರ್ಮಕಾಂಡವನ್ನು ವಿರೋಧಿಸಿ ಜ್ಞಾನಕಾಂಡವನ್ನು ಪ್ರತಿಪಾದಿಸಿದ ದಾರ್ಶನಿಕ ಕೃತಿಗಳು. ಅವುಗಳನ್ನು ಬರೆದವರೆಲ್ಲ ಶೂದ್ರ ಜನವರ್ಗದಿಂದ ಮೂಡಿ ಬಂದ ಕ್ಷತ್ರಿಯ ಹಿನ್ನೆಲೆಯ ಋಷಿಗಳಾಗಿದ್ದರು ಎಂಬ ಅಂಶ– ವೇದಾಂತ ಎಂದು ಕರೆಯಲ್ಪಡುವ ಒಟ್ಟಾರೆ ಹಿಂದೂ ತತ್ವಶಾಸ್ತ್ರದಲ್ಲಿ ಇರುವ ಭಿನ್ನ ಧಾರೆಗಳನ್ನು, ವೈರುಧ್ಯಗಳನ್ನು, ಸಂಘರ್ಷಾತ್ಮಕ ನಿಲುವುಗಳನ್ನು ಪರಿಚಯಿಸಿ ಆ ಹಿನ್ನೆಲೆಯ ಮತ್ತಷ್ಟು ವಿವರಣಾತ್ಮಕ ಕೃತಿಗಳನ್ನು ಓದಬೇಕೆಂಬ ಹಂಬಲವನ್ನು ನನ್ನೊಳಗೆ ಈ ಕೃತಿ ಆಗ ಉಂಟುಮಾಡಿತೆಂಬುದು ಉತ್ಪ್ರೇಕ್ಷೆಯಮಾತಲ್ಲ.

ಉಪನಿಷತ್ತುಗಳು ಬ್ರಾಹ್ಮಣರ ಕರ್ಮಕಾಂಡವನ್ನು ವಿರೋಧಿಸಿ ಜ್ಞಾನ ಕಾಂಡವನ್ನು ಪ್ರತಿಪಾದಿಸಿದ ದಾರ್ಶನಿಕ ಕೃತಿಗಳು. ಅವುಗಳನ್ನು ಬರೆದವರೆಲ್ಲ ಶೂದ್ರ ಜನವರ್ಗದಿಂದ ಮೂಡಿ ಬಂದ ಕ್ಷತ್ರಿಯ ಹಿನ್ನೆಲೆಯ ಋಷಿಗಳಾಗಿದ್ದರು ಎಂಬ ಅಂಶ– ವೇದಾಂತ ಎಂದು ಕರೆಯಲ್ಪಡುವ ಒಟ್ಟಾರೆ ಹಿಂದೂ ತತ್ವ ಶಾಸ್ತ್ರದಲ್ಲಿ ಇರುವ ಭಿನ್ನ ಧಾರೆಗಳನ್ನು, ವೈರುಧ್ಯಗಳನ್ನು, ಸಂಘರ್ಷಾತ್ಮಕ ನಿಲುವುಗಳನ್ನು ಪರಿಚಯಿಸಿ ಆ ಹಿನ್ನೆಲೆಯ ಮತ್ತಷ್ಟು ವಿವರಣಾತ್ಮಕ ಕೃತಿಗಳನ್ನು ಓದಬೇಕೆಂಬ ಹಂಬಲವನ್ನು ನನ್ನೊಳಗೆ ಈ ಕೃತಿ ಆಗ ಉಂಟುಮಾಡಿತೆಂಬುದು ಉತ್ಪ್ರೇಕ್ಷೆಯ ಮಾತಲ್ಲ.

ವಿವಾಹ ಸಂದರ್ಭದಲ್ಲಿ ಹೇಳುವ ಮಂತ್ರಗಳು ಹೊಂದಿರುವ ಅನಿಷ್ಟಾರ್ಥಗಳನ್ನು ಕೆ ಎಸ್ ಭಗವಾನರ ಈ ಕೃತಿಯನ್ನು ಓದಿದ ಯಾವುದೇ ಓದುಗ ಮನದಟ್ಟು ಮಾಡಿಕೊಳ್ಳುವುದರಲ್ಲಿ ಅನುಮಾನವಿಲ್ಲ. ವಿವಾಹ ಸಂದರ್ಭದ ಮಂತ್ರಗಳ ಪ್ರತಿ ಪದವನ್ನು ಬಿಡಿಸಿ ಅವುಗಳ ಶಬ್ದಾರ್ಥ ಸಹಿತ ಭಾವಾರ್ಥವನ್ನು ವಿವರಿಸಿರುವ ಭಾಗವನ್ನು ನಾನು ಭಾಗವಹಿಸಿದ ಸರಳ ವಿವಾಹ ವೇದಿಕೆಗಳಲ್ಲಿ ಮಾಡಿದ ಎಷ್ಟೋ ಭಾಷಣಗಳಿಗೆ ಅತ್ಯಂತ ಉಪಯುಕ್ತಕರವಾಗಿ ಬಳಸಿಕೊಂಡಿದ್ದೇನೆಂಬುದನ್ನು ನಾನಿಲ್ಲಿ ಸಂತೋಷದಿಂದ ಜ್ಞಾಪಿಸಿಕೊಳ್ಳುತ್ತಿದ್ದೇನೆ.

ಆಗ ಒಂದು ಪುಟ್ಟ ಪುಸ್ತಿಕೆಯಾಗಿ ಪ್ರಕಟಗೊಂಡಿದ್ದ ಈ ಕೃತಿ ಈಗ ನೂರೈವತ್ತು ಪುಟಗಳಿಗೂ ಹೆಚ್ಚು ವಿಸ್ತರಿಸಿಕೊಂಡಿದೆ. ಕಳೆದ ಎರಡು ದಶಕಗಳಲ್ಲಿ ಒಟ್ಟು ಹದಿನಾಲ್ಕು ಮುದ್ರಣ ಕಂಡು ಸಾವಿರಾರು ಓದುಗರನ್ನು ಚಿಂತನೆಗೆ ಹಚ್ಚಿದೆ. ಇದು ನಿಜಕ್ಕೂ ಮಹತ್ವಪೂರ್ಣವಾದ ವಿಷಯ. ಒಂದು ವೈಚಾರಿಕ ಕೃತಿ ಅಷ್ಟು ಮರುಮುದ್ರಣಗಳನ್ನು ಕಂಡು ಸಾವಿರಾರು ಜನರಿಗೆ ಸ್ಫೂರ್ತಿ ಒದಗಿಸಿದ್ದಕ್ಕೆ ಮುಖ್ಯ ಕಾರಣ ಅದರ ವಿದ್ವತ್ಪೂರ್ಣವಾದ, ಅದೇ ಸಮಯದಲ್ಲಿ ಸರಳವಾದ ನಿರೂಪಣಾ ಶೈಲಿ ಎಂದು ನನಗೆ ಅನ್ನಿಸುತ್ತದೆ. ತತ್ವಶಾಸ್ತ್ರದ ವಿಷಯಗಳನ್ನು, ವೇದೋಪನಿಷತ್ತಿನ ಮಾಹಿತಿಗಳನ್ನು, ಅವುಗಳ ನಡುವಿನ ಸಂಘರ್ಷದ ಎಳೆಗಳನ್ನು ವಿವರಿಸುವಾಗ ಓದುಗರಿಗೆ ತೊಡಕಾಗದಂತೆ ಮಂಡಿಸಲು ಸಾಧ್ಯವಾಗಿರುವುದು ಕೆ. ಎಸ್ ಭಗವಾನ್ ಅವರಿಗಿರುವ ವಿಸ್ತೃತವಾದ ಅಧ್ಯಯನ ಹಾಗೂ ತರ್ಕಶುದ್ಧವಾದ ವೈಚಾರಿಕ ನಿಲು ವುಗಳಿಂದಾಗಿ ಎಂದು ನಾನು ಭಾವಿಸಿದ್ದೇನೆ.

ಇಂಗ್ಲಿಷ್ ಪ್ರಾಧ್ಯಾಪಕರಾದ ಕೆ ಎಸ್ ಭಗವಾನ್ ಅವರು ಇತರೆ ಎಷ್ಟೋ ಜನರಂತೆ ತಮ್ಮ ಓದಿನ ಹವ್ಯಾಸವನ್ನು ಸಾಹಿತ್ಯ ಕೃತಿಗಳಿಗೆ ಮಾತ್ರ ಸೀಮಿತಗೊಳಿಸಿಕೊಂಡವರಲ್ಲ. ಹಾಗೆ ಸೀಮಿತಗೊಂಡರೆ ನಮ್ಮ ಜನಸಮೂಹಗಳಿಗೆ ನಾವು ತಲುಪಿಸಬಹುದಾದ ವಿಚಾರಗಳು ಹೆಚ್ಚಾಗಿರಲು ಸಾಧ್ಯವಿಲ್ಲ ಎಂಬುದನ್ನು ಇಲ್ಲಿಗೆ ಸುಮಾರು ಮೂವತ್ತು ವರ್ಷಗಳಷ್ಟು ಹಿಂದೆಯೇ ನಿದರ್ಶಿಸಿದ ಲೇಖಕರು ಅವರು. ನನಗೆ ನೆನಪಿರುವಂತೆ ಕೆ ಎಸ್ ಭಗವಾನರು ಮೈಸೂರಿನ ಸಮಾಜವಾದಿ ಚಿಂತನೆಯ ಹೋರಾಟಗಾರ ಅಧ್ಯಾಪಕರ ಗುಂಪಿನಲ್ಲಿ ಹೆಚ್ಚು ಸಲ ಕಂಡುಬರುತ್ತಿರಲಿಲ್ಲ. ಅದಕ್ಕೆ ಆ ವ್ಯಕ್ತಿಗಳೊಂದಿಗೆ ಅವರಿಗಿದ್ದ ಭಿನ್ನಾಭಿಪ್ರಾಯಗಳೇನಾದರೂ ಕಾರಣವಾಗಿದ್ದವೋ ಏನೋ ನನಗೆ ಗೊತ್ತಿಲ್ಲ. ಆದರೆ ಅವರ ಕೃತಿಗಳನ್ನು ಓದಿದರೆ, ಅವರು ಅನುವಾದಿಸಿರುವ ಪುಸ್ತಕಗಳನ್ನು ನೋಡಿದರೆ ಕನ್ನಡದಲ್ಲಿ ವೈಚಾರಿಕ ಸಾಹಿತ್ಯ ನಿರ್ಮಾಣ ಮಾಡಬೇಕೆಂಬ ಒಂದು ದೃಢನಿಷ್ಠೆಯಿಂದ ಕಾರ್ಯಪ್ರವೃತ್ತರಾಗಿದ್ದ ಅವರ ಅಭಿರುಚಿಯಿಂದಾಗಿ ಅವರಿಗೆ ಕಾಲಾವಕಾಶದ ಕೊರತೆಯುಂಟಾಗಿ ಹಾಗೆ ಹೆಚ್ಚಿನ ಹೋರಾಟದ ಕಾರ್ಯಕ್ರಮಗಳಿಗೆ ಬರಲು ಸಾಧ್ಯವಾಗುತ್ತಿರಲಿಲ್ಲವೇನೋ ಎಂದು ಸಹ ಹಲವು ಸಲ ಅನ್ನಿಸಿದೆ.

'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಕೃತಿ ನನ್ನಲ್ಲಿ ಹುಟ್ಟಿಸಿದ ಮೆಚ್ಚುಗೆಯಿಂದಾಗಿ ನಂತರದಲ್ಲಿ ಕೆ.ಎಸ್ ಭಗವಾನರು ಬರೆದ ಹಾಗೂ ಅನುವಾದಿಸಿದ ಹಲವಾರು ಕೃತಿಗಳನ್ನು ನಾನು ಓದಿದೆ. ವಿಲ್‌ಡ್ಯುರಾಂಟರ 'ಇತಿಹಾಸದ ಪಾಠಗಳು' ಎಂಬ ಕೃತಿಯನ್ನೂ ನಾನು ಬಹಳ ಆಸಕ್ತಿಯಿಂದ ಓದಿದೆ. ಆದರೆ ಆ ಹೊತ್ತಿಗೆ ನನಗೆ ಗತಿತಾರ್ಕಿಕ ಭೌತವಾದದ ಐತಿಹಾಸಿಕ ದೃಷ್ಟಿಕೋನವೇ ಹೆಚ್ಚು ಮೆಚ್ಚುಗೆಯದಾಗಿ ಹೋಗಿತ್ತಾದ್ದರಿಂದ ವಿಲ್‌ಡ್ಯುರಾಂಟರ ವಾದಸರಣಿಯನ್ನು ಹೆಚ್ಚು ಮೆಚ್ಚಿಕೊಳ್ಳಲು ಆಗಲಿಲ್ಲ ಅಥವಾ ಆಗಿನ ನನ್ನ ವಯಸ್ಸಿಗೆ ವಿಲ್‌ಡ್ಯುರಾಂಟರ ವಾದಸರಣಿ ಎಷ್ಟರಮಟ್ಟಿಗೆ ಅರ್ಥವಾಗಿತ್ತು ಎಂಬುದರ ಬಗ್ಗೆಯೂ ಕೂಡ ನನಗೆ ಅನುಮಾನವಿದೆ. ಕೆ ಎಸ್ ಭಗವಾನರ 'ಭಾಷೆ ಮತ್ತು ಸಂಸ್ಕೃತಿ' ಎಂಬ ವಿಶ್ಲೇಷಣಾ ಕೃತಿ ಹಾಗೂ 'ಹಿಂದೂ ಸಾಮ್ರಾಜ್ಯಶಾಹಿಯ ಇತಿಸಾಸ' ಎಂಬ ಅನುವಾದ ಕೃತಿಯನ್ನೂ ನಾನು ಬಹುವಾಗಿ ಮೆಚ್ಚಿಕೊಂಡಿದ್ದೇನೆ. ಚೆನ್ನಾಗಿ ಇಂಗ್ಲಿಷ್ ಬಲ್ಲ ಕೆ ಎಸ್ ಭಗವಾನರು ಆ ಜ್ಞಾನವನ್ನು ಹೀಗೆ ಅತ್ಯಪೂರ್ವವಾದ ಕೃತಿಗಳ ಬರವಣಿಗೆ ಹಾಗೂ ಅನುವಾದದ ಮುಖಾಂತರ ಜ್ಞಾನದಾಸೋಹಕ್ಕೆಂದು ಬಳಸಿಕೊಂಡಿರುವುದು ಅನುಕರಣೀಯವಾಗಿದೆ.

ಇದು ಕೇವಲ ಜ್ಞಾನದಾಹದಿಂದ ಮಾತ್ರ ಕೈಗೂಡುವ ಕೆಲಸವಲ್ಲ. ಅದಕ್ಕೊಂದು ಸಾಮಾಜಿಕ ಬದ್ಧತೆಯೂ ಬೇಕು. ಆ ಸಾಮಾಜಿಕ ಬದ್ಧತೆಯ ನೆಲೆಯನ್ನು ಅವರ ಇತರ ಕೃತಿಗಳಲ್ಲೂ ಕಾಣಬಹುದು. ಸಮಾಜದ ತಳವರ್ಗದವರ ಸ್ವಾಭಿಮಾನ ನಿರ್ಮಾಣದ ಹೋರಾಟದ ಹಾದಿಯಲ್ಲಿ ಕೆ ಎಸ್ ಭಗವಾನ್ ಅವರ ಈ ಕೃತಿ ಪರಿಗಣನೀಯ ಕಾಣಿಕೆ ನೀಡಿದೆ. ನಾವು ವಿದ್ಯಾರ್ಥಿಗಳಾಗಿದ್ದ ಕಾಲದಿಂದ ಹಿಡಿದು ಈಗಿನ ತಲೆಮಾರಿನ ವಿದ್ಯಾರ್ಥಿಗಳನ್ನೂ ಅದು ತಲುಪುತ್ತಾ ವೈಚಾರಿಕ ಚಿಂತನೆಯ ಪ್ರೇರಣೆಯನ್ನು ನೀಡುತ್ತಲೇ ಬಂದಿದೆ ಎನ್ನುವುದನ್ನು ಕೂಡ ನನ್ನ ಚಳವಳಿಗಳ ಒಡನಾಟದ ಸಂದರ್ಭದಲ್ಲಿ ಕಂಡುಕೊಂಡಿದ್ದೇನೆ. ದಲಿತರೂ ಸೇರಿದಂತೆ ಸಮಾಜದ ದುಡಿಯುವ ವರ್ಗಗಳ ಕ್ಷೇಮದ ಬಗ್ಗೆ ಕೆ ಎಸ್ ಭಗವಾನ್‌ರವರು ಹೊಂದಿರುವ ಕಾಳಜಿ ಈ ಕೃತಿಯಲ್ಲಿ ಬೇರೆ ಬೇರೆ ಮುದ್ರಣಗಳಲ್ಲಿ ಸೇರ್ಪಡೆಗೊಂಡಿರುವ ಹಲವಾರು ಬರಹಗಳಿಂದ ಗೊತ್ತಾಗುತ್ತದೆ.

ದಲಿತ ಚಳವಳಿಯ ಜೊತೆಗೆ ಸಾಕಷ್ಟು ನಿಕಟವಾದ ಸಂಬಂಧವನ್ನು ಹೊಂದಿರುವ ಕೆ. ಎಸ್ ಭಗವಾನ್ ಅವರು ಅಂಬೇಡ್ಕರ್ ಅವರ ವಿಚಾರಧಾರೆಯನ್ನೂ ಕೂಡ ಬಹಳ ದಿಟ್ಟವಾಗಿ ಪ್ರತಿಪಾದಿಸುತ್ತಾ ಬಂದಿದ್ದಾರೆ. ನೌಕರಿಯಲ್ಲಿದ್ದ ಅವರ ಮೇಲೆ ಪೋಲೀಸರು 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಕೃತಿಯ ಕಾರಣಕ್ಕೆ ಗಂಭೀರ ಪ್ರಕರಣಗಳ ಅಡಿಯಲ್ಲಿ ಮೊಕದ್ದಮೆ ದಾಖಲಿಸಿದಾಗಲೂ ಹಿಂದೆಗೆಯದೆ ನಿಂತ ಅವರ ಕೆಚ್ಚು ವಿದ್ಯಾರ್ಥಿಗಳಾಗಿದ್ದ ನಮ್ಮಲ್ಲಿ ಆಗ ಬಹಳ ಮೆಚ್ಚುಗೆಯನ್ನು ಹುಟ್ಟಿಸಿತು. ನಮ್ಮಂತಹ ಸಮಾಜದಲ್ಲಿ 'ಇಂಟಲೆಕ್ಚುಯಲ್ ಆ್ಯಕ್ಟಿವಿಸಂ' ಅಗತ್ಯವಿದೆ. ಬುದ್ಧಿಜೀವಿಯೊಬ್ಬ ಸಾಮಾಜಿಕ ಕಾಳಜಿಗಳ ಪರವಾದ ಕಾರ್ಯಕರ್ತನಂತೆಯೂ ಒಂದುಮಟ್ಟಿಗೆ ಕ್ರಿಯಾಶೀಲನಾದಾಗ ಮಾತ್ರವೇ ನಮ್ಮ ಸಮಾಜದಲ್ಲಿ ಆವರಿಸಿಕೊಂಡಿರುವ ಮೌಢ್ಯ, ಅಸಹಾಯಕತೆ, ಕೀಳರಿಮೆ ಮುಂತಾದ ಅನಿಷ್ಟಗಳನ್ನು ತೊಲಗಿಸಲು ಸಾಧ್ಯವಾಗುತ್ತದೆ. ಆ ಹಾದಿಯಲ್ಲಿ ಕೆ ಎಸ್ ಭಗವಾನ್ ಅವರು ಸದಾ ಕ್ರಿಯಾಶೀಲರಾಗಿದ್ದಾರೆಂಬುದರಿಂದಾಗಿಯೇ ಅವರಿಗಿಂತ ಕಿರಿಯ ತಲೆಮಾರಿನವರಾದ ನಮಗೆ ಅವರಲ್ಲಿ ಹುಟ್ಟಿದ ಗೌರವ ಭಾವನೆಯು ಅರ್ಥಪೂರ್ಣಗೊಂಡಿದೆ.

ನಾನು ಬರೆದ 'ಆನು ದೇವಾ ಹೊರಗಣವನು' ಕೃತಿಯ ಬಗ್ಗೆ ಸಮಾಜದ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ತೀವ್ರ ವಿರೋಧ ಹುಟ್ಟಿಕೊಂಡಾಗ ಕೆ ಎಸ್ ಭಗವಾನ್ ಅದರ ಪರವಾಗಿ ಅತ್ಯಂತ ಸ್ಪಷ್ಟವಾದ ನಿಲುವನ್ನು ತಳೆದು ಅದನ್ನು ಸಾರ್ವಜನಿಕವಾಗಿ ಬೆಂಬಲಿಸಿದರು. ಸಾಲದ್ದಕ್ಕೆ ರಾಯಚೂರಿನ ದಲಿತ ಸಂಘಟನೆಯ ಗೆಳೆಯರು ಈ ಕೃತಿಯನ್ನು ಕುರಿತು ಚರ್ಚೆ ಏರ್ಪಡಿಸಿದಾಗ ಅಲ್ಲಿಗೆ ಬಂದು ಸಭಿಕರಲ್ಲಿದ್ದ ಕೆಲವು ಸಂಪ್ರದಾಯವಾದಿ ವ್ಯಕ್ತಿಗಳ ಕಠೋರ ವಿರೋಧದ ನಡುವೆಯೂ ಹಿಂಜರಿಕೆಯಿಲ್ಲದೆ ಆ ಕೃತಿಯ ಪರವಾದ ವಿಚಾರ ಮಂಡನೆ ಮಾಡಿದರು. ಹರಿತವಾದ, ಸ್ಪಷ್ಟವಾದ, ಶುದ್ಧ ತರ್ಕಸರಣಿಯ ಅವರ ಪಾಂಡಿತ್ಯಪೂರ್ಣ ಭಾಷಣ ಆ ಸಭೆಯಲ್ಲಿ ಬಹಳ ಒಳ್ಳೆಯ ಪರಿಣಾಮವನ್ನುಂಟು ಮಾಡಿತು. ಆ ಸಭೆಯನ್ನು ಮುಗಿಸಿ ರಾತ್ರಿ ನಾವು ರೈಲಿನಲ್ಲಿ ಹಿಂದಿರುಗಬೇಕಿತ್ತು. ಹೋಟಲಿಗೆ ಹೋಗಿ ಊಟ ಮಾಡಲು ಬಿಡುವಿರಲಿಲ್ಲ ಹಾಗಾಗಿ ಸಂಘಟನೆಯ ಕಾರ್ಯಕರ್ತರು ಊಟ ಕಟ್ಟಿಸಿಕೊಟ್ಟಿದ್ದರು.

ರೈಲಿನಲ್ಲಿ ಅಂದು ವಿಪರೀತ ರಶ್ಶು ಇತ್ತು. ಊಟ ಮಾಡುವುದಕ್ಕೆಂದು ನಾವು ರೈಲಿನ ಟಾಯ್ಲೆಟ್ ಬಳಿಯಿರುವ ವಾಶ್ ಬೇಸಿನ್ ಹತ್ತಿರ ಹೋದೆವು. ಸುದ್ದಿಪತ್ರಿಕೆಯೊಂದನ್ನು ಹಾಸಿಕೊಂಡು ಆ ವಾಶ್‌ಬೇಸಿನ್ ಬಳಿಯೇ ಕುಳಿತು ಅವರು ಯಾವುದೇ ಅಸೌಕರ್ಯವನ್ನು ಪರಿಗಣಿಸದೆ ಊಟ ಮಾಡಿದರು. ನಾನು ಆ ಜಾಗದಲ್ಲಿ ನಿಂತುಕೊಂಡೇ ಊಟ ಮುಗಿಸಿದೆ. ತಮ್ಮ ನಿವೃತ್ತಿಯ ವಯಸ್ಸಿನಲ್ಲೂ ಜನರ ನಡುವೆ ಹೆಚ್ಚಿನ ಯಾವುದೇ ಉಪಚಾರಗಳನ್ನು ನಿರೀಕ್ಷಿಸದೆ ಸಾಮಾನ್ಯ ಕಾರ್ಯಕರ್ತರಂತೆ ಅವರು ಬೆರೆಯುತ್ತಿರುವ ವಿಧಾನವು ಅವರ ಕೃತಿಯಲ್ಲಿ ವ್ಯಕ್ತವಾಗುವ ಧೋರಣೆ ಮತ್ತು ವಿಚಾರಗಳಿಗೆ ಅನುರೂಪವಾಗಿದೆ. ಹಾಗಾಗಿಯೇ ನಮ್ಮ ಕನ್ನಡದ ವೈಚಾರಿಕ ವಿದ್ವಾಂಸ ಬರಹಗಾರರಲ್ಲಿ ಅವರೊಂದು ಪ್ರಖರ ಮೇಲ್ಪಂಕ್ತಿಯಾಗಿ ನಿಲ್ಲಲು ಸಾಧ್ಯವಾಗಿದೆ ಎಂಬುದನ್ನು ಆ ಘಟನೆ ನನಗೆ ಅಂದು ಮತ್ತೆ ಮನದಟ್ಟು ಮಾಡಿತು. □

ಪ್ರಜಾಪ್ರಭುತ್ವದ ಸಾಧ್ಯತೆಗಳು ಮತ್ತು ಸವಾಲುಗಳು

(21ನೇ ಪುಟದಿಂದ)

ನಾತ್ಮಕವಾಗಿ ತನ್ನೆಲ್ಲ ಸದಸ್ಯರನ್ನು/ಗುಂಪುಗಳನ್ನು ಒಂದುಗೂಡಿಸುತ್ತಿತ್ತೆಂದು ಭಾವಿಸಲಾಗಿತ್ತು. ಹೀಗೆ ಹೇಳುವ ಮೂಲಕ ಅದು ಆಧುನಿಕತೆಯ ವಿರುದ್ಧವೆಂದು ಭಾವಿಸಲಾಗಿತ್ತು. ಅದರ ಹಿಂಸಾತ್ಮಕ ರೂಪವನ್ನು ಅನಾಗರೀಕ ಸ್ಥಿತಿಯಂತಲೂ ಬಿಂಬಿಸಲಾಗಿತ್ತು ಅಥವಾ ಆಧುನಿಕ ಪ್ರಕ್ರಿಯೆಗಳಲ್ಲಿ ಅದು ಬಲವಾದ ಅಡ್ಡಿಯಾಗಿದೆಯಂತಲೂ ತಿಳಿಯಲಾಗಿತ್ತು.

ಅಂದರೆ ಈ ಸಾಮೂದಾಯಿಕ ಅನನ್ಯತೆಯು ಯಾವುದೋ ಒಂದು ಚಾರಿತ್ರಿಕ ಘಟ್ಟದಲ್ಲಿ ಸುಪ್ತವಾಗಿದ್ದು, ಇಂದು ಅದು ಸಾಮೂಹಿಕ ಸನ್ನಿಯಾಗಿ ಕಾಣಿಸಿಕೊಂಡಿದೆ ಎಂಬ ನಿಲುವು ಸಹಜವೆಂಬಂತೆ ಚಿತ್ರಿಸಲಾಗಿತ್ತು. ಇಂಥ ನಿಲುವಿನ ಹಿಂದಿರುವ ಗ್ರಹೀತವನ್ನು ಅರ್ಜುನಪ್ಪ ದೊರೆ ಅನಾವರಣಗೊಳಿಸುತ್ತಾರೆ. ಅವರ ಪ್ರಕಾರ ಅದು ಆಗುತ್ತಿರುವುದು ಮುಂದುವರಿದ ರಾಷ್ಟ್ರಗಳಿಂದ. ಏಕೆಂದರೆ, "ಮುಕ್ತ ಮಾರುಕಟ್ಟೆಯ ತಂತ್ರಗಳಲ್ಲಿ ಬದುಕುವ ಶಿಕ್ಷಿತನಾದ, ಲೆಕ್ಕಾಚಾರದ ವ್ಯಕ್ತಿಗತ ಪ್ರಜ್ಞೆಯಲ್ಲಿರುವ ವ್ಯಕ್ತಿ, ನಿಜವಾಗಿ ನಾಗರಿಕ ಸಮಾಜದಲ್ಲಿ ಪಾಲ್ಗೊಳ್ಳುವ ವಿಚಾರದ ಮೇಲೆ ಯಾವ ದೇಶಗಳು (ಎನ್‌ಲೈಟನ್ಮೆಂಟ್ ಗುರಿಯಾದ) ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಕಾರ್ಯಗತಗೊಳಿಸಿದವೋ ಅವುಗಳೆಲ್ಲಾ ಪ್ರಾಚೀನತೆಯನ್ನು ಬಿಟ್ಟು ಹೊರಬಂದವು."[3] ಇಂತಹ ರಾಷ್ಟ್ರಗಳೆಲ್ಲ ಬಹುವಾಗಿ ಬಂಡವಾಳಶಾಹಿ ನೀತಿಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸುವಂತಹದವು. ಈ ರಾಷ್ಟ್ರಗಳು ಆಧುನಿಕ ವಿಜ್ಞಾನ–ತಂತ್ರಜ್ಞಾನಗಳಿಂದ ತಮ್ಮೊಳಗಿನ ಬಹುರೂಪಿ ಕುಲ ಸಂಬಂಧಿ ಅನನ್ಯತೆಗಳನ್ನು ನಿಭಾಯಿಸಬಹುದೆಂದು ಭಾವಿಸಿದ್ದವು. ಆದರೆ ಅವನ್ನು ನಿಭಾಯಿಸಲಾಗಲಿಲ್ಲ. ಅಲ್ಲದೆ, ಅವು ಬೌದ್ಧ ಜ್ಞಾನ ತಂತುವಾದ 'ಪರಸ್ಪರಾವಲಂಬಿತ ನೆಲೆ' ಮತ್ತು ಜೈನರ ಅನೇಕಾಂತವಾದಗಳ ಮೂಲಕ ಆಧುನಿಕತೆಯಲ್ಲಿ ತಮ್ಮ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವ ಸಲುವಾಗಿಯೇ ಪ್ರಜಾಪ್ರಭುತ್ವವನ್ನು ಸಾಕಾರಗೊಳಿಸಿಕೊಂಡಿವೆ ಎಂಬುದನ್ನು ನಾವು ಇಂದು ಮತ್ತೆ ಪರಿಶೀಲಿಸಬೇಕಾಗಿದೆ. ಇಲ್ಲವಾದರೆ, ಮತ್ತದೆ ಹಿಂದುತ್ವ ರಾಜಕಾರಣಕ್ಕೆ ಬಲಿಯಾಗಿ, ಅಗೋಚರಗೊಂಡಿರುವ ಬ್ರಾಹ್ಮಣ್ಯದ ಖಾಸಗೀತನವನ್ನು ನಾವೆಲ್ಲಾ ಮಾದರಿಗಳೆಂದು ಒಪ್ಪಿಬಿಡುತ್ತೇವೆ. ಇಂಥ ಮಾದರಿಯ ಸಾಂಸ್ಕೃತಿಕ ಸನ್ನಿವೇಶಕ್ಕೆ ನಾವು ತಯಾರಾಗಿದ್ದೇವೆಯೇ? ಈ ಪ್ರಶ್ನೆಯನ್ನು ಎದುರಿಸದೆ ನಾವು ಪ್ರಜಾಪ್ರಭುತ್ವದ ಭವಿಷ್ಯವನ್ನು ನಿರ್ಧರಿಸಲಾಗದು ಅಥವಾ ತಳ ಸಮುದಾಯಗಳ ಪಾರಂಪರಿಕ ಸ್ಥಳೀಯ ಜ್ಞಾನವನ್ನು ಬಳಸಲಾಗದು.

[1] ವಿವರಗಳಿಗೆ ನೋಡಿ, ಪು. 142, Arjunappa durai, Modernity at Large: Cultural Dimensions of Globalisation, Oxford University press, Delhi, 1997, "Those countries that have had time to work out the enlightenment project of political participation - based on the idea of an educated, postethaic, calculating individual, subsisting on the workings of the free market and particiapting in a genuine civil society - are indeed able to stave off the disorders of the primordialism" □

ಸಂವಾದ

ಲೇಖಕರಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಸಾಹಿತ್ಯ, ಸಮುದಾಯ, ಸಂಸ್ಕೃತಿಗಳ ಸಮರ್ಥ ವಿಶ್ಲೇಷಣೆ

(41ನೇ ಪುಟದಿಂದ)

ಇದ್ದರೆ ಈಗ Centrifugal ಗುಣ ಇದೆ. ಅಂದರೆ ಮೊದಲು ಲಿಂಗಾಯತರಲ್ಲಿ ಪರಿಧಿಯಿಂದ ಕೇಂದ್ರದತ್ತ ಚಲಿಸುವ ಕ್ರಮ ಇದ್ದರೆ ಈಗ ಕೇಂದ್ರದಿಂದ ಹೊರಮುಖ ಚಲನೆ ಪ್ರಾರಂಭವಾಗಿದೆ ಇಂತಹ ಅಂಶಗಳನ್ನು ಲೇಖಕರು ಗುರುತಿಸಬೇಕಾಗಿತ್ತು.

ಲಿಂಗಾಯತಕ್ಕೆ ಇಂಗ್ಲೀಷ ಓದಿದ ಮಧ್ಯಮ ವರ್ಗದಿಂದ ಹೊಸ ಆಯಾಮ ದೊರಕಿತು. ಲಿಂಗಾಯತವನ್ನು ಮತೀಯವಾಗಿ ವ್ಯಾಖ್ಯಾನಿಸುವುದರ ಬದಲು ರಾಷ್ಟ್ರೀಯವಾಗಿಸುವ ಯತ್ನ ಪ್ರಾರಂಭವಾಯಿತು. ವೈದಿಕದ ಕಡೆ ವಾಲಿದ ಗುರುಪೀಠಗಳಿಗಿಂತ ಶರಣರ ವೈಚಾರಿಕ ವಚನಗಳು ಪ್ರಗತಿಪರವಾಗಿ ಕಂಡವು. ತಮ್ಮಣ್ಣಪ್ಪ ಚಿಕ್ಕೋಡಿ, ಎಂ.ಬಸವಯ್ಯ ಮುಂತಾದವರು ವೀರಶೈವ ಮಹಾಸಭೆಯ ತಾತ್ವಿಕ ನಿಲುವು ವಿರೋಧಿಸಿದರು. ಜೊತೆಗೆ ಪಾವಟೆ ಹಾಗೂ ಕುಬಸದ ಅವರ ನಡುವಿನ ಆಂತರಿಕ ವೈಷಮ್ಯ ಹಲವು ಗೊಂದಲ ಸೃಷ್ಟಿಸಿತು. ಒಟ್ಟಿಗೆ ಈ ಹಂತದಲ್ಲಿ ಲಿಂಗಾಯತ ಧರ್ಮಕ್ಕೆ ಹೊಸ ರೂಪ ಕೊಡುವ ಪ್ರಯತ್ನ ಜರುಗಿತು.

ನಾಲ್ಕನೆಯ ಅಧ್ಯಾಯದಲ್ಲಿ ವಚನಗಳ ಭಾಷಾಂತರ ವಿಷಯದ ಚರ್ಚೆಗೆ ಒಳಪಟ್ಟಿದೆ. ಹಳಕಟ್ಟಿ, ಮಾಸ್ತಿ, ಆರ್.ಆರ್.ದಿವಾಕರ, ಬಿ.ಎಂ.ಶ್ರೀ, ಎಸ್.ಎಂ. ಅಂಗಡಿ, ಶಿ.ಶಿ.ಬಸವನಾಳ, ಎ.ಕೆ.ರಾಮಾನುಜನ್ ಮುಂತಾದವರು ವಚನಗಳನ್ನು ಬೇರೆ ಬೇರೆ ಉದ್ದೇಶಗಳ ಹಿನ್ನೆಲೆಯಲ್ಲಿ ಭಾಷಾಂತರಿಸಿದರು. ಕೆಲವರಿಗೆ ವಚನಗಳ ಕಾವ್ಯಗುಣ ಮುಖ್ಯವಾಗಿದ್ದರೆ ಇನ್ನೂ ಕೆಲವರಿಗೆ ಇಲ್ಲಿಯ ವೈಚಾರಿಕತೆ ಮುಖ್ಯವಾಗಿತ್ತು. ಅಲ್ಲದೆ ವಚನಗಳಲ್ಲಿ ರಾಷ್ಟ್ರೀಯ ಧೋರಣೆ ಗುರುತಿಸುವ ಯತ್ನಗಳು ಜರುಗಿದವು.

ಐದನೆಯ ಅಧ್ಯಾಯದಲ್ಲಿ ವಚನಗಳ ವಿವಿಧ ಆಯಾಮಗಳನ್ನು ಬೇರೆ ಬೇರೆ ದೃಷ್ಟಿಯಿಂದ ಗುರುತಿಸಿದೆ. ಕೆಲವರಿಗೆ ವಚನಗಳ ಜಾತ್ಯಾತೀತ ಮೌಲ್ಯಗಳು ಮುಖ್ಯವಾದರೆ ಮತ್ತೆ ಕೆಲವರಿಗೆ ಇಲ್ಲಿಯ ಸಾಮಾಜಿಕ, ನೈತಿಕ, ಮೌಲ್ಯಗಳು ಪ್ರಮುಖವಾಗಿ ಕಂಡಿವೆ. ಸಾಮಾನ್ಯ ಲಿಂಗಾಯತರಿಗೆ ಬಸವಣ್ಣನ ಪವಾಡಗಳ ಹಿನ್ನೆಲೆ ಬೇಕಾಗಿತ್ತು. ಬಸವಣ್ಣನು ದೀನದಲಿತರ ಜನನಾಯಕ, ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿದ ಸಮಾಜ ಸುಧಾರಕ, ಲಿಂಗಭೇದ ನಿರಾಕರಿಸಿದ ವ್ಯಕ್ತಿ ಎಂದು ಹೇಳಿದರೆ ಸನಾತನ ಲಿಂಗಾಯತರಿಗೆ ಕಸಿವಿಸಿಯಾಗುತಿತ್ತು, ಬಸವಪೂರ್ವದ ಲಿಂಗಾಯತ ಧರ್ಮಕ್ಕೆ ಕೆಲವರು ಒತ್ತುಕೊಟ್ಟರೆ ಬಸವಣ್ಣನವರಿಂದಲೆ ಲಿಂಗಾಯತ ಧರ್ಮ ಉಗಮವಾಯಿತು ಎಂದು ಬಹುಜನರು ನಂಬಿದ್ದಾರೆ. ವಚನ ಸಾಹಿತ್ಯಕ್ಕೆ ಮರುಜನ್ಮ ಕೊಟ್ಟ ಹಳಕಟ್ಟಿಯವರು ಲಿಂಗಾಯತರ ಸಾಮಾಜಿಕ ಗೌರವ ಹೆಚ್ಚಿಸಲು ಹಲವು ರೀತಿಯಿಂದ ಶ್ರಮಿಸಬೇಕಾಯಿತು. ಬೌನರಿಂದ ವಚನ ಗುಮ್ಮಟ ಎಂದು ವರ್ಣನೆಗೊಂಡ ಹಳಕಟ್ಟಿಯವರು ಲಿಂಗಾಯತರಲ್ಲಿಯ ಆಂತರಿಕ ಕಲಹ, ಮೂಢನಂಬಿಕೆಗಳ ಆಚರಣೆ, ಪೌರೋಹಿತ್ಯದ ಅಟ್ಟಹಾಸ ಮುಂತಾದವುಗಳನ್ನು ಎದುರಿಸುತ್ತಲೆ ಲಿಂಗಾಯತಕ್ಕೆ ತಾತ್ವಿಕ ಹಿನ್ನೆಲೆ ಒದಗಿಸಲು ನಿರಂತರವಾಗಿ ಹೋರಾಟ ಮಾಡಬೇಕಾಯಿತು.

19ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಾಹ್ಮಣ ಹಾಗೂ ಲಿಂಗಾಯತರ ನಡುವೆ ಕೆಲವು ತಾತ್ವಿಕ ಘರ್ಷಣೆಗಳು ಜರುಗಿವೆ. ಇದಕ್ಕೆ ಪೂರಕವಾಗಿ ಪ್ರೊ. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿದ ಅರಟಾಳ ರುದ್ರಗೌಡರ ಆತ್ಮ ಚರಿತ್ರೆ ನೋಡಬಹುದು. ಇಲ್ಲಿ ಕಥಾನಾಯಕ ಬ್ರಾಹ್ಮಣ್ಯದ ಷಡ್ಯಂತ್ರವನ್ನು ಮುರಿದುಹಾಕುವಲ್ಲಿಯೇ ಬದುಕಿನ ಬಹು ಭಾಗ ಕಳೆದಿದ್ದಾನೆ. ಇಲ್ಲಿ ವಿಜಯಕುಮಾರ ಬೋರಟ್ಟಿಯವರು ಲಿಂಗಾಯತರ ಬ್ರಾಹ್ಮಣ್ಯವನ್ನು ಪ್ರಶ್ನಿಸಿದ ರಂಗಣ್ಣನೆಂಬ ಸ್ಟೇಷನ್ ಮಾಸ್ತರರಿಗೆ ಪಿ.ಆರ್. ಕರಿಬಸವಶಾಸ್ತ್ರೀಗಳು ತಕ್ಕ ಉತ್ತರ ನೀಡಿದ ಉದಾಹರಣೆ ದಾಖಲಿಸಿದ್ದಾರೆ(ಪು.157). ಎಂ.ಆರ್.ಶ್ರೀನಿವಾಸಮೂರ್ತಿ ಹಾಗೂ ಮಾಸ್ತಿಯವರು ವಚನಗಳ ಮೂಲದ ಮಲೀನತೆಯ ಬಗ್ಗೆ ಅಸಮಧಾನ ಹೊಂದಿದ್ದರು. ಕ್ರಮೇಣವಾಗಿ ವಚನಗಳು ಕನ್ನಡ ಕಾವ್ಯದ ಭಾಗವಾಗಿ ಶಾಲೆ ಕಾಲೇಜಿನ ಪಠ್ಯ ಸೇರಿದಿದು ಲಿಂಗಾಯತರ ಹೋರಾಟವನ್ನು ಸೂಚಿಸುತ್ತದೆ. ಒಟ್ಟಿಗೆ ವಸಾಹತುಶಾಹಿ ಕಾಲದ ವಚನಗಳ ಅಧ್ಯಯನದ ನೀಲನಕ್ಷೆ ವಸಹಾತ್ತೋತರ ಕಾಲದ ನೀಲ ನಕ್ಷೆಯಾಗಿ ಹೊರ ಹೊಮ್ಮಿದೆ.

ಆರನೆಯ ಅಧ್ಯಾಯದಲ್ಲಿ ಬಸವಣ್ಣನವರ ಹುಟ್ಟಿನ ಬಗ್ಗೆ ಚರ್ಚೆ ಹೊಸ ಅರ್ಥ ಪಡೆದಿದೆ. ಸಿ.ಪಿ. ಬ್ರೌನಂತವರು ಬಸವಣ್ಣ ಆರಾಧ್ಯಮೂಲವನ್ನು ಹೊಂದಿಲ್ಲ ಶೈವ ಬ್ರಾಹ್ಮಣನಾಗಿದ್ದ ಎಂದು ಸಾಬೀತು ಮಾಡುವ ಯತ್ನ ಮಾಡಿದ್ದಾರೆ. ನಂತರದ ಅಧ್ಯಾಯದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಪುಸ್ತಕಗಳು ಸೃಷ್ಟಿಸಿದ ವಿವಾದಗಳನ್ನು ಚರ್ಚಿಸಲಾಗಿದೆ. ಮಾಸ್ತಿಯವರ ಚನ್ನಬಸವನಾಯಕ ಪುಸ್ತಕವನ್ನು ಭಾರತದ ಇತರ ಭಾಷೆಗಳಿಗೆ ಭಾಷಾಂತರಿಸುವ ಕ್ರಿಯೆ ಹಲವು ತೆರನಾದ ವಿರೋಧ ಎದುರಿಸಿತು. ಕೆಳದಿಯ ಚೆನ್ನಮ್ಮಾಜಿಯ ಇತಿಹಾಸ ತಿರುಚಲಾಗಿದೆ ಎಂಬ ವಾದದ ಜೊತೆಗೆ ಅಕಾಡೆಮಿಯ ಅಧ್ಯಕ್ಷರಾಗಿ ಮಾಸ್ತಿಯವರು ತಮ್ಮ ಸ್ಥಾನದ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಲಾಯಿತು. 1956ರ ಸುಮಾರಿಗೆ ಸಂಗಣ್ಣ ಕುಪ್ಪಸದವರು ಮಾಸ್ತಿಯವರ ಚನ್ನಬಸವನಾಯಕ ಪುಸ್ತಕದ ವಿರುದ್ಧ ಹೋರಾಟ ಮಾಡಲು ಜನರನ್ನು ಅಣಿಗೊಳಿಸಿದರು. ಮಾತೆಮಹಾದೇವಿಯವರ ವಚನದೀಪ್ತಿ ಎಂಬ ಗ್ರಂಥವು ನ್ಯಾಯಾಲಯದ ಕಟ್ಟೆ ಹತ್ತಿತು. ಬಸವಣ್ಣನವರ ವಚನಗಳನ್ನು ಇವರು ಕೂಡಲ ಸಂಗಮದೇವ ಬದಲಾಗಿ ಲಿಂಗದೇವ ಎಂದು ತಿರುಚಿದ್ದರು. ವಿವಾದ ಸೃಷ್ಟಿಸಿದ ಹಲವು ಪುಸ್ತಕಗಳಲ್ಲಿ ಲಿಂಗಾಯತರ ಬಗ್ಗೆ ಬರೆದ ಪುಸ್ತಕಗಳೆ ಹೆಚ್ಚು ಸಂಖ್ಯೆಯಲ್ಲಿ ಇವೆ ಎಂಬುದು ಗಮನಿಸಬೇಕಾದ ಅಂಶ. ಆಧುನಿಕ ಚಿಂತನೆಗೆ ಪೂರಕವಾಗಿ ಲಿಂಗಾಯತ ಸಾಹಿತ್ಯವನ್ನು ರೂಪಿಸುವಲ್ಲಿ ಫ.ಗು.ಹಳಕಟ್ಟಿ, ಶಿವಮೂರ್ತಿಶಾಸ್ತ್ರಿ ಮುಂತಾದವರು ಯತ್ನಿಸಿದರು. ಸಾಹಿತ್ಯ ಕ್ಷೇತ್ರದಲ್ಲಿ ಮಾಸ್ತಿಯವರ ಸ್ಥಾನ ಏನೇ ಇದ್ದರೂ ಅವರನ್ನು ಸಂಶಯದಿಂದ ನೋಡುತ್ತಲೆ ಲಿಂಗಾಯತ ಸಾಹಿತ್ಯಕ್ಕೆ ಹೊಸ ಆಯಾಮ ಕೊಟ್ಟ ಕೀರ್ತಿ ಲಿಂಗಾಯತ ಲೇಖಕರಿಗೆ ಸಲ್ಲುತ್ತದೆ.

ವಚನಗಳನ್ನು ಒಂದು ಕಾಲದಲ್ಲಿ ಧರ್ಮದ ಚಾಳಿಸಿನಿಂದಲೆ ನೋಡಲಾಯಿತು. ಒಂದು ರೀತಿಯಿಂದ ವಚನಗಳು ಭಜನೆ ಪದಗಳಾಗಿಯೇ ಬಳಕೆಯಲ್ಲಿದ್ದವು. ಇತ್ತೀಚೆಗೆ ಮಲ್ಲಿಕಾರ್ಜುನ ಮನ್ಸೂರ ಹಾಗೂ ಅವರ ತಲೆಮಾರಿನವರು ವಚನಗಳನ್ನು ಶಾಸ್ತ್ರೀಯ ಸಂಗಿತಕ್ಕೆ ಅಳವಡಿಸಿದರು. ಇಂದು ವಚನ ನೃತ್ಯ, ವಚನ ಸಂಗೀತ ಮುಂತಾದವುಗಳು ಹೊಸ ಆಯಾಮ ಪಡೆದಿವೆ. ಆದರೆ ವಚನಗಳನ್ನು ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸುವದರಿಂದ ಅವು ತಮ್ಮ ಆಂತರಿಕ ಅರ್ಥವನ್ನು ಕಳೆದುಕೊಳ್ಳುತ್ತವೆ ಎಂದು ಕೆಲವರ ವಾದವಾಗಿದೆ. ವಿಶೇಷವಾಗಿ ರಾಗ ಸಂಯೋಜನೆ ಮಾಡುವಾಗ ಅಕ್ಷರಗಳನ್ನು ಒಡೆದು ಹಾಕಲಾಗುತ್ತದೆ. ಇದರಿಂದ ಅಪಾರ್ಥ ಉಂಟಾಗುತ್ತದೆ. ಗಿರಡ್ಡಿ ಗೋವಿಂದರಾಜರು ವಚನಗಳನ್ನು ಗಮಕ ಶೈಲಿಯಲ್ಲಿ ಹಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ ಇಂತಹ ಅಂಶಗಳನ್ನು ಲೇಖಕರು ಗಮನಿಸಬೇಕಾಗಿತ್ತು. ವಚನಗಳ ಅಧ್ಯಯದ ಮೊದಲ ಹಂತದಲ್ಲಿ ಕೇವಲ ಬಸವಣ್ಣ, ಅಲ್ಲಮ, ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರ ಅಧ್ಯಯನಕ್ಕೆ ಪ್ರಾಮುಖ್ಯತೆ ಕೊಡಲಾಯಿತು. ಇತ್ತೀಚೆಗೆ ದಲಿತ ವಚನಕಾರರ ಅಧ್ಯಯನಕ್ಕೂ ಮಹತ್ವ ಬಂದಿದೆ.

ಕೊನೆಯ ಅಧ್ಯಾಯದಲ್ಲಿ ಲಿಂಗಾಯತ ಚಳವಳಿಯ ಹುಟ್ಟಿನ ಬಗ್ಗೆ ಇರುವ ಹಲವು ಗೊಂದಲಗಳನ್ನು ಚರ್ಚಿಸಲಾಗಿದೆ. ಸನಾತನ ಬ್ರಾಹ್ಮಣ ವ್ಯವಸ್ಥೆಯು ಯಾರನ್ನು ಶೂದ್ರರನ್ನಾಗಿ ಕಂಡಿತ್ತೊ ಅಂಥವರು ತಮ್ಮ ಬಿಡುಗಡೆಗಾಗಿ ಲಿಂಗಾಯತ ಚಳವಳಿ ಸೇರಿಕೊಂಡರು. ಲಿಂಗಾಯತ ಧರ್ಮದ ಪ್ರಸಾರದಲ್ಲಿ ವ್ಯಾಪಾರಿ ವರ್ಗದ ಪಾತ್ರವು ಕೂಡಾ ಮಹತ್ವದ್ದಾಗಿದೆ. ಮುಖ್ಯವಾಗಿ ಬ್ರಾಹ್ಮಣ್ಯದ ಮೌಲ್ಯಗಳನ್ನು ಪುನರ್ ಪ್ರತಿಷ್ಠಾಪಿಸುವಲ್ಲಿ ಲಿಂಗಾಯತಕ್ಕೆ ಸೇರಿದ ಶೈವ ಬ್ರಾಹ್ಮಣರು ಕಾರಣರಾದರು. ಬಹುಶಃ ಈ ಹಂತದಲ್ಲಿ ಲಿಂಗಾಯತ ಸಮುದಾಯದಲ್ಲಿ ಜಾತಿ ವಿಂಗಡಣೆ ಅನೌಪಚಾರಿಕವಾದ ಸ್ವರೂಪ ಪಡೆಯಿತು. ಕ್ರಮೇಣ ಇಲ್ಲಿ ಜಾತಿ ವಿಂಗಡಣೆ ರೂಪಗೊಂಡಿತು. ಗುಡಿ ಸಂಸ್ಕೃತಿಯ ನಿರಾಕರಣೆಯಿಂದ ಪುರೋಹಿತರು ಬೀದಿಗೆ ಬಿದ್ದರು. ಸ್ವೇಚ್ಛಾಚಾರಿಗಳಾದ ಪುರೋಹಿತರು 'ಅರಿವೇ ಗುರು' ಎಂಬ ತತ್ವದಲ್ಲಿ ನಂಬಿಕೆ ಇಡಲಿಲ್ಲ (ಪು.268). ರೈತರು ಗ್ರಾಮಗಳನ್ನು ಇನಾಮ ಗ್ರಾಮಗಳನ್ನಾಗಿ ಪರಿವರ್ತಿಸಲು ವಿರೋಧಿಸಿದರು. ಹೀಗಾಗಿ ಭೂ ಒಡೆಯರಿಗೂ ಕಾಯಕ ಜೀವಿಗಳಿಗೂ ಘರ್ಷಣೆ ಪ್ರಾರಂಭವಾಯಿತು. ಅಲ್ಲದೆ ಉತ್ತರ ಕರ್ನಾಟಕದ ಬೆಳಗಾವಿ, ವಿಜಾಪುರ, ಧಾರವಾಡ, ಬಾಗಲಕೋಟ, ಹಾವೇರಿ ಮುಂತಾದ ಜಿಲ್ಲೆಗಳಲ್ಲಿ ಹತ್ತಿ ಹೆಚ್ಚು ಬೆಳೆಯಲಾಗುತ್ತದೆ. ಆದ್ದರಿಂದ ಇಲ್ಲಿ ನೇಕಾರರ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿ ಇತ್ತು. ನೇಕಾರ, ಗಾಣಿಗ, ಸಿಂಪಿಗ ಮುಂತಾದವರು ಪುರೋಹಿತಶಾಹಿ ಹಾಗೂ ರಾಜನ ಶೋಷಣೆಯಿಂದ ಮುಕ್ತವಾಗಲು ಲಿಂಗಾಯತ ಧರ್ಮ ಸೇರಿದರು.

ಆಧುನಿಕ ಕರ್ನಾಟಕದ ಸಂಸ್ಕೃತಿ ರೂಪಿಸಿದ ಹಿರಿಯರ ಬರವಣಿಗೆಯ ಹಿಂದಿನ ಚಾರಿತ್ರಿಕ ಒತ್ತಡಗಳನ್ನು ತಿಳಿಯಲು ಈ ಪುಸ್ತಕ ನೆರವಾಗುತ್ತದೆ. ಹಿರಿಯರ ಬರವಣಿಗೆಯ ಟೀಕೆಗಳೆಂದು ಈ ಪುಸ್ತಕವನ್ನು ಗ್ರಹಿಸಿದರೆ ತಪ್ಪಾಗುತ್ತದೆ. ಅಪೂರ್ವ ಮಾಹಿತಿ ವಿಮರ್ಶಾತ್ಮಕ ವಿಶ್ಲೇಷಣೆಗಳು ಕನ್ನಡ ಸಾಹಿತ್ಯ, ಸಮುದಾಯ ಹಾಗೂ ಸಂಸ್ಕೃತಿ ತಿಳಿಯಲು ಈ ಪುಸ್ತಕದ ಓದು ನೆರವಾಗುತ್ತದೆ. ಅಲ್ಲದೆ ಹೊಸ ಸಂಶೋಧನೆಗೆ ಮಾರ್ಗ ಮಾಡಿಕೊಡುತ್ತದೆ. ಪುಸ್ತಕದ ಕೊನೆಯಲ್ಲಿ ಕರ್ನಾಟಕದ ಏಕೀಕರಣ ರಾಜಕೀಕರಣ ಹೊಂದಿದ ಅಂಶವನ್ನು ಲೇಖಕರು ದಾಖಲಿಸಬಹುದಿತ್ತು. ಇದು ಮಹತ್ವದ ಸಂಶೋಧನ ಕೃತಿಯಾಗಿರುವುದರಿಂದ ಮುದ್ರಣ ದೋಷಗಳು ನುಸಿಳಿರುವುದು ಅಪಾಯಕಾರಿ. ಕನ್ನಡ ವಿಶ್ವವಿದ್ಯಾಲಯ ಕೂಡಲ ಸಂಗಮದ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದಿಂದ ಪ್ರಕಟಗೊಂಡ ಮೌಲಿಕ ಕೃತಿ ಇದಾಗಿದೆ. □

ದಲಿತ ಕೈಗಾರಿಕೋದ್ಯಮಿಯೊಬ್ಬರನ್ನು ನಗರದ ಮೇಲ್ವರ್ಗದ ಜನರ ಕೂಟವೊಂದು ಪ್ರಶಂಸಿಸಿ ಆದರಿಸುವುದೇ ಒಂದು ವಿಶೇಷ. ಆದರೆ ದಲಿತರೊಬ್ಬರನ್ನು ಯುವಕರು ಅನುಕರಿಸಬಹುದಾದ ಆದರ್ಶ ಎಂದು ಎತ್ತಿ ತೋರಿಸುವುದು ಒಂದು ಅಪೂರ್ವ ಕ್ಷಣ. ಖಡೆ ಅವರ ಬಗ್ಗೆ ಆಡಿದ ಪ್ರತಿ ಮಾತಿಗೂ ದಲಿತೇತರರು ಚಪ್ಪಾಳೆ ತಟ್ಟಿ ಸ್ವಾಗತಿಸುವುದು ಇನ್ನೂ ಅಪರೂಪ. ಇದೆಲ್ಲದರಲ್ಲಿ ದಲಿತರಿಗೂ ಒಂದು ಸಂದೇಶವಿದೆ. ಮೇಲ್ಜಾತಿಯ ಜನ ಬದಲಾವಣೆಯ ಸೂಚನೆಯನ್ನು ನೀಡುತ್ತಿದ್ದರೆ ದಲಿತರು ಸಹ ಅದನ್ನು ಹಿಂತಿರುಗಿಸಬೇಕು.

ಮೇಲ್ಜಾತಿ ಹಿಂದೂಗಳು ಬದಲಾವಣೆಯ ಸೂಚನೆ ನೀಡುತ್ತಿದ್ದರೆ ದಲಿತರು ಅದನ್ನು ಹಿಂತಿರುಗಿಸಬೇಕು.

ಕೆಲವು ಬಿಲಿಯನ್‌ಗಳಷ್ಟು ವಹಿವಾಟನ್ನುಳ್ಳ ಪುಣೆಯ ಡಿ.ಎಸ್.ಕೆ ಡೆವಲಪರ್ಸ್ ದೇಶದ ಹಲವು ದೊಡ್ಡ ಭೂಮಿ ಮತ್ತು ಆಸ್ತಿ ಅಭಿವೃದ್ಧಿದಾರರಲ್ಲೊಬ್ಬರು. ಡಿ. ಎಸ್ ಕುಲಕರ್ಣಿಯವರು ಪ್ರಾರಂಭಿಸಿದ ಈ ಕಂಪನಿ ಯು.ಎಸ್‌ನಲ್ಲಿಯೂ ತನ್ನ ವ್ಯವಹಾರವನ್ನು ಹೊಂದಿದೆ. ಇದು ದೊಡ್ಡ ಮಟ್ಟದ ವ್ಯಾಪಾರಿ ಮತ್ತು ವಾಸದ ಮನೆಗಳ ಸಂಕೀರ್ಣಗಳನ್ನು ಕಟ್ಟುವ, ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ, ರೈಲು ಮಾರ್ಗಗಳು, ಬಂದರುಗಳು, ಅಣೆಕಟ್ಟುಗಳು, ರಸ್ತೆಗಳು ಮತ್ತು ಫ್ಯಾಕ್ಟರಿಗಳನ್ನು ಕಟ್ಟುವ ಕಂಪನಿಯಾಗಿದೆ. ಪುಣೆಯ ವಾಸಿಗಳು ಈ ಕಂಪನಿ ಕಟ್ಟಿದ ಮನೆಗಳಲ್ಲಿ ವಾಸಿಸುವವರನ್ನು ಮೇಲ್‌ಸ್ಥರದವರೆಂದೇ ಗುರುತಿಸುತ್ತಾರೆ. ಈ ಕಂಪನಿಯನ್ನು 1981ರಲ್ಲಿ ಪ್ರಾರಂಭಿಸಲಾಯಿತು. ಇದರ ಸಂಸ್ಥಾಪಕರಾದ ಕುಲಕರ್ಣಿಯವರು ಬಡ ಕುಟುಂಬದಿಂದ ಬಂದವರು. ವ್ಯಾಪಾರ ವಹಿವಾಟಿನ ಯಾವುದೇ ಹಿನ್ನೆಲೆಯಿಲ್ಲದ ಕುಲಕರ್ಣಿಯವರು ಕಟ್ಟಡ ನಿರ್ಮಾಣ ಪ್ರಪಂಚದಲ್ಲಿ ಇಂದು ದೊಡ್ಡ ಹೆಸರು ಮಾಡಿದ್ದಾರೆ.

ಸಮುದ್ರ ತಳದ ಎಣ್ಣೆ ಮತ್ತು ಅನಿಲ ಶೋಧಕ ಸಲಕರಣೆಗಳ ತಯಾರಿ ಮತ್ತು ನಿರ್ವಹಣಾ ಕೆಲಸಗಳಲ್ಲಿ ದಾಸ್ ಆಫ್‌ಶೋರ್ ಎಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಹೆಸರು ಮಾಡಿದೆ. ಅಶೋಕ್ ಖಡೆಯವರ ಈ ಕಂಪನಿ ಪ್ರಪಂಚದ ವಿವಿಧ ಭಾಗಗಳಲ್ಲಿ 4,500 ಕೆಲಸಗಾರರನ್ನು ನೇಮಿಸಿಕೊಂಡಿದೆ. 152 ಮಂದಿ ಬಿ.ಟೆಕ್ ಡಿಗ್ರಿ ಪಡೆದಿರುವವರೂ ಈ ಕಂಪನಿಯಲ್ಲಿ ಕೆಲಸಕ್ಕಿದ್ದಾರೆ(ಇದನ್ನು ನಾನು ಹಿಂದಿನ ನನ್ನ ಕಾಲಂಗಳಲ್ಲೂ ಹೇಳಿದ್ದೇನೆ).

ಅವರ ಕುಟುಂಬದಲ್ಲಿ ಹಿಂದೆ ಯಾರೂ ಕೈಗಾರಿಕಾ ಕ್ಷೇತ್ರದಲ್ಲಿರಲಿಲ್ಲ. ಆದರೂ ಖಡೆ ಇಂದು ದೊಡ್ಡ ಹೆಸರು ಮಾಡಿದ್ದು ತನ್ನ ವ್ಯವಹಾರವನ್ನು ಬೇರೆ ಬೇರೆ ಉದ್ದಿಮೆಗಳಿಗೂ ಚಾಚುತ್ತಿದ್ದಾರೆ. ಕೊಂಡೊಯ್ಯುತ್ತಿದ್ದಾರೆ. ಮುಂಬೈ ಹತ್ತಿರ ಒಂದು ಖಾಸಗಿ ಬಂದರನ್ನು ಸಹ ಅವರು ಕಟ್ಟುತ್ತಿದ್ದಾರೆ. ಅವರು ಮುಂಬೈನ ಸ್ಕೈವಾಕ್‌ನ್ನು ದಾಖಲೆ ಸಮಯದಲ್ಲಿ ಕಟ್ಟಿದರು. ಹತ್ತಿರದಲ್ಲಿ ಯಾವುದೇ ಹೆಲಿಕಾಪ್ಟರ್ ಇಳಿಸುವ ಅನುಕೂಲತೆ ಇಲ್ಲದುದರಿಂದ ಹೆಲಿಕಾಪ್ಟರ್ ಕೊಂಡುಕೊಳ್ಳುವ ತಮ್ಮ ಯೋಜನೆಯನ್ನು ಅವರು ಮುಂದೆ ಹಾಕಬೇಕಾಯಿತು. "ಬಂದರಿನ ಕೆಲಸ ಮುಗಿದ ಕೂಡಲೆ ನಾನು ನನ್ನ ಹೆಲಿಕಾಪ್ಟರ್ ಯೋಜನೆಯನ್ನು ಜಾರಿಗೊಳಿಸುತ್ತೇನೆ", ಖಡೆ ಹೇಳಿದರು. ಈಗಾಗಲೆ ಅವರು ತಮ್ಮ ಹಳ್ಳಿಯಲ್ಲಿ 100 ಎಕರೆ ಜಮೀನು ಕೊಂಡಿದ್ದಾರೆ. "ನಾನು ಹೆಲಿಪ್ಯಾಡನ್ನು ನನ್ನ ಹಳ್ಳಿಯಲ್ಲಿಯೇ ಕಟ್ಟುತ್ತೇನೆ", ಎನ್ನುತ್ತಾರೆ ಅವರು.

ಎಳೆಯವರಾಗಿದ್ದಾಗಲೆ ಖಡೆ ಬಡತನದ ಎಲ್ಲ ಮುಖಗಳನ್ನು ನೋಡಿದ್ದಾರೆ. ಅವರು ತಮ್ಮ 10ನೇ ತರಗತಿಯ ಗಣಿತದ ಪರೀಕ್ಷೆಗೆ ಖಾಲಿ ಹೊಟ್ಟೆಯಲ್ಲಿಯೆ ಹೋಗಬೇಕಾಯಿತು. ಆ ಪೇಪರಿನಲ್ಲಿ ಅವರು ಪಡೆದ ಅಂಕ ನೂರಕ್ಕೆ ನೂರು. ಅವರು ತಮ್ಮೊಬ್ಬರ ಏಳಿಗೆಯಲ್ಲಿಯೆ ಮೈಮರೆತಿಲ್ಲ. "ನಮ್ಮ ಊರಿನ ಯಾರೊಬ್ಬರೂ ಹರಿದ ಚಿಂದಿಯಲ್ಲಿರುವುದನ್ನು ನೋಡಲು ನಾನು ಇಷ್ಟಪಡುವುದಿಲ್ಲ. ನಾನೂ ಒಂದು ಕಾಲದಲ್ಲಿ ಚಿಂದಿಯನ್ನು ಟ್ಟಿದ್ದೇನೆ. ಆಗ ಹೇಗನ್ನಿಸುತ್ತದೆ ಎನ್ನುವುದು ನನಗೆ ಗೊತ್ತು", ಅವರೆನ್ನುತ್ತಾರೆ. ತಮ್ಮ ಊರಿನ ಒಬ್ಬ ಜವಳಿ ಅಂಗಡಿಯವನಿಗೆ ಊರಿನ ಯಾರೇ ಕೇಳಿದರೂ ಉಚಿತವಾಗಿ ಬಟ್ಟೆ ನೀಡಲು ಅವರು ಸೂಚಿಸಿದ್ದಾರೆ. ಅದರ ಬಿಲ್ಲನ್ನು ತಾವೆ ನೀಡುತ್ತಾರೆ.

ಡಿ.ಎಸ್.ಕೆ ಕಂಪನಿ ಮತ್ತು ಖಡೆ ಆಫ್‌ಶೋರ್‌ಗೆ ಯಾವ ರೀತಿಯ ಸಂಬಂಧವಿದೆ? ಎನ್ನಬಹುದು. ಒಂದೆರಡು ವಾರಗಳ ಹಿಂದೆ ನನಗೆ ಖಡೆಯವರಿಂದ ಒಂದು ದೂರವಾಣಿ ಕರೆ ಬಂತು. ಜೂನ್ 27ರಂದು ಪುಣೆಯಲ್ಲಿ ನಡೆಯುವ ಒಂದು ಸಮಾರಂಭಕ್ಕೆ ನಾನು ಬರಬೇಕೆಂದು ಅವರು ಆಹ್ವಾನಿಸಿದರು. ಹಾಗೂ ತಮಗೆ ಡಿ.ಎಸ್.ಕೆ ಕಂಪನಿ "ಸೆಲ್ಫ್ ಮೇಡ್ ಮ್ಯಾನ್ ಆಫ್ ದಿ ಇಯರ್ (ಸ್ವ ಸಾಮರ್ಥ್ಯದಿಂದ ಬೆಳೆದು ಬಂದ ಮನುಷ್ಯ) ಪ್ರಶಸ್ತಿ ನೀಡುತ್ತಿರುವುದರಿಂದ ನಾನು ಬರಲೇಬೇಕೆಂದು ಒತ್ತಾಯಿಸಿದರು. ಇದು ನನ್ನ ಕುತೂಹಲ ಕೆರಳಿಸಿತು. ನಾನು ಪುಣೆ ತಲುಪಿದೆ. ಡಿ.ಐ.ಸಿ.ಸಿ.ಐ ಅಧ್ಯಕ್ಷ ಮಿಲಿಂದ್ ಕಾಂಬ್ಳೆ ನನ್ನನ್ನು ಪ್ರಶಸ್ತಿ ನೀಡುವ ಸ್ಥಳಕ್ಕೆ ತಮ್ಮ ಕಾರಿನಲ್ಲಿ ಕರೆದುಕೊಂಡು ಹೋದರು.

ಪುಣೆಯ ಮುನಿಸಿಪಲ್ ಕಾರ್ಪೊರೇಶನ್ ಸಭಾಂಗಣ ಆ ನಗರದಲ್ಲಿಯೆ ಅತಿ ದೊಡ್ಡದಾದ ಸಂಭಾಂಗಣಗಳಲ್ಲಿ ಒಂದು. ಅದು ಕಿಕ್ಕಿರಿದು ತುಂಬಿತ್ತು. ಹೊರಗಡೆಯೂ ಜನರು ನಿಂತು ಅಲ್ಲಲ್ಲಿ ಹಾಕಿದ್ದ ದೊಡ್ಡ ಟ.ವಿ ಸ್ಕ್ರೀನ್‌ಗಳಲ್ಲಿ ಒಳಗಿನ ಕಾರ್ಯಕ್ರಮವನ್ನು ನೋಡುತ್ತಿದ್ದರು.

ಮೊದಲ 'ಸೆಲ್ಫ್ ಮೇಡ್ ಮ್ಯಾನ್ ಆಫ್ ದಿ ಇಯರ್' ಪ್ರಶಸ್ತಿಯನ್ನು ಕಳೆದ ವರ್ಷ ಈ ವರ್ಷದ ಪ್ರಶಸ್ತಿಯನ್ನು ಖಡೆ ಅವರು ಪಡೆದರು ಅದರ ಕಥೆ ಇಲ್ಲಿದೆ. ದಾಸ್ ಆಫ್‌ಶೋರ್ ತನ್ನದೇ ಹೆಸರು ಗಳಿಸಲು ಪ್ರಾರಂಭಿಸಿತ್ತು. ಖಡೆ ಅವರ ಏಳಿಗೆಯನ್ನು ಉದಾಹರಿಸಿ ಅನೇಕ ಪತ್ರಿಕೆಗಳು ಬರೆದವು. ಮೊದಲು ಬರೆದದ್ದು 'ಔಟ್ ಲುಕ್' ಮಾಸಿಕ. ಉಳಿದವು ಅದನ್ನನುಸರಿಸಿದವು. ಕುಲಕರ್ಣಿಯವರು ಖಡೆ ಅವರ ಜೀವನಗಾಥೆಯನ್ನು ಓದಿದರು. ತೀರ್ಪುಗಾರರು ಈ ವರ್ಷದ ಪ್ರಶಸ್ತಿಯನ್ನು ಖಡೆ ಅವರಿಗೆ ನೀಡಲು ನಿರ್ಧರಿಸಿದರು.

ಕುಲಕರ್ಣಿಯವರು ಬ್ರಾಹ್ಮಣರು. ಖಡೆ ದಲಿತರು. ಬ್ರಾಹ್ಮಣರೊಬ್ಬರು ತುಂಬಾ ಪ್ರಚಾರ ಪಡೆದ ಸಮಾರಂಭ ಒಂದರಲ್ಲಿ ದಲಿತರೊಬ್ಬರನ್ನು ಪ್ರಶಸ್ತಿ ನೀಡಿ ಗೌರವಿಸುವುದು ದೇಶದಲ್ಲಾಗುತ್ತಿರುವ ಬೇರೆ ಬೇರೆ ಜನಾಂಗಗಳ ಒಗ್ಗೂಡುವಿಕೆಯ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಜೂನ್ 27ರ ಆ ಸಮಾರಂಭ ಬಹಳ ಯಶಸ್ವಿಯಾಗಿ ನಡೆಯಿತು. ಪುಣೆಯ ಶ್ರೀಮಂತರು ಮತ್ತು ಪ್ರಖ್ಯಾತರು ಸಮಾರಂಭಕ್ಕೆ ಬಂದಿದ್ದರು. ಬಹಳಷ್ಟು ಮರ್ಸಿಡೆಸ್, ಆಡಿ ಮತ್ತು ಬಿ.ಎಮ್.ಡಬ್ಲೂ ಕಾರುಗಳನ್ನು ಹಾಲಿನ ಹೊರಗೆ ನಿಲ್ಲಿಸಲಾಗಿತ್ತು. ಕಾಂಬ್ಳೆ ಕೂಡ ಒಬ್ಬ ಆಹ್ವಾನಿತರು. ಇಂಡಿಯಾದ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್‌ನ ಡೈರೆಕ್ಟರ್ ಜನರಲ್ ಆದ ಡಾ॥ ರಘುನಾಥ್ ಮಶೇಲ್ಕರ್ ಖಡೆಯವರಿಗೆ ಒಂದು ಲಕ್ಷ ರೂಪಾಯಿಯ ಚೆಕ್ ಮತ್ತು ಖಡೆಯವರು ಗುಣ ಕಥನವುಳ್ಳ ಸರ್ಟಿಫಿಕೇಟನ್ನು ನೀಡಿದರು. ಭಾಷಣಕಾರರು ಖಡೆಯವರ ಏಳಿಗೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು ಮತ್ತು ಖಡೆಯವರು ಇಂದಿನ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಪ್ರತ್ಯೇಕತೆ ಉರುಳುತ್ತಿದೆ

ಬಂಡವಾಳಗಾರರಾಗಿ

ಯುವಕರು ಅನುಕರಿಸ ಬಹುದಾದ ಒಂದು ಮಾದರಿ ಎಂದು ಹೊಗಳಿದರು.

ಈ ಕಾರ್ಯಕ್ರಮ ಒಂದು ಹೊಸ ಭಾರತದ ಆಗಮನಕ್ಕೆ ಮುನ್ಸೂಚನೆ ನೀಡಿದೆ. ದಲಿತ ಕೈಗಾರಿಕೋದ್ಯಮಿಯೊಬ್ಬರನ್ನು ನಗರದ ಮೇಲ್ವದರದ ಜನರ ಕೂಟವೊಂದು ಪ್ರಶಂಸಿಸಿ ಆದರಿಸುವುದೇ ಒಂದು ವಿಶೇಷ. ಆದರೆ ದಲಿತರೊಬ್ಬರನ್ನು ಯುವಕರು ಅನುಕರಿಸಬಹುದಾದ ಆದರ್ಶ ಎಂದು ಎತ್ತಿ ತೋರಿಸುವುದು ಒಂದು ಅಪೂರ್ವ ಕ್ಷಣ. ಖಡೆ ಅವರ ಬಗ್ಗೆ ಆಡಿದ ಪ್ರತಿ ಮಾತಿಗೂ ದಲಿತೇತರರು ಚಪ್ಪಾಳೆ ತಟ್ಟಿ ಸ್ವಾಗತಿಸುವುದು ಇನ್ನೂ ಅಪರೂಪ. ಇದೆಲ್ಲದರಲ್ಲಿ ದಲಿತರಿಗೂ ಒಂದು ಸಂದೇಶವಿದೆ. ಮೇಲ್ಜಾತಿಯ ಜನ ಬದಲಾವಣೆಯ ಸೂಚನೆಯನ್ನು ನೀಡುತ್ತಿದ್ದರೆ ದಲಿತರು ಸಹ ಅದನ್ನು ಹಿಂತಿರುಗಿಸಬೇಕು. ಬ್ರಾಹ್ಮಣರು ಮತ್ತು ಇತರೇ ಮೇಲ್ಜಾತಿಯ ಜನರನ್ನು ತೆಗಳುವುದು ಭಾವಾವೇಷವನ್ನವಲಂಭಿಸಬಾರದು. ಮೇಲಾಗಬಾರದು ಅದು ತರ್ಕಬದ್ಧವಾಗಿರಬೇಕು. ಕುಲಕರ್ಣಿಯಂತವರು ಯಶಸ್ವಿ ದಲಿತ ಉದ್ಯಮಿಯೊಬ್ಬರನ್ನು ಗೌರವಿಸಿ ಆದರಿಸಿದರೆ ದಲಿತರು ಸಹ ಕುಲಕರ್ಣಿಯವರಂತಹ ಜೀವಿತ ದಂತಕಥೆಗಳನ್ನು ಆದರಿಸಬೇಕು.

ಕುಲಕುರ್ಣಿಯವರ ಗೌರವಾರ್ಥ ಡಿ.ಐ.ಸಿ.ಸಿ.ಐ ಅಂತಹ ಒಂದು ಸಮಾರಂಭವನ್ನು ಏರ್ಪಡಿಸುತ್ತದೆ ಎಂದು ಆಶಿಸೋಣ. ಹಾಗೆ ಮಾಡಿದರೆ ಮಾತ್ರ ನಾವು ಸಾಮಾಜಿಕ ನೆಮ್ಮದಿಯಿಂದ ತುಂಬಿದ ಒಂದು ಭಾರತವನ್ನು ಕಟ್ಟಲು ಸಾಧ್ಯ.

* * * * * * * *

ಉದ್ಯೋಗ ಹುಡುಕುವುದಕ್ಕಿಂತ ದಲಿತರು ಉದ್ಯಮಗಳನ್ನು ಪ್ರಾರಂಭಿಸಬೇಕು.

ಬೆಂಗಳೂರಿನ ಒಬ್ಬ ಯುವ ದಲಿತ ಕೈಗಾರಿಕೋದ್ಯಮಿ ಜೆ. ಬಾಲಸುಬ್ರಹ್ಮಣ್ಯಮ್. ಅವರು ಸಾಲ್ಡರಿಂಗ್ ವೈರ್ ಮತ್ತು ಕೈಗಾರಿಕಾ ರಾಸಾಯನಿಕಗಳನ್ನು ತಯಾರಿಸುತ್ತಾರೆ. ಅವರ ತಂದೆ ನಿವೃತ್ತ ಸರ್ಕಾರಿ ನೌಕರರು ಮತ್ತು ಅವರು ಒಂದು ಸಭ್ಯ ಬಡಾವಣೆಯಲ್ಲಿ ವಾಸಿಸುತ್ತಾರೆ.

ಬಾಲ ತರಬೇತಿಯಲ್ಲಿ ಇಂಜಿನಿಯರರು. ಅವರು ತಮ್ಮ ಶಿಕ್ಷಣವನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ನಿರ್ಧರಿಸಿದರು. ಕೈಗಾರಿಕಾ ಉತ್ಪತ್ತಿಯಲ್ಲಿ ಅವರು ಬಿ.ಟೆಕ್ ಮಾಡಿದ್ದಾರೆ. ಅವರಿಗೆ ಇದೊಂದು ಪ್ರಯೋಗ ಮತ್ತು ನಾನೊಬ್ಬ ಕೈಗಾರಿಕೋದ್ಯಮಿಯಾಗಬೇಕೆಂಬ ಅವರ ಆಳವಾದ ಆಸೆಯನ್ನು ಯಶಸ್ವಿಯಾಗಿಸಬಲ್ಲ ಅವಕಾಶ ಅವರ ಜೊತೆಗಾರರು, ಸ್ನೇಹಿತರು ಮತ್ತು ಹಿತಚಿಂತಕರಿಗೆ ಇದೊಂದು ಸಾಹಸ. ದೇಶದ ಬೇರೆ ಬೇರೆ ರಾಜ್ಯಗಳ ಯುವಕ ಇಂಜಿನಿಯರ್‌ಗಳು ಬೆಂಗಳೂರಿಗೆ ಬಂದು ಕೈ ತುಂಬಾ ಸಂಬಳ ನೀಡುವ ಕೆಲಸ ಹಿಡಿಯುತ್ತಿರುವಾಗ ಇವರೇಕೆ ಈ ಸಾಹಸಕ್ಕೆ ಕೈ ಹಾಕಿ ತಮ್ಮ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ಅವರನೇಕ ಸ್ನೇಹಿತರು ಕೇಳಿದ್ದೂ ಆಯಿತು.

ಆದರೆ ಬಾಲ ತಮ್ಮ ದೃಷ್ಟಿಯನ್ನು ಯಂತ್ರಗಳ ಮೇಲೆ ನೆಟ್ಟಿದ್ದರು ಮತ್ತು ಚೆನ್ನಾಗಿ ಹಣ ಸಂಪಾದನೆ ಮಾಡುವುದಾಗಿ ತೀರ್ಮಾನಿಸಿದ್ದರು. ಅವರ ಉದ್ದಿಮೆಗೆ ಕಡಿಮೆ ಎಂದರೆ ಒಂದು ಲಕ್ಷ ರೂಪಾಯಿಗಳ ಬಂಡವಾಳವಾದರೂ ಬೇಕಾಗಿತ್ತು. ಯಂತ್ರಗಳಿಗೆ ಸುಮಾರು 50,000 ರೂಪಾಯಿ ತೊಡಗಿಸಬೇಕಾಗಿತ್ತು. ಆದುದರಿಂದ ಅವರು ತಮಗೆ ಬೇಕಾದ ಯಂತ್ರಗಳನ್ನು ತಾವೆ ತಯಾರಿಸುವುದಾಗಿ ನಿರ್ಧರಿಸಿದರು. ತಮ್ಮ ಯಂತ್ರಗಳಿಗೆ ಬೇಕಾಗುವ ಬಿಡಿ ಭಾಗಗಳಿಗಾಗಿ ಹುಡುಕತೊಡಗಿದರು. ಅನೇಕ ಹಳೇ ಮೂಲಗಳ ಅಂಗಡಿಗಳಿಗೆ ಭೇಟಿ ನೀಡಿದರು. ಒಂದು ಹೆರಾಲ್ಡ್ ಕಾರಿನ ಗೇರ್‌ಬಾಕ್ಸ್ ಅವರ ಉದ್ದೇಶಕ್ಕೆ ಸರಿಹೊಂದುವಂತೆ ಕಂಡುಬಂದುದರಿಂದ ಅವರು ಅದನ್ನು 400 ರೂಪಾಯಿಗಳಿಗೆ ಕೊಂಡರು. ಬೇರೆ ಬೇರೆ ತುಣುಕು ವ್ಯಾಪಾರಿಗಳಿಂದ ಉಳಿದ ಭಾಗಗಳನ್ನು ಕೊಂಡು ಅವರ ಯಂತ್ರಗಳನ್ನು ಸಜ್ಜುಗೊಳಿಸಿದರು. ತಮ್ಮ ಉಳಿದ ಖರ್ಚುಗಳಿಗೆ ತಮ್ಮ ಕುಟುಂಬದಿಂದ ಮತ್ತು ಸ್ನೇಹಿತರಿಂದ ಸಾಲ ಪಡೆದರು. ಅವರ ಕನಸು ಸಾಕಾರಗೊಂಡಿತು.

ನಾನು ಅವರ ಕಾರ್ಖಾನೆಗೆ ಬೇಟಿ ನೀಡಿದ್ದಾಗ ಕೆಲಸ ತುಂಬಾ ಮುತುವರ್ಜಿಯಿಂದ ನಡೆಯುತ್ತಿತ್ತು. ಸಾಲ್ಡರಿಂಗ್ ವೈರ್ ತಯಾರು ಮಾಡುತ್ತಿದ್ದ ಹೊಸ ಯಂತ್ರಗಳನ್ನು ನೋಡಿದೆ. ಅವರನ್ನು ಬೇಟಿಮಾಡಲು ಬಂದವರು ನೋಡಲೆಂದು ಅವರು ಸಜ್ಜುಗೊಳಿಸಿದ ಮೊದಲ ಯಂತ್ರವನ್ನು ಅಲ್ಲೇ ಇಡಲಾಗಿತ್ತು. ಹದಿನೈದು ವರ್ಷಗಳ ಹಿಂದೆ ಬಾಲ ತಮ್ಮ ಘಟಕ ಸ್ಥಾಪಿಸಲು 100 ಚ.ಅ ಸ್ಥಳ ಸಹ ಇರಲಿಲ್ಲ. ಇಂದು ಉತ್ತಮ ಜಾಗ ದಲ್ಲಿ 50,000 ಚ.ಅ ಕೈಗಾರಿಕಾ ಸ್ಥಳ ಹೊಂದಿರುವ ಹೆಮ್ಮೆ ಅವರಿಗಿದೆ. ಅವರು ತಯಾರಿಸಿದ ವಸ್ತುಗಳನ್ನು ದೊಡ್ಡ ದೊಡ್ಡ ವಿದ್ಯುನ್ಮಾನ ಮತ್ತು ವಾಹನ ತಯಾರಿಕಾ ಕಂಪನಿಗಳು ಉಪಯೋಗಿಸುತ್ತಿವೆ.

ತಮ್ಮ ಕಂಪನಿಯನ್ನು ಸ್ಥಾಪಿಸಿದ ಕೆಲವೇ ವರ್ಷಗಳಲ್ಲಿ ಬಾಲ ಲಾಭಗಳಿಸಲು ಪ್ರಾರಂಭಿಸಿದ್ದರು. ಅವರ ತಂದೆ ತಾಯಿಗಳು ಅವರು ಮದುವೆಯಾಗಬೇಕೆಂದು ಒತ್ತಾಯಿಸಿದರು. "ನನ್ನನ್ನು 30 ಹುಡುಗಿಯರು ತಿರಸ್ಕರಿಸಿದ್ದರು", ಅವರು ಹುಸಿನಗುತ್ತಾ ಹೇಳುತ್ತಾರೆ. ಯಶಸ್ವೀ ಕೈಗಾರಿಕೋದ್ಯಮಿಯೊಬ್ಬರ ಕೋರಿಕೆಯನ್ನು ಜನರೇಕೆ ತಿರಸ್ಕರಿಸುತ್ತಾರೆ? ಮದುವೆಯ ಸಲಹೆಯೊಡನೆ ಬಂದ ಜನರು ಜೀವನೋಪಾಯಕ್ಕೆ ಬಾಲ ಏನು ಮಾಡುತ್ತಾರೆ? ಎಂದು ತಿಳಿಯಬಯಸಿದರು. ಬಾಲರಿಗೆ ಯಾವುದೇ ಸರ್ಕಾರಿ ಕೆಲಸವಿಲ್ಲ ಎಂದು ತಿಳಿದಾಗ ಮತ್ತೆ ಅವರು ತಿರುಗಿ ಬರಲಿಲ್ಲ. ಬಾಲರ ತಂದೆ ಒಬ್ಬ ನಿವೃತ್ತ ಸರ್ಕಾರಿ ನೌಕರ ಮತ್ತು ಬಾಲ ಬಿ.ಟೆಕ್ ಮಾಡಿದ್ದಾರೆ ಎಂದು ತಿಳಿದಿದ್ದುದರಿಂದ ಜನರು ಅವರ ತಂದೆಯ ಹತ್ತಿರ ಬರುತ್ತಿದ್ದರು. ಆದರೆ ಅವರಲ್ಲಾರೂ ತಮ್ಮ ಮಗಳನ್ನು ಬಾಲಾರಿಗೆ ಮದುವೆ ಮಾಡಿಕೊಡಲು ತಯಾರಿರಲಿಲ್ಲ. ಕೊನೆಯಲ್ಲಿ ಬಾಲಾರ ತಂದೆಯ ಸಹೋದ್ಯೋಗಿಯೊಬ್ಬರು ತಮ್ಮ ಮಗಳನ್ನು ಕೊಡಲು ಮುಂದೆ ಬಂದರು. ಅವರ ಹೆಂಡತಿ ಬಿ.ಕಾಂ ಓದಿದ್ದು ಇಂದು ಕಂಪನಿಯ ಎಲ್ಲ ಲೆಕ್ಕಗಳನ್ನು ನೋಡಿಕೊಳ್ಳುತ್ತಾರೆ. ಬಾಲಾ ದಂಪತಿಗಳಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದಾರೆ. ತಮ್ಮ ಜೀವನ ತೆಗೆದುಕೊಂಡ ತಿರುವಿನ ಬಗ್ಗೆ ಬಾಲಾ ತುಂಬಾ ಸಂತೋಷಪಡುತ್ತಾರೆ. 30 ಹುಡುಗಿಯರಿಂದ ತಿರಸ್ಕರಿಸಲ್ಪಟ್ಟ ಕಥೆ ಹೊರಬಂದಿದ್ದು ನಾನು ಅವರು ಮತ್ತು ಇತರ ದಲಿತ ಕೈಗಾರಿಕೋದ್ಯಮಿಗಳ ಜೊತೆ 'ದಲಿತ ಪಾತ್ರದ ಮಾದರಿ'ಗಳ ಬಗ್ಗೆ ಚರ್ಚಿಸುತ್ತಿದ್ದಾಗ. ಅವರೆಲ್ಲರೂ ಒಕ್ಕೊರಲಿನಿಂದ ಹೇಳಿದ್ದಿಷ್ಟೆ ದಲಿತರು ತಮ್ಮ ಹೆಣ್ಣು ಮಕ್ಕಳನ್ನು ವ್ಯಾಪಾರೋದ್ಯಮದಲ್ಲಿರುವ ದಲಿತ ಗಂಡುಗಳ ಜೊತೆ ಮದುವೆ ಮಾಡಿಕೊಡಲು ಹಿಂಜರಿಯುತ್ತಾರೆ. 'ಜವಾನರಿಗೂ ನಾವು ಬೇಡ', ಒಬ್ಬ ಕೈಗಾರಿಕೋದ್ಯಮಿ ಹೇಳಿದರು.

ಸಾಮಾನ್ಯವಾಗಿ ಹೇಳುವುದಾದರೆ ದಲಿತರಿಗೆ ಜೀವನ ವೃತ್ತಿ ಎಂದರೆ ಸರ್ಕಾರಿ ನೌಕರಿ. ಶತಮಾನಗಳಿಂದ ಮುಖ್ಯವಾಹಿನಿಯಿಂದ ಪ್ರತ್ಯೇಕಿಸಲ್ಪಟ್ಟ ಸಾಮಾಜಿಕವಾಗಿ ನಿಷೇದಿಸಲ್ಪಟ್ಟಿದ್ದ ಈ ಜನರಿಗೆ ಭದ್ರತೆ ಅತಿ ಮುಖ್ಯವಾದುದು. ಸರ್ಕಾರಿ ನೌಕರಿ ಇದ್ದರೆ ಮಾತ್ರ ಅವರು ಪಾತ್ರ ಮಾದರಿಗಳಾಗಲಿಕ್ಕೆ ಸಾಧ್ಯ. ರಾಜಕಾರಣಿಗಳು ಕೂಡ ಪಾತ್ರ ಮಾದರಿಗಳಾಗಬಲ್ಲರು. ಅದರಲ್ಲಿಯೆ ವ್ಯಂಗ್ಯ ಅಡಗಿರುವುದು. ಕೆಲಸ ಹುಡುಕುವವರು ಪಾತ್ರ ಮಾದರಿಗಳಾಗಿ, ಕೆಲಸ ನೀಡುವವರನ್ನು ದಿಕ್ಕರಿಸಿದ ಸಮಾಜ ತಲೆ ಎತ್ತಿ ಹೆಮ್ಮೆಯಿಂದ ನಡೆಯಲು ಹೇಗೆ ಸಾಧ್ಯ?

ಈ ಸಮಾಜ ಅರಿತುಕೊಳ್ಳಬೇಕು. ಸರ್ಕಾರ ನೀಡಬಹುದಾದ ಕೆಲಸಗಳಿಗೆ ಒಂದು ಮಿತಿ ಇದೆ. ಆದರೆ ಒಬ್ಬ ವ್ಯಕ್ತಿ ಕೈಗೊಳ್ಳಬಹುದಾದ ವ್ಯಾಪಾರೋದ್ಯಮಗಳಿಗೆ ಮಿತಿ ಇಲ್ಲ. ಹಿಂದೆ ಹೆಚ್ಚು ದಲಿತರು ವಿದ್ಯಾವಂತರಾಗಿರಲಿಲ್ಲ. ಆದುದರಿಂದ ಡಿಗ್ರಿ ಪಡೆದವನು ಸುಲಭವಾಗಿ ಸರ್ಕಾರಿ ಕೆಲಸಗಳನ್ನು ಗಿಟ್ಟಿಸಬಹುದಿತ್ತು. ಇಂದು ಡಿಗ್ರಿ ಪಡೆದ ದಲಿತರ ಸಂಖ್ಯೆ ಹೆಚ್ಚುತ್ತಿದೆ. ಆದರೆ ಸರ್ಕಾರಿ ಕೆಲಸಗಳು ಕಡಿಮೆಯಾಗುತ್ತಾ ಹೋಗುತ್ತಿವೆ. ದಲಿತರಲ್ಲದವರನ್ನು ನೌಕರಿಯಲ್ಲಿ ತೆಗೆದುಕೊಳ್ಳುವುದರ ಮೂಲಕ ದಲಿತರು ಜಾತಿ ಪದ್ಧತಿಯನ್ನು ಸಮರ್ಥವಾಗಿ ಎದುರಿಸಬಹುದು. ಬಂಡವಾಳದಾರರಾಗುವುದರಿಂದ ದಲಿತರು ಯಾವಾಗಲೂ ರಿಯಾಯಿತಿ ಬಯಸುತ್ತಾರೆ ಎಂಬ ಸಮಾಜದ ಕಲ್ಪನೆಯನ್ನು ಪರಿವರ್ತನೆ ಮಾಡಬಹುದು.

ಇನ್ನೂ ಸಮಯವಿದೆ. ದಲಿತರ ಪರ ಚರಿತ್ರೆ ಇದೆ. ಸದ್ಯದಲ್ಲಿ ಅವರಿಗೆ ಕಾರು, ಬಸ್ ಮತ್ತು ಟ್ರಕ್‌ಗಳನ್ನು ತಯಾರಿಸಲು ಸಾಧ್ಯವಿಲ್ಲದಿರಬಹುದು. ಆದರೆ ಜಾಗತೀಕರಣದಿಂದಾಗಿ ಒಂದು ಯಂತ್ರದ ಎಲ್ಲ ಭಾಗಗಳನ್ನು ಒಂದೇ ಛಾವಣಿ ಅಡಿ ತಯಾರಿಸಬಹುದು ಎಂಬ ಕಲ್ಪನೆಯೆ ಬದಲಾಗಿದೆ.

ಸ್ಪರ್ದೆಯಲ್ಲಿರಲೊಸ್ಕರ ದೊಡ್ಡ ಕಂಪನಿಗಳು ಬಿಡಿ ಭಾಗಗಳ ತಯಾರಿಕೆಯನ್ನು ಸಣ್ಣ ಸಣ್ಣ ಕಂಪನಿಗಳಿಗೆ ನೀಡುತ್ತಿದ್ದಾರೆ. ಅದರ ಕಾರಣವಾಗಿ ಟಾಟಾರ ಇಂಡಿಗೊ ಕಾರುಗಳಿಗೆ ದಲಿತ ಉದ್ಯಮಿ ಬಿಡಿಭಾಗಗಳನ್ನು ತಯಾರಿಸುತ್ತಿದ್ದಾನೆ. ಇಂಡಿಗೊ ಕಾರನ್ನು ನೀವು ಮತ್ತೊಮ್ಮೆ ರಸ್ತೆಯ ಮೇಲೆ ನೋಡಿದಾಗ ಅದರ ತಯಾರಿಕೆಯಲ್ಲಿ ದಲಿತರ ಕೈಗಳಿವೆ ಎಂದು ಜ್ಞಾಪಿಸಿಕೊಳ್ಳಿ ಘಾಜಿಯಬಾದ್‌ನಲ್ಲಿ ಹೀರೊ ಹೊಂಡಾ ಬೈಕ್‌ಗಳಿಗೆ ಬಿಡಿಭಾಗಗಳನ್ನು

ಮಾಡುವ ದಲಿತರೊಬ್ಬರಿದ್ದಾರೆ. ಸಾಂಗ್ಲಿಯಲ್ಲಿ ಬಜಾಜ್ ಪುಲ್ಸಾರ್ ಬೈಕ್‌ಗಳಿಗೆ ಬಿಡಿಭಾಗಗಳನ್ನು ಮಾಡುವ ದಲಿತರಿದ್ದಾರೆ. ದಲಿತರು ಏರೋಪ್ಲೇನ್‌ಗಳಿಗೆ ಮತ್ತು ಸ್ಯಾಟಲೈಟ್‌ಗಳಿಗೆ ಬಿಡಿಭಾಗಗಳನ್ನೊದಗಿಸುವ ಕಾಲವೊಂದು ಬರುತ್ತದೆ.

* * * * * * * *

ಮಾದರಿಯಾಗಲು ಸಕಾಲ

ದಲಿತ ಸಮಾಜದ ಸ್ಥಿತಿಯನ್ನು ಕೆಲವು ದಲಿತ ದಶ ಲಕ್ಷಾಧಿಪತಿಗಳ ಮೂಲಕ ಅಳೆಯಲು ಸಾಧ್ಯವಿಲ್ಲ.

ದೇಶದ ಜನಗಣತಿಯ ಪ್ರಕಾರ ದಲಿತರ ಜನಸಂಖ್ಯೆ 166 ದಶಲಕ್ಷ. ಇವರಲ್ಲಿ ಸಾವಿರಕ್ಕೂ ಹೆಚ್ಚು ಜನರು ದಶಲಕ್ಷಾಧಿಪತಿಗಳಾಗಿದ್ದಾರೆ. ಈ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅನೇಕರು ಇದೊಂದು ದೊಡ್ಡ ಸಾಧನೆ ಎನ್ನುತ್ತಾರೆ. ಆದರೆ ಕೆಲವರು ಸಾವಿರ ದಲಿತರು ದಶಲಕ್ಷಾಧಿಪತಿಗಳಾಗಲಿ ಅಥವಾ ಕೋಟ್ಯಾಧಿಪತಿಗಳಾದರೂ ಆದಲ್ಲಿ ಏನು ಮಹಾ ಎನ್ನುತ್ತಾರೆ. ದಲಿತರ ಏಳಿಗೆಯ ಬಗ್ಗೆ ವ್ಯಂಗ್ಯವಾಡುತ್ತಿರುವವರು ಸಾಮಾನ್ಯವಾಗಿ ಎಡ ಪಂಥದವರು.

166 ದಶಲಕ್ಷ ಜನಸಂಖ್ಯೆಯಲ್ಲಿ 1000 ಜನರು ಶ್ರೀಮಂತರಾಗುವುದು ನಿಜವಾಗಿಯೂ ದಲಿತ ಸಮಾಜದ ನಿಜ ಚಿತ್ರಣವನ್ನು ತೋರಿಸುವುದಿಲ್ಲ. ಹಾಗಾದರೆ ಬಿಲ್ ಗೇಟ್ಸ್ ಮತ್ತು ಮುಖೇಶ್ ಅಂಬಾನಿಯಂತಹವರು ಸಮಾಜದ ನಿಜ ಚಿತ್ರಣವನ್ನು ಕೊಡುತ್ತಾರೆಯೆ? ಜಗತ್ತಿನ ವಿವಿಧ ರಾಷ್ಟ್ರಗಳ ಜನರ ಸ್ಥಿತಿಗತಿಗಳ ಜತೆ ದಲಿತರ ಪರಿಸ್ಥಿತಿಯನ್ನು ಪರೀಕ್ಷಿಸೋಣ.

ಬಾಬ್ ಜಾನ್ಸನ್ 2003ರಲ್ಲಿ ಆಫ್ರೋ-ಅಮೆರಿಕನ್ನರ ಮೊದಲ ಶತಕೋಟಿ ಒಡೆಯರಾದರು. ಫೋರ್ಬ್ಸ್ ಪತ್ರಿಕೆ ಅವರ ಹೆಸರನ್ನು ಹೊರಗೆಡಹಿದ ಮೇಲೆ ಜಾನ್ಸನ್ ಪತ್ರಿಕೆಗಳಲ್ಲಿ ಬರತೊಡಗಿದರು. ತಮ್ಮ ಏಳಿಗೆಯ ಕಥೆಯನ್ನು ದೇಶದ ಜನರ ಜತೆ ಹಂಚಿಕೊಳ್ಳಲು ಅವರನ್ನು ಆಹ್ವಾನಿಸಲಾಯಿತು. ಅವರನ್ನು ದೊಡ್ಡ ಪ್ರೇರಕ ಎಂದು ಗುರುತಿಸಲಾಯಿತು. ಕೆಲವರ್ಷಗಳ ನಂತರ ಓಪ್ರಾ ವಿಫ್ರೈ ಮೊದಲ ಮತ್ತು ಒಬ್ಬಳೇ ಕರಿಯ ಮಹಿಳೆ ಶತ ಶ್ರೀಮಂತೆಯಾದರು. ಶತಕೋಟಿ ಶ್ರೀಮಂತಿಕೆ ಇಲ್ಲದಿದ್ದರೆ ಅವರು ಜಗತ್ತಿನೆಲ್ಲೆಡೆ ಮನೆ ಮಾತಾಗಲು ಸಾಧ್ಯವಾಗುತ್ತಿರಲಿಲ್ಲ.

40 ದಶಲಕ್ಷ ಕರಿಯ ಅಮೆರಿಕನರಲ್ಲಿ ಒಬ್ಬ ಜಾನ್ಸನ್ ಒಂದು ಸಣ್ಣ ಬದಲಾವಣೆ ತರಲು ಸಾಧ್ಯವಾಯಿತು. ಆದರೆ ಅವರಾಗಲಿ ಅಥವಾ ಓಪ್ರಾ ಅವರಾಗಲಿ ಯು.ಎಸ್.ನಲ್ಲಿ ವಾಸಿಸುವ ಎಲ್ಲಾ ಕರಿಯರ ಜೀವನವನ್ನು ಮಾರ್ಪಡಿಸಲು ಸಾಧ್ಯವಾಯಿತೆ? ದೀರುಬಾಯ್ ಅಂಬಾನಿ ಭಾರತದ ಎಲ್ಲಾ ಜನರ ಜೀವನ ವಿಧಾನದಲ್ಲಿ ಬದಲಾವಣೆ ತರಲು ಸಾಧ್ಯವಾಯಿತೆ? ಇಲ್ಲ. ಆದರೆ ಈ ಜನರು ಕೆಲವು ಜನರ ಜೀವನದಲ್ಲಾದರೂ ಮಾರ್ಪಾಡು ತರಲು ಸಾಧ್ಯವಾಯಿತು. ಅವರು ಅವರನ್ನು ನೆನೆಸಿಕೊಳ್ಳುತ್ತಾರೆ. ಆದುದರಿಂದ ನಾವು ದಲಿತ ದಶಲಕ್ಷಾಧೀಶ್ವರರಿಗೆ ಆ ಅಂತಸ್ತನ್ನಾದರೂ ಏಕೆ ನೀಡಬಾರದು?

ಫೋರ್ಬ್ಸ್ ಪತ್ರಿಕೆ ದೀರೂಬಾಯ್ ಅವರ ಹೆಸರನ್ನು ಒಂದೂವರೆ ದಶಕಗಳ ಹಿಂದೆ ಪಟ್ಟಿ ಮಾಡಿದಾಗ ಅವರು ಭಾರತದಲ್ಲಿ ಮನೆ ಮಾತಾದರು. ಎನ್.ಆರ್. ನಾರಾಯಣ ಮೂರ್ತಿ ಮತ್ತು ನಂದನ್ ನಿಲೇಕಣಿ ಅವರ ವಿಷಯದಲ್ಲಿಯೂ ಹಾಗೇ ಆಯಿತು.

> **ಭಾರತ ಒಂದು ಸಾಮಾಜಿಕ-ಮಾನಸಿಕ ಸಂದಿಗ್ಧದಿಂದ ನರಳುತ್ತಿದೆ. ಅದೃಷ್ಟವಶಾತ್ ದಲಿತರು ಆ ಮಾನಸಿಕ ಬೇನೆಯಿಂದ ತಪ್ಪಿಸಿಕೊಂಡಿದ್ದಾರೆ. ಸಾಮಾನ್ಯ ದಲಿತ ತಮ್ಮಲ್ಲಿ ಕೆಲವರು ದಶಲಕ್ಷಗಳನ್ನು ಹೊಂದಿದವರ ಸಂಗಡ ಇದ್ದಾರೆ ಎನ್ನುವುದರಲ್ಲಿ ಹೆಮ್ಮೆ ಪಡುತ್ತಾನೆ. ಸಾಮಾನ್ಯ ಮೇಲ್ಜಾತಿಯ ವ್ಯಕ್ತಿಗೆ ದಲಿತರೆಂದರೆ ಎಲ್ಲಾ ರೀತಿಯ ಅತ್ಯಾಚಾರ, ಅನಾಚಾರ, ಹಸಿವು, ನಷ್ಟ, ಮತ್ತು ಪ್ರತ್ಯೇಕತೆಗಳಿಂದ ನೊಂದವರು. ಈ ರೀತಿಯ ಸರಳೀಕರಣ ದಲಿತರ ಹಿತಚಿಂತಕರೂ ಸಹ ಅವರನ್ನು ದಶ ಲಕ್ಷಾಧೀಶ್ವರರು ಎಂದು ಒಪ್ಪಿಕೊಳ್ಳುವುದನ್ನು ತಡೆಯುತ್ತದೆ.**

ಯು.ಎಸ್.ನ ಕರಿಯರಿಗೆ ಜಾನ್ಸನ್ ಮತ್ತು ಓಪ್ರಾ 'ಪಾತ್ರ ಮಾದರಿ'ಗಳಾದರೆ, ಗೇಟ್ಸ್ ಅನ್ನು ಜಗತ್ತೇ 'ಪಾತ್ರ ಮಾದರಿ' ಎಂದು ಪರಿಗಣಿಸಿದರೆ, ದೀರೂಬಾಯ್, ಮೂರ್ತಿ ಮತ್ತು ನಿಲೇಕಣಿ ಮಧ್ಯಮವರ್ಗದ ಭಾರತೀಯನಿಗೆ ಪಾತ್ರ ಮಾದರಿಗಳಾದರೆ, ದಲಿತರು ತಮ್ಮದೇ ಪಾತ್ರ ಮಾದರಿಗಳನ್ನು ಹೊಂದಲು ಇದು ಸಕಾಲ.

ಭಾರತ ಒಂದು ಸಾಮಾಜಿಕ-ಮಾನಸಿಕ ಸಂದಿಗ್ಧದಿಂದ ನರಳುತ್ತಿದೆ. ಅದೃಷ್ಟವಶಾತ್ ದಲಿತರು ಆ ಮಾನಸಿಕ ಬೇನೆಯಿಂದ ತಪ್ಪಿಸಿಕೊಂಡಿದ್ದಾರೆ. ಸಾಮಾನ್ಯ ದಲಿತ ತಮ್ಮಲ್ಲಿ ಕೆಲವರು ದಶಲಕ್ಷಗಳನ್ನು ಹೊಂದಿದವರ ಸಂಗಡ ಇದ್ದಾರೆ ಎಂದು ಹೆಮ್ಮೆ ಪಡುತ್ತಾನೆ. ಸಾಮಾನ್ಯ ಮೇಲ್ಜಾತಿಯ ವ್ಯಕ್ತಿಗೆ ದಲಿತರೆಂದರೆ ಎಲ್ಲಾ ರೀತಿಯ ಅತ್ಯಾಚಾರ, ಅನಾಚಾರ, ಹಸಿವು, ನಷ್ಟ, ಮತ್ತು ಪ್ರತ್ಯೇಕತೆಗಳಿಂದ ನೊಂದವರು. ಈ ರೀತಿಯ ಸರಳೀಕರಣ ದಲಿತರ ಹಿತಚಿಂತಕರೂ ಸಹ ಅವರನ್ನು ದಶ ಲಕ್ಷಾಧೀಶ್ವರರು ಎಂದು ಒಪ್ಪಿಕೊಳ್ಳುವುದನ್ನು ತಡೆಯುತ್ತದೆ.

• ಇದು ಸಹಜ. ಇದಕ್ಕೆ ಕಾರಣ ದಲಿತರಲ್ಲಿ ಬಹುಮಂದಿ ಇನ್ನೂ ಜಾತಿಯ ಬಿಗಿ ಹಿಡಿತದಲ್ಲಿ ಬಂದಿಯಾಗಿರುವುದು. ಆದರೆ ಇತ್ತೀಚೆಗೆ ಅದರ ಹಿಡಿತ ಸಡಿಲವಾಗುತ್ತಿರುವ ಸೂಚನೆಗಳು ಕಾಣುತ್ತಿವೆ ಎಂಬುದು ಒಂದು ಒಳ್ಳೆಯ ಬೆಳವಣಿಗೆ.

ಈ ಬರಹ ನೂರಿನ್ನೂರು ದಲಿತ ಬಂಡವಾಳಗಾರರು ಹಣಮಾಡುತ್ತಿರುವ ಅಥವಾ ಆರ್ಥಿಕ ಸ್ಥಿತಿಯಲ್ಲಿ ಅಲ್ಪ ಬದಲಾವಣೆ ಮಾಡುತ್ತಿರುವ ಬಗ್ಗೆಯಲ್ಲ. ಇದು ಸಮಾಜ ಮತ್ತು ಒಟ್ಟು ಜಾತಿ ರಚನೆಯ ಬಗೆಗಿನದು.

ನೂರಾರು ಜನ ದಲಿತರು ಮಾಲೀಕರಾಗಿ ದಲಿತೇತರರಿಗೆ ನೌಕರಿ ನೀಡುವುದು ಮನು ಧರ್ಮದ ಬುಡಕ್ಕೆ ಪೆಟ್ಟು ಹಾಕುತ್ತದೆ. ಮನುವಾದಿಗಳಿಗೆ ದಲಿತರು ಎಂದೆಂದಿಗೂ ಪಡೆಯುವವರಾಗಿರಬೇಕು, ನೀಡುವವರಾಗಬಾರದು. ದಲಿತ ಬಂಡವಾಳಗಾರರು ಬ್ರಾಹ್ಮಣ, ಠಾಕೂರ್, ಜಾಠ್, ಮರಾಠ, ಕಮ್ಮ, ರೆಡ್ಡಿ, ಒಕ್ಕಲಿಗ, ಲಿಂಗಾಯಿತ, ಪಟೇಲ, ವಣ್ಣಿಯಾರ್ ಮುಂತಾದವರನ್ನೊಳಗೊಂಡಂತೆ ದಲಿತೇತರ ನೌಕರರಿಗೆ ಸಂಬಳದ ಚೆಕ್‌ಗಳನ್ನು ಬರೆದಾಗ ಅವರು ಒಂದು ವಿಧದಲ್ಲಿ ಜಾತಿ ರಚನೆಗೆ ಬಂಧನದ ಆದೇಶ ಹೊರಡಿಸಿದಂತಿರುತ್ತದೆ.

ಎಲ್ಲಾ ಯೂರೋಪಿಯನ್ನರು ಮತ್ತು ಅಮೆರಿಕನ್ನರು ಮೆರ್ಸಿಡೀಸ್ ಮತ್ತು ಬಿ.ಎಮ್.ಡಬ್ಲ್ಯೂ ಕಾರುಗಳನ್ನು ಓಡಿಸುತ್ತಾರೆಯೆ? ತಮ್ಮ ಅತ್ಯಾಧುನಿಕ ಕಾರುಗಳನ್ನು ಓಡಿಸುವಾಗ ಎಲ್ಲಾ ಭಾರತೀಯರೂ ಹಾಡಿ ಕುಣಿಯುತ್ತಾರೆಯೆ? ಆದರೆ ಒಂದು ಡಜನ್ ದಲಿತರಾದರೂ ಮೆರ್ಸಿಡೀಸ್ ಅಥವಾ ಬಿಎಂಡಬ್ಲ್ಯೂ ಕಾರುಗಳನ್ನು ಓಡಿಸುತ್ತಿದ್ದರೆ ಅವರು ಕಾರುಗಳನ್ನು ಮಾತ್ರ ಓಡಿಸುತ್ತಿಲ್ಲ, ಅವರು ಮನು ಧರ್ಮದ ಜಾತಿ ಪದ್ಧತಿಯನ್ನು ಅವಹೇಳನಕ್ಕೆ ಗುರಿಮಾಡುತ್ತಿದ್ದಾರೆ.

ದಲಿತರು ಅವರ ಜಾತಿಯೊಳಗೆ ಇದ್ದುಕೊಂಡೆ ಹಸಿವು ಮತ್ತು ಬಡತನವನ್ನು ಎದುರಿಸಬೇಕು ಎಂದು ಯಾರೂ ಕಾರ್ಯಕ್ರಮ ರೂಪಿಸಿ ಅವರಿಗೆ ನೀಡಿಲ್ಲ. ಅವರು ಧರ್ಮದೊಡನೆ ಹೋರಾಡಬೇಕು ಎಂಬ ಕಾರ್ಯಸೂಚಿ ಇದೆ. ದಲಿತ ಮಾಲೀಕರು ತಾವು ಮನುಧರ್ಮದ ವಿರುದ್ಧ ಹೋರಾಡುತ್ತಿರುವುದಾಗಿ ತಿಳಿದಿರಲಿಲ್ಲ. ತಾವು ಹೋರಾಟ ಮಾಡುತ್ತಿರುವುದಾಗಿ ಮಾತ್ರ ಅವರಿಗೆ ಗೊತ್ತಿತ್ತು. ಈವರೆಗೂ ಅವರಿಗೆ ಅವರ ಸಮಾಜದಿಂದ ಯಾವುದೇ ಬೆಂಬಲ ಸಿಕ್ಕಿಲ್ಲ.

ದಲಿತ ಬುದ್ಧಿಜೀವಿಗಳು ಸಹ ನೌಕರರೇ ಆಗಿದ್ದು ಶಾಲಾ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪಾಠ ಮಾಡುತ್ತಾ, ರೈಲ್ವೆ, ಅಂಚೆ ಸೇವೆ ಮತ್ತು ಇತರೆ ಸರ್ಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸಾರ್ವಜನಿಕ ಉದ್ದಿಮೆಗಳಲ್ಲಿ ಸಹ ಅವರು ಕೆಲಸಮಾಡುತ್ತಿದ್ದಾರೆ. ದುರಾದೃಷ್ಟಕ್ಕೆ ಈ ನೌಕರರು ಉದ್ದಿಮೆ ಮಾಲೀಕರಂತೆ ಯೋಚಿಸಲಾರರು.

ದಲಿತ ವ್ಯಾಪಾರೋದ್ಯಮಿಗಳು ಸರ್ಕಾರದ ರಕ್ಷಣೆ, ಬೌದ್ಧಿಕ ಬೆಂಬಲ, ಅಥವಾ ಇತರೆ ಸೌಲತ್ತುಗಳಿಗಾಗಿ ಹಂಬಲಿಸಲಿಲ್ಲ. ರಾಜ್ಯ ಅಥವಾ ಕೇಂದ್ರ ಸರ್ಕಾರಗಳ ಬೆಂಬಲವಿಲ್ಲದೆ ಸ್ವಪ್ರಯತ್ನದಿಂದ ಅವರು ತಾವು ಆರಿಸಿಕೊಂಡ ಕ್ಷೇತ್ರದಲ್ಲಿ ತುದಿಯನ್ನು ತಲುಪಿದರು. ಕೆಲವರು ಈಗಾಗಲೇ ತಮ್ಮ ಉದ್ಯೋಗದ ತುದಿಯನ್ನು ತಲುಪಿದ್ದರೆ ಉಳಿದವರು ದೊಡ್ಡ ಹೆಸರು ಸಂಪಾದಿಸುವ ದಾರಿಯಲ್ಲಿದ್ದಾರೆ.

ಮುಂದಿನ ಕೆಲ ವರ್ಷಗಳಲ್ಲಿ ಕರಿಯ ಯುವಕರ ಒಂದು ಇಡೀ ಪೀಳಿಗೆ ಉದ್ಯಮಿಗಳಾಗುವಂತೆ ಜಾನ್ಸನ್

ಉದಾರೀಕರಣದ ಒತ್ತುಗಳು

ಮತ್ತು ಓಪ್ರಾ ಪ್ರಭಾವಿಸಿದ ಹಾಗೆ, ದಲಿತ ಉದ್ದಿಮೆದಾರರು ದಲಿತರ ಒಂದು ಹೊಸ ಪೀಳಿಗೆಗೆ 'ಪಾತ್ರ ಮಾದರಿ'ಗಳಾಗುತ್ತಾರೆ. ದೀನ ಹಿನ್ನಲೆಯಿಂದ ಬಂದ, ಮೊದಲ ಉದ್ದಿಮೆದಾರರಾದ ಗೇಟ್ಸ್, ಮೂರ್ತಿ, ನಿಲೇಕಣಿ, ಮತ್ತು ದೀರೂಬಾಯಿಯವರು ಅನೇಕ ಭಾರತೀಯ ಯುವಕರು ಉದ್ದಿಮೆದಾರರಾಗಲು ಪ್ರೇರೇಪಣೆ ನೀಡಿದಂತೆ ದಲಿತ ಬಂಡವಾಳದಾರರೂ ಸಹ ತಮ್ಮ ಸಮಾಜಕ್ಕೆ ಅಂತಹ ಒಂದು ಸಂದೇಶ ಹೊಂದಿದ್ದಾರೆ. "ಹೌದು, ನೀವೂ ಕೂಡ ಮಾಡಬಲ್ಲಿರಿ".

* * * * * * * *

ಜಾಗತೀಕರಣ ದಲಿತರ ಸಾಮಾಜಿಕ ರಚನೆಯನ್ನೆ ಬದಲಿಸಿದೆ.

ಜೂನ್ 1991ರಷ್ಟರಲ್ಲಿ ಇಂಡಿಯಾದ ವಿದೇಶಿ ವಿನಿಮಯ ಒಂದು ಬಿಲಿಯನ್‌ಗಿಂತಲೂ ಕೆಳಗೆ ಇಳಿದಿತ್ತು. ಅದು ಕೇವಲ ಮೂರು ವಾರಗಳ ತೈಲ ಆಮದಿಗಷ್ಟೇ ಸಾಕಾಗುತ್ತಿತ್ತು. ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತೆಂದರೆ ತಮಗೆ ಬೇಕಾದ ಯಂತ್ರಗಳನ್ನು ಆಮದು ಮಾಡಿಕೊಳ್ಳಬಹುದಾದ ಕೈಗಾರಿಕೋದ್ಯಮಿಗಳು ಬಹಳ ವಿರಳವಾಗಿದ್ದರು. ಹೊರದೇಶಗಳ ಪ್ರವಾಸಿ ಕೇಂದ್ರಗಳಿಗೆ ಪ್ರವಾಸ ಹೋಗುವ ಜನ ತುಂಬಾ ಕಡಿಮೆಯಿದ್ದರು.

ಅಂತರಾಷ್ಟ್ರೀಯ ತೆಗಳಿಕೆ ಮತ್ತು ಲಜ್ಜೆಯಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಭಾರತ 67ಟನ್ ಚಿನ್ನವನ್ನು ಐ.ಎಮ್.ಎಫ್‌ನಲ್ಲಿ ಒತ್ತೆಯಿಟ್ಟು 2.02 ಬಿಲಿಯನ್ ಡಾಲರ್ ಸಾಲವನ್ನು ಪಡೆಯಿತು. ಈ ಚಿನ್ನವನ್ನು ವಿಮಾನದಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್‌ಗೆ ಕಳಿಸಿಕೊಡಲಾಯಿತು.

ಎರಡು ದಶಕಗಳ ನಂತರ ಭಾರತದ ವಿದೇಶಿ ವಿನಿಮಯದ ಉಳಿಕೆ 314 ಬಿಲಿಯನ್ ಡಾಲರ್‌ಗಳಾಗಿದೆ. ಈಗ ಭಾರತ ಐ.ಎಮ್.ಎಫ್‌ಗೆ ಸಾಲ ನೀಡುತ್ತದೆ.

ದಲಿತರು, ಕೆಳವರ್ಗಗಳು ಮತ್ತು ಓ.ಬಿ.ಸಿಗಳಾದ ನಾವು ನರಸಿಂಹರಾವ್ ಸರ್ಕಾರ ವಿಶ್ವಬ್ಯಾಂಕ್ ಸಲಹೆಯಂತೆ ಜಾಗತೀಕರಣದ ಕಡೆ ನಡೆದಾಗ ಅರ್ಥ ಮಾಡಿಕೊಂಡದ್ದು ಹೇಗೆ? ಜಾಗತೀಕರಣ ಒಂದು ದೊಡ್ಡ ಪೆಡಂಬೂತ ಯು.ಎಸ್ ನಮ್ಮ ರಕ್ತ ಹೀರಿ ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತದೆ ಎಂದು ನಾವು ತಿಳಿದೆವು.

ಜಾಗತೀಕರಣ ನಮ್ಮನ್ನು ನಾಶಮಾಡುತ್ತದೆ ಎಂದು ನಾವು ತಿಳಿದುಕೊಂಡುದರ ತದ್ವಿರುದ್ಧವಾಗಿ ಈಗ 1/3 ರಷ್ಟು ಉತ್ತರ ಪ್ರದೇಶದ ದಲಿತ ಕುಟುಂಬಗಳು ಮೊಬೈಲ್ ಫೋನ್ನಗಳನ್ನು ಹೊಂದಿವೆ. ತೊಂಬತ್ತರ ದಶಕದಲ್ಲಿ ಫೋನ್‌ಗಳನ್ನು ಹೊಂದುವುದು ಐಷಾರಾಮಿ ಎಂದು ಪರಿಗಣಿಸಲ್ಪಡುತ್ತಿದ್ದು ಕೆಲವು ಭಾರತೀಯರು ಮಾತ್ರ ಅವುಗಳನ್ನು ಪಡೆಯಲು ಶಕ್ತರಾಗಿದ್ದರು. ಯಾರಾದರೂ ಫೋನ್ ಸಂಪರ್ಕಕ್ಕೆ ಅರ್ಜಿ ಹಾಕಿದರೆ ಅದಕ್ಕಾಗಿ ಸುಮಾರು ಹತ್ತು ವರ್ಷಗಳಾದರೂ ಕಾಯಬೇಕಾಗಿತ್ತು. ಬಣ್ಣದ ಟಿ.ವಿಗಳ ಬೆಲೆ ಸುಮಾರು 20,000 ರೂಪಾಯಿ. ಅದೇ ಗಾತ್ರದ ಅದಕ್ಕಿಂತಲೂ ಉತ್ತಮವಾದ ಟಿ.ವಿ ಇಂದು 8,000 ರೂಪಾಯಿಗಳಿಗೆ ಸಿಗುತ್ತದೆ. 1990ರಲ್ಲಿ ಒಂದು ಚಿಕ್ಕ ರೆಫ್ರಿಜೆರೇಟರ್ ಬೆಲೆ 8000 ರೂಪಾಯಿಗಳು. ಅದೇ ಗಾತ್ರದ ಅದಕ್ಕಿಂತ ಉತ್ತಮ ಫ್ರಿಡ್ಜ್ ಇಂದು 5000 ರೂಪಾಯಿಗೆ ಸಿಗುತ್ತದೆ. 1990ರಲ್ಲಿ ಸಂಬಳ ರೂ. 20,000 ಇದ್ದರೆ ಈಗ ಅದೇ ಸಂಬಳ ರೂ. 40,000

ಒಂದು ಬಜಾಜ್ ಸ್ಕೂಟರ್ ಕೊಳ್ಳಲು ಯಾರಾದರೂ ಒಂದು ದಶಕದ ಹಿಂದೆ ಬಯಸಿದ್ದರೆ ಅವರು ಬಹಳ ಕಾಲ ಕಾಯಬೇಕಾಗುತ್ತಿತ್ತು. ನಿಜ ಹೇಳಬೇಕೆಂದರೆ ಬಜಾಜ್ ಚೇತಕ್ ಸ್ಕೂಟರ್‌ನ್ನು ಡಾಲರ್‌ಗಳಲ್ಲಿ ಕೊಳ್ಳಬಹುದಿತ್ತು. ಬುಲೆಟ್ ಮೋಟಾರ್ ಸೈಕಲ್ಲಿಗೂ ಬಹಳ ಕಾಲ ಕಾಯಬೇಕಿತ್ತು. ಬಹಳ ಶ್ರೀಮಂತರಾಗಿರುವವರು ಮಾತ್ರ ಫೋನು, ಟಿ.ವಿ., ರೆಪ್ರಿಜರೇಟರ್ ಮತ್ತು ಕಾರು ಎಲ್ಲವನ್ನೂ ಹೊಂದಲು ಸಾಧ್ಯವಿತ್ತು.

ಇಂದು ಫೋನು, ರೆಫ್ರಿಜರೇಟರ್ ಮತ್ತು ಬೈಕ್ ಎಲ್ಲವನ್ನೂ ಅದೇ ದಿನ ಕೊಂಡುಕೊಳ್ಳಬಹುದು ಮತ್ತು ಅವುಗಳನ್ನು ನಮ್ಮ ಮನೆಗಳಿಗೇ ಮಾರುವವರು ಕಳುಹಿಸಿಕೊಡುತ್ತಾರೆ.

ಆದುದರಿಂದ ಒಬ್ಬ ಸಾಮಾನ್ಯ ಭಾರತೀಯನಿಗೆ ಜಾಗತೀಕರಣದ ಬಗ್ಗೆ ಏನನ್ನಿಸುತ್ತದೆ? ಬೆಲೆ ಯುದ್ಧಗಳು ಜಾಗತೀಕರಣ ಅಂತರ್‌ರಾಷ್ಟ್ರೀಯ ವ್ಯಾಪಾರಕ್ಕೆ ಅಡ್ಡಿಯಾಗಿದ್ದ ತಡೆಗೋಡೆಗಳನ್ನು ಹೊಡೆದು ಹಾಕಿತು. ಈಗ ಯಾವುದೇ ಕಂಪನಿ ಜಗತ್ತಿನ ಯಾವುದೇ ಭಾಗದಲ್ಲಿ ಮುಕ್ತವಾಗಿ ವ್ಯಾಪಾರ ವ್ಯವಹಾರ ನಡೆಸಬಹುದು. ಆಮದಿನ ಮೇಲೆ ಹಾಕಲಾಗುತ್ತಿದ್ದ ಆಯಾತ ಸುಂಕವನ್ನು ಬಹಳಷ್ಟು ಕಡಿತ ಮಾಡಲಾಗಿದೆ. ಈ ಸುಂಕ ಎಷ್ಟಿತ್ತೆಂದರೆ ಸಾಮಾನ್ಯ ಭಾರತೀಯ ದೇಶದ ಒಳಗಡೆ ತಯಾರಾದ ವಸ್ತುಗಳ ಕೊಂಡುಕೊಳ್ಳಬೇಕಿತ್ತು. ಇಂತಹ ಅನೇಕ ವಸ್ತುಗಳನು ಗುಣಮಟ್ಟ ಕೆಟ್ಟದಿತ್ತು. ಇದಕ್ಕೆ ಕಾರಣವೇನು? ಹೊರ ದೇಶದ ಸಾಮಗ್ರಿಗಳು ದೇಶೀಯ ಮಾರುಕಟ್ಟೆಗಳನ್ನು ಆವರಿಸಿಕೊಳ್ಳದಂತೆ ತಡೆಯುವುದು. ಇದರ ಪರಿಣಾಮವಾಗಿ ಸಾಮಾನ್ಯ ಮನುಷ್ಯನ ಉತ್ತಮ ಗುಣಮಟ್ಟದ ಸಾಮಗ್ರಿಗಳು ಮತ್ತು ಸೇವೆಗಳನ್ನು ಪಡೆಯುವ ಹಕ್ಕನ್ನು ಕಸಿದುಕೊಳ್ಳಲಾಯಿತು. ಇಂಡಿಯಾದ ಮಾರುಕಟ್ಟೆಗಳು ತೆರೆದುಕೊಂಡಾಗ ಅಂತರಾಷ್ಟ್ರೀಯ ಉತ್ಪಾದಕರು ಈ ಮಾರುಕಟ್ಟೆಗಳನ್ನು ಹಿಡಿಯಲೋಸ್ಕರ ತಮ್ಮಲ್ಲೇ ಸ್ಪರ್ಧೆ ನಡೆಸಿದರು. ಇದರ ಪರಿಣಾಮವಾಗಿ ಬೆಲೆಗಳು ಈಗ ಎಷ್ಟು ಕಡಿಮೆಯಾಗಿವೆ ಎಂದರೆ ಒಬ್ಬ ಕೂಲಿಕಾರ ಕೂಡ ಸೆಲ್‌ಫೋನು, ಟಿ.ವಿ ಮತ್ತು ರೆಫ್ರಿಜರೇಟರ್‌ಗಳನ್ನು ಕೊಂಡು ಉಪಯೋಗಿಸಬಹುದು.

ಬಂಡವಾಳ ಸಾಮಾನ್ಯರಿಗೆ ದೊರಕುವಂತಾದುದು ಸಮರ್ಥವಾಗಿ ಸ್ಪರ್ಧಿಸಲು ದೊಡ್ಡ ಕಂಪನಿಗಳು ಸಣ್ಣ ಕಂಪನಿಗಳಿಗೆ ತಮ್ಮ ಕೆಲವು ಕೆಲಸಗಳನ್ನು ಗುತ್ತಿಗೆ ನೀಡತೊಡಗಿದರು. ದೊಡ್ಡ ಕೈಗಾರಿಕಾ ಕಂಪನಿಗಳಿಗೂ ಸಹ ತಮ್ಮ ಕೆಲಸಗಾರರನ್ನು ನಿರ್ವಹಿಸುವುದು ಸುಲಭದ ಮಾತಲ್ಲ. ಒಂದು ಸೂರಿನಡಿ ಒಂದು ಉತ್ಪಾದನೆ ಎಂಬ ಕಲ್ಪನೆ ಬೆಲೆ ಕಳೆದುಕೊಂಡಿತು. ಜಗತ್ತಿನಾದ್ಯಂತ ಸಣ್ಣ ಮತ್ತು ಮಧ್ಯಮ ತರದ ಕೈಗಾರಿಕಾ ಘಟಕಗಳು ಮಾದರಿಗಳಾದುವು ಘಾಜಿಯಾಬಾದ್‌ನ ದಲಿತ ಕೈಗಾರಿಕೋದ್ಯಮಿ ಸುಶೀಲ್ ಕುಮಾರ್ ಬಜಾಜ್ ಪಲ್ಸಾರ್ ಬೈಕಿನ ತಯಾರಿಕೆಯಲ್ಲಿ ತನ್ನ ಪಾಲೂ ಇದೆ, ಮತ್ತು ಟಾಟಾ ಮ್ಯಾಜಿಕ್ ಟ್ರಕ್ ತನ್ನ ಸೈಲೆನ್ಸರ್‌ಗಳನ್ನು ಉಪಯೋಗಿಸುತ್ತಿದೆ ಎಂದು ಈಗ ಹೇಳಬಹುದು. ಜಾಗತೀಕರಣ ಏಕಸ್ವಾಮ್ಯವನ್ನು ಧೈರ್ಯವಾಗಿ ಮತ್ತು ಸಮರ್ಥವಾಗಿ ಎದುರಿಸಿದೆ. ಇಂದು ಏಕಸ್ವಾಮ್ಯ ಹೆಚ್ಚು ಕಡಿಮೆ ಸತ್ತೇಹೋಗಿದೆ.

ಮನುಧರ್ಮ ವಿರೋಧಿ: ಒಂದು ಟಿ.ವಿ.ಚಾನೆಲ್ ಎ.ಟಿ.ಎಮ್‌ಗಳು, ಮತ್ತು ವಾಸದ ಮತ್ತು ವ್ಯಾಪಾರಿ ಸಂಕೀರ್ಣಗಳಲ್ಲಿ ಕೆಲಸ ಮಾಡುತ್ತಿರುವ ಭದ್ರತಾ ಸಿಬ್ಬಂದಿಯ ಬಗ್ಗೆ ಒಂದು ವರದಿ ನೀಡಿತು. ಇವರಲ್ಲನೇಕರು ಬಿಹಾರ ಮತ್ತು ಉತ್ತರ ಪ್ರದೇಶದ ಠಾಕೂರರು, ಬ್ರಾಹ್ಮಣರು ಮತ್ತು ಬಾಮಿಹಾರರು ಎಂದು ಆ ವರದಿಯಿಂದ ತಿಳಿದುಬಂತು. ಶ್ರಮದ ದುಡಿಮೆಯ ಅಭ್ಯಾಸವಿಲ್ಲದ ಈ ವರ್ಗದ ವಲಸೆಗಾರರು ಅಂತಹ ಹುದ್ದೆಗಳನ್ನು ಹಿಡಿದರು. ಯಾವಾಗಲೂ ಇತರರಿಂದ ನಮಸ್ಕರಿಸಿಕೊಳ್ಳುತ್ತಿದ್ದ ಈ ವರ್ಗ ಹೇಗೆ ನಮಸ್ಕಾರ ಮಾಡಬೇಕು ಎಂಬುದನ್ನು ಕಲಿತುಕೊಳ್ಳುತ್ತಿದೆ. ಶಾಪಿಂಗ್ ಮಾಲ್‌ಗಳಲ್ಲಿ ಮೇಲ್ಜಾತಿಯ ಅನೇಕ ಯುವಕರು ಸ್ವಚ್ಛಗೊಳಿಸುವ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರ ಹೊಸ ವರ್ಣನೆ ಮನೆ ನೋಡಿಕೊಳ್ಳುವ ಸಿಬ್ಬಂದಿ. ಇದು ಶತಮಾನಗಳಷ್ಟು ಹಳೆಯದಾದ ಮನು ಧರ್ಮಕ್ಕೆ ದೊಡ್ಡ ಹೊಡೆತ ನೀಡಿದೆ.

ಕೃಷಿಯವಲಂಬನೆ ವಿರೋಧಿ: ಜಾಗತೀಕರಣದಿಂದ ಪ್ರಚೋದಿತವಾದ ಶೇಕಡಾ 8–9ರ ವಾರ್ಷಿಕ ಅಭಿವೃದ್ಧಿ ಕೆಲ ಭಾರತೀಯರು ದೊಡ್ಡ ಭವನಗಳನ್ನು ಕಟ್ಟಿಕೊಳ್ಳುವುದು ಮತ್ತು ಖಾಸಗಿ ವಿಮಾನಗಳನ್ನು ಹೊಂದುವುದರ ಬಗ್ಗೆ ಮಾತ್ರವಲ್ಲ. ಅದು ಹೆಚ್ಚು ಹೆಚ್ಚಾಗಿ ಕೈಗಾರಿಕೀಕರಣ ಮತ್ತು ನಗರೀಕರಣದ ಬಗ್ಗೆ ಕೂಡ. ಮೂಲತಃ ದಲಿತರಿಗೆ ತೆರೆದಿದ್ದ ಮಾರ್ಗ ಒಂದೇ ಜಮೀನುದಾರರಿಗೆ ಕೆಲಸಮಾಡುವುದು ಮತ್ತು ಅವರಿಂದ ಅವಮಾನಿತರಾಗುವುದು. ಈಗ ದಲಿತರು ಕೈಗಾರಿಕಾ ಪಟ್ಟಣಗಳಿಗೆ ವಲಸೆ ಬರಬಹುದು, ತಮ್ಮ ಸಂಪಾದನೆಯನ್ನು ನಗದು ರೂಪದಲ್ಲಿ ಪಡೆಯಬಹುದು ಮತ್ತು ಗೌರವಯುತವಾದ ಜೀವನ ನಡೆಸಬಹುದು. ವ್ಯವಸಾಯದ ಜಮೀನಿನ ಕೆಲಸದಿಂದ ವ್ಯವಸಾಯೇತರ ಕೆಲಸಗಳಿಗೆ ಬದಲಾದುದು ದಲಿತರು ಕನಸಿನಲ್ಲಿಯೂ ಕಂಡಿರಲಾರದ ಅತಿದೊಡ್ಡ ಸಾಮಾಜಿಕ ಕ್ರಾಂತಿ.

ಭೌತಿಕ ಸೂಚಕಗಳು ಸಾಮಾಜಿಕ ಸೂಚಕಗಳ ಸ್ಥಳವನ್ನು ಆಕ್ರಮಿಸುತ್ತಿವೆ: ಜಾಗತೀಕರಣ ಕೊಳ್ಳುಬಾಕ ಸಂಸ್ಕೃತಿಗೆ ದಾರಿ ಮಾಡಿಕೊಟ್ಟು ಸಾಮಾಜಿಕ ಸೂಚಕಗಳ ಅನಾವಶ್ಯಕ ಎನ್ನಿಸಿತು. ಈ ಸಂಚಲನದಿಂದ ಮೇಲ್ಜಾತಿಯ ಮನುಷ್ಯ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ದೊಡ್ಡ ನಗರಗಳಲ್ಲಿ ಕೆಲಸಮಾಡುವ ಅನೇಕ ಬ್ರಾಹ್ಮಣರು ಮತ್ತು ಠಾಕೂರರು ಜನಿವಾರ ಹಾಕುವುದನ್ನು ನಿಲ್ಲಿಸಿದ್ದಾರೆ.

ಈ ಎಲ್ಲಾ ಬದಲಾವಣೆಗಳಲ್ಲಿ ಅನೇಕ ಬದಲಾವಣೆಗಳು ಬಹಳ ಉತ್ತಮವಾದುವುಗಳಾಗಿವೆ. ಆದರೂ ಅನೇಕರು ಜಾಗತೀಕರಣವನ್ನು ವಿರೋಧಿಸುತ್ತಾರೆ. ಈ ಜನ ಯಾರು? ಈ ಜನ ನನ್ನ ಅಭಿಪ್ರಾಯದಲ್ಲಿ, ಜಾತಿ ಪದ್ಧತಿ ದೇಶದ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿದೆ ಎಂಬುದನ್ನು ಕಂಡುಕೊಳ್ಳಲಿಲ್ಲ. ಅವರ ಗ್ರಹಿಕೆ ತಪ್ಪು ಎಂಬುದು ಈಗ ಸ್ಪಷ್ಟವಾಗಿದೆ. □

ಬುದ್ಧಾಯಣ

೩೨

ಆಕೆ ಬಯಸಿದಳು ಆತ ಬಂದ ಆದರೆ...!!

ನಾನು ಹೆಣ್ಣು. ಅಪೂರ್ವ ಸೌಂದರ್ಯದ ಖನಿ. ಈತನಿಗೆ ಒಮ್ಮೆಲೇ ಒಲಿದರೆ ನಾನಾಗಿಯೆ ಆತನಿಗೆ ಶರಣಾದಂತಾ ಗುತ್ತದೆ. ಆತನ ಇಚ್ಛೆಯು ಪೂರೈಸಿದ ಬಳಿಕ ಮತ್ತೆ ನನ್ನನ್ನು ತಿರಸ್ಕರಿಸ ಬಹುದು. ಆದ್ದುದರಿಂದ ಆತನೇ ನನ್ನನ್ನು ಕಾಡಿ ಬೇಡಿ ಬೇಷರತ್ತಾಗಿ ಶರಣಾಗುವುದು ಒಳಿ ತೆಂಬ ಸ್ವಾನುಭಾವದ ದೀರ್ಘ ಅನುಭವಗಳ ಫಲ ಆಕೆಯಲ್ಲಿ ಎಚ್ಚೆತ್ತಿತು. ಜೊತೆಗೆ ತನ್ನ ಸ್ವಾಭಿ ಮಾನಕ್ಕೆ ದಕ್ಕೆ ಎಂಬ ಅಹಂಕಾರ ಕೂಡ ಮೊಳೆಯಿತು. ಆತ ಬಂದ ದಿನವೇ ಆತನೊಂದಿಗೆ ರತಿಕ್ರೀಡೆಯಲ್ಲಿ ತೊಡಗು ವುದು ಸರಿ ಅಲ್ಲವೆಂದು. ಇಂದು ಅವನನ್ನು ಲಜ್ಜಿತ ನನ್ನಾಗಿ ಆತನೊಂದಿಗೆ ಸುಖಿಸುವುದು ಸರಿ ಎಂಬ ಭ್ರಮೆಗೆ ಜಾರಿದಳು.

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಮ್ಮ ಅಪಾರ ಶಿಷ್ಯರೊಂದಿಗೆ ತಂಗಿದ್ದರು. ಎಂದಿನಂತೆ ಅಂದು ತಮ್ಮ ಶಿಷ್ಯರನ್ನು ಉದ್ದೇಶಿಸಿ ಮನುಷ್ಯ ತನ್ನನ್ನು ತಾನೇ ವಂಚಿಸಿಕೊಂಡರೆ ಯಾವ ರೀತಿಯ ಕೇಡು ಸಂಭವಿಸುತ್ತದೆ ಎಂಬುದರ ಬಗ್ಗೆ ಉಪದೇಶಿಸಿದರು. ಆ ಪ್ರಸಂಗವು ಕಥಾ ರೂಪದಲ್ಲಿ ಹೀಗೆ ತೆರೆದುಕೊಳ್ಳುತ್ತದೆ.

ಸಾವಸ್ಥಿ ನಗರದ ಶ್ರೀಮಂತ ಕುಟುಂಬ ಒಂದರಲ್ಲಿ ಒಬ್ಬಳು ಅತ್ಯಂತ ಸುಂದರ ಯುವತಿ ಇದ್ದಳು. ಆಕೆ ಒಮ್ಮೆ ಒಬ್ಬ ಸುಂದರ ಪುರುಷನನ್ನು ಕಂಡು ಆತನ ಸೌಂದರ್ಯಕ್ಕೆ ಮನ ಸೋತಳು. ಆ ಕ್ಷಣದಲ್ಲಿಯೇ ಆತನಲ್ಲಿ ಮೋಹಿತಳಾದಳು. ಹಗಲು ರಾತ್ರಿ ಅವನ ಚೆಲುವು ಅವಳ ಚಿತ್ತವನ್ನು ಆವರಿಸಿಕೊಂಡು ಕಾಡತೊಡಗಿತು. ನಿದ್ರೆ ಊಟವನ್ನು ಬಿಟ್ಟಳು. ಮಂಚದ ಪಟ್ಟಿಗಳನ್ನು ಹಿಡಿದು ಕೊಂಡು ವಿರಹ ವೇದನೆಯಿಂದ ನಲುಗುತ್ತಿದ್ದಳು.

ಆಕೆಯ ದಾಸಿಯರು ಮತ್ತು ಹತ್ತಿರದ ಗೆಳೆತಿಯರು ಆ ಬಗ್ಗೆ ಎಷ್ಟೇ ಪರಿಪರಿಯಾಗಿ ಕೇಳಿದರೂ ಅದರ ರಹಸ್ಯವನ್ನು ಇತರರಿಗೆ ರಟ್ಟು ಮಾಡಿರಲಿಲ್ಲ. ಆಕೆಯ ವಿರಹ ವೇದನೆಯು ಪರಾಕಾಷ್ಠೆ ತಲುಪಲು ತನ್ನ ಗೆಳತಿಯರಲ್ಲಿ ವಿಷಯವನ್ನು ಮನಬಿಚ್ಚಿ ವಿವರಿಸಿದಳು. ಅವರು ಆತನ ಊರು, ಕೇರಿ, ವಿಳಾಸವನ್ನೆಲ್ಲ ಕಲೆ ಹಾಕಿ ಒಂದು ದಿನ ಪ್ರಯಾಸ ಪಟ್ಟು ಆತನನ್ನು ಸಂಧಿಸಿದರು. ಬಳಿಕ ತಮ್ಮ ಗೆಳತಿಯ ಬಯಕೆಯ ಬಗ್ಗೆ ವಿವರಿಸಿದರು. ಆತ ಬಾರಿ ಬಾರಿಗೂ ಅವರ ಕೋರಿಕೆಯನ್ನು ನಿರಾಕರಿಸಿದ. ಅವರೂ ಕೂಡ ಅತಿಯಾಗಿ ಕೇಳಿಕೊಂಡ ಬಳಿಕ ಆತ ಇಂತಹ ದಿನ, ಇಂತಹ ಹೊತ್ತಿಗೆ ನಾನು ಬರುತ್ತೇನೆ ನಿಮ್ಮ ಗೆಳತಿಯು ಶೃಂಗರಿಸಿಕೊಂಡು ಕಾಯಲು ಹೇಳಿರಿ ಎಂದು ಹೇಳಿ ಕಳುಹಿಸಿದ.

ವಿಷಯ ತಿಳಿದ ಆ ಯುವತಿಯು ಅಪಾರ ಸಂತೋಷಪಟ್ಟಳು. ತನ್ನ ಬಯಕೆಯು ಈಡೇರುವ ಸಮಯ ಬಂದಿತೆಂದು ಹರ್ಷಚಿತ್ತಳಾದಳು. ಆತ ಹೇಳಿದ ದಿನವೂ ಬಂದಿತು. ಆಕೆ ಮಧುಮಗಳಂತೆ ಶೃಂಗರಿಸಿ ಕೊಂಡಳು. ಆತ ಹೇಳಿದ ಸಮಯಕ್ಕೆ ಸರಿಯಾಗಿ ಆಕೆಯ ಶಯನ ಗೃಹವನ್ನು ಪ್ರವೇಶಿಸಿದ. ಆಕೆ ಆಕಾಶಕ್ಕೆ ಮೂರೇ ಗೇಣು ಎಂಬಂತೆ ಸಂಭ್ರಮಿಸಿದಳು. ಆದರದಿಂದ ಸ್ವಾಗತಿಸಿದಳು.



ತನ್ನ ಬಯಕೆಗಳನ್ನೆಲ್ಲ ತನ್ನ ಕಣ್ಣುಗಳಿಂದಲೇ ವ್ಯಕ್ತಪಡಿಸಿದಳು. ಆಕೆಯ ಪಾಲಿಗೆ ಮಾತು ಮೌನವಾಗಿ ಕಾಲವು ಶೂನ್ಯವಾಯಿತು. ನಾಚಿಕೆಯಿಂದ ಆಕೆಯ ಕೆನ್ನೆಗಳು ಕೆಂಪಾದವು. ಆಕೆ ಬಯಸಿದ್ದ ಭಾಗ್ಯವು ಆಕೆಯ ಕಾಲುಬುಡಕ್ಕೆ ಬಂದು ಬಿದ್ದಿತ್ತು. ಈ ವಾಸ್ತವವೇ ಆಕೆ ಯಲ್ಲಿನ ಕಾಮುಕತೆಯನ್ನು ವಿಚಿತ್ರವಾಗಿ ಕೆರಳಿಸಿ ಬಿಟ್ಟಿತ್ತು. ಅಷ್ಟರಲ್ಲಿ ಆತ ಮಂಚದ ಒಂದು ತುದಿಯಲ್ಲಿ ಕುಳಿತು ಕೊಂಡನು. ಆಕೆಯ ಸೌಂದರ್ಯ ಕಂಡು ಮೂಕವಿಸ್ಮಿತನಾದನು. ಬಂದ ಆತನಿಗೆ ಹಾಲು ಹಣ್ಣುಗಳನ್ನು ಕೊಟ್ಟು ಉಪಚರಿಸಿದಳು. ಬಳಿಕ ಆತ ಆಕೆಯನ್ನು ಬಳಿ ಸೆಳೆದ. ಮುದುಡಿದ ಆಕೆ ಆತನ ತೋಳ ತೆಕ್ಕೆಯಲ್ಲಿ ಬಂಧಿಯಾದಳು. ಆತನ ಕೈ ಹಿಡಿಯುವುದು, ಮೈ ತಡವುದು, ಮುದ್ದಿಸುವುದು ಮತ್ತು ಮುತ್ತಿಡುವುದು ಮುಂತಾದ ರಸಿಕತನ ಮುಂದುವರಿಯಿತು. ಇನ್ನೇನು ಆ ಇಬ್ಬರು ರತಿಕ್ರೀಡೆಯಲ್ಲಿ ಮೈಮರೆಯಬೇಕು ಅಷ್ಟರಲ್ಲಿ ಆಕೆಯ ಮನಸ್ಸು ಚಂಚಲ ಗೊಂಡಿತು.

ಮರುಕ್ಷಣವೇ ಆಕೆ ಹೀಗೆ ಯೋಚಿಸಿದಳು. ನಾನು ಹೆಣ್ಣು. ಅಪೂರ್ವ ಸೌಂದರ್ಯದ ಖನಿ. ಈತನಿಗೆ ಒಮ್ಮೆಲೇ ಒಲಿದರೆ ನಾನಾಗಿಯೆ ಆತನಿಗೆ ಶರಣಾದಂತಾ ಗುತ್ತದೆ. ಆತನ ಇಚ್ಛೆಯು ಪೂರೈಸಿದ ಬಳಿಕ ಮತ್ತೆ ನನ್ನನ್ನು ತಿರಸ್ಕರಿಸಬಹುದು. ಆದ್ದುದರಿಂದ ಆತನೇ ನನ್ನನ್ನು ಕಾಡಿಬೇಡಿ ಬೇಷರತ್ತಾಗಿ ಶರಣಾಗುವುದು ಒಳಿತೆಂಬ ಸ್ವಾನುಭಾವದ ದೀರ್ಘ ಅನುಭವಗಳ ಫಲ ಆಕೆಯಲ್ಲಿ ಎಚ್ಚೆತ್ತಿತು. ಜೊತೆಗೆ ತನ್ನ ಸ್ವಾಭಿಮಾನಕ್ಕೆ ದಕ್ಕೆ ಎಂಬ ಅಹಂಕಾರ ಕೂಡ ಮೊಳೆಯಿತು. ಆತ ಬಂದ ದಿನವೇ ಆತನೊಂದಿಗೆ ರತಿಕ್ರೀಡೆಯಲ್ಲಿ ತೊಡ ಗುವುದು ಸರಿ ಅಲ್ಲವೆಂದು. ಇಂದು ಅವನನ್ನು ಲಜ್ಜಿತನನ್ನಾಗಿ ಮಾಡಿ ನಾಳೆ ಆತನೊಂದಿಗೆ ಸುಖಿಸುವುದು ಸರಿ ಎಂಬ ಭ್ರಮೆಗೆ ಜಾರಿದಳು. ಅದರ ಪ್ರತಿಫಲವಾಗಿ ಆಕೆಯು ಆತ ನಿಂದ ದೂರ ಸರಿದು ಕುಳಿತಳು. ಕಾಮೋನ್ಮತ್ತನಾದ ತುತ್ತ ತುದಿಯಲ್ಲಿದ್ದ ಆತನನ್ನು ಮಂಚದಿಂದ ಕೆಳಕ್ಕೆ ಉರುಳಿಸುತ್ತಾ ;

"ಎಲೈ ಗೃಹಸ್ಥನೇ, ನೀನು ಯಾರು? ನಿನ್ನನ್ನು ಇಲ್ಲಿಗೆ ಕರೆದವರು ಯಾರು? ನಾನು ಎಂದಾದರೂ ನಿನ್ನನ್ನು ಬಂದು ಕರೆದಿದ್ದನೆ? ಕಾಡಿಬೇಡಿ ಅಂಗಲಾಚಿದ್ದನೇ? ನೀನೇಕೆ ಇಲ್ಲಿಗೆ ಬಂದೆ? ನನ್ನೊಂದಿಗೆ ಏಕೆ ಅಸಭ್ಯವಾಗಿ ಈ ರೀತಿ ವರ್ತಿಸುತ್ತಿರುವೆ? ಮೊದಲು ಇಲ್ಲಿಂದ ತೊಲಗು!" ಎಂದು ಕಿರುಚಿದಳು.

ಈ ಬಗೆಯ ವಿಚಿತ್ರ ವರ್ತನೆಯಿಂದ ಅವಮಾನಿತನಾದ ಆ ಗೃಹಸ್ಥನು ಮರು ಮಾತನಾಡದೆ ತನ್ನ ಮನೆ ತಲುಪಿದ. ಈಕೆಯ ತಪ್ಪು ತೀರ್ಮಾನ ಮತ್ತು ಅಸಭ್ಯ ವರ್ತನೆಯನ್ನು ಕಂಡ ಅವಳ ಗೆಳತಿಯರು ಬೆಚ್ಚಿಬಿದ್ದರು. ಅವಳಿಂದ ದೂರವಾದರು. ತನ್ನ ಗೆಳತಿಯರನ್ನು ಒಲಿಸಿಕೊಳ್ಳಲು ಮಾಡಿದ ಪ್ರಯತ್ನವೆಲ್ಲ ವಿಫಲವಾಯಿತು. ಆಗ ಆಕೆಗೆ ತನ್ನ ತಪ್ಪಿನ ಅರಿವಾಯಿತು. ದಿನಗಳು ಕಳೆದಂತೆ ಆ ಶ್ರೀಮಂತ ಸುಂದರ ಯುವತಿಗೆ ಮತ್ತೆ ಆ ಗೃಹಸ್ಥನ ಮೇಲೆ ಮೋಹವು ನೂರ್ಮಡಿಯಾಯಿತು. ಮುಂದೆ ಆಕೆಯೆ ಸ್ವಯಂ ಮಾಡಿದ ಪ್ರಯತ್ನಗಳೆಲ್ಲ ಸೋತು ಹೋದವು. ಮತ್ತೆ ಆ ಸುಂದರ ಗೃಹಸ್ಥನನ್ನು ನೆನೆ ನೆನೆದು ಊಟ ನಿದ್ರೆಯನ್ನು ತೊರೆದಳು. ನಿಧಾನವಾಗಿ ಕಾಯಿಲೆಗೆ ತುತ್ತಾದಳು. ಒಂದು ದಿನ ಸಾವಿನ ಕೊನೆಯ ಕ್ಷಣ ತನ್ನ ತಪ್ಪಿನ ಅರಿವಾಗಿ;

"ಸ್ವಾರ್ಥ, ಸ್ವಾಭಿಮಾನ, ಅಹಂಕಾರ ಮತ್ತು ದೂರದ ಆಲೋಚನೆ ಈ ಎಲ್ಲವೂ ಬದುಕಿಗೆ ಬೇಕು. ಆದರೆ ಯಾವೂದೂ ಅತಿರೇಕಕ್ಕೆ ತಿರುಗಬಾರದು. ಮಧ್ಯಮ ಮಾರ್ಗಕ್ಕಿಂತ ಮಿಗಿಲು ಮಾರ್ಗ ಮತ್ತೊಂದಿಲ್ಲ!!" ಎನ್ನುತ್ತಾ ಅಸು ನೀಗಿದಳು. □

ಕ್ರಮ ತಪ್ಪಿದರೆ ಅಕ್ರಮವಾದೀತು!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಶ್ರಾವಸ್ತಿಯ ಜೇತವನದಲ್ಲಿ ತನ್ನ ಅಪಾರ ಭಿಕ್ಷು ಸಹೋದರರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ಹಿಮಾಲಯದ ದಟ್ಟ ಕಾಡಿನಲ್ಲಿ ಹಂಸಪಕ್ಷಿಯಾಗಿ ಜನ್ಮ ತಾಳಿದರು. ಅದೇ ಸಮಯದಲ್ಲಿ ನಾಡಿನ ಜನರೆಲ್ಲ ಒಂದೆಡೆ ಕಲೆತು ಒಬ್ಬ ಸುಂದರನೂ, ಶುಭ ಲಕ್ಷಣಗಳನ್ನು ಹೊಂದಿದಂತವನನ್ನು, ಆಜ್ಞಾಪಾಲಕನನ್ನು, ಶೀಲ ವಂತನು, ಪ್ರಜ್ಞಾವಂತನು ಮತ್ತು ಪ್ರಜೆಗಳ ಹಿತ ಹಾಗೂ ಸುಖವನ್ನು ಕಾಪಾಡು ವಂತಹವನನ್ನು ಪರೀಕ್ಷಿಸಿ ರಾಜನನ್ನಾಗಿ ಮಾಡಿ ಕೊಂಡರು.

ಈ ವಿಷಯವು ಕಾಡಿನ ಚತುಷ್ಪಾದಿಗಳಾದ ಮೃಗಗಳಿಗೆ ತಿಳಿಯಲು ಅವುಗಳೂ ಕೂಡ ಒಂದೆಡೆ ಕಲೆತು ರಾಜನಾಗಲು ಬೇಕಾದಂತಹ ಎಲ್ಲ ಅರ್ಹತೆಯನ್ನು ಹೊಂದಿದಂತಹ ಸಿಂಹವನ್ನು ಆಯ್ದು ರಾಜನನ್ನಾಗಿ ಮಾಡಿಕೊಂಡವು. ಮಹಾಸಮುದ್ರದ ಮೀನುಗಳು ಇದರಿಂದ ಸ್ಫೂರ್ತಿಪಡೆದು "ಆನಂದ"ನೆಂಬ ಅರ್ಹ ಜಾತಿಯ ಮೀನನ್ನು ಆಯ್ಕೆ ಮಾಡಿಕೊಂಡು ಮೀನುಗಳಿಗೆ ರಾಜನನ್ನಾಗಿ ಮಾಡಿಕೊಂಡವು. ಬದಲಾಗುತ್ತಿದ್ದ ಈ ವಿದ್ಯಾಮಾನವನ್ನು ಹಿಮಾಲಯದ ತಪ್ಪಲಿನಲ್ಲಿ ವಾಸಿಸುತ್ತಿದ್ದ ಪಕ್ಷಿಗಳು ಸೂಕ್ಷ್ಮವಾಗಿ ಗಮನಿಸಿದವು. ಮನದಲ್ಲಿ ನಾವು ಏಕೆ ನಮ್ಮ ಸುರಕ್ಷೆಗಾಗಿ ಒಬ್ಬ ರಾಜನನ್ನು ಆಯ್ಕೆ ಮಾಡಿಕೊಂಡು ನಮ್ಮ ಹಿತ ಮತ್ತು ಸುಖವನ್ನು ಸುಗಮ ಗೊಳಿಸಿಕೊಳ್ಳಬಾರದು ಎಂಬ ತೀರ್ಮಾನಕ್ಕೆ ಬಂದವು. ಬಳಿಕ ಈ ವಿಷಯವನ್ನು ಕಾಡಿನ ಎಲ್ಲ ಪಕ್ಷಿ ಸಂಕುಲಕ್ಕೂ ತಿಳಿಸಿದವು.

ಒಂದು ದಿನ ಮುಂಜಾನೆ ವಿಶಾಲವಾದ ಬೃಹತ್ ಬಯಲಿ ನಲ್ಲಿ ಎಲ್ಲಾ ಜಾತಿಯ ಪಕ್ಷಿಗಳು ಒಂದೆಡೆ ಕಲೆತವು. ಅವುಗಳಲ್ಲಿ ಹಿರಿಯ ಪಕ್ಷಿಯೊಂದು ಬಯಲಿನ ಎದುರಿಗಿದ್ದ ವಿಶಾಲವಾದ ಬಂಡೆಯನ್ನು ಏರಿ ಪಕ್ಷಿಗಳನ್ನು ಉದ್ದೇಶಿಸಿ;

"ಎಲೈ ಪಕ್ಷಿ ಸಂಕುಲವೇ, ನನ್ನ ಮಾತನ್ನು ಸರಿಯಾಗಿ ಕೇಳಿ ಮತ್ತು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿ. ಏಕೆಂದರೆ, ಕಾಲವು ಬದಲಾಗುತ್ತಿದೆ. ಪರಿಸ್ಥಿತಿಗಳು ಬದಲಾಗುತ್ತಿವೆ. ನಮ್ಮ ನಮ್ಮಲ್ಲಿ ಅರಾಜಕತೆಯ ಪರಿಸ್ಥಿತಿಯ ಮುಗಿಲು ಮುಟ್ಟಿದೆ. ಇದೇ ಪರಿಸ್ಥಿತಿಯು ಮನುಷ್ಯರಲ್ಲಿ, ಚತುಷ್ಪಾದಿಗಳಲ್ಲಿ ಮತ್ತು ಮೀನುಗಳಲ್ಲಿ ತಲೆದೋರಿತ್ತು. ಅವುಗಳು ನಮಗಿಂತ ಮೊದಲೇ ಒಂದೆಡೆ ಕಲೆತು ರಾಜನನ್ನು ಆಯ್ಕೆ ಮಾಡಿ ಕೊಂಡವು. ಆ ಮೂಲಕ ಅರಾಜಕತೆಯ ಅವ್ಯವಸ್ಥೆಯನ್ನು ನೀಗಿ ಕೊಂಡವು. ಈಗ ಒಂದು ಸಾಮಾಜಿಕ ಚೌಕಟ್ಟಿಗೆ ಬದ್ಧವಾಗಿ ಬದು ಕುತ್ತಿವೆ. ನಾವೂ ಕೂಡ ಏಕೆ ಅವುಗಳನ್ನು ಅನುಸರಿಸಿ ಸುರಕ್ಷತೆ ಮತ್ತು ಅಭಿವೃದ್ಧಿಯತ್ತ ಸಾಗಬಾರದು?" ಎನ್ನಲು ಭಿನ್ನ ಮತವಿಲ್ಲದೆ ಎಲ್ಲ ಪಕ್ಷಿಗಳು ತಮ್ಮ ಒಪ್ಪಿಗೆಯನ್ನು ಸೂಚಿಸಿದವು.

ಹಾಗಾದರೆ ಈಗ ಯಾವ ಪಕ್ಷಿಯನ್ನು ರಾಜನನ್ನಾಗಿ ಮಾಡು ವುದು ಎಂಬ ಪ್ರಶ್ನೆಯು ಉದ್ಭವಿಸಿತು. ಸಭೆಯಲ್ಲಿ ಗುಜುಗುಜು ಪ್ರಾರಂಭವಾಯಿತು. ಚರ್ಚೆಗಳು ವಾದವಿವಾದಗಳು ಬಿರುಸಾಗಿ ನೆಡೆಯಿತು. ಪ್ರತಿ ಜಾತಿಯ ಪಕ್ಷಿಗಳು ತಮ್ಮವರಲ್ಲಿ ಒಬ್ಬನನ್ನು ರಾಜನ ನ್ನಾಗಿ ಮಾಡಬೇಕೆಂದು ಬಯಸಿದವು. ಹೀಗಾಗಿ ಗೂಬೆ ಜಾತಿಯ ಪಕ್ಷಿಗಳಲ್ಲಿ ಒಬ್ಬ ಹಿರಿಯನು ಬಂಡೆಯನ್ನು ಹತ್ತಿ ನಿಂತಿತ್ತು. ತಮ್ಮ ಕುಲದ ಒಂದು ಗೂಬೆಯತ್ತ ಕೈ ತೋರಿಸುತ್ತಾ;

"ಸಮಸ್ತ ಪಕ್ಷಿ ಸಂಕುಲವೇ, ವಾದ ವಿವಾದಗಳನ್ನು ಇಲ್ಲಿಗೇ ಕೈ ಬಿಡೋಣ. ಈ ಗೂಬೆಯು ಸಮಸ್ತ ಪಕ್ಷಿಗಳ ಪರವಾಗಿ ರಾಜನಾಗಲು ಅರ್ಹನೆಂಬುದು ನನ್ನ ಅಭಿಪ್ರಾಯ!" ಎಂದಿತು. ಎಲ್ಲ ಪಕ್ಷಿಗಳು ಒಮ್ಮೆಲೇ ಒಬ್ಬರ ಮುಖವನ್ನು ಒಬ್ಬರು ಪ್ರಶ್ನಾರ್ಹವಾಗಿ ನೋಡಿ ಕೊಳ್ಳುತ್ತಾ ಮೌನಕ್ಕೆ ಜಾರಿದವು. ಇದನ್ನು ಎಲ್ಲರ ಸಮ್ಮತಿ ಎಂದು ಬಗೆದ ಆ ಹಿರಿಯ ಗೂಬೆಯು ಎರಡು ಸಾರಿ ಹೀಗೆ ಘೋಷಿಸಿತು;

"ಈ ಗೂಬೆಯನ್ನು ನಾವು ರಾಜನನ್ನಾಗಿ ಒಪ್ಪಿಕೊಂಡಿದ್ದೇವೆ. ರಾಜನನ್ನಾಗಿ ಒಪ್ಪಿಕೊಂಡಿದ್ದೇವೆ!" ಎಂದಿತು. ಮೂರನೆಯ ಬಾರಿ ಕೂಗಲು ಕೈ ಎತ್ತಿದ್ದಾಗ ಒಂದು ಕಾಗೆಯು ಗುಂಪಿನಿಂದ ಹೊರ ಬಂದು; "ನಾನು ಇದನ್ನು ವಿರೋಧಿಸುತ್ತೇನೆ. ಏಕೆಂದರೆ, ರಾಜಾ ಭಿಷೇಕಕ್ಕೆ ಮೊದಲೇ ಇದರ ಮುಖವು ಹೀಗಿದೆ. ಇನ್ನೂ ರಾಜ್ಯಾಭಿಷೇಕವಾದ ಬಳಿಕ ಇದು ಕೋಪಗೊಂಡಾಗ ಇನ್ನು ಹೇಗಿರುತ್ತದೆ? ಮಿತ್ರರೇ, ಆಗ ನಮ್ಮ ಪರಿಸ್ಥಿತಿಯು ಕಾದ ಹಂಚಿನ ಮೇಲೆ ಹಾಕಿದ ಎಳ್ಳಿನಂತೆ ಅತ್ತ ಇತ್ತ ಸಿಡಿದು ಹಾರಿ ಹೋಗುತ್ತೇವೆ. ಆದ್ದುದರಿಂದ ನಮಗೆ ಈ ಗೂಬೆಯ ಸಹವಾಸ ಬೇಡವೇ ಬೇಡ" ಎಂದು ನಿರಾಕರಿಸಿತು. ಆ ಕಾಗೆಯ ಮಾತನ್ನು ಎಲ್ಲವೂ ಅನು ಮೋದಿಸಿದವು. ಮತ್ತೆ ಸಭೆಯಲ್ಲಿ ದೊಡ್ಡ ಕೋಲಾಹಲವೇ ಉಂಟಾಗಿತು. ಸುದೀರ್ಘ ಚರ್ಚೆಯ ನಂತರ ಬೋಧಿಸತ್ವ ಸ್ವರೂಪಿಯಾದ ಹಂಸ ಪಕ್ಷಿಯನ್ನು ರಾಜನನ್ನಾಗಿ ಅಂತಿಮವಾಗಿ ಸ್ವೀಕರಿಸಿದವು. ಎಲ್ಲರ ಅಭಿಪ್ರಾಯವನ್ನು ಒಪ್ಪಿಕೊಂಡ ಆ ಹಂಸಪಕ್ಷಿಯು ಬಂಡೆಯನ್ನು ಏರಿ ಎಲ್ಲರಿಗೂ ವಿನಯಪೂರ್ವಕವಾಗಿ ವಂದಿಸಿತು. ಅದರ ವಿನಯ ಮತ್ತು ಸಭ್ಯತೆಗೆ ಮರುಳಾದ ಆ ಪಕ್ಷಿಸಂಕುಲವು ಒಕ್ಕೊರಳಾಗಿ;

"ಹೌದು, ಈತ ನಿಜಕ್ಕೂ ರಾಜ ಪದವಿಗೆ ಸ್ವೀಕೃತನೇ ಸರಿ. ಇಲ್ಲವೆಂದರೆ ಅಕ್ರಮದಿಂದ ಅನಾಹುತವಾಗುತ್ತಿತ್ತು!!" ಎಂದು ನುಡಿದು ತಮ್ಮ ರಾಜನಿಗೆ ತಲೆ ಬಾಗಿ ವಂದಿಸಿ ತಮ್ಮ ತಮ್ಮ ವಾಸ ಸ್ಥಳಕ್ಕೆ ಹಾರಿ ಹೋದವು. □

'SAMVADA' Kannada Monthly, September 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಭಾಗ್ಯಲಕ್ಷ್ಮಿ

ವನಿತೆಯರ ಪಾಲಿಗೆ ವರದಾನ

ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಕ್ಕೆ ಹೆಚ್ಚಿನ ಮನ್ನಣೆ ದೊರಕಿಸಿಕೊಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕೈಗೊಂಡಿರುವ ಮಹತ್ವದ ಯೋಜನೆ-ಭಾಗ್ಯಲಕ್ಷ್ಮಿ. ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ 31ನೇ ಮಾರ್ಚ್ 2006ರ ನಂತರ ಜನಿಸಿದ ಇಬ್ಬರು ಹೆಣ್ಣು ಮಕ್ಕಳಿಗೆ, ಅವರು 18 ವರ್ಷ ವಯಸ್ಸು ತಲುಪಿದಾಗ ರೂ. ಒಂದು ಲಕ್ಷ ಮೊತ್ತವನ್ನು ನೀಡುವುದು ಈ ಯೋಜನೆಯ ಸಾರಾಂಶ.

ಯೋಜನೆಯ ಮುಖ್ಯಾಂಶಗಳು

* 2006-07ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ. 10.850/-ಠೇವಣಿ.
* 2007-08ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ. 20.000/-ಠೇವಣಿ. 2008-09ನೇ ಸಾಲಿಗೆ ಇದನ್ನು ಇಮ್ಮಡಿಗೊಳಿಸಲಾಗಿದೆ.
* 31ನೇ ಮಾರ್ಚ್ 2006ರ ನಂತರ ಬಿಪಿಎಲ್ ಕುಟುಂಬದಲ್ಲಿ ಜನಿಸಿದ ಇಬ್ಬರು ಹೆಣ್ಣು ಮಕ್ಕಳು ಈ ಯೋಜನೆಗೆ ಅರ್ಹರು. ಆ ಕುಟುಂಬ 3 ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬಾರದು.
* ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ರೂ. 300/- ರಿಂದ ರೂ. 1.000/- ವರೆಗಿನ ವಾರ್ಷಿಕ ವಿದ್ಯಾರ್ಥಿ ವೇತನ.
* 18 ವರ್ಷ ವಯಸ್ಸಿನವರೆಗೆ ರೂ.25.000/- ರಷ್ಟು ಆರೋಗ್ಯ ವಿಮೆ.
* ದುಡಿಯುತ್ತಿರುವ ತಂದೆ. ತಾಯಿ ಅಥವಾ ಪೋಷಕರ ಸಾವು ಸಂಭವಿಸಿದಲ್ಲಿ ರೂ. ಒಂದು ಲಕ್ಷದವರೆಗೆ ಕುಟುಂಬ ವಿಮೆ.

ಸ್ತ್ರೀ ಸಬಲೀಕರಣಕ್ಕೆ ವಿನೂತನ ಕ್ರಮ

ಕರ್ನಾಟಕ ವಾರ್ತೆ
Karnataka Information